
ಕಸ್ತೂರಿ
ಫೆಬ್ರುವರಿ, ೧೯೭೮

ಕಸ್ತೂರಿ

ವ್ಯವಸ್ಥಾಪಕ ಸಂಪಾದಕ :
ಎಚ್. ಆರ್. ಬಸವರಾಜ್

☼

ಪ್ರಧಾನ ಸಂಪಾದಕ :
ಖಾದ್ರಿ ಶಾಮಣ್ಣ

☼

ಸಂಪಾದಕ :
ಪ. ಸು. ಭಟ್ಟ

☼

ಕಲೆ :
ಕೆ. ಬಿ. ಕುಲಕರ್ಣಿ

☼

ಮುಖಪುಟ :
ಯುದ್ಧ ಸನ್ನದ್ಧ....
ಗೋಪಾಲ ಸುಬೇದಾರ

☼

ಚಂದಾ ದರ:

೩ ವರ್ಷ	(ಅಂಚೆ ಸೇರಿ)	ರೂ. ೩೫-೦೦
೨ ವರ್ಷ	,,	ರೂ. ೨೫-೦೦
೧ ವರ್ಷ	,,	ರೂ. ೧೪-೦೦
ಅರ್ಧ ವರ್ಷ	,,	ರೂ. ೭-೫೦

KASTURI January 1978

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟಣೆಗಾಗಿ ಕಳುಹಿಸುವ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದಿರಬೇಕು. ಲೇಖಕರ ಹೆಸರು, ವಿಳಾಸ ಸ್ಪಷ್ಟವಿರಬೇಕು. ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖನಗಳಾದರೆ ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರು ವಿಳಾಸಗಳಿರಬೇಕು. ಇಂಥ ಲೇಖನಗಳಿಗೆ ಪೂರ್ವಾನುಮತಿ ದೊರಕಿಸಿಕೊಂಡರೆ ಉತ್ತಮ. ಅಸ್ವೀಕೃತ ಲೇಖನಗಳು ತಿರುಗಿ ಬೇಕಾಗಿದ್ದರೆ, ಜೊತೆಗೆ ಸಾಕಷ್ಟು ಅಂಚೆ ಚೀಟಿಗಳನ್ನು ಲೇಖನದ ಸಂಗಡವೇ ಇರಿಸಿ. 'ಇದುವೆ ಜೀವ ಇದು ಜೀವನ' ಮುಂತಾದ ಚುಟುಕು ಬರಹಗಳ ಬಗ್ಗೆ ಪತ್ರವ್ಯವಹಾರ ಮಾಡಲು ಅಥವಾ ಅವುಗಳನ್ನು ಮರಳಿ ಕಳಿಸಲು ಸಾಧ್ಯವಾಗುವುದಿಲ್ಲ. ಲೇಖನಗಳನ್ನು ಪ್ರಕಟವಾದರೆ ಅವುಗಳನ್ನು ಯಥಾವಕಾಶ ಪ್ರಕಟಿಸಲಾದು, ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗೆ ಇದೆ.

☼

ಚಂದಾದಾರರಿಗೆ ಸೂಚನೆ

'ಕಸ್ತೂರಿ' ತಿಂಗಳ ಒಂದವೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲುಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರ ವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಫ್ಲೀಟರ ಕಾಲದ ಕರ್ನಾಟಕ

" ಫ್ಲೀಟರ ಕಾಲದ ಕರ್ನಾಟಕ " ಲೇಖನದಲ್ಲಿ ಅನೇಕ ಸಣ್ಣ ಸಣ್ಣ ತಪ್ಪುಗಳಿವೆ. ಅಧಿಕಾಧಿಕ ಪ್ರಸಾರವುಳ್ಳ ' ಕಸ್ತೂರಿ ' ಯಲ್ಲಿ ಪ್ರಕಟವಾದ ಈ ಲೇಖನವನ್ನು ಇನ್ನೊಬ್ಬರು ಉದ್ಧರಿಸುವ ಸಂಭವವಿರುವದರಿಂದ, ಎದ್ದುಕಾಣುವ ತಪ್ಪುಗಳನ್ನು ಇಲ್ಲಿ ತೋರಿಸಿದೆ.

೧) ಫ್ಲೀಟ್ ರಚಿಸಿದ ಗ್ರಂಥವೊಂದರ ಹೆಸರು " ರಾಯಲ್ ಡೈನಸ್ಟೀಸ್ ಆಫ್ ನಾರ್ದರ್ನ್ ಕರ್ನಾಟಕ " ಅಲ್ಲ. ಸರಿಯಾದ ಹೆಸರನ್ನು ಕೆಳಗಿನ ಚಿತ್ರದಲ್ಲಿ ಕೊಟ್ಟಿದೆ.

೨) ಕಿಟೆಲ್ ಕೋಶದ ಬಗ್ಗೆ ವಿಮರ್ಶೆ ಮಾಡುತ್ತ ಫ್ಲೀಟ್, ಒಂದು ಕನ್ನಡ ವ್ಯಾಕರಣವನ್ನೂ ಬರೆಯಬೇಕೆಂದು ಸೂಚಿಸಿದ್ದರ | ಫಲವಾಗಿ, ಕಿಟೆಲ್ ೧೮೭೨ ರಲ್ಲಿ ಒಂದು ವ್ಯಾಕರಣ ಬರೆದರಂತೆ. ಕಿಟೆಲ್ ಕೋಶವೇ ೧೮೯೪ರಲ್ಲಿ ಪ್ರಕಟವಾಗಿರುತ್ತದೆ. ಇದು ಹೇಗೆ ಸಾಧ್ಯ ? ಕಿಟೆಲ್ ವ್ಯಾಕರಣವನ್ನು ಬರೆದ ವರ್ಷ ೧೯೦೩.

೩) " ಪಂಪಭಾರತ, ಪಂಪರಾಮಾಯಣಗಳು ರೈಸರ ಸಂಪಾದಿತ ಗ್ರಂಥಗಳಾದರೆ, ಶಬ್ದಾನುಶಾಸನ, ಭಾಷಾಭೂಷಣಗಳು ಅವರ ಸ್ವತಂತ್ರ ಗಂಥಗಳು" ಎಂದು ಹೇಳಲಾಗಿದೆ, ಅವನ್ನು ಬರೆದ ಭಟ್ಟಾಕಲಂಕ ಮತ್ತು ನಾಗವರ್ಮರು ಜೀವಂತ ಇದ್ದಿದ್ದರೆ......?

೪) ತ್ರಿಸ್ಗ್ಲರ್ ಸಸ್ಯಶಾಸ್ತ್ರದ ಮೇಲೆ ಪುಸ್ತಕವನ್ನೇನೂ ಬರೆಯಲಿಲ್ಲ. ಆ ಶಬ್ದಗಳನ್ನು ಕಿಟೆಲ್ಲರಿಗೆ ಪೂರೈಸಿದ್ದ.

೫) " ಗಳಗನಾಥ, ಕೆರೂರ, ಗೌರೀಶರು ೧೯ವೇ ಶತಮಾನದ ಉತ್ತರಾರ್ಧದಲ್ಲಿ ಕ್ರಿಯಾತ್ಮಕ ಬರಹಗಾರರೆನಿಸಿದರು." ಇದು ಸರಿಯಲ್ಲ. ೧೯ನೇ ಶತಕದ ತೀರ ಕೊನೆ ಕೊನೆಗೆ ಗಳಗನಾಥರ ಮೊದಲ ಕಾದಂಬರಿ ಪ್ರಕಟವಾಯಿತು (೧೮೯೮),

DYNASTIES OF THE KANARESE DISTRICTS

OF THE

BOMBAY PRESIDENCY

FROM THE

EARLIEST HISTORICAL TIMES TO THE MUHAMMADAN CONQUEST OF A.D. 1318.

BY

J. F. FLEET,

Of H. M.'s Bombay Covenanted Civil Service, Member of the Royal Asiatic Society of Great Britain and Ireland, and of the Bombay Branch of the Royal Asiatic Society and Fellow of the University of Bombay.

(Written for the Bombay Gazetteer.)

[All rights reserved.]

Bombay:
PRINTED AT THE GOVERNMENT CENTRAL PRESS.

1882.

ಇನ್ನುಳ್ಳವರು ಏನನ್ನೂ ಬರೆದು ಪ್ರಕಟಿಸಿರಲಿಲ್ಲ, ಅವರ ಕ್ರಿಯಾತ್ಮಕ ಬರವಣಿಗೆ ೨೦ನೇ ಶತಮಾನದ ಮೊದಲ ಮೂರು ದಶಕಗಳಿಗೆ ಮೀಸಲು.

ಮುಂಬಯಿ —ಶ್ರೀ ಹಾ,

ನಿರುದ್ಯೋಗ ಸಮಸ್ಯೆ

ನಿರುದ್ಯೋಗ : ಒಂದು ಪಕ್ಷಿನೋಟ ವಿಠ್ಠಲ ಕಮ್ಮಾರರ ಲೇಖನ ನಾನು ಪೂರ್ತಿ ಓದಲು ಹೆದರಿಕೆಯಾಗಿ ಓದಲಿಲ್ಲ, ಓದಲಾರೆ.

ಒಬ್ಬೊಬ್ಬ ನಿರುದ್ಯೋಗಿಯದೂ ಒಂದೊಂದು ವಿಷಾದದ ಕಥೆ, ಉದ್ಯೋಗಗಳು ಉಳ್ಳವರಿಗೇ ಸಿಗುತ್ತಿವೆ, ಉದ್ಯೋಗ ಅನೇಕ ಶ್ರೀಮಂತರಿಗೆ ಫ್ಯಾಷನ್; ಒಂದು ಮೋಜು; ಕಾಲಹರಣಕ್ಕೆ ಒಂದು ಮಾರ್ಗ,

ಉದ್ಯೋಗಗಳನ್ನು ಮಾರುವವರು, ತಮ್ಮವರಿಗೆ ಉದ್ಯೋಗ ಕೊಡಿಸುವ ಮಂತ್ರಿಗಳು, ಉದ್ಯೋಗ ವಿನಿಮಯ ಕಚೇರಿಗಳು ನಿರುದ್ಯೋಗಿಗಳ ಕಡೆ ಅಂದರೆ ವಿಟಮಿನ್ M ಮತ್ತು I ಇಲ್ಲದವರ ಬಗ್ಗೆ ನಿರ್ಲಕ್ಷ್ಯರಾಗುವುದು ವಿವೇಕಯುತ ಮಾರ್ಗವಲ್ಲ. ನಿರುದ್ಯೋಗ ಕಷ್ಟವಾದರು ಪರಿಹಾರ್ಯ ಸಮಸ್ಯೆ.

ಚಿಂತಾಮಣಿ —ಹೆಚ್. ಪಿ. ಅನಿಲಕುಮಾರ್

ಸುಟ್ಟ ಗಾಯಗಳು

ಜನವರಿ ಸಂಚಿಕೆಯಲ್ಲಿ ಪ್ರಕಟವಾದ 'ಸುಟ್ಟ ಗಾಯಗಳಾದರೆ' ಎಂಬ ಶೀರ್ಷಿಕೆಯುಳ್ಳ ಲೇಖದಲ್ಲಿಲೇಖಕರು ಮಣಿಪಾಲದಲ್ಲಿ ಸುಟ್ಟರೋಗಿಗಳ ವಿಭಾಗದ ಚಿಕಿತ್ಸಕರ ಹೆಸರು ಡಾ. ಎಂ, ಎಸ್. ನಾಯಕರೆಂದು ಬರೆದಿರುತ್ತಾರೆ. ಇದು ಡಾ, ಎಂ. ಎನ್. ನಾಯಕರೆಂದು ಓದಲ್ಪಡಬೇಕು.

ಕರ್ನಾಟಕ ರಾಜ್ಯದಲ್ಲಿ ಸುಟ್ಟರೋಗಿಗಳ ಚಿಕಿತ್ಸೆಗೆ ಮೀಸಲಾಗಿಟ್ಟಿರುವ ಇನ್ನೊಂದು ವಿಭಾಗವು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ 'ಮಹಾಬೋಧಿ ಬರ್ನ್ ಎಂಡ್ ಕ್ಯಾಶುವಾಲಿಟಿಸೆಂಟರ್.'

ಬೆಂಗಳೂರು —(ಡಾ.) ತ. ನಾ. ವ್ಯಾಸರಾವ್

ಸೊತ್ತು—ತೊತ್ತು

ಜನವರಿ ಕಸ್ತೂರಿಯಲ್ಲಿ ಶ್ರೀ ಖಾದ್ರಿ ಶಾಮಣ್ಣನವರು ಅಬಲೆಯಾದ ಸ್ತ್ರೀಯರನ್ನು ಸಬಲೆಯರನ್ನಾಗಿ ಮಾಡಿ, ಸ್ತ್ರೀಯರಿಗಾಗಿ ಹೊಸ ಬದುಕಿಗೆ ನವ್ಯ ಹಾದಿಯನ್ನು ಮಾಡಿ ಕೊಟ್ಟಿದ್ದಾರೆ. ಆದರೆ ಇಂದಿನ ಸಮಾಜವು ಇದಕ್ಕೆ ಪ್ರತಿಕೂಲವಾಗಿದೆಯೇ ?

ಇಡೀ ವಿಶ್ವವೇ ಪ್ರಕೃತಿ ಮತ್ತು ಪುರುಷನಿಂದ ಉಂಟಾಗಿದೆ. ಅದಕ್ಕಾಗಿ ಸ್ತ್ರೀ- ಪುರುಷರಿಬ್ಬರೂ ಒಬ್ಬರಿಗೊಬ್ಬರು ಪೂರಕವಾಗಿರಬೇಕು. ಸ್ತ್ರೀ-ಪುರುಷರಿಬ್ಬರು ಒಂದು ನಾಣ್ಯದ ಎರಡು ಮುಖಗಳು,

ಆಧುನಿಕ ಜೀವನದಲ್ಲಿ ಸ್ತ್ರೀಗೆ ಬೆಲೆ ಬರುತ್ತಿದೆ, ಅದು ನಿಜ. ಆದರೆ ಸ್ತ್ರೀ ಸ್ವಾತಂತ್ರ್ಯಕ್ಕೂ ಒಂದು ಇತಿ-ಮಿತಿ ಇರಬೇಡವೆ ?

—ಪಿ. ಎಸ್. ಪುಜಾರಿ

ಚಿರಸ್ಮರಣೆ

ಜನವರಿ ಕಸ್ತೂರಿಯ ಪುಸ್ತಕ ವಿಭಾಗ ಓದಿದೆ, ಅದರಲ್ಲಿ ಪ್ರಕಟಗೊಂಡ ನಿರಂಜನರ ಚಿರಸ್ಮರಣೆಯ ಸಂಗ್ರಹ ಓದಿದಾಗ ಮೈ ರೋಮಾಂಚನಗೊಂಡಿತು. ಇಂತಹ ಕೃತಿಯನ್ನು ಸಂಗ್ರಹಿಸಿ ಓದುಗರಿಗೆ ನೀಡಿದ ಗಾಯತ್ರೀ ವಿ, ನಾವಡ 'ರು ನಿಜಕ್ಕೂ ಅಭಿನಂದನಾರ್ಹರು.

ನೇಣುಗಂಬವೇರಿದ್ದ ವೀರಯೋಧರ "ಪರಕೀಯ ರಾಜ್ಯ ಹೋಗಿ ನಮ್ಮ ರಾಜ್ಯ ಬರುವ" ಕನಸು ನನಸಾಯಿತಾದರೂ ನಿಜವಾದ ಕ್ರಾಂತಿಯು, ದುಡಿಯುವ ಜನತೆಯ ಏಳಿಗೆಯ ಅವರ ಕನಸು ನನಸಾಯಿತೇ ?

ಅಂತೂ ದುಡಿಯುವ ಜನರ ಉದ್ಧಾರ, ದುಡಿಯುವ ವರ್ಗದಿಂದಲೇ ಸಾಧ್ಯ, ಅದಕ್ಕಾಗಿ ಅವರು ಮೊದಲಿಗಿಂತಲೂ ಚೆನ್ನಾಗಿ ಸಂಘಟಿತರಾಗಬೇಕು.

ಭಟ್ಕಳ —ಶೇಕ್ ಇಮಾಮ್ ಕೇಕಾನ



ಕಸ್ತೂರಿ

ಸಂಚಿಕೆ : ೨ ಕಸ್ತೂರಿ, ಫೆಬ್ರುವರಿ ೧೯೭೮ ವರ್ಷ : ೨೨

ಸಮಾನತೆ-ಯುಗಧರ್ಮ

ಖಾ. ಶಾ.

ಸಮಾನತೆ ಇಂದಿನ ಯುಗಧರ್ಮ. ಎಲ್ಲ ಮಾನವರೂ ಸಹೋದರರು, ನಾಲಿಗೆಯಲ್ಲಿ ತಕ್ಕ ನುಡಿ. ಹೀಗೆಂದಕೂಡಲೇ ಎಲ್ಲರ ಶಕ್ತಿಯೂ ಸಮಾನವೇ ಆಗುತ್ತದೆಯೇ? ರಾಜಾ–ರಂಕ ಒಂದಾಗುತ್ತಾರೆಯೇ? ಪಂಡಿತ ಪಾಮರರಲ್ಲಿ ಅಂತರವೇ ಉಳಿಯದೆ?

ಈ ಎಲ್ಲ ಪ್ರಶ್ನೆಗಳನ್ನು ಜ್ಞಾನಿಗಳೂ ಕೇಳುತ್ತಾರೆ. ಅಜ್ಞಾನಿಗಳೂ ಕೇಳುತ್ತಾರೆ. ಒಮ್ಮೆ ವಿನೋಬಾ ಹೇಳಿದರು : ಜ್ಞಾನಿಗಳ ಜ್ಞಾನ ದೊಡ್ಡದು. ಅಂತೆಯೇ ಅಜ್ಞಾನವೂ ದೊಡ್ಡದು.

೧೯೫೨ ರ ಮೊದಲ ಚುನಾವಣೆ ಕಾಲ, ಕನ್ನಡದ ಉದ್ದಾಮ ಲೇಖಕರೊಬ್ಬರು ತಮ್ಮ ಪಕ್ಷದ ಪ್ರಚಾರ ನಡೆಸುತ್ತಿದ್ದರು, ಸಮಾಜವಾದಿಗಳನ್ನೂ ಸಮಾನತೆಯ ಕಲ್ಪನೆಯನ್ನೂ ಟೀಕಿಸುತ್ತಿದ್ದರು. 'ಉದ್ದನೆಯವರನ್ನೆಲ್ಲಾ ಕತ್ತರಿಸಿ ತುಂಡು ಮಾಡುತ್ತಾರೆ, ಗಿಡ್ಡರನ್ನೆಲ್ಲಾ ಹಿಗ್ಗಿಸಿ ಉದ್ದ ಮಾಡುತ್ತಾರೆ'– ಎಂದು ಗೇಲಿ ಮಾಡಿದರು. ಸಮಾನತೆ ಅಸಂಭಾವ್ಯ, ಹಾಸ್ಯಾಸ್ಪದ– ಎಂಬುದೇ ಅವರ ತರ್ಕ.

ಸಮಾನತೆಯಲ್ಲಿ ಎರಡು ಬಗೆ. ದಾರ್ಶನಿಕ ಸಮಾನತೆ– ಎಲ್ಲ ಧರ್ಮ ಪ್ರವರ್ತಕರೂ ಬೋಧಿಸಿದರು : 'ಶುನಿಚೈವ ಶ್ವಪಾಕೇಚ ಪಂಡಿತಾಃ ಸಮದರ್ಶಿನಃ' ನಾಯಿಯನ್ನೂ ನಾಯಿಯನ್ನು ತಿನ್ನುವವನನ್ನೂ ಪಂಡಿತರು ಒಂದೇ ದೃಷ್ಟಿಯಿಂದ ನೋಡುತ್ತಾರೆ. ಇದು ಸಮಸ್ತ ಜೀವರಾಶಿಯನ್ನೂ ಸಮದೃಷ್ಟಿಯಿಂದ ನೋಡುವ ಬಗೆ.

ಎಲ್ಲರನ್ನೂ ತನ್ನಂತೆಯೇ ಕಾಣು. ಗೀತೆಯ ಉಪದೇಶ. ಉಪನಿಷತ್ತಿನ ಆದೇಶ. ಸೈದ್ಧಾಂತಿಕ, ದಾರ್ಶನಿಕ ಸಮಾನತೆ ಇದು. 'ಆತ್ಮೌಪಮ್ಯ', 'ಈಶಾ ವಾಸ್ಯ ವೃತ್ತಿ', ಇವೆಲ್ಲ ಇಂಥ ಸಮಾನತೆಯ ಕಲ್ಪನೆಗಳು, ಎಲ್ಲ ಮಾನವರೂ ಸೋದರರು ಎಂದು ಸಾರುವ ಸಮ ಭಾವವು ಇಂಥದೇ.

ವ್ಯಾವಹಾರಿಕ ಸಮಾನತೆ, ವಾಸ್ತವಿಕ ಸಮಾನತೆ ಮತ್ತೊಂದು ಕಲ್ಪನೆ. ಇದು ಸೈದ್ಧಾಂತಿಕ ಸಮಾನತೆಯ ವ್ಯಕ್ತ ಸ್ವರೂಪ. ನಿರ್ದಿಷ್ಟ ಕಲ್ಪನೆ ಇದು. ಎಲ್ಲ ಮನುಷ್ಯರ ಮೂಲ ಅಗತ್ಯಗಳೂ ಒಂದೇ. ಅವುಗಳ ಪೂರೈಕೆ ಕನಿಷ್ಠ ಪ್ರಮಾಣದಲ್ಲಿ ಆಗಲೇ ಬೇಕು, ಸಮಾನತೆ ಎಂದರೆ ಏಕರೂಪತೆ ಅಲ್ಲ. ಇದರಲ್ಲಿ ಹಲವು ಹಂತ

ಪ್ರತಿ ವ್ಯಕ್ತಿಯೂ ದುಡಿಯಲೇ ಬೇಕು. ದುಡಿಮೆಗೆ ತಕ್ಕ ಪ್ರತಿಫಲ ಆತನಿಗೆ ಸಿಗಲೇ ಬೇಕು. ದುಡಿದಷ್ಟು ಪ್ರತಿಫಲ– To each according to the work done ಮೊದಲ ಹಂತ. ಇದರ ಹೆಸರು ಸಮಾಜವಾದ. ಇಂದು ದುಡಿಯುವರೆಲ್ಲ ಸರಿಯಾಗಿ ಪಡೆಯುವ ವ್ಯವಸ್ಥೆ ಇಲ್ಲ. ದುಡಿಯುವವನೊಬ್ಬ, ಪಡೆಯುವವನು ಮತ್ತೊಬ್ಬ. ಇವನಿಗೆ ಅಪಾರ ದುಡಿಮೆ, ಅವನಿಗೆ ಅಪಾರ ಗಳಿಕೆ. ಇದು ಶೋಷಣೆ, ಸುಲಿಗೆ,

ಪ್ರತಿಯೊಬ್ಬನೂ ದುಡಿಯಲೇ ಬೇಕು, ಉಣ್ಣುವವರೆಲ್ಲ ಕೆಲಸ ಮಾಡಲೇ ಬೇಕು. ದುಡಿಯದೇ ಉಣ್ಣುವವ ಕಳ್ಳ. ಇಂದಿನ ಸಮಾಜದಲ್ಲಿ ಕಳ್ಳರೇ ಸಾಕಷ್ಟು, ಅವರಿಗೆ ಪದವಿ, ಪೂಜೆ ಪ್ರತಿಷ್ಠೆ. ಹಣವಂತರೆಲ್ಲ ಭಾರೀ ಭಾರೀ ಕಳ್ಳರು.

ತನ್ನ ಶಕ್ತಿ ಇದ್ದಷ್ಟು ದುಡಿಮೆ, ಅಗತ್ಯವಿದ್ದಷ್ಟು ಪಡೆಯುವಿಕೆ, ಸಮಾನತೆಯ ಏಣಿಯಲ್ಲಿ ಕೊನೆಯ ಹಂತ. From each according to his capacity, to each according to his needs.

ಒಬ್ಬೊಬ್ಬರ ಅಗತ್ಯ ಒಂದೊಂದು ಬಗೆ. ಕೂಸಿನ ಅಗತ್ಯವೇ ಬೇರೆ, ಮುದುಕನ ಅಗತ್ಯವೇ ಬೇರೆ. ದೃಢಕಾಯ ತರುಣನ ಅಗತ್ಯವೇ ಬೇರೆ, ರೋಗಿಯ ಆವಶ್ಯಕತೆಯೇ ಬೇರೆ. ಅವರವರ ಅಗತ್ಯಕ್ಕೆ ತಕ್ಕಂತೆ ಸೌಲಭ್ಯ. ಆದರೆ ಕನಿಷ್ಠ ಅಗತ್ಯಗಳು ಮಾತ್ರ ಎಲ್ಲರದೂ ಪೂರೈಕೆ ಆಗಲೇ ಬೇಕು. ಇದಕೆನ್ನುತ್ತಾರೆ 'ವಾಸ್ತವಿಕ ಸಮಾನತೆ', ನ್ಯಾಯೋಚಿತ ವಿತರಣ ಪದ್ಧತಿಯಿಂದಲೇ ಸಾಧ್ಯ.

ಭಾರತೀಯ ಸಮಾಜವಾದಿಗಳು ಎಂದಿನಿಂದಲೂ ಎಲ್ಲ ಆದಾಯಗಳನ್ನೂ ಒಂದು ಕನಿಷ್ಠ-ಗರಿಷ್ಠ ಮಿತಿಯೊಳಗೆ ತರಬೇಕೆಂದು ಪ್ರತಿಪಾದಿಸಿದರು. ಅಷ್ಟೇ ಅಲ್ಲ, ಎಲ್ಲ ವೆಚ್ಚವನ್ನೂ ಈ ಗರಿಷ್ಠ ಮಿತಿಗೆ ಒಳಪಡಿಸಬೇಕು— ಎಂದರು ಡಾ. ರಾಮಮನೋಹರ ಲೋಹಿಯ.

ಸಮಾನತೆ ಮೊದಲೋ ಸಮೃದ್ಧಿ ಮೊದಲೋ? ಕೆಲವರು ಸಮೃದ್ಧಿ ಮೊದಲೆನ್ನುತ್ತಾರೆ, ಮತ್ತೆ ಕೆಲವರು ಸಮಾನತೆ ಮೊದಲೆನ್ನುತ್ತಾರೆ. ಸಮಾನತೆ ಇಲ್ಲದ ಸಮೃದ್ಧಿ ಏರುಪೇರಿಗೆ ಕಾರಣ. ಸಮೃದ್ಧಿ ಇಲ್ಲದ ಸಮಾನತೆ ಬಡತನವನ್ನೇ ಹಂಚಿಕೊಂಡಂತೆ ಎಂಬ ಮೂದಲಿಕೆ ಹಲವರದು. ಒಂದು ಮಾತು ಮಾತ್ರ ನಿಜ. ಸಮಾನತೆಯ ಮೂಲಕವೇ ಸಮೃದ್ಧಿ ಸಾಧನೆ, ಎಲ್ಲ ವರ್ಗಗಳಿಗೂ ಸಂತಸಕರ, ಹಿತಕರವೂ ಹೌದು. ✡

ಚಂದನವ ಕಡಿದು ಕೊರೆದು ತೇದೊಡೆ ನೊಂದೆನೆಂದು ಕಂಪ ಬಿಟ್ಟಿತ್ತೆ? ತಂದು ಸುವರ್ಣದ ಕಡಿದೊರೆದೊಡೆ ಬೆಂದು ಕಳಂಕ ಹಿಡಿದಿತ್ತೆ? ಸಂದು ಸಂದು ಕಡಿದ ಕಬ್ಬನು ಗಾಣದಲಿಕ್ಕಿ ಬೆಂದು ಪಾಕಾಗುಳ್ಳ ಸಕ್ಕರೆಯಾಗ ನೊಂದೆನೆಂದು ಸವಿಯ ಬಿಟ್ಟಿತ್ತೆ?

– ಅಕ್ಕಮಹಾದೇವಿ

ಡಾ. ಶಂಬಾ ಅವರೊಡನೆ
ವಿಶೇಷ ಸಂದರ್ಶನ

ಅವರು ಬೆಳಕನ್ನು ಬೆಂಬತ್ತಿದ್ದಾರೆ


ಪಾವೆಂ

ಸರಾಸರಿಗಿಂತ ಬಹಳ ಎತ್ತರವಲ್ಲದಿದ್ದರೂ ಇದ್ದದ್ದಕ್ಕಿಂತ ಹೆಚ್ಚು ಎತ್ತರ ಎನಿಸುವ, ತುಸು ಮುಂದಕ್ಕೆ ಬಾಗಿದ ನಿಲುವು, ಬೀಸು ನಡೆ, ಗೌರ ವರ್ಣ, ಸರಳ ವೇಷ. ಶಂಬಾ ಜೋಶಿಯವರು ಹಾಯ್ದು ಬಂದ ಕಷ್ಟ ಜೀವನ ವನ್ನು ಪರಿಗಣಿಸಿದರೆ ಅವರು ತಮ್ಮ ೮೨ ವರ್ಷಗಳ ಭಾರವನ್ನು ಹಗುರಾಗಿಯೇ ಹೊತ್ತಿ-ದ್ದಾರೆ ಅನಿಸುತ್ತದೆ. ಅವರು ವಯೋಭಾರ-ದಿಂದಾಗಲಿ ಪಾಂಡಿತ್ಯ ಭಾರದಿಂದಾಗಿ ಖಂಡಿತ ಕುಗ್ಗಿಲ್ಲ. ನಿಯಮಸ್ಥ ಜೀವನವನ್ನು ಬದುಕಿ-ದ್ದರೂ ಪರಲೋಕ ಚಿಂತನೆಯ ಕಡೆ ಒಲಿದಿಲ್ಲ. ಮಾತುಕತೆಯಲ್ಲಿ ಅವರನ್ನು ಲೌಕಿಕ ಅಥವಾ ವ್ಯಾವಹಾರಿಕ ವಿಷಯಗಳಲ್ಲಿ ಬಹಳ ಹೊತ್ತು ನಿಲ್ಲಿಸಿಕೊಳ್ಳಲು ಸಾಧ್ಯವಾಗುವುದಿಲ್ಲ; ಆಲೋ-ಚನಾ ಪ್ರಪಂಚಕ್ಕೆ ಎಳೆದರೆ ಅವರ ಮುಖ ಕಾಂತವಾಗುತ್ತದೆ. ನಡುನಡುವೆ ಹಾಲು ನಗು ಈ ವಯಸ್ಸಿನಲ್ಲಿಯೂ ಮುಖವನ್ನು ಬೆಳಗು-ತ್ತದೆ. ನೀವು ಗಾಂಭೀರ್ಯ ಬಿಟ್ಟರೆ ಅಥವಾ ವಿಷಯಾಂತರ ಮಾಡಿದರೆ ಬಹಳ ಕಾಲದ ಹಿಂದೆ ಕೈಬಿಟ್ಟ ಅವರ ಮಾಸ್ತರಿಕೆ ಜೀವಂತವಾಗು-ತ್ತದೆ; ನಿಷ್ಠುರವಾಗಿ ಅವರು ನಿಮ್ಮನ್ನು ಪ್ರಸ್ತುತಕ್ಕೆ ಹಿಂದೆಳೆದು ತರುತ್ತಾರೆ.

ಶಂ. ಬಾ. ಅವರ ಜೀವನವನ್ನು ಶಬ್ದದಿಂದ ಅರ್ಥದ ಕಡೆಗೆ ಒಂದು ಸುದೀರ್ಘ ಯಾತ್ರೆ ಎಂದು ಹೇಳಬಹುದು. ಈ ಯಾತ್ರೆಗೇ ಅವರು ಸದಾ ನಿಷ್ಠರು. ಕೆಲ ವರ್ಷಗಳ ಹಿಂದೆ ಅವರು ತೀವ್ರ ಅಸ್ವಸ್ಥತೆಯಲ್ಲಿ ಮಲಗಿದ್ದಾಗ ಅವರನ್ನು ಕಾಣಲು ಹೋಗಿದ್ದೆ. ಕ್ಷೇಮಸಮಾಚಾರದ ಮಾತು ಹೇಗೋ ಅವರ ಸಂಶೋಧನ ವಿಷ-ಯಕ್ಕೆ ತಿರುಗಿತು. ಅವರು ನಿರರ್ಗಳವಾಗಿ ಮಾತಾಡತೊಡಗಿದರು. ಕೊನೆಗೆ ಅವರ ಶ್ರೀಮತಿಯವರು ಡಾಕ್ಟರರ ಅಪ್ಪಣೆಯನ್ನು ನೆನಪಿಸಿ ನಮ್ಮನ್ನು ತುಸು ಕಠೋರವಾಗಿಯೇ ಸಾಗಹಾಕಿದರು. ಜೋಶಿಯವರಿಗೆ ತಮ್ಮ ಪ್ರಿಯ ಚಿಂತನೆಗಳ ಪ್ರಶ್ನೆ ಬಂದರೆ ಆರೋಗ್ಯದ ಪರಿವೆಯೂ ಉಳಿಯುವುದಿಲ್ಲ.

ನಿಷ್ಠಿತರು, ನಿಷ್ಠುರರು

ಶಂ. ಬಾ. ಅವರು ನಿಷ್ಠಿತರು ಎಂದೆ. ಅವರ ನಿಷ್ಠೆ ಬರೇ ಸಂಶೋಧನೆಗಳಿಗೆ ಸೀಮಿತವಾಗಿಲ್ಲ. ಸಂಶೋಧನೆಯಿಂದ ಬಂದ ನಿಷ್ಪತ್ತಿಗಳು ಬರೇ ಅವರ ಬುದ್ಧಿಯ ನಿಷ್ಠೆಯಿಂದ ತೃಪ್ತವಾಗುವು-ದಿಲ್ಲ. ಸ್ವಂತ ಜೀವನದಲ್ಲಿ ಆ ನಿಷ್ಪತ್ತಿಗಳಿಗೆ ಅವರು ನಿಷ್ಠರಾಗುತ್ತಾರೆ. ಕೆಲ ವರ್ಷಗಳ ಹಿಂದೆ 'ಕಸ್ತೂರಿ'ಯ ವಿಶೇಷ ಸಂಚಿಕೆಗಾಗಿ ದೇವರನ್ನು ಕುರಿತ ಒಂದು ವಿಚಾರ ಸಂಕಿರಣಕ್ಕೆ ಅವರಿಗೂ ಪ್ರಶ್ನಮಾಲಿಕೆ ಕಳಿಸಿದ್ದೆ. "ನೀವು ದೇವರ ಪೂಜೆ ಮಾಡುತ್ತೀರಾ?" ಎಂಬರ್ಥದ ಒಂದು ಪ್ರಶ್ನೆ


kbk

ಅದರಲ್ಲಿತ್ತು. ಆ ಪ್ರಶ್ನೆಗೆ ಸಂಕಿರಣದಲ್ಲಿ ಭಾಗ ವಹಿಸಿದ್ದ ಭೌತಶಾಸ್ತ್ರ ಪ್ರೊಫೆಸರರೂ ಖ್ಯಾತ ಕನ್ನಡ ಭೌತಶಾಸ್ತ್ರ ಲೇಖಕರೂ ಆದೊಬ್ಬ ಮಹನೀಯರು, ವ್ಯಕ್ತಿರೂಪಿ ದೇವರಲ್ಲಿ ತಮಗೆ ನಂಬಿಕೆ ಇಲ್ಲ; ಆದರೂ ಒಮ್ಮೊಮ್ಮೆ ದೇವರ ಪೂಜೆ ಮಾಡಬೇಕೆಂದು ಅನಿಸುತ್ತದೆ; ಮಾಡಿದರೆ ಏನೋ ಮನಶ್ಶಾಂತಿ ಸಿಗುತ್ತದೆಂದು ಉತ್ತರ ಕೊಟ್ಟಿದ್ದರು. ಇಂಥಾ ದ್ವಿಧಾ ನಿಷ್ಠೆ ಶಂ. ಬಾ. ಅವರಿಗಿಲ್ಲ. ಅವರೂ ಪ್ರಚಲಿತ ದೇವರುಗಳಲ್ಲಿ ತಮಗೆ ವಿಶ್ವಾಸವಿಲ್ಲೆಂದು ಹೇಳಿದ್ದರು; ಆದ್ದರಿಂದ ಪೂಜೆ ಮಾಡುವುದಿಲ್ಲ ಅಂದಿದ್ದರು; ಆದರೆ ತಮ್ಮ ಜಿಜ್ಞಾಸೆಗಳಿಂದ ನಿಷ್ಪನ್ನವಾದ ಸತ್ಯಕ್ಕೆ ಅಚಲ ನಿಷ್ಠೆ ತೋರಿಸುವ ಶಕ್ತಿ ಬರಲೆಂದು ತಾವು ಆ ಸತ್ಯಕ್ಕೆ ಪ್ರಾರ್ಥನೆ ಸಲ್ಲಿಸುವುದುಂಟು ಎಂಬರ್ಥದ ಉತ್ತರ ಅವರು ಕೊಟ್ಟಿದ್ದರು.

ಕಂಡ ಸತ್ಯಕ್ಕೆ ಹೀಗೆ ಪೂರ್ತಿ ವೈಯಕ್ತಿಕ ನಿಷ್ಠೆಯನ್ನು ಆಚರಿಸಲಾರದ ನಮ್ಮಂಥ ಬೌದ್ಧಿಕರನ್ನು ಕಂಡು ಶಂ. ಬಾ. ಅವರಿಗೆ ವಿಷಾದವಾಗುತ್ತದೆ. ನಾವಿಂದು ಪೂಜಿಸುವ ದೇವತಾ "ಪ್ರತಿಮೆ"ಗಳೆಲ್ಲ ನಾಗಮೂಲವೂ ಕತ್ತಲೆಯನ್ನೂ ಮೃತ್ಯುವನ್ನೂ ಪ್ರತಿನಿಧಿಸುವವೂ ಆಗಿವೆಯೆಂದು ಗ್ರಹಿಸಿಕೊಳ್ಳುವ ಬುದ್ಧಿ ಸಾಮರ್ಥ್ಯವಿದ್ದೂ ನಾವು ಇನ್ನೂ ಆ ದೇವತೆಗಳಿಗೆ ಸಂಬಂಧಿಸಿದ ಸಮಯಾಚಾರಗಳನ್ನು ಆಚರಿಸುತ್ತೇವಲ್ಲ ಎಂಬುದನ್ನು ಅವರು ಈಚೆಗೆ ಬಹಿರಂಗವಾಗಿ ಟೀಕಿಸಿದ್ದಾರೆ. (ನನ್ನ ತೀವ್ರ ಅಸ್ವಸ್ಥದ ನಂತರ ನನ್ನ ಮನೆಗೊಮ್ಮೆ ಅವರು ನನ್ನನ್ನು ಕಾಣಲು ಬಂದಿದ್ದರು. ನಾನು ಜನಿವಾರ ಹಾಕಿಕೊಂಡು ಗೋಪೀಚಂದನ ಹಚ್ಚಿಕೊಂಡಿದ್ದುದನ್ನು ಆಗ ಅವರು ಕಂಡಿದ್ದರು.) ಎಷ್ಟೋ ವರ್ಷಗಳಿಂದ ಯಜ್ಞೋಪವೀತವನ್ನು ತ್ಯಾಗಮಾಡಿದ್ದ ಬೀಚಿಯವರು, ಕಡು ಅಸ್ವಸ್ಥ ಕಾಲದಲ್ಲಿ ತಮ್ಮ ಪತ್ನಿಯ ಸಮಾಧಾನಕ್ಕೆ ಅದನ್ನು ಪುನಃ ತೊಟ್ಟಿದ್ದನ್ನೂ ಶಂ. ಬಾ. ಆಕ್ಷೇಪಿಸಿದ್ದುಂಟು. ಈ ಟೀಕೆಗಳ ನಂತರವೂ ಬೀಚಿಯವರೂ ನಾನೂ ಅವರ ಅಭಿಮಾನಿಗಳೇ ಆಗಿ ಉಳಿದಿದ್ದೇವೆ; ಅವರೂ ನಮ್ಮನ್ನು ನಮ್ಮ ಇತರ ಗುಣಗಳಿಗಾಗಿ ಮೆಚ್ಚುವವರೇ ಆಗಿ ಉಳಿದಿದ್ದಾರೆ. ಆದರೆ ಎಲ್ಲರೂ ನಮ್ಮಂತೆ ದಪ್ಪ ಚರ್ಮದವರಾಗಿರುವುದಿಲ್ಲವಲ್ಲ. ಆದ್ದರಿಂದ ಶಂ. ಬಾ. ಅವರು ತಮ್ಮ ಸ್ಪಷ್ಟವಾದದಿಂದಾಗಿ ಬಹಳ ಜನರ ವಿರೋಧ ಕಟ್ಟಿಕೊಂಡಿದ್ದಾರೆ.

ಯಾಂತ್ರಿಕತೆ

ಶಂ. ಬಾ. ಅವರ ಈ ಬಗೆಯ ನಿಷ್ಠೆ ಇಂದು ನಿನ್ನೆಯದಲ್ಲ. ಬರೇ ಸಂಶೋಧನೆಗಾಗಿ ಬಂದ ತಾತ್ಕಾಲಿಕವೂ ಅದಲ್ಲ. ಅವರದು ಪೌರೋಹಿತ್ಯದ ಮನೆತನ. ಹುಡುಗನಾಗಿದ್ದಾಗ ಒಮ್ಮೆ ಅವರ ಅಣ್ಣ ಅವರನ್ನು ಒಬ್ಬ ಯಜಮಾನರಲ್ಲಿಗೆ ಒಂದು ಪೌರೋಹಿತ್ಯ ಕಾರ್ಯಕ್ಕಾಗಿ ಕಳಿಸಿದರಂತೆ. ಆ ಕಾರ್ಯದಲ್ಲಿ ಯಾವುದೋ ಮಂತ್ರದ ಪುನರಾವೃತ್ತಿಯನ್ನು ಅನೇಕಾವರ್ತಿ ಮಾಡಬೇಕಾಗಿತ್ತು. "ನನಗೆ ಈ ಬಗೆಯ ಪುರಶ್ಚರಣೆ ಅಸಹನೀಯವಾಗಿ mechanical ಅನಿಸಿತು. ಪ್ರಕೃತವನ್ನು ಬಿಟ್ಟು ಚಿತ್ತ ಎಲ್ಲೆಲ್ಲಿಯೋ ಸುಳಿದಾಡುತ್ತದೆ ಅನಿಸಿತು. ಅದನ್ನು ಮುಗಿಸಿ ಮನೆಗೆ ಬಂದವನೆ ಅಣ್ಣನಿಗೆ ಹೇಳಿಬಿಟ್ಟೆ, 'ಇಂಥಾ ಕೆಲಸಕ್ಕೆ ನನ್ನ ಇನ್ನು ಕಳಿಸಬೇಡ, ಕೂಲಿನಾಲಿ ಮಾಡಿಯಾದರೂ ಹೊಟ್ಟೆ ಹೊರೆದುಕೊಂಡೇನು. ಇದು ಸಾಕು.' ಸರಿ, ಅದೇ ಕೊನೆಯಾಯಿತು." ಶಂ. ಬಾ. ಅಂದರೆ ಹೀಗೆ. ನಂಬಿ ಕೆಲಸ ಮಾಡಬೇಕು. ನಂಬಿಕೆ ಉಳಿಯದಿದ್ದ ಮೇಲೆ ಅದರ ಸಂಸರ್ಗ ಬೇಡ.

ಬಹುಕಾಲದ ವೈಯಕ್ತಿಕ ಪರಿಚಯವುಳ್ಳವರು ಅವರನ್ನು ಈಗಲೂ ಶಂಕರರಾವ್ ಎಂದು ಕರೆಯುತ್ತಾರೆ. ಆದರೆ ಹೊರಗಿನ ಪ್ರಪಂಚಕ್ಕೆ ಅವರು ಬರೇ ಸಂಶೋಧಕ ಶಂ. ಬಾ. ಅವರ ಪೂರ್ಣ ಹೆಸರು ಶಂಕರ ಬಾಳದೀಕ್ಷಿತ (= ಬಾಲಕೃಷ್ಣದೀಕ್ಷಿತ) ಜೋಶಿ ಎಂದು [illegible] ಗೊತ್ತಿಲ್ಲದವರು ಬಹಳ ಜನ. ಅದೂ ಸರಿಯೆ. ತಮ್ಮ ಅನ್ವೇಷಣದ ದಾರಿಯಲ್ಲಿ ಅವರು ಶಂಕರನನ್ನೂ ಬಾಲ ಅಥವಾ ಪ್ರೌಢ ಕೃಷ್ಣನನ್ನೂ ಒಂದೆಬಿಟ್ಟು ಬಹಳ ದೂರ ಬಂದಿದ್ದಾರೆ. ಶಂ. ಬಾ. ಎಂದರೆ ತಲೆಬುಡ ಬಗೆಹರಿಯದ ವಿಷಯಗಳನ್ನು ಸಂಶೋಧನೆಮಾಡಿ ತಲೆಬುಡ

ವಾಗದ ನಿರ್ಣಯಗಳನ್ನು ನಿಷ್ಪಾದಿಸುವ ಸಂಶೋಧಕರು ಎಂಬುದು ಸಾಮಾನ್ಯ ತಿಳಿವಳಿಕೆ. ಸರಿಯಾಗಿ ಅರ್ಥವಾಗದ್ದೆಲ್ಲ ವ್ಯರ್ಥವಾದದ್ದೆಂದು ಬಗೆಯುವ ಪ್ರಾಕ್ಟಿಕಲ್ ಪ್ರಪಂಚದಲ್ಲಿ ಇದು ಸ್ವಾಭಾವಿಕ. ಮೇಲಾಗಿ ಅವರ ಸಂಶೋಧನ ವಿಷಯಗಳು ತಲೆಬುಡವಾಗದವುಗಳೆಂಬುದೂ ಅವರ ಪುಸ್ತಕ, ಲೇಖನಗಳು ಸುಲಭವಾಗಿ ಅರ್ಥವಾಗುವುದಿಲ್ಲ ಎಂಬುದೂ ಸುಮಾರು "ಸತ್ಯ"ವೇ ಎನ್ನಬೇಕು. ಸಂಸ್ಕೃತಿ–ನಾಗರಿಕತೆ, ಪ್ರಜ್ಞೆ–ಜ್ಞಾನ, ಋತ–ಸತ್ಯ, ನರ–ಮಾನವ, ವಿಶ್ವಮಿತ್ರ–ವಿಶ್ವಾಮಿತ್ರ, ಪ್ರಾಣ–ಜೀವ, ಸೂರ್ಯ–ಆದಿತ್ಯ, ಪ್ರಕಾಶ–ಜ್ಯೋತಿ ಈ ಜೋಡಿಗಳೆಲ್ಲ ಸಮಾನಾರ್ಥಕ ಪದಗಳೆಂದು ಉರುಹೊಡೆದ ಸಮಾಜಕ್ಕೆ ಇವು ಬೇರೆ ಬೇರೆ ಅರ್ಥ ಕೊಡುತ್ತವೆಂದು ವಿವರಿಸುವ ಅವರ ಸಾಹಸಕ್ಕೆ "ಬಗೆಹರಿಯದ್ದು" ಎಂಬ ಬಿರುದು ಬಾರದೆ ಹೇಗಿದ್ದೀತು? ವಸಿಷ್ಠ ಸಾತ್ವಿಕ ಗುಣಗಳ ಮೂರ್ತಿಯೆಂದೂ ವಿಶ್ವಾಮಿತ್ರ ರಾಜಸ, ಚಂಡಿತನ, ಹಟವಾದಗಳ ಪ್ರತಿನಿಧಿಯೆಂದೂ ಕಲಿತಿರುವ ಜನರಿಗೆ ವಸಿಷ್ಠ ಬೌದ್ಧಿಕ ಮೋಸದ ಪ್ರತೀಕವೆಂದೂ ವಿಶ್ವಾಮಿತ್ರ ಪ್ರಾಂಜಲವಾದ ಪ್ರಜ್ಞಾದೃಷ್ಟಿಯ ಪ್ರತಿನಿಧಿಯೆಂದೂ ಹೇಳಿದರೆ ಅದನ್ನು ಹೇಗೆ ಸ್ವೀಕರಿಸಲಾದೀತು? ಶಂ. ಬಾ. ಅವರು ದೇವತೆಗಳ ಬುಡವನ್ನು ಹುಡುಕಹೊರಟ ಮೇಲೆ ಅವರ ಬರವಣಿಗೆಗಳು ಬಲು ಕ್ಲಿಷ್ಟವಾಗತೊಡಗಿವೆಯೆಂದೂ ಅದಕ್ಕೆ ಅವರ ಚರ್ಚಾಕ್ರಮ ತರ್ಕಬದ್ಧವಲ್ಲದಿರುವುದು ಕಾರಣವೆಂದೂ ನಾನೂ ಎಣಿಸಿದ್ದೆ. ಒಂದು ದಿನ ಅವರು ದೇವತೆಗಳ ಹಿಂದಿರುವ ಸಾಂಕೇತಿಕಾರ್ಥವನ್ನು ಚರ್ಚಿಸುವ ಎರಡು ಇಂಗ್ಲಿಷ್ ಪುಸ್ತಕಗಳನ್ನು ನನಗೆ ಎರವಲು ಕೊಟ್ಟರು. ಅವೂ ನನಗೆ ತಲೆಬುಡವಾಗಲಿಲ್ಲ. ಆಮೇಲೆ ಈ ಅಸ್ಪಷ್ಟತೆಯ ಕಾರಣ ನನಗೆ ಅರ್ಥವಾಯಿತು. ಒಂದು, ಈ "ಅರ್ಥಗ್ರಹಣ"ವೇ ಪಾಶ್ಚಾತ್ಯರಲ್ಲಿಯೂ ಹೊಸತು, ಅದರ ಪರಿಭಾಷೆಗಳೂ ಅಪರಿಚಿತ; ಎರಡು, ಶಬ್ದಗಳಾಗಲಿ ದೇವತೆಗಳಾಗಲಿ ಮಾನವನ ತರ್ಕದಿಂದ ಉದ್ಭವಿಸಿದ ಪದಾರ್ಥಗಳಾಗಿರದೆ ಅವನ ಪ್ರತಿಭೆಗೆ "ಹೊಳೆದ" ವಿಷಯಗಳಾಗಿದ್ದು, ಆಮೇಲೆ ಅವು ತರ್ಕದ ಕಟ್ಟುಪಾಡಿನ ಮೂಲಕ ಪ್ರತಿಪಾದಿಸಲ್ಪಟ್ಟವು; ಆದ್ದರಿಂದ ಅವುಗಳ ಮೂಲಕ್ಕೆ ಹೋದ ಹಾಗೆ ಜಟಿಲತೆ ಹೆಚ್ಚುತ್ತದೆ.

'ಕಸ್ತೂರಿ'ಗಾಗಿ ಶಂ. ಬಾ. ಅವರ ಬಗ್ಗೆ ಲೇಖನ ಬರೆಯಲು ಸಂಕಲ್ಪಿಸಿದಾಗ ಅದನ್ನು ಕಟ್ಟುನಿಟ್ಟಾದ ಪ್ರಶ್ನೋತ್ತರ ರೂಪದ ಸಂದರ್ಶನವಾಗಿ ಮಾಡುವ ಇರಾದೆಯಿಂದ ನಾನು ಕೆಲ ಪ್ರಶ್ನೆಗಳನ್ನು ತಯಾರಿಸಿಕೊಂಡು ಹೋಗಿದ್ದೆ. ನಿಖರವಾಗಿ ಅವುಗಳಿಗೆ ಅಂಟಿಕೊಳ್ಳಲಾಗಲಿಲ್ಲ. ಆದರೆ ಒಂದು ಸುಳಿದಾಡುವ ಸಂಭಾಷಣೆಯಾಗಿ ಅದು ರೂಪುಗೊಂಡಿತು.

ಬಾಲ್ಯಾನುಭವ

ಅವರ ಬಾಲ್ಯಾನುಭವಗಳ ಬಗ್ಗೆ ಕೇಳಿದೆ. ಬಡತನ ಅವರ ಮನಸ್ಸನ್ನು ರೂಪಿಸಿದ ವಿಷಯ ಪ್ರಶ್ನಿಸಿದೆ.

ವೇದವಿದ್ಯಾವಿಶಾರದರ ಮನೆತನದಲ್ಲಿ ಬೆಳಗಾವಿ ಜಿಲ್ಲೆಯ ಗುರ್ಲಹೊಸೂರಿನಲ್ಲಿ ಹುಟ್ಟಿದ ಅವರ ತಂದೆ ಏಳನೇ ವಯಸ್ಸಿನಲ್ಲಿ ತೀರಿದ ನಂತರ ಕಡು ಬಡತನದಲ್ಲಿ ಮಕ್ಕಳನ್ನು ಸಾಕಲು ಹೆಣಗುವ ತಾಯಿಯನ್ನು ಕಂಡು ಒಮ್ಮೊಮ್ಮೆ ಶಂ. ಬಾ. ಗೆ, ಸೀತೆಯ ಹಾಗೆ, ಭೂಮಿ ಬಿರಿದು ತನ್ನನ್ನು ನುಂಗಿಬಿಡಬಾರದೇ ಅನಿಸುತ್ತಿತ್ತು. ಆದರೆ ಬಡತನಕ್ಕೆ ತಲೆಬಾಗುವುದಾಗಿಲ್ಲ ಎಂಬ ದಾರ್ಢ್ಯವೂ ಅವರಿಗೆ ಬಂತು. ಮುಂದಾದರೂ ಬಡತನ ಅವರ ಬಾಗಿಲಿಂದ ಬಹಳ ದೂರ ಎಂದೂ ಇರಲಿಲ್ಲ. ಎಲ್ಲದರ ಒಟ್ಟು ಪರಿಣಾಮವೆಂದರೆ ತಮ್ಮ ಕಾಲ ಮೇಲೆ ತಾವು ನಿಲ್ಲಬೇಕೆಂಬ ನಿರ್ಧಾರ. ಆರ್ಥಿಕ ಸ್ವಾವಲಂಬನೆಯಿಲ್ಲದ 'ಸೇವೆ' [illegible] ಎಂಬ ಪ್ರಶ್ನೆಯೊಡನೆ ಕಠೋರ ಪರಿಶ್ರಮದ ಅಗತ್ಯದ ಮನವರಿಕೆಯೂ ಅವರಿಗೆ ಬಂತು.

ಸ್ವಾವಲಂಬನೆ, ಕಠೋರ ಪರಿಶ್ರಮವೆಂದಾಗ ಸಾಧನಕೇರಿಯಲ್ಲಿ ಅವರಿರುವ ಮನೆಯನ್ನು ಅವರೇ ಸ ಹಸ್ತದಿಂದ ಕಟ್ಟಿಕೊಂಡರೆಂಬ ಸುದ್ದಿ ನೆನಪಿಗೆ ಬಂದು ಕೇಳಿದೆ. ಇಡೀ ಮನೆಯನ್ನು

ತಾವೇ ಕಟ್ಟಿದರೆಂಬುದು ಸರಿಯಾಗದು. ಸಾರಣೆ ಕಾರಣೆ ಮೊದಲಾದ ತಾಂತ್ರಿಕ ಕೆಲಸಗಳಿಗೆ ಉಪ್ಪಾರರ ನೆರವು ಪಡೆದಿದ್ದರು. ಆದರೆ ಕಲ್ಲು ಹೊರುವುದು, ಕಟ್ಟುವುದು ಮೊದಲಾದ ಕಾರ್ಯ-ಗಳನ್ನು ಶಂ. ಬಾ. ದಂಪತಿಗಳೇ ಬಹಳ ಮಟ್ಟಿಗೆ ಮಾಡಿಕೊಂಡರೆಂಬುದು ನಿಜ. ಇದನ್ನು ಅವರು ಯಾವುದೇ ಹೆಮ್ಮೆ ಅಥವಾ ಸಂಕೋಚವಿಲ್ಲದೆ ಹೇಳಿದರು. ಅದು ತಥ್ಯವಾಗಿತ್ತು. ಸೈ. ಅದರಲ್ಲಿ ಹೇಳಿಕೊಳ್ಳತಕ್ಕದ್ದೇನು?

ಮುಂದೆ ನಮ್ಮ ಶಾಸ್ತ್ರಗಳಿಗೂ ಸಂಪ್ರದಾಯ-ಗಳಿಗೂ ಕ್ಷಕಿರಣ ಹಿಡಿಯಲಿದ್ದ ಶಂ. ಬಾ. ಅವರ ಮನೆತನದ ಅಂಧಶ್ರದ್ಧೆ ಆಶ್ಚರ್ಯಕರವಾಗಿತ್ತು. ಅವರ ಅಣ್ಣನನ್ನು ಇಂಗ್ಲಿಷ್ ಶಾಲೆಗೆ ಹಾಕಿದ್ದ-ರಂತೆ, ಅವರು ಪ್ಲೇಗಿನಲ್ಲಿ ತೀರಿಕೊಂಡರು; ಇಂಗ್ಲಿಷ್ ಶಾಲೆಗೆ ಹೋದದ್ದರಿಂದಲೇ ಹೀಗಾ-ಯಿತು ಎಂಬ ತೀರ್ಮಾನ ಹೊರಟಿತು. ಮುಂದಿನ ಮಕ್ಕಳ ಮ್ಲೇಚ್ಛ ಭಾಷಾಭ್ಯಾಸಕ್ಕೆ ಅದೇ ಕೊನೆ-ಯಾಯಿತು. ಪರಿಣಾಮವಾಗಿ ಶಂ. ಬಾ. ಅವರು ತಮಗೆ ತಾವೇ, ಅದೂ ಇಪ್ಪತ್ತನೇ ವಯಸ್ಸಿನ ನಂತರ, ಇಂಗ್ಲಿಷ್ ಕಲಿಸಿಕೊಳ್ಳಬೇಕಾಯಿತು. ಆದರೆ ಬಾಲ್ಯದಲ್ಲಿ ಪುಣೆಯಲ್ಲಿ ಅಜ್ಜೀಮನೆಯಲ್ಲಿ ಕಳೆದ ದಿನಗಳು ಅವರ ಬುದ್ಧಿಯ ಬಾಗಿಲನ್ನು ತೆರೆಯಲು ಕಾರಣವಾದವು. ಆಗ ಪುಣೆ ಟಿಳಕ, ಗೋಖಲೆ ಮೊದಲಾದವರ ರಾಜಕೀಯ ರಣರಂಗವಾಗಿತ್ತಲ್ಲ. ಶಂ. ಬಾ. ಅವರು ಇತರ ಅನೇಕ ಸಮಕಾಲೀನರಂತೆ ಆದರ್ಶವಾದ, ದೇಶಕ್ಕಾಗಿ ಏನಾದರೂ ಮಾಡುವ ಲವಲವಿಕೆ ಯನ್ನು ಹಮ್ಮಿಕೊಂಡರು.

ಜಿಜ್ಞಾಸೆಗೆ ಪ್ರೇರಣೆ

ಆದರೆ ಇಂದು ಅವರ ಮನಸ್ಸನ್ನು ವ್ಯಾಪಿಸಿ-ಕೊಂಡಿರುವ ದ್ವೈತ ಜಿಜ್ಞಾಸೆಗೆ ಅವರ ಮನೆ-ತನದ ಪರಿಸರದಲ್ಲಿ ಏನಾದರೂ ಪ್ರೇರಣೆ ಇತ್ತೆ?

ಪ್ರೇರಣೆ ಎಂದು ಹೇಳುವುದು ಕಷ್ಟ. ಆದರೆ ಅವರ ಅಪಕ್ವ ಬುದ್ಧಿಗೂ ಸೋಜಿಗ ತರುವ ಘಟನೆಗಳು ಅಲ್ಲಿ ನಡೆಯುತ್ತಿದ್ದವು. ಗುರ್ಲ-ಹೊಸೂರಿಗೆ ಟೇಂಬೆ ಮಹಾರಾಜರೆಂಬ ಪ್ರಸಿದ್ಧ ಸಾಧಕ–ತಪಸಿಗಳು ಬಂದಿದ್ದರು. ಅವರ ಸಾತ್ವಿಕತೆ ಶಂ. ಬಾ. ಮನಸ್ಸಿನ ಮೇಲೆ ಅಚ್ಚೊತ್ತುವಂತಿತ್ತು. ಅವರಿಗೆ ಅನೇಕ ಸಿದ್ಧಿ-ಗಳು ಕೈಗೂಡಿದ್ದವೆಂದೂ ಪವಾಡಗಳನ್ನು ಮಾಡುತ್ತಿದ್ದರೆಂದೂ ಜನಜನಿತವಾಗಿತ್ತು. ಆದರೆ ನಾಗಲಿಂಗಪ್ಪನೆಂಬ ಇನ್ನೊಬ್ಬ ಸಿದ್ಧ ಪುರುಷನನ್ನೂ ಬಾಲಕ ಶಂ. ಬಾ. ಅರಿತಿದ್ದರು. ಅವನು ವಾಮಾಚಾರಿ ಅವಧೂತ. ಬಾಯಲ್ಲಿ ಯಾವಾಗಲೂ ಅಶ್ಲೀಲ ಬೈಗಳು; ಕೊಳೆ ಬಟ್ಟೆ, ಅಭೋಜ್ಯ ಭೋಜನ, ಅಸ್ಥಾನ ವಾಸ. ಅವನೂ ಪವಾಡಪುರುಷನೇ ಆಗಿದ್ದ. ಪರಸ್ಪರ ವಿರುದ್ಧ ವೃತ್ತಿಯ ಈ ಇಬ್ಬರೂ ಸಿದ್ಧಪುರುಷರೇ ಆಗಿದ್ದರೆ ಸಿದ್ಧಿಯೆಂದರೇನು? ಅದಕ್ಕೆ ಏನರ್ಥ? ಅದೇ ಪ್ರಕಾರ ಗುರ್ಲಹೊಸೂರಿನಲ್ಲಿನ ಆಧ್ಯಾತ್ಮಿಗಳ ಕೂಟಗಳಲ್ಲಿ ದ್ವೈತಾದ್ವೈತಾದಿ ಪಂಥಗಳ ಚರ್ಚೆಯೂ ಆಗುತ್ತಿತ್ತು. ಇವೆರಡೂ ಸತ್ಯವೇ ಆಗಿದ್ದರೆ ಸತ್ಯಗಳು ಎಷ್ಟು ಇರ-ಬಲ್ಲವು? ಒಂದಕ್ಕಿಂತ ಹೆಚ್ಚು ಸತ್ಯಗಳು ಸತ್ಯ-ಗಳಾದಾವೆ? ಈ ಜಿಜ್ಞಾಸೆಗಳು ಅವರನ್ನು ಕಲಕುತ್ತಿದ್ದವು. ಇಂದು ಶಂ. ಬಾ. ಅವರು ಪವಾಡಗಳೆಂಬವನ್ನೇ ಅಧೋಗತಿಯ ಲಕ್ಷಣ ವೆಂದು ಸಿದ್ಧಾಂತಿಸಿದ್ದಾರೆ. ಚಿಕ್ಕಂದಿನ ಈ ಸಂಶಯ ಅದರ ಪ್ರಾರಂಭವಾಗಿರಬಹುದು.

ನಾನು: ನೀವು ೧೮ ವರ್ಷಕಾಲ ಶಿಕ್ಷಕರಾಗಿ ಕೆಲಸ ಮಾಡಿದಿರಿ. ಶಿಕ್ಷಕರಾಗಬೇಕೆಂಬ ಹಂಬಲ ದಿಂದಲೇ ನೀವು ಆ ಕೆಲಸ ವಹಿಸಿಕೊಂಡಿರಾ? ಅದರಲ್ಲಿ ತೃಪ್ತಿ ಅನಿಸಿತೆ?

ಶಂ. ಬಾ. ನನಗೊಂದು ಜೀವನೋಪಾಯ ಬೇಕಾಗಿತ್ತು. ನನ್ನ ಸ್ಥಿತಿಯಲ್ಲಿ ಇದೊಂದೇ ಲಭ್ಯವಾದ ಉಪಾಯವಾಗಿತ್ತು. ಅದರಲ್ಲಿ ಅಂಥ ಸಾರ್ಥಕ್ಯ ಅನಿಸಲಿಲ್ಲ ನಿಜ. ಶಿಕ್ಷಕ ವರ್ಗದಲ್ಲಿ ಹೆಚ್ಚಿನವರಿಗೆ ಸಂಬಳ, ಬಡತಿ ಮೊದಲಾದವುಗಳ ಹೊರತು ಇತರ ಆಸಕ್ತಿ [illegible] ಇಲ್ಲದ್ದನ್ನು ಕಂಡೆ. ಹಾಗಾಗಿ ಅದರಲ್ಲಿ ಬೌದ್ಧಿಕ ಉತ್ತೇಜನಕ್ಕೆ ಆಸ್ಪದವಿರಲಿಲ್ಲ.

ಕನ್ನಡದ ಕೆಲಸ

ಪ್ರಶ್ನೆ: ನೀವು ಮೂಲತಃ ಮರಾಠಿ ಭಾಷಿಕ ರಾಗಿದ್ದು ಪುಣೆಯೊಡನೆ ಸಂಪರ್ಕ ಬಂದಿದ್ದ ರೂ

ಕನ್ನಡದ ಕೆಲಸಕ್ಕೆ, ಕನ್ನಡದ ಹೋರಾಟಕ್ಕೆ ತೊಡಗಿದ್ದು ಹೇಗೆ?

ಉತ್ತರ: ಇಂಥ ಒಂದು ಸಮಸ್ಯೆ ಇದ್ದದ್ದು [illegible] ಉತ್ಸಾಹ ಮೂಡಿತ್ತು. ಆದರೆ ಧಾರವಾಡಕ್ಕೆ ಬಂದ ಮೇಲೆ ಕನ್ನಡ ದೇಶದಲ್ಲಿ ಮೂಡುತ್ತಿದ್ದ ಕನ್ನಡದ ಪ್ರಜ್ಞೆಯ ಬಗ್ಗೆ ನಮ್ಮ ನಿಲುವು [illegible] ವ್ಯಕ್ತಿ ಪಡಿಸಿರಲಿಲ್ಲ. ಆಗ [illegible] ಕರ್ನಾಟಕ ದಾರಿ ತೋರಿಸಿತು. ಅವರಿಗೆ ಕಲಕತ್ತೆಗೆ ವರ್ಗವಾದಾಗ ಅಗತ್ಯವಿಲ್ಲದಿದ್ದರೂ ಬಂಗಾಲಿ ಕಲಿತು ತಮ್ಮ ಸುತ್ತಲವರೊಡನೆ ತಾದಾತ್ಮ್ಯ ಹೊಂದಲು ಯತ್ನಿಸಿದರೆಂದು ಕೇಳಿದೆವು. ಹಾಗೆಯೇ ನ. ಚಿ. ಕೇಳಕರರೂ ನಮ್ಮ ಸುತ್ತಲವರ ಹಿತ ಸಂಬಂಧಗಳಲ್ಲಿ ಒಂದಾಗುವುದು ನಮ್ಮ ಕರ್ತವ್ಯವೆಂದು ನಮಗೆ ಬೋಧಿಸಿದರು.

ಹೀಗೆ ಶಂ. ಬಾ. ಅವರು ಕನ್ನಡದ ಕೆಲಸಕ್ಕೆ ಹೆಗಲುಕೊಟ್ಟರು. ಬೆಳಗಾವಿ ಸಾಹಿತ್ಯ ಸಮ್ಮೇಳನದಲ್ಲಿ ಅವರು [illegible] ವಹಿಸಿದ ಪಾತ್ರದಿಂದ ಅವರನ್ನು ನಾನಾ ಫಡನವೀಸ್ ಎಂದು ಕೆಲವರು ಕರೆದರು. (ಅವರಿಗೆ ಅದು ಅಷ್ಟು ಇಷ್ಟವಾದ ಬಿರುದಾಗಲಿಲ್ಲ ಎಂಬುದು ಬೇರೆ ಮಾತು.) ಬರವಣಿಗೆಯಲ್ಲಿ ಅವರು ತಮ್ಮ ಸಾಮರ್ಥ್ಯವನ್ನು ಒರೆಗೆ ಹಚ್ಚಿದ್ದು 'ಕರ್ಮವೀರ' ಮತ್ತು ಅನಂತರ 'ಜಯಕರ್ನಾಟಕ' ದಲ್ಲಿ.

ಸಂಶೋಧನ ರಂಗಕ್ಕೆ ಅವರು ಇಳಿದದ್ದು ಹೇಗೆ?

ಅದೂ ಕನ್ನಡದ ಚಳವಳಿಯಿಂದಲೇ. ಆಗ ಮೊಳಗುತ್ತಿದ್ದ "ಕಾವೇರಿಯಿಂದಮಾ ಗೋದಾವರಿವರಮಿರ್ದ" ನಾಡಿನ ಘೋಷಣೆ ಹುಟ್ಟಿಸಿದೊಡನೆ ಸಮಸ್ಯೆಯನ್ನೂ ಅವರಿಗೆ ತಂದೊಡ್ಡಿತು. ಇಷ್ಟು ಉದ್ದಗಲಕ್ಕೆ ಹಿಂದೆ ಕನ್ನಡ ನಾಡು ಹಬ್ಬಿದುದು ನಿಜವೇ? ಬರೇ ಪೃಥು ಅಭಿಮಾನವೇ? ಚಾಲುಕ್ಯರೂ ರಾಷ್ಟ್ರಕೂಟರೂ ಮರಾಠಿಗರೆಂಬೊಂದು ವಾದ ಆಗ ಕೇಳಿಬರುತ್ತಿತ್ತು. ಇದೆಲ್ಲದರ ಸತ್ಯವನ್ನು ಒರೆಗೆ ಹಚ್ಚುವ ಜಿಜ್ಞಾಸೆಯಿಂದ ಅವರು ಸಂಶೋಧನೆಯ ರಂಗದಲ್ಲಿ ಪ್ರವೇಶಿಸಿದ್ದು. ಅದನ್ನು ಶೋಧಿಸುವುದಕ್ಕೆ ಭಾಷಾಶಾಸ್ತ್ರ, ಸ್ಥಳನಾಮಗಳ ವಿವೇಚನೆ ಇತ್ಯಾದಿಗಳಲ್ಲಿ ತೊಡಗಿದರು. ಅದರ ಪರಿಣಾಮವಾಗಿ ಕನ್ನಡ ನಾಡು ಗೋದಾವರಿವರೆಗೇ ಏಕೆ, ಅದಕ್ಕೂ ಉತ್ತರಕ್ಕೆ ಚಾಚಿತ್ತು ಎಂಬುದನ್ನೂ ಕನ್ನಡದ ಮುದ್ರೆ ಮರಾಠಿಯ ಮೇಲೆ ಒತ್ತಿದ್ದು ಇಂದಿಗೂ ಸ್ಪಷ್ಟವಾಗಿ ಗೋಚರವಾಗುವುದನ್ನೂ ಅವರು ಕಂಡರು. ಭಾಷೆ ಸಂಸ್ಕೃತಿಯಿಂದ ವಿಭಕ್ತವಾಗಿ ಬೆಳೆಯಲಾರದಾದ್ದರಿಂದ ಅವೆರಡರ ಸಂಬಂಧದ ವಿಶ್ಲೇಷಣೆಗೆ ಕೈ ಹಾಕಿದರು. ಹೀಗೆ ಕರ್ನಾಟಕ– ಮಹಾರಾಷ್ಟ್ರಗಳ ಜನಾಂಗಮೂಲ ಹಾಗೂ ಸಂಸ್ಕೃತಿಯ ಬೆಳವಣಿಗೆಯೂ ಸಂಬದ್ಧವಾಗಿದ್ದುದು ಗೋಚರಕ್ಕೆ ಬಂತು. ತಮ್ಮ ಅಧ್ಯಯನಗಳ ಫಲಿತಾಂಶವಾಗಿ ಬರೆದ ಲೇಖನ, ಗ್ರಂಥಗಳ ಮೇಲೆ ಬಂದ ಟೀಕೆಗಳಿಗೆ ಉತ್ತರ ಕೊಡುವುದಕ್ಕಾಗಿ ಹೆಚ್ಚು ಅಧ್ಯಯನ ಅಗತ್ಯವಾಯಿತು.

ದೇವ ಮೂಲ

ಶಂ. ಬಾ. ಅವರು ಭಾಷಾಶಾಸ್ತ್ರದ ಅಧ್ಯಯನದಿಂದ ತುಂಬಾ ವಿವಾದಾಸ್ಪದವಾಗಿರುವ ದೈವತಶಾಸ್ತ್ರದ ರಂಗಕ್ಕೆ ಪ್ರವೇಶಿಸಿದ್ದು ಹೇಗೆ? ಭಾಷಾಶಾಸ್ತ್ರದ ಕ್ಷೇತ್ರದಲ್ಲೇ ಉಳಿದಿದ್ದರೆ ಚೆನ್ನಾಗಿರುತ್ತಿರಲಿಲ್ಲವೆ?

ಹೀಗೆ ಜೀವನವನ್ನಾಗಲಿ ಅಧ್ಯಯನವನ್ನಾಗಲಿ ಒಂದರಿಂದ ಒಂದನ್ನು ಬೇರ್ಪಡಿಸಿ ನೋಡಲಿಕ್ಕೇ ಆಗುವುದಿಲ್ಲ ಎಂಬುದು ಶಂ. ಬಾ. ನಿಲುವು. ಅವರು ಶಾಸ್ತ್ರ ಎಂಬ ದೃಷ್ಟಿಯಿಂದ ಅಧ್ಯಯನವನ್ನು ಕೈಕೊಂಡವರೇ ಅಲ್ಲ. ಒಂದು ಪ್ರಶ್ನೆಯಿಂದ ಇನ್ನೊಂದು ಹುಟ್ಟಿ ಅದರ ಜಾಡು ಹಿಡಿದು ಸಾಗುವಾಗ ಭಾಷೆಯಿಂದ ಸಂಸ್ಕೃತಿ, ಸಂಸ್ಕೃತಿಯಿಂದ ದೇವರನ್ನು ಕುರಿತ ಕಲ್ಪನೆಗಳು, ಅವುಗಳ ಹಿಂದಿನ ಪ್ರೇರಣೆಗಳು ಹೀಗೆ ಅವರು ಶೋಧಿಸುತ್ತ ಹೋದರು.

ಉದಾಹರಣೆಗೆ ಕನ್ನಡಿಗರ ಕುಲದೈವತ ವಿಠ್ಠಲನ್ನು [illegible] ಸಾಂಸ್ಕೃತಿಕ ಅಧ್ಯಯನದಿಂದ [illegible]. ಈ ವಿಠ್ಠಲನ [illegible]

ಎಂದು, ಹೇಗೆ ಆರಂಭವಾಯಿತು ? ಎಂಬ ಪ್ರಶ್ನೆ ಎದ್ದಾಗ ಇಂದು ನಾವು ಆರಾಧಿಸುವ ಶಿವ, ವಿಷ್ಣು, ದೇವಿ ಆರಾಧನೆಗಳ ಮೂಲವೇನು ? ಎಂಬ ಪ್ರಶ್ನೆಯೂ ಹುಟ್ಟಿತು. "ಈ ದೇವತೆಗಳನ್ನು ನಾವೇ ನಿರ್ಮಿಸಿದೆವೋ ಅವರು ನಮ್ಮನ್ನು ನಿರ್ಮಿಸಿದರೋ ? ಅವರು ನಮ್ಮ ಮೇಲೆ ಬೀರಿದ ಪರಿಣಾಮಗಳೇನು ?"

ಇವುಗಳನ್ನು ತಿಳಿಯಬೇಕಾದರೆ ದೈವತವಾಚಿ ಶಬ್ದಗಳ ಐತಿಹಾಸಿಕ ಅಧ್ಯಯನ ಅಗತ್ಯವೆನಿಸಿತು. ಇದರಲ್ಲಿ ಪಾಶ್ಚಾತ್ಯರು ಮಾಡಿದ ಕೆಲಸದ ಪರಿಚಯವನ್ನು ಶಂ. ಬಾ. ಮಾಡಿಕೊಂಡರು. ಈ ಶಬ್ದಗಳ ಅರ್ಥಗ್ರಹಣ ಪದ್ಧತಿಯೊಂದಿದೆ ಎಂಬುದು ಗ್ರೀಕ್ ಮೊದಲಾದ ಸಂಸ್ಕೃತಿಗಳ ದೈವತಗಳ ಅಧ್ಯಯನದಿಂದ ಬೆಳಕಿಗೆ ಬಂದಿತ್ತು. ಶಂ. ಬಾ. ಅವರು ಈ ಅರ್ಥಗ್ರಹಣ ಪದ್ಧತಿಯನ್ನು ಬೆಳಸಿಕೊಂಡ ಕನ್ನಡದ ಮೊದಲ ವಿದ್ವಾಂಸರು.

ಪ್ರತಿಯೊಂದು ದೈವತದ ಹಿಂದೆ ಒಂದು ಶಬ್ದ ಪ್ರತಿಮೆ ಇದೆ. ಅದರ ಅರ್ಥದಲ್ಲೊಂದು ಆಕೃತಿ ಇದೆ. ಆ ದೈವತದ ಗುಣವೇ ಅದರ ಆಕೃತಿಯನ್ನುಂಟುಮಾಡುತ್ತದೆ. ರೂಪವೆಂಬುದು ಗುಣಗಳ ಹೊದಿಕೆ. ಕೃಷ್ಣ ಎಂದು ಒಂದು ದೈವತಕ್ಕೆ ಹೆಸರು ಇದ್ದರೆ ಅದು ಆ ದೈವತದ ಮೂಲ ಕಪ್ಪು ಗುಣದ ದ್ಯೋತಕ. ಕಪ್ಪು ಅಂಧಕಾರದ, ಮೃತ್ಯುವಿನ ದ್ಯೋತಕ. ಹೀಗೆ ಆ ದೈವತದ ಆರಾಧಕರು ಅಂಧಕಾರದ ಆರಾಧಕರೂ ಆಗುತ್ತಾರೆ. ಇದನ್ನು ನಮ್ಮ ಪೂರ್ವಜರೂ ಹೇಳಿದ್ದಾರೆ: ಯಾರಿಗೆ ಯಾವುದರಲ್ಲಿ ಶ್ರದ್ಧೆಯೋ ಅವರು ಅದೇ ಆಗುತ್ತಾರೆ-ಎಂದು. ಹೀಗೆ ದೈವತ ನಮ್ಮ ಬದುಕಿನ ಮೇಲೆ ಪ್ರಭಾವ ಬೀರುತ್ತದೆ.

ಭಾಷಾ ಪ್ರತಿಮೆ

ದೈವತ ಕಲ್ಪನೆ ಮನುಷ್ಯ ಯೋಚಿಸಿ ತರ್ಕದಿಂದ ನಿಗಮಿಸಿದ್ದಲ್ಲ. ಅದು ಜೀವನಾನುಭವದ ಸನ್ನಿವೇಶದಲ್ಲಿ ಮಾನವನಿಗೆ ಸ್ಫೂರ್ತವಾದ ಭಾಷಾ ಪ್ರತಿಮೆ. ಬದುಕಿಗೆ ಅದನು ಮಾಡಿದ "ಅರ್ಥ" ಅದು ಎನಬಹುದು. ಅರ್ಥವಲಿ ಎರಡು ವಿಧ. ಭಾವಾನುಭೂತಿಗೆ ಶಕ್ಯವಾದ Positive ಸ-ಕಾರಾತ್ಮಕವಾದದ್ದೊಂದು, ತದ್ವಿರುದ್ಧವಾದ ನ-ಕಾರಾತ್ಮಕವಾದದ್ದು ಇನ್ನೊಂದು. ಮೊದಲನೆಯದು ಪ್ರಕಾಶದ ಆರಾಧಕ; ಅದು ಸೂರ್ಯಾದಿ ಪ್ರತಿಮೆಗಳಲ್ಲಿ ವ್ಯಕ್ತವಾಗುತ್ತದೆ. ಅದು ಮಾನವನ ಪ್ರಜ್ಞೆಯಿಂದ ಸ್ಫುರಿಸಿದ್ದು. ಎರಡನೆಯದು ನಮ್ಮ ಇಂದ್ರಿಯಗಳ ಪಾತಳಿಯಿಂದ ಬಂದಿದ್ದು. ಅದು ಲೈಂಗಿಕ ಪ್ರತಿಮೆಗಳಿಂದ ಗುರುತಿಸಲ್ಪಡುತ್ತದೆ. ವೃಕ್ಷ, ಸರ್ಪ, ಜಲ ಮೊದಲಾದ ಪ್ರತಿಮೆಗಳಿಂದಲೂ ಅದನ್ನು ಗುರುತಿಸಬಹುದು. ಜಗತ್ತಿನ ದೈವತ ಪ್ರತಿಮೆಗಳನ್ನು ಸ್ಥೂಲವಾಗಿ ಎರಡು ಸಂಪ್ರದಾಯಗಳಲ್ಲಿ ವಿಂಗಡಿಸಬಹುದು. ಒಂದು ಪ್ರಕಾಶ ಸಂಪ್ರದಾಯ, ಇನ್ನೊಂದು ಜಲ ಸಂಪ್ರದಾಯ.

ನಾವು ಭಾರತೀಯರು ಇಂದು ಅನುಸರಿಸುತ್ತಿರುವ ದೈವತಗಳೆಲ್ಲವೂ ಲೈಂಗಿಕ ಮೂಲವಾದವುಗಳು, ಸರ್ಪಾದಿ ಸಂಕೇತಗಳಿಗೆ ಸಂಬಂಧವುಳ್ಳವು. ಶಿವ, ವಿಷ್ಣು, ದೇವಿ, ಮಾತೃದೇವತೆ ಇತ್ಯಾದಿಗಳೆಲ್ಲ ಜಲ ಸಂಪ್ರದಾಯದವೇ ಎಂಬುದನ್ನು ಶಂ. ಬಾ. ಅವರು ವೇದಕಾಲದವರೆಗೂ ಹಿನ್ನಡೆದು ಹಿಂಜಿ ತೀರ್ಮಾನಿಸಿದ್ದಾರೆ. (ಕ್ರೈಸ್ತಾದಿ ಧರ್ಮಗಳೂ ಇದೇ ವರ್ಗದಲ್ಲಿ ಬರುತ್ತವೆ.) "ಎಲ್ಲ ದೇವತೆಗಳಲ್ಲಿಯೂ ಲೈಂಗಿಕ ಮೂಲವನ್ನು ನೀವು ಬೇಕೆಂದೇ ಕಾಣುತ್ತೀರಿ ಎಂದು ಆಕ್ಷೇಪ ಬಂದಿದೆ. ಇದಕ್ಕೆ ಏನನ್ನುತ್ತೀರಿ?" ಎಂದು ಕೇಳಿದರೆ ಅವರು ಹೇಳುವುದು, "ನಾನು ಕಾಣುವುದಲ್ಲ. ನಮ್ಮ ಸಂಸ್ಕೃತಿಯಲ್ಲಿ ಅದು ಉಂಟು. ಸರಿಯಾದ ಅರ್ಥ ಪದ್ಧತಿಯಿಂದ ನೋಡಿದರೆ ಆ ದೈವತಗಳ ಶಬ್ದ ಪ್ರತಿಮೆಗಳಲ್ಲೇ ಅದು ಸ್ಪಷ್ಟವಾಗುತ್ತದೆ," ಎಂದು.

ಲೈಂಗಿಕದಲ್ಲಿ ತಪ್ಪೇನು ?

"ದೈವತಗಳು ಲೈಂಗಿಕ ಮೂಲವಾದರೆ ತಪ್ಪೇನು? ಲೈಂಗಿಕವೆಂಬುದು ಜೀವನದ ವಾಸ್ತವ. ಅದು ಪ್ರಬಲಶಕ್ತಿ. ಗ್ರೀಕ್, ರೋಮನ್ ಇತ್ಯಾದಿ ಸಂಸ್ಕೃತಿಗಳಲ್ಲೆಲ್ಲ ಈ ಒಲವು ಕಾಣಿಸುತ್ತದೆ. ಅದರ ಆಧಾರದ ಮೇಲೆ

ದರೆ ಅಪರಾಧವೇನು? ಸೂರ್ಯನ ಆರಾಧನೆಯಲ್ಲಿ ಸರ್ಪಾರಾಧನೆಗಿಂತ ಏನು ಹೆಚ್ಚಳ?" ಎಂದೆ ನಾನು.

ಶಂ. ಬಾ. ಅವರ ಉತ್ತರದ ಸಾರ ಇದು. ಪ್ರಕಾಶ ಸಂಪ್ರದಾಯ-ಜಲಸಂಪ್ರದಾಯ ಇವೆರಡೂ ಪರಸ್ಪರ ವಿರುದ್ಧ ಜೀವನ ದರ್ಶನಗಳನ್ನು ಸೂಚಿಸುತ್ತವೆ. ಸೂರ್ಯ, ಅಗ್ನಿ ಮೊದಲಾದವುಗಳ ಸಂಕೇತದ ಹಿಂದಿರುವುದು ಪ್ರಜ್ಞೆ; ಅದು ಜೀವನಮುಖವಾದದ್ದು. ಅದು ವಿಶ್ವದಲ್ಲಿ ಒಂದು ವ್ಯವಸ್ಥೆ(order)ಯನ್ನು ಕಾಣುತ್ತದೆ. ಅದೇ ಪ್ರಾಚೀನ ಪರಿಭಾಷೆಯಲ್ಲಿ 'ಋತ' ಎನಿಸುತ್ತದೆ. ಅದೇ ಧರ್ಮ. ಜಗತ್ತಿನಲ್ಲಿ ವ್ಯವಸ್ಥೆ, ಕ್ರಮ ಇದೆಯೆಂದಾದರೆ ಬದುಕಿನಲ್ಲಿಯೂ ಅದು ಇರಬೇಕಾಗುತ್ತದೆ. ಈ ನಿಯಮಕ್ಕೆ ಒಳಗಾಗಿ ಮಾನವ ನಡೆಯಬೇಕೆಂದೊಪ್ಪಬೇಕಾಗುತ್ತದೆ. ದೇವತೆಗಳು ಕೂಡ ಹಾಗೆ ನಡೆದುಕೊಳ್ಳಬೇಕಾಗುತ್ತದೆ. ನಮ್ಮ ಜ್ಞಾನಾನ್ವೇಷಣೆಯಲ್ಲಿಯೂ ಈ ಧರ್ಮದ ಅನುಸರಣೆ ಆಗುತ್ತದೆ. ನಾವು ಮೌಲ್ಯಗಳೆನ್ನುವುದು ಇದಕ್ಕೆ. ರಹಸ್ಯ, ಗುಹ್ಯ, ಮುಚ್ಚಿಡತಕ್ಕದ್ದು ಅದರಲ್ಲಿಲ್ಲ; ಅದು ಪ್ರಾಂಜಲ.

ತದ್ವಿರುದ್ಧವಾಗಿ ಜಲಸಂಪ್ರದಾಯದ್ದು "ರಾತ್ರಿ ಸಮಯ". ಅದು ವಿಶ್ವದಲ್ಲಿ ನಿಯಮ ಅಥವಾ ವ್ಯವಸ್ಥೆಯನ್ನು ನಿರಾಕರಿಸುತ್ತದೆ. ಅದರ ದೇವರು ಯಾವ ನಿಯಮಕ್ಕೂ ಒಳಗಾಗುವುದಿಲ್ಲ. ಅವನೊಂದು ರಹಸ್ಯ. ತಮಸಾ ಗೂಳ್ಹಂ—ಕತ್ತಲೆಯಿಂದ ಮುಚ್ಚಿದ್ದು. ಅವನು (ಅಥವಾ ಅವಳು) ನಿಯಮಾತೀತನಾದ್ದರಿಂದ ಅವನಿಗೆ ಸಂಪೂರ್ಣ ಶರಣಾಗತನಾಗುವುದು, ಅನನ್ಯಭಕ್ತಿಯಿಂದ ನಂಬುವುದು ಅಥವಾ ಅವನಲ್ಲಿ ಒಂದಾಗಿಹೋಗುವುದು ಮಾತ್ರ ಮನುಷ್ಯನಿಗಿರುವ ದಾರಿ. ಮಾನವನ ಯತ್ನದಿಂದ ಏನೂ ಆಗುವುದಿಲ್ಲ. ನಿಯಮ, ಅರ್ಥವಿಲ್ಲದ ಈ ಜಗತ್ತಿನಲ್ಲಿ ಕಾಣುವುದೂ ಅರ್ಥರಹಿತ ಭ್ರಮೆ. ಮಾಯೆಯಿಂದ ಇಲ್ಲಿಂದ ಪಾರಾಗಿ ಹೋಗುವುದೇ ಬದುಕಿನ ಧ್ಯೇಯ. ಇದರಿಂದ ದೊರಕುವುದೇ 'ಆನಂದ'. [illegible] ರಾತ್ರಿಯಲ್ಲಿ [illegible]

ತೋರಿಸುವವ ಗುರು. ಅವನಿಗೆ ಶರಣು ಹೋಗಬೇಕು. ಆ ಗುರು ಕೂಡ ನಿಯಮಾತೀತ. ಸಂಶಯ ಇರಬಾರದು (ಸಂಶಯಾತ್ಮಾ ವಿನಶ್ಯತಿ), ಅವನಿಗೆ ಗುಲಾಮನಾಗಿ ಗುಹೆಯಲ್ಲಿ ಅಡಗಿದ ರಹಸ್ಯವನ್ನು ಸಾಕ್ಷಾತ್ಕರಿಸಬಹುದು. ಇದೇ ಜ್ಯೋತಿ, ಇದೇ ಸಿದ್ಧಿ. ಇದೇ ಪರಮಗತಿ. ಇದೇ ಸತ್ಯ. ಇದೊಂದೇ ಜ್ಞಾನ, ಅಧ್ಯಾತ್ಮ. ಇದೊಂದೇ ವಿದ್ಯೆ. ನಮ್ಮ ವೇದಾಂತದ ವಿವಿಧ ಶಾಖೆಗಳು, ಅವೈದಿಕವಾದ ಬೌದ್ಧ, ಜೈನ, ಶೈವಾದಿ ಪಂಥಗಳು ಎಲ್ಲವೂ ಈ ವಿಚಾರಧಾರೆಯವು. ಈ ವಿಚಾರಧಾರೆಯಿಂದಲೇ ನಮ್ಮ ವಾಮಾಚಾರ, ಗುಹ್ಯ ಸಂಪ್ರದಾಯಗಳೂ



"ಹನ್ನೊಂದು ಗಂಟೆ ಬಸ್ ಬರೋದು

ಅದಿತಿ-ಆದಿಮಾತಾ ಸಂಪ್ರದಾಯ,ಬೌದ್ಧ,ಶೈವ, ವೈಷ್ಣವ, ಜೈನ, ವಿರಕ್ತ ಪಂಥಗಳೂ ಕುಮಾರ–ಕುಮಾರಿ ಸಂಪ್ರದಾಯಗಳೂ ಉದ್ಭವಿಸಿವೆ. ಈ ಪಂಥದಲ್ಲಿ ಆರಾಧ್ಯ ದೈವತ ನಿಯಮಾತೀತವಾದ್ದರಿಂದ ಆರಾಧಕರೂ ವಿಧಿನಿಯಮಗಳನ್ನು ಪಾಲಿಸುವ ಅಗತ್ಯ ಕಾಣದು (ವಿಧಿನಿಷೇಧ ನಿಸ್ತ್ರೈಗುಣ್ಯವೇ). ಈ ಎರಡು ಪಂಥಗಳಿಂದ ಯಾವ ಯಾವ ಬಗೆಯ ಜೀವನಕ್ರಮಗಳಿಗೆ ಪ್ರಚೋದನೆಯಾಗುತ್ತದೆಂದು ಊಹಿಸುವುದು ಕಷ್ಟವಲ್ಲ.

ಅನಾಸಕ್ತರಲ್ಲ

ಸಂಶೋಧನೆಗಳಿಂದ ಹೊರಪಟ್ಟ ದೇವತಾ ರಹಸ್ಯವನ್ನು ಅನಾಸಕ್ತಿಯಿಂದ ಮಂಡಿಸುವುದು ಬೇರೆ; ಆದರೆ ಶಂ. ಬಾ. ಅವರು ಅವುಗಳನ್ನು ಮಂಡಿಸುವಾಗ ಕ್ರುದ್ಧ ಯುವಕ–angry young man ನಂಥ ಮಾತುಗಳನ್ನು ಪ್ರಯೋಗಿಸುವುದರಿಂದ ಅವರಿಗೆ ವಿರೋಧ ಬಹಳವಾಗಿದೆ.

ತಾವು ಕೆರಳಿ ಮಾತಾಡುವುದು ನಿಜವೆಂದು ಅವರೂ ಒಪ್ಪುತ್ತಾರೆ. ಅದಕ್ಕೆ ನಾನು ತಿಳಿದಂತೆ ಎರಡು ಕಾರಣಗಳಿವೆ: ಒಂದು ಈ ದೈವತಗಳ ಆರಾಧನೆಯ ದೂರಗಾಮಿ ಸಾಮಾಜಿಕ ಪರಿಣಾಮಗಳು: ಸೌರ ಅಥವಾ ಪ್ರಕಾಶ ಪಂಥದ ಋತ ದೃಷ್ಟಿ ಪ್ರಾಂಜಲವಾದದ್ದು. ಅದು ವಿಶ್ವಜನರನ್ನು ಒಳಗೊಂಡದ್ದು,ಅದೇ ವೈಶ್ವಾನರಾಗ್ನಿ ಜಾತವೇದ ಅಗ್ನಿ. ಅದರದು ವಿಶ್ವಸತ್ಯ. ಅದು ಜನಪದದ ತಿಳಿವಳಿಕೆಯನ್ನು (folk wisdom) ಗೌರವಿಸುತ್ತದೆ. ನಮ್ಮ ವಿವಸ್ವಾನ್ ಮನು ಈ ವಿಚಾರಧಾರೆಯನ್ನು ಪ್ರತಿಪಾದಿಸುತ್ತಾನೆ. ಅದರಲ್ಲಿ ಲೈಂಗಿಕತೆ ನಿರಾಕೃತವಾಗಿಲ್ಲ. ಅದು ದಾಂಪತ್ಯ ಧರ್ಮಕ್ಕೆ ಇಂಬು ಕೊಡುತ್ತದೆ ಲೈಂಗಿಕವಾದ ರಾತ್ರ ಸಮಯಾಚಾರವನ್ನು ನಿಯಂತ್ರಿಸುತ್ತದೆ. ತದ್ವಿರುದ್ಧವಾಗಿ ಚಾಂದ್ರ ಅಥವಾ ಜಲ ಸಂಪ್ರದಾಯದಲ್ಲಿ ರಹಸ್ಯಕ್ಕೆ ಪ್ರಾಧಾನ್ಯ. ಅದರಲ್ಲಿ ವ್ಯಕ್ತಿ ವ್ಯಕ್ತಿಯಾಗಿಯೇ ಮೋಕ್ಷಕಾಮಿಯಾಗುತ್ತಾನೆ. ಅವನಿಗೆ ಋತ ಇಲ್ಲ. ಅವನದು ವೈಯಕ್ತಿಕ ಸತ್ಯ. ಏಕಂ ಸತ್. ಸಮಷ್ಟಿಗೆ ಅವನ ನಿಷ್ಠೆ ಇಲ್ಲ. ತನ್ನ ವೈಯಕ್ತಿಕ ಸತ್ಯದ ಬೆಂಬತ್ತಿ ಅವನು ಇಂದ್ರಿಯಗಳನ್ನು ಉಪವಾಸ ಕೆಡಹುತ್ತಾನೆ, ಇಲ್ಲವೆ ಇಂದ್ರಿಯಾರಾಮನಾಗುತ್ತಾನೆ. (ಅವನ ಲೈಂಗಿಕ ಸಂಕೇತಗಳು ಇದರ ಲಕ್ಷಣ). ಈ ಅತಿರೇಕಗಳೆರಡೂ ನಿಯಮಬದ್ಧ ಜೀವನದಿಂದ ವ್ಯಕ್ತಿಗಳನ್ನು ದೂರ ಒಯ್ದು ಸಮಷ್ಟಿ ಜೀವನವನ್ನು ನಿರರ್ಥಕಗೊಳಿಸುತ್ತವೆ. ಗುರುವಿನ ಗುಲಾಮನಾಗಿರುವುದರಿಂದ ಮಾನವ ಸ್ವಂತ ವಿವೇಚನೆ ಕಳೆದುಕೊಳ್ಳುತ್ತಾನೆ. ಇವೆಲ್ಲ ಅವನತಿಗೆ ಕಾರಣವಾಗುತ್ತವೆ. ನಮ್ಮ ಅವನತಿಗೆ ಇದೇ ಕಾರಣ.

ಇನ್ನೊಂದೆಂದರೆ ಇದು ಎಂದೆಂದಿನಿಂದಲೂ ಹೀಗಿರಲಿಲ್ಲ. ಚಾಂದ್ರ ಸಂಪ್ರದಾಯದ ಜಾಡು ಹಿಡಿದು ಹೋಗಿ ಶಂ. ಬಾ. ಅವರು ಋಗ್ವೇದದಲ್ಲಿಯೂ ಅದರ ಪ್ರಾಬಲ್ಯವನ್ನು ಗುರುತಿಸಿದ್ದಾರಾದರೂ ಒಂದು ಕಾಲದಲ್ಲಿ ವೇದ ಸೌರ ಸಂಪ್ರದಾಯದ ಋತಪಕ್ಷಪಾತಿಯಾಗಿದ್ದುದರ ಕುರುಹುಗಳನ್ನೂ ಕಂಡಿದ್ದಾರೆ. ಮಿತ್ರ, ವರುಣ, ಇಂದ್ರ, ಅಗ್ನಿ ಇವರು ಋತದ ಪ್ರತಿನಿಧಿಗಳಾದ ದೈವತಗಳು. ಈ ಸಂಪ್ರದಾಯದಲ್ಲಿ ವರುಣ ಋತಪ, ಅಂದರೆ ನಿಯಮ ಬದ್ಧ ವಿಶ್ವದ, ರಕ್ಷಕ "ಧೀಯೋ ಯೋ ನಃ ಪ್ರಚೋದಯಾತ್" ಪ್ರಜ್ಞೆಯನ್ನು ಪ್ರೇರಿಸಲಿ–ಎಂಬ ಗಾಯತ್ರಿ ಮಂತ್ರದ ದ್ರಷ್ಟಾರನಾದ ವಿಶ್ವಾಮಿತ್ರ ಈ ಧರ್ಮದ ಒಬ್ಬ ಪ್ರತಿನಿಧಿ. ಆದರೆ ಕಾಲಾಂತರದಲ್ಲಿ ಇದು ಬದಲಾಗಿ ಚಾಂದ್ರ ಸಂಪ್ರದಾಯ, ರಾತ್ರಿ ಸಮಯ ಪ್ರಬಲವಾಯಿತು, ಸೌರ ದೇವತೆಗಳು ಅಡಿಗೆ ಬಿದ್ದರು. ಲೈಂಗಿಕ ಪಾತಳಿಯ ಮಾತೃದೇವತೆ ಅದಿತಿ, ದೇವತೆಗಳ ಜನನಿ ಎನಿಸಿದಳು. ವೇದಾಂತವೆಂದು ಮುಂದೆ ಹೆಸರಾದ ವಿಚಾರಧಾರೆಗೆ ಮೂಲವಾದ ಋಕ್ಕುಗಳು ಬಂದವು. ವಸಿಷ್ಠ ಇದರ ಪ್ರತಿನಿಧಿ. ವಸಿಷ್ಠನಿಗೆ ದಕ್ಷಿಣಕಪರ್ದ ಎಂದು ಹೆಸರು. ಕಪರ್ದ ಎಂದರೆ ಕವಡೆ. ಕವಡೆ ಸ್ತ್ರೀ ಲೈಂಗಿಕ ಸಂಕೇತ ವಿಶ್ವಾಮಿತ್ರ ವಸಿಷ್ಠ ಇಬ್ಬರೂ ಐತಿಹಾಸಿಕ ವ್ಯಕ್ತಿಗಳಲ್ಲ. ಅವರ ಕಲಹ ಮತ್ತು ವಿಶ್ವಾಮಿತ್ರನ ಸೋಲು ಎರಡು

ಸಂಪ್ರದಾಯಗಳ ತಿಕ್ಕಾಟ ಮತ್ತು ಅದರ ಫಲಿತಾಂಶವನ್ನು ಸೂಚಿಸುವ ರೂಪಕ ಕಥೆ (Myth) ಮಾತ್ರ.

ಗೊಂದಲ

ಶಂ. ಬಾ. ಅವರನ್ನು ಇದಕ್ಕಿಂತಲೂ ನೋಯಿಸುವ ಸಂಗತಿಯೆಂದರೆ ಚಾಂದ್ರ ಸಂಪ್ರದಾಯದ ಮೇಲ್ಗೈಯಾದ ಮೇಲೆ ಸೌರ ಸಂಪ್ರದಾಯವನ್ನು ನುಂಗಿ ಅದನ್ನೇ ಇದು ಎಂದು ತೋರಿಸುವ ಪ್ರಯತ್ನವಾದದ್ದು. ಋಗ್ವೇದವನ್ನು ಇದಕ್ಕಾಗಿ ಹಲ ಬಾರಿ ತಿದ್ದಲಾಯಿತು. ಇಂದಿನದು ಮೂಲ ಋಗ್ವೇದವಲ್ಲ. ಹೀಗೆ ಋತದ ರಕ್ಷಕನಾದ ವರುಣ ಜಲದೇವತೆಯಾದ. ಸೂರ್ಯನೂ ಚಂದ್ರ ಸಂಪ್ರದಾಯದ ಅದಿತಿಯ ಮಗ ಆದಿತ್ಯನೂ ಒಂದೇ ಆದರು. ಪ್ರಜ್ಞೆಯ ಪ್ರತಿನಿಧಿಯಾದ ಜಾತವೇದಾಗ್ನಿ ಮೃತ್ಯುರೂಪಿ ನಚಿಕೇತಾಗ್ನಿಗೆ ಸೋತು ನೀರಿನೊಳಗೆ ಅಡಗಿದ. ಜಗತ್ತಿನ ತುಂಬೆಲ್ಲ ಕತ್ತಲನ್ನೂ ಮೃತ್ಯುವನ್ನೂ ಪ್ರತಿನಿಧಿಸುವ ಸರ್ಪವನ್ನು ಸೂರ್ಯನೊಡನೆ ತಾದಾತ್ಮ್ಯ ಹೊಂದಿಸಿದ್ದಾಯಿತು. ಇಂಥ ಲೆಕ್ಕವಿಲ್ಲದಷ್ಟು ಉದಾಹರಣೆಗಳನ್ನು ಶಂ. ಬಾ. ತೋರಿಸುತ್ತಾರೆ. ಜಗತ್ತಿನ ತುಂಬೆಲ್ಲ ಸೌರ-ಚಾಂದ್ರಗಳ ಘರ್ಷಣೆ ಆಗಿದೆ. ಆದರೆ ಎರಡೂ ಒಂದೇ ಎಂದು ತೋರಿಸುವ "ಏಕಂ ಸತ್ ವಿಪ್ರಾ ಬಹುಧಾ ವದಂತಿ" ಎಂಬುದು ನಮ್ಮಲ್ಲಿ ಯಶಸ್ವಿಯಾಯಿತು. ಇರಾಣದ ವೇದವಾದ ಜೆಂದ್ ಅವೆಸ್ತದಲ್ಲಿ ಈ (ಸತ್-ಅಸತ್) ಎರಡು ವಿರುದ್ಧ ಶಕ್ತಿಗಳು ಕೊನೆವರೆಗೂ ಬೇರೆಯಾಗಿಯೇ ಇದ್ದುದು ಕಂಡಿದೆ. ಹೀಗೆ ಕಪ್ಪು-ಬಿಳಿದುಗಳನ್ನು ಒಂದಾಗಿ ಮಾಡಿದ್ದರಿಂದ ನಮ್ಮ ಜನರ ಒಳಿತು-ಕೆಡಕುಗಳ ವಿವೇಕವನ್ನು ಗೊಂದಲಕ್ಕೀಡುಮಾಡಿದಂತಾಗಿದೆ.

ಧೈರ್ಯಚ್ಯುತಿ

ಆದರೆ ಜಗತ್ತಿನಲ್ಲೆಲ್ಲಾ ಜನರು ಪ್ರಜ್ಞೆಯ ಪಾತಳಿಯಿಂದ ಇಳಿದು ಮೃತ್ಯು ಸ್ವರೂಪಿ ಇಂದ್ರಿಯ ಪಾತಳಿಯ ಚಾಂದ್ರ ಸಂಪ್ರದಾಯಕ್ಕೆ ಇಳಿದದ್ದೇಕೆ? ನನ್ನ ಜಿಜ್ಞಾಸೆ.

ಪ್ರಾಣಿಯ ಅವಸ್ಥೆಯಿಂದ ಮಾನವಾವಸ್ಥೆಗೆ ಏರಿದಾಗ ಮೊದಲು ಜಾಗ್ರತವಾದದ್ದು ಪ್ರಜ್ಞೆ-ಮಿಂಚಿನ ಹಾಗೆ. ಇದು ಸೌರ ದೈವತದ ಸ್ಫುರಣೆಗೆ ಕಾರಣ. ಆದರೆ ಕಾಲಾಂತರದಲ್ಲಿ ಈ ಮಿಂಚಿನ ಹೊಂಚನ್ನು ತಡೆಯಕೊಳ್ಳಲಾಗದೆ ಅದಕ್ಕೆ ಪ್ರತಿಕ್ರಿಯೆಯಾಗಿ ಮನುಷ್ಯ ಇಂದ್ರಿಯ ಪಾತಳಿಯ ತಣ್ ಕತ್ತಲನ್ನೇ ಮೆಚ್ಚಿದ. ಇದೇ ಹೆಚ್ಚು ನೆಮ್ಮದಿಯೆನಿಸಿತು. ಇಂದ್ರಿಯ ಪಾತಳಿ ಹೆಚ್ಚು ಉತ್ತೇಜಕವೂ ಆಗಿದೆ. ಗ್ರೀಕ್ ಸಂಸ್ಕೃತಿಯೂ ನಮ್ಮ ಹಾಗೆ ಚಾಂದ್ರ ಸಂಪ್ರದಾಯದ ರಹಸ್ಯವಾದಿ ಅನುಭಾವಿ ಆರ್ಫಿಕ್ ಮತಕ್ಕೆ ಮಣಿಯಿತು. ಒಬ್ಬ ಪಾಶ್ಚಾತ್ಯ ಪಂಡಿತ ಹೇಳುವ ಹಾಗೆ ಇದು ಮಾನವನ failure of nerves—ನರದೌರ್ಬಲ್ಯ, ಧೈರ್ಯಚ್ಯುತಿಯ ಉದಾಹರಣೆ. ಅಲ್ಲಿಂದಲೇ ಅವನತಿ ಆರಂಭ: ಘಟನೆಗಳನ್ನು ಆಲೋಚನೆಯಿಂದ, ಕ್ರಿಯೆಯಿಂದ ಎದುರಿಸುವ ಕಷ್ಟದ ಬದಲು ನಂಬಿಕೆಗಳಿಂದ, ಪವಾಡಗಳ ಬಲದಿಂದ, ಗುರ್ವನುಗ್ರಹದಿಂದ ಎದುರಿಸಬಹುದೆಂಬ ಭ್ರಮೆಯ ಆಶ್ರಯ ಹೊಂದಿ ನಿಷ್ಕ್ರಿಯರಾದದ್ದು.

ಮೃತ್ಯು, ಕತ್ತಲೆಗಳನ್ನು ಪ್ರತಿನಿಧಿಸುವ ಪ್ರತಿಮೆಗಳನ್ನು ತ್ಯಜಿಸಿ ಪ್ರಕಾಶದ ಪ್ರತಿಮೆಗಳನ್ನು ಪುನಃ ಸ್ವೀಕರಿಸದೆ ಇದರಿಂದ ನಿಸ್ತಾರ ಕಾಣದು.

ಆಶಾವಾದಿ

ಅಂಥ ಆಶೆಗೆ ಎಡೆಯಿದೆಯೆ?

ಯಾರಿಗೆ ಗೊತ್ತು? ಶಂ. ಬಾ. ನಿರಾಶಾವಾದಿಯಲ್ಲ. ಅವರು ಋಗ್ವೇದದ ೩ ನೇ ಮಂಡಲದ ೫೩ ನೇ ಸೂಕ್ತದ ೧೨ ನೇ ಋಕ್ಕನ್ನು ಉದಾಹರಿಸುತ್ತಾರೆ.

"ವಿಶ್ವಾಮಿತ್ರಸ್ಯ ರಕ್ಷತಿ
ಬ್ರಹ್ಮೇದಂ ಭಾರತಂ ಜನಂ."

—ವಿಶ್ವಾಮಿತ್ರನ ಬ್ರಹ್ಮ ಭಾರತವನ್ನು ಕಾಪಾಡುತ್ತದೆ.



ನಮ್ಮ ಅಕ್ಕನ ಮೂರು ವರ್ಷದ ಮಗಳು ಪೂರ್ಣಿಮಾಳನ್ನು ಆ ವರ್ಷ [illegible]ರಕ್ಕೆ ಸೇರಿಸಿದ್ದರು. ಪ್ರಾರಂಭದಲ್ಲಿ ತಾನು ಶಾಲೆಗೆ ಹೋಗುವುದಿಲ್ಲವೆಂದು ಹಟ ಹಿಡಿಯುತ್ತಿದ್ದಳು. ಬೆಳಗಾದೊಡನೆ ಶಾಲೆಯ ಚಿಂತೆ. ಏನು ಹೇಳಿದರೂ ತಲೆಗೆ ಹತ್ತುತ್ತಿರಲಿಲ್ಲ. ಅಂತೂ, ತನ್ನ ಅಮ್ಮನೇ ತನ್ನನ್ನು ಕರೆದುಕೊಂಡು ಹೋಗಬೇಕೆಂದೂ, ಮಧ್ಯಾಹ್ನದ ವರೆಗೆ ಶಾಲೆಯ ಬಳಿಯೇ ನಿಲ್ಲಬೇಕೆಂದೂ ಶರತ್ತು ಹಾಕಿ ಶಾಲೆಗೆ ಹೋಗಲು ಒಪ್ಪಿಕೊಂಡಳು. ಹಾಗೆ ಮಾಡುವುದು ಅಸಾಧ್ಯವಿದ್ದುದರಿಂದ ಅಕ್ಕ, ಪೂರ್ಣಿಮಾಳನ್ನು ಶಾಲೆಗೆ ಕರೆದುಕೊಂಡು ಹೋಗಿ ಬಿಟ್ಟು ಹಿಂತಿರುಗುತ್ತಿದ್ದಳು. ಮಧ್ಯಾಹ್ನ ಶಾಲೆ ಬಿಡುವುದಕ್ಕೆ ಮೊದಲೇ ಹೋಗಿ ನಿಲ್ಲುತ್ತಿದ್ದಳು. ಒಂದು ದಿನ ಶಾಲೆ ಬಿಟ್ಟೊಡನೆ ಹೊರಬಂದ ಪೂರ್ಣಿಮಾ, ತನ್ನ ಅಮ್ಮನನ್ನು ನೋಡಿ ಅಳುವುದಕ್ಕೆ ತೊಡಗಿದಳು. ನಮ್ಮ ಅಕ್ಕನಿಗೆ, ತಾನು ಮನೆಗೆ ಹೋದುದು ಅವಳಿಗೆ ಹೇಗೆ ತಿಳಿಯಿತೆಂದು ಅಚ್ಚರಿಯೋ ಅಚ್ಚರಿ. "ಇಲ್ಲಮ್ಮಾ, ನಾನಿಷ್ಟು ಹೊತ್ತೂ ಇಲ್ಲೇ ನಿಂತಿದ್ದೆ." ಎಂದು ಅಕ್ಕ ಅಂದಾಗ, "ಮತ್ತೆ ನೀನು ಬೇರೆ ಕುಪ್ಪಸ ತೊಟ್ಟಿದ್ದೀಯಲ್ಲಾ?" ಎಂದು ತನ್ನ ರಾಗದ ನಡುವೆ ಅಂದಳು. ಅಷ್ಟು ಸಣ್ಣ ಹುಡುಗಿ ಪ್ರತಿಯೊಂದು ವಿಷಯದ ಮೇಲೂ ಗಮನವಿಡುತ್ತಿದ್ದುದನ್ನು ನೋಡಿ ನಮಗೂ ಅಚ್ಚರಿಯಾಯಿತು.

—ಟಿ. ಎಸ್. ಬಾಲಕೃಷ್ಣ

ಟೆಲಿಫೋನ್ ಆಪರೇಟರರು ದೂರ ದೂರದ ಸ್ಟೇಶನ್ನುಗಳಲ್ಲಿ [illegible] ಟ್ರಂಕ್ ಕಾಲ್ ಹಚ್ಚುತ್ತಿರುವಾಗ ಕಾರಣಾಂತರಗಳಿಂದ ಜಗಳಗಳಾಗುವುದುಂಟು. ಒಂದು ಸಲ ದಾವಣಗೆರೆಯ ಟೆಲಿಫೋನ್ ಆಪರೇಟರನೊಡನೆ ಜಗಳಾಡುವ ಪ್ರಸಂಗ ಬಂತು. ಆತನ ಮಾತೃಭಾಷೆ ತೆಲುಗು. ಆದ್ದರಿಂದ ನಾನು ಹೇಳಿದ ಶಬ್ದಗಳನ್ನು (ಕನ್ನಡ) ಬೈಗುಳೆಂದು ತಪ್ಪಾಗಿ ತಿಳಿದು ಆತ ಜೋರಾಗಿ ಸಿಟ್ಟಿನಿಂದ, "ದುಡ್ಡು ಖರ್ಚಾದ್ರೂ ಅಡ್ಡಿ ಇಲ್ಲ. ದುರ್ಗಕ್ಕೆ ಬಂದು ನಿನ್ನ ಹೊಡೀತೀನಿ," ಎಂದು ಅಬ್ಬರಿಸಿದ. ಸಿಟ್ಟಿನಲ್ಲಿ ಜನ ಏನೇನೋ ಅಂದುಬಿಡ್ತಾರೆ; ಇದು ಅಂತಹ ಮಾಮೂಲೀ ಹೆದರಿಕೆಯೆಂದು ನಾನು ಅಲಕ್ಷ್ಯಮಾಡಿದೆ. ಸಾಯಂಕಾಲ ಕೆಲಸ ನಿರ್ವಹಿಸುತ್ತಿದ್ದಾಗ, ಕಟ್ಟುಮಸ್ತಾದ ಶರೀರದ, ನೀಟಾಗಿ ಉಡುಪು ಧರಿಸಿದ ವ್ಯಕ್ತಿಯೊಬ್ಬ ಆಫೀಸ್ ರೂಮನ್ನು ಪ್ರವೇಶಿಸಿ, "ನಮಸ್ಕಾರ ಸಾರ್," ಎಂದ. "ನಮಸ್ಕಾರ, ಯಾರು ಬೇಕಿತ್ತು?" ವಿಚಾರಿಸಿದೆ.

ಆತ ನಮ್ರವಾಗಿ ಮಾತಾಡುತ್ತ, "ನಾನು ದಾವಣಗೆರೆಯ ಆಪರೇಟರ್. ಇಂದು ಬೆಳಿಗ್ಗೆ ಆಪರೇಟರೊಬ್ಬರು ಲೈನ್ ಮೇಲೆ ಸಿಕ್ಕ ಹಾಗೆ ಮಾತನಾಡಿದ್ದಾರೆ. ಅವರನ್ನು ಸ್ವಲ್ಪ ನೋಡಿಕೊಂಡು ಹೋಗಬೇಕಿತ್ತು. ಅದಕ್ಕೆ ಬಂದೆ," ಎಂದು ಕಾರಣವನ್ನು ವಿವರಿಸಿದ.

ನುಡಿದಂತೆಯೇ ನಡೆಯುವ ಆಸಾಮಿ ಈತ ಎಂದು ಮನವರಿಕೆಯಾಯಿತು. [illegible] ನಾಟಕ ಆಡಿದೆ. ಅತ್ತಿತ್ತ ಓಡಾಡಿ ಲಾಗ್-ಬುಕ್ ತಿರುಗಿಸಿ, "ಯಾರಿರಬಹುದು! ಓಹ್! ಆತನೇ? ಆತ ಯಾವಾಗ್ಲೂ ಹಾಗೇನೇ. ಬಹಳ ಒರಟ. ನಾಳೆ ತೋರಿಸ್ತೀನಿ. ಆಯ್ತಾ?" ಎಂದೆ. ಗೋಣು ಅಲ್ಲಾಡಿಸಿ ಎದ್ದು ಆತ ಕ್ಲಬ್ ರೂಮಿನಲ್ಲಿ [illegible] ಪೇಪರು ತಿರುವಿ ಹಾಕುತ್ತ ಕುಳಿತ.

ನನ್ನ ಓವರ್‌ಟೈಮ್ ಡ್ಯೂಟಿ ಮುಗಿದ [illegible] ನನ್ನ ಆಫೀಸಿನ ಆವರಣ[illegible] ಸುಳಿದಾಡುತ್ತಿದ್ದ ಆತನನ್ನು ಮನೆಗೆ [illegible] ರಸ್ತೆಯಲ್ಲಿ ಸುಳ್ಳು [illegible]ನೊಂದಿಗೆ ನನ್ನ ಪರಿಚಯ ಮಾಡಿ[illegible] ಮನೆಗೆ ಬಂದ ಮೇಲೆ ಪುಟ್ಟ [illegible]

[illegible]; ಮಗುವನ್ನು ಎತ್ತಿಕೊಂಡು ಸಮೀಪದ ಅಂಗಡಿಯಲ್ಲಿ ಚಾಕಲೇಟ್-ಬಿಸ್ಕತ್ತು ಕೊಡಿಸಿದ. ಅಷ್ಟು ಕೆಲವೇ ಗಂಟೆಗಳಲ್ಲೇ ನಮ್ಮ ಮನೆಯವ-ರೆಲ್ಲರೊಂದಿಗೆ ತುಂಬ ಹೊಂದಿಕೊಂಡ. ಸಾಯಂಕಾಲದ ಕಾಫೀ-ತಿಂಡಿಯ ನಂತರ, "ಸಿನಿಮಾಗೆ ಹೋಗ್ತೀವಿ. ರಾತ್ರಿಗೆ ಸ್ವಲ್ಪ ವಿಶೇಷ ತಯಾರಿಸು,'' ಎಂದು ಹೇಳಿ ಸಿನಿಮಾಗೆ ಹೊರಟೆವು.

ಶಂಕರ ಟಾಕೀಸಿನಲ್ಲಿ ನಡೆಯುತ್ತಿದ್ದ ತೆಲುಗು ಚಿತ್ರ ತೋರಿಸಿದಾಗ ಆತನಿಗೆ [illegible]. ಮಾರನೆಯ ದಿನ ಬೆಟ್ಟಕ್ಕೆ ಹೋಗುವ ಪ್ರೋಗ್ರಾಂ.

ಬೆಳಿಗ್ಗೆ [illegible] ಸ್ನಾನ-ಕಾಫೀ-ತಿಂಡಿ [illegible] ಬೆಟ್ಟ ನೋಡುವುದಕ್ಕೆ ಹೊರಟೆವು. ದೇಗುಲಗಳು, ಕೋಟೆ—ಕೊತ್ತಲ-ಗಳನ್ನು ವಿವರಣೆಯೊಂದಿಗೆ ತೋರಿಸಿ. [illegible], "[illegible], ಯಾವ ವ್ಯಕ್ತಿಯನ್ನ ಹುಡುಕಿ-ಕೊಂಡು ಇಲ್ಲೀಗೆ ಬಂದೀರೋ ಆ ವ್ಯಕ್ತಿ ನಾನೇ. ಮನಸ್ಸಿದ್ದರೆ ಹೋಗಬಹುದು,'' ಎಂದೆ.

ಒಂದೇ ರಾತ್ರಿಯಲ್ಲಿ ವಿಭಿನ್ನ ಪ್ರದೇಶ-ಗಳಿಂದ ಬಂದ ನಾವು ಹಳೆಯ ಮಿತ್ರರಂತೆ [illegible]. ಸಜಲ ನೇತ್ರನಾಗಿ [illegible], "ಸಾರೀ, ಬ್ರದರ್. ಹುಡುಗಿ ನಾನೇನೋ ಅಂದೆ. ಎಲ್ಲಾದಕ್ಕೂ ಒಂದು [illegible]. [illegible] ಇಂದಲೇ ಇದೆಲ್ಲ ಆಯಿತು ಕಾಣ್ತದೆ. ಇನ್ನು ಮೇಲೆ [illegible]. ನನ್ನ [illegible]," ಎಂದು [illegible].

—[illegible]

[illegible]

ಮೇರೆಗೆ ಅವನ ಹಳ್ಳಿಗೆ ಹೋಗುವ ಪ್ರಸಂಗ ಬಂದಿತು. ಆದರೆ ಹಳ್ಳಿ ಬಸ್ ನಿಲ್ದಾಣದಿಂದ ಒಂದೂವರೆ ಮೈಲು ದೂರ-ವಿದೆಯಲ್ಲದೇ ದೋಣಿ ನದಿಯನ್ನು ದಾಟಿ ಹಳ್ಳಿ ಸೇರಬೇಕು. ಮಳೆಗಾಲದ ದಿನ ಬೇರೆ. ನನ್ನ ಜೊತೆ ಹಳ್ಳಿಗೆ ಹೋಗುವ ಇನ್ನೂ ಐದಾರು ಜನ ಬಸ್ಸಿನಿಂದ ಇಳಿ-ದರು. ಎಲ್ಲರೂ ನಡೆಯುತ್ತ ನದಿಯ ಸಮೀಪಕ್ಕೆ ಬಂದಾಗ ಇನ್ನು ಅಲ್ಲಿ ಕೆಲ ಜನ ಇದ್ದರು. ಆಗಲೇ ನದಿಯಲ್ಲಿ ನೀರಿನ ಮಟ್ಟ ಏರಲು ಪ್ರಾರಂಭಿಸಿತ್ತು. ಸಮಯ ಸುಮಾರು ೧೦ ಘಂಟೆ. ಕೆಲ ಜನರು ಧೈರ್ಯ ಮಾಡಿ ನದಿಯನ್ನು ದಾಟಲು ಪ್ರಾರಂಭಿ-ಸದವನ್ನು ತಡೆಹಿಡಿದರು. ನನಗಂತೂ ಧೈರ್ಯವಾಗಲಿಲ್ಲ. ಆದರೆ ಕೊನೆಗೆ ಅನು-ಮಾನಿಸುತ್ತ ನಿಂತ ಕೆಲ ಜನ ದಾಟಲು ಪ್ರಾರಂಭಿಸಿದರು. ಅವರಲ್ಲಿ ಒಬ್ಬ ತನ್ನ ಹೆಗಲ ಮೇಲೆ ತನ್ನ ೩ ವರ್ಷದ ಮಗನನ್ನು ಕೂಡ್ರಿಸಿಕೊಂಡು ದಾಟಲು ನಡೆದ. ಅವನು ಸುಮಾರು ಅರ್ಧ ಅಂತರ ಕ್ರಮಿಸುವ ಹೊತ್ತಿಗೆ ಪ್ರವಾಹದ ಮಟ್ಟ, ಒತ್ತಡ ಎರಡೂ ಹೆಚ್ಚಿ ನಾವೆಲ್ಲ ನೋಡನೋಡು-ತ್ತಿದ್ದಂತೆಯೇ ಅವನು ಮಗನ ಕೈ ಬಿಟ್ಟ. ಬಾಲಕ ಕೊಚ್ಚಿಕೊಂಡು ಹೋಗಿಬಿಟ್ಟ. ದಂಡೆಯಲ್ಲಿದ್ದವರು ಯಾರಾದರೂ ಮಗು-ವನ್ನುಳಿಸಿಯೆಂದು ಅರಚುವುದನ್ನು ಬಿಟ್ಟು ಏನೂ ಮಾಡಲಿಲ್ಲ. ಮಗುವಿನ ತಂದೆ ಈಜಿ ಆಚೆ ದಡಕ್ಕೆ ಬಂದ ನಂತರವೇ ಶಂಖನಾದ ಶುರು ಮಾಡಿದ. ನನಗಾಗ ತಟ್ಟನೆ [illegible] ಯಾರಿಗೂ ತನ್ನ ಸ್ವಂತ ಜೀವ-ಕ್ಕಿಂತ ಪ್ರೀತಿಯ ವಸ್ತು ಬೇರಿಲ್ಲ ಎಂಬು-ದನ್ನು. ಅಕಬರನಿಗೆ ಬೀರಬಲ್ ಹೇಳಿದ್ದ ಮಂಗನ ಕತೆ ನೆನಪಾಯಿತು.

—ಎಮ್. ಎನ್. ಹಕೀಮ



...ಸಾಮಾನ್ಯ; ಆದರೆ
ಅದರಿಂದೊದಗಬಹುದಾದ ಅಪಾಯಾಂತರವೆಷ್ಟು !

ಗೊಬ್ಬರ

ಡಾ. ಹೊಸಕೇರಿ ಗೋವಿಂದ

ಪ್ರತಿ ವರ್ಷ ಬೇಸಿಗೆಯ ಬಿಸಿಲು ಏರಿದಂತೆ ಚಿಕ್ಕ ಮಕ್ಕಳ ಮೈಮೇಲೆ ಎದ್ದು ಅವುಗಳನ್ನು ಹುರಪಳಿಸಿ ಪೀಡಿಸುವ ಗೊಬ್ಬರ, ಸಾಂಕ್ರಾಮಿಕ ರೋಗಗಳಲ್ಲೇ ಅತಿ ಸಾಂಕ್ರಾಮಿಕವಾದುದು ಎನ್ನಬಹುದು. ಫೆಬ್ರುವರಿ ಮಾರ್ಚ್ ತಿಂಗಳುಗಳಲ್ಲಿ ಇದರ ಹಾವಳಿ ಬಹಳ. ಮುಂದೆ ಮಳೆ [illegible] ಅಬ್ಬರ ಕಡಿಮೆಯಾಗುತ್ತ ಬರುತ್ತದೆ.

ಸಾಮಾನ್ಯವಾಗಿ ನಾವೆಲ್ಲ ಸಣ್ಣವರಿದ್ದಾಗ ಗೊಬ್ಬರದಿಂದ ಬಳಲಿದ್ದೇವೆ. ಮತ್ತೆಂದೂ ಬಳಲುವ ಪ್ರಸಂಗ ಬಂದಿಲ್ಲ. [illegible] ಗೊಬ್ಬರ ಒಮ್ಮೆ ಬಂದು ಹೋದರೆ ಮತ್ತೊಮ್ಮೆ ನಮ್ಮ ಹತ್ತಿರ ಸುಳಿಯಲಾರದು. ಅಂತೆಯೇ ಸಣ್ಣವರಿದ್ದಾಗಲೇ ಒಮ್ಮೆ ಸೋಂಕಿ ಹೋದರೆ ಸಾಕು ಎನ್ನುವುದೂ ಸರಿಯೇ. ಅಮೇರಿಕಕ್ಕೆ ಹೋದ ಭಾರತೀಯ ದಂಪತಿಗಳು ತಮ್ಮ ಮಕ್ಕಳು ಗೊಬ್ಬರವೆದ್ದು ಬಳಲುತ್ತಿದ್ದನ್ನು ನೋಡಿ ಅಮೇರಿಕದವರೇನು ಅಂದಾರು ಎಂದುಕೊಂಡು ತಮ್ಮ ಹೋಟೆಲಿನ ರೂಮಿನ ಕಿಟಕಿ-ಬಾಗಿಲುಗಳನ್ನೆಲ್ಲ ಮುಚ್ಚಿಕೊಂಡು ತಮ್ಮಷ್ಟಕ್ಕೆ ಗೃಹಬಂಧನಕ್ಕೊಳಗಾದದ್ದು, ಅದು ಹೇಗೋ ಉಳಿದವರಿಗೆ ಗೊತ್ತಾಗಿ ತಮ್ಮ ಮಕ್ಕಳನ್ನೆಲ್ಲ ಕರೆದುಕೊಂಡು ಬಂದು ಅವರ ಮಕ್ಕಳೊಡನೆ ಆಡಲು ಬಿಟ್ಟು ತಮ್ಮ ಮಕ್ಕಳಿಗೂ ಗೊಬ್ಬರ ತರಿಸಿಕೊಂಡ ಕಥೆಯನ್ನು ನೀವೆಲ್ಲ ಓದಿದ್ದು ನೆನಪಿನಲ್ಲಿರಬಹುದು.*

ಅಮೇರಿಕದಲ್ಲಿ ಗೊಬ್ಬರಕ್ಕೆ ಆಹ್ವಾನ ನೀಡಿ ಕರೆಸಿಕೊಳ್ಳುವ ದಿನಗಳು ಈಗ ಬಂದಿರಬಹುದು. ಒಂದು ಕಾಲದಲ್ಲಿ ಪೋಲಿಯೋಕ್ಕಿಂತ ಎರಡು ಪಟ್ಟು ಅಮೇರಿಕದ ಮಕ್ಕಳನ್ನು ಗೊಬ್ಬರ ಕೊಲ್ಲುತ್ತಿತ್ತು. ನಮ್ಮ ದೇಶದಲ್ಲಿ ಗೊಬ್ಬರಕ್ಕೆ ಆಹ್ವಾನ ನೀಡುವ [illegible] ಇನ್ನೂ ಬಂದಿಲ್ಲ. [illegible] ಮಕ್ಕಳಿಗೆ ಒಮ್ಮೆಯಾದರೂ ಅದು ಬಂದು ಹೋಗುತ್ತದೆ.

ಗೊಬ್ಬರ ಪ್ರಾರಂಭದ ಲಕ್ಷಣಗಳನ್ನು ಇಂತು ಗುರುತಿಸಬಹುದು:

ಸಾಮಾನ್ಯವಾಗಿ ನೆಗಡಿ-ಶೀತದಂತೆ ಆರಂಭವಾಗುತ್ತದೆ. ಸಣ್ಣಗೆ ಜ್ವರ ಏರಲಾರಂಭಿಸಿ ನೆಗಡಿ ಹೆಚ್ಚಾಗಿ ಶೀನು-ಸಿಂಬಳ ಸುರಿಯ ಹತ್ತುತ್ತದೆ. ಕಣ್ಣು ಕೆಂಪಾಗಿ, ಕಣ್ಣೆವೆಗಳು [illegible] ತ್ತವೆ. ಮಗು ಈಗ ತಾನೇ ಅತ್ತಿದೆ ಎಂದು ಯಾವಾಗಲೂ ಕಂಡುಬರುತ್ತಿರುತ್ತದೆ. ಮಗು ಅತ್ತೇನು ಎಂದರೆ ಅತ್ತದ್ದೂ ಕೇಳಿಬರಲಿಕ್ಕಿಲ್ಲ-ಧ್ವನಿ

* [illegible] ರ ಮಾರ್ಚ್ ಸಂಚಿಕೆಯಲ್ಲಿ ಪ್ರಕಟವಾದ 'ಕಾಸೊಂದು [illegible]' ನೋಡಿರಿ.

ಒಡೆದಿರುತ್ತದೆ. ಅವರ ಕೀರಲು ಅಳು ನಿಮಗೂ [illegible]ವಾಗಲಿಕ್ಕಿಲ್ಲ. ಸ್ವಲ್ಪ ಸ್ವಲ್ಪ ಕೆಮ್ಮು ಬರುತ್ತಿರುತ್ತದೆ. ಮಗುವಿಗೆ, ಸ್ವಲ್ಪ ಬೆಳಕೂ ಪ್ರಖರವೆನಿಸಿ, ಕಣ್ಣು ಮುಚ್ಚಿಕೊಂಡು ಗಟ್ಟಿಯಾಗಿ ಮಲಗಿದಾಗ, ನಿಮಗೆ ಏನು ಮಾಡಲೂ ತಿಳಿಯದೆ, ಇನ್ನೇನು ಡಾಕ್ಟರ ಹತ್ತಿರ ಮಗುವನ್ನು ಕರೆದುಕೊಂಡು ಹೋಗಬೇಕು ಎಂದು [illegible] ಮಗುವಿನ ಹಣೆಯ ಮೇಲೆ [illegible] ಸಾಲಿಗಳಂತಿದ್ದ ಗುಳ್ಳೆಗಳು [illegible], 'ಇದೇನು ಗೊಬ್ಬರ' ಎಂದವಳೇ ಗಂಧ [illegible] ಹಚ್ಚಿ, [illegible] ನೋಡಿಕೊಂಡು ಮಾರಮ್ಮನ [illegible] ಹೋಗಿ ದೀಪ ಹಚ್ಚಿ, ನೀರು ಹಾಕಿಸಿ [illegible]. ಮಗುವನ್ನು ಕತ್ತಲೆ ಕೋಣೆಯಲ್ಲಿ ಹಾಕಿ [illegible] ಬಿಡದೇ ತನ್ನದೇ ಉಪಚಾರ, ಶಿಷ್ಟಾಚಾರ, ಆಚಾರ ಎಲ್ಲ ಮಾಡುತ್ತಾಳೆ.

ನೀವು ಅವಳ ಗೋಜಿಗೆ ಹೋಗಬೇಡಿರಿ. ಅವಳು ಮಾಡುವುದನ್ನೆಲ್ಲ ಮಾಡಲಿ—ಆದರೆ ಅನ್ನೇ ಬಹಳ ಮಾಡಲು ಬಿಡಬೇಡಿರಿ. ಆದಷ್ಟು ಬೇಗನೇ ನಿಮ್ಮ ಡಾಕ್ಟರ ಕಣ್ಣಿಗೆ ಮಗುವನ್ನು ಹಾಕುವುದನ್ನು ಮಾತ್ರ ಬಿಡಬೇಡಿರಿ.

ಇನ್ನು ಕೆಲವರು ತಮ್ಮ ಮಗು ಸ್ವಲ್ಪ, ಒಮ್ಮೆ ಒಂದು ಭಾರಿ ಭಟ್ಟನೇ ಸೀಣರೂ ಡಾಕ್ಟರ ಹತ್ತಿರ ಓಡಿಹೋಗಿ ಮಗುವಿಗಿಂತ ತಮಗೇ ಜಾಸ್ತಿ ತೊಂದರೆಯಾದವರಂತೆ ಹೇಳಿ[illegible]. ಇಷ್ಟು ಶೀತ—ನೆಗಡಿಯ [illegible]ತರ ಬೇಸಗೆಯಲ್ಲಿ ಆದರೆ [illegible] ಗೊಬ್ಬರ [illegible] ಇವನ್ನು ಗೊಬ್ಬರ ಎಂದು ಕಂಡುಹಿಡಿ[illegible]? ಇದೆ. ಮಗುವಿನ [illegible] ತೆರೆದು ನೋಡಿದರೆ ಇದರ ವಿಶ್ವರೂಪ ದರ್ಶನ ಕಾಣಿರುತ್ತದೆ. ಬಾಯಿಯ ಒಳಭಾಗವೆಲ್ಲ ಸಣ್ಣ ಸಣ್ಣ ಉಪ್ಪಿನ ಕಣ ಗಾತ್ರದ ಬಿಳಿ ಗುಳ್ಳೆಗಳು [illegible]. ಅವುಗಳ [illegible] ಸ್ವಲ್ಪ [illegible]ರುತ್ತದೆ.

ಈ ಹೊತ್ತಿನಲ್ಲಿ—ಅಂದರೆ ಗೊಬ್ಬರ ಏಳುವ [illegible] ಮಗುವನ್ನು [illegible] ಸಾಧ್ಯವಾದಷ್ಟು ದೂರ[illegible]. ಶಾಲೆಗೆ ಹೋಗುತ್ತಿದ್ದರೆ ಶಾಲೆ [illegible]. ಏಕೆಂದರೆ ಈ ಅವಸ್ಥೆಯಲ್ಲಿ ಮಗುವಿನ ಒಂದೇ ಒಂದು ಶೀನಿನ ಮುಖಾಂತರ ಸಾವಿರಗಟ್ಟಲೇ ಗೊಬ್ಬರದ ವೈರಸ್ಸುಗಳು ಹೊರಹಾಕಲ್ಪಡುತ್ತಿರುತ್ತಿದ್ದು ಉಳಿದವರಿಗೂ ಬಹುಬೇಗನೇ ಗೊಬ್ಬರ ಸೋಂಕುವ ಸಾಧ್ಯತೆ ಹೆಚ್ಚಾಗಿರುತ್ತದೆ.

ಈ ನೆಗಡಿ—ಕೆಮ್ಮು, ಕಣ್ಣಿನಿಂದ ನೀರು, ಮೂಗಿನಿಂದ ಸಿಂಬಳ— ಸೋರುವ ಅವಾಂತರ ಮುಗಿಯುತ್ತಿದ್ದಂತೇ, ಚರ್ಮದ ಮೇಲೆ ಗೊಬ್ಬರ [illegible]. ಮೊದಲು ಕಿವಿಯ ಹಿಂಭಾಗದಲ್ಲಿ, ಮುಂದೆ ಹಣೆಯ ಮೇಲೆ ನಂತರ ಇಡೀ ಮೈತುಂಬ ನೀರುಗುಳ್ಳೆಗಳೆದ್ದು ಜ್ವರ ಹೆಚ್ಚಾಗುತ್ತದೆ. ಈ ಗುಳ್ಳೆಗಳೇಳುವ ರಭಸ ಎಷ್ಟೊಂದಿರುತ್ತದೆ ಎಂದರೆ ಕೆಲವೇ ಗಂಟೆಗಳಲ್ಲಿ ಅವುಗಳಿಗೆ ಮತ್ತೆ ಏಳಲು ಸ್ಥಳವೇ ಉಳಿಯ[illegible] ಒಂದು ಕೂಡಿಕೊಂಡು ಗಾದರಿ ಗಾದರಿಗಳಂತಾಗುತ್ತಿವೆ. ಮುಖದ ಮೇಲೆ ಅತಿ ಹೆಚ್ಚಾಗಿ ಎದ್ದು ಇವು [illegible]. [illegible] ಹೋಗಿ ಕೊನೆಯಲ್ಲಿ ಚರ್ಮ ಕಂದು ಬಣ್ಣಕ್ಕೆ ತಿರುಗಿ ಸುಲಿಯ[illegible]. ಜ್ವರ [illegible] ಗೊಬ್ಬರ ಕಡಿಮೆ [illegible]. ಸಾಮಾನ್ಯವಾಗಿ ಹೀಗೆ ರೋಗ ತಂತಾನೇ ಹತೋಟಿಗೆ ಬರುತ್ತದೆ.

ರೋಗ ತಂತಾನೇ ಹತೋಟಿಗೆ ಬಾರದೇ ಕೆಲವಮ್ಮೆ ಹೆಚ್ಚಿನ ಅಸ್ವಾಸ್ಥ್ಯಕ್ಕೆಡೆಯಿರುವ ಪ್ರಸಂಗ[illegible]. [illegible]ವಾಗಿ ಪುಪ್ಪುಸದ ಮೇಲಾಗುವ ದುಷ್ಪರಿಣಾಮ[illegible] ಮಗುವಿನ ಜೀವಕ್ಕೆ ಅಪಾಯಕರ ಎನಿಸು[illegible] [illegible] ರೋಗ[illegible] [illegible]

ಕುಂಠಿತಗೊಳಿಸುವುದರಿಂದ ಬ್ಯಾಕ್ಟೀರಿಯಾಗಳು ಈ ಪ್ರಸಂಗದ ದುರುಪಯೋಗ ತೆಗೆದುಕೊಂಡು ತಮ್ಮ ದಾಳಿಯನ್ನು ಮಾಡುವುದರಿಂದ ಪುಪ್ಪುಸದ ತುಂಬೆಲ್ಲ ನ್ಯುಮೋನಿಯದ ಚಿಹ್ನೆಗಳು ಕಂಡುಬಂದು, ಮಗು ಮತ್ತು ಜ್ವರ ಹಾಗೂ ಕೆಮ್ಮುಗಳಿಂದ ಬಳಲಿ ಮರಣವನ್ನಪ್ಪುವ ಸಂಭವವಿರುತ್ತದೆ. ಮಗುವನ್ನು ಸಾಕಷ್ಟು ಗಾಳಿ-ಬೆಳಕುಗಳಿರುವ ಕೋಣೆಯಲ್ಲಿ ಆರೈಕೆ ಮಾಡುವುದರಿಂದ ಮತ್ತು ಡಾಕ್ಟರರ ಹತ್ತಿರ ತೋರಿಸಿ ಔಷಧಿ ಕೊಡಿಸುವುದರಿಂದ ಈ ಅಪಾಯದಿಂದ ಅದನ್ನು ರಕ್ಷಿಸಲು ಸಾಧ್ಯವಿರುತ್ತದೆ, ಅಜ್ಜಿಗೆ ತಿಳಿಸಿ ಹೇಳುವುದು ಕಷ್ಟವಾದರೂ ಒಮ್ಮೆಯಾದರೂ ಅಜ್ಜಿಗೆ, "ನಿನ್ನ ಮೂಢಾಚಾರ ಸಾಕು" ಎಂದು ಹೇಳಲೇಬೇಕಾಗುತ್ತದೆ.

ಗೊಬ್ಬರದಿಂದ ಬಳಲಿ ಎದ್ದ ಮಗು ಒಮ್ಮೊಮ್ಮೆ ಕ್ಷಯರೋಗಕ್ಕೆ ತುತ್ತಾಗುವುದೂ ಇದೇ ಕಾರಣದಿಂದ. ಕ್ಷಯದ ರೋಗಾಣುಗಳೂ ಈ ಅಸಹಾಯ ಪರಿಸ್ಥಿತಿಯ ದುರುಪಯೋಗ ಪಡೆಯುವವು. ಕ್ಷಯರೋಗ ನಮ್ಮ ದೇಶದಲ್ಲಿ ಇನ್ನೂ ಸಾಕಷ್ಟು ಪ್ರಮಾಣದಲ್ಲಿ ಇರುವುದರಿಂದ ಗೊಬ್ಬರದಿಂದ ಬಳಲುವ ಮಕ್ಕಳನ್ನೆಲ್ಲ ಈ ರೋಗದ ವಿರುದ್ಧ ರಕ್ಷಿಸುವುದೂ ಒಂದು ದೊಡ್ಡ ಸಮಸ್ಯೆಯಾಗುತ್ತದೆ. ಕ್ಷಯದಿಂದ ಬಳಲುವವರನ್ನು ಗೊಬ್ಬರದಿಂದ ಬಳಲುವ ಮಕ್ಕಳಿಂದ ದೂರವಿಡಬೇಕು, ಗೊಬ್ಬರದಿಂದ ಬಳಲಿ ಎದ್ದ ಮಕ್ಕಳನ್ನು ಕ್ಷಯರೋಗದ ಚಿಹ್ನೆಗಳಿಗಾಗಿ ಆಗಾಗ ಪರೀಕ್ಷೆಗೊಳಗುಮಾಡು



ವುದು ಇನ್ನೂ ಒಳ್ಳೆಯದು.

ಬ್ಯಾಕ್ಟೀರಿಯಾಗಳು ಕಿವಿಯ ಮೇಲೆ ಹಲ್ಲೆ ಮಾಡಿ, ಕಿವಿ ಸೋರುವುದು ಮತ್ತು ಮುಂದೆ ಕಿವುಡುತನವನ್ನುಂಟು ಮಾಡುವ ಸಾಧ್ಯತೆಯೂ ಇದೆ. ಕಣ್ಣುಗಳ ಮೇಲ್ಪದರಿನಲ್ಲಿ ಕೂರೆತ-ಗಳುಂಟಾಗಿ, ಸರಿಯಾದ ಚಿಕಿತ್ಸೆ ಕೈಕೊಳ್ಳದೇ ಹೋದ ಪ್ರಸಂಗಗಳಲ್ಲಿ ದೃಷ್ಟಿದೋಷಗಳುಂ-[illegible] ಸಂಭ-ವವೂ ಇದೆ.

ಗೊಬ್ಬರ ಕೇವಲ ಚರ್ಮದ ರೋಗವಲ್ಲ. ಶರೀರದಾದ್ಯಂತ ಅದರ ದುಷ್ಪರಿಣಾಮಗಳಾಗ-ಬಹುದು. ಕರುಳುಗಳಲ್ಲಿ ಉರಿಯೂತವಾಗಿ ಭೇದಿ–ವಾಂತಿಗಳಾಗಬಹುದು. ಅ ಪೆಂ ಡಿ ಕ್ಸ್ ಕೂಡ ಇದಕ್ಕೆ ಹೊರತಾಗಿಲ್ಲ.

ಗೊಬ್ಬರದ ಶಿಬಿ ಒಮ್ಮೊಮ್ಮೆ ಮೆದುಳಿಗೂ ತಟ್ಟಬಹುದು. [illegible] ಅಂಥಾಗ, ಜ್ವರ [illegible] ತ್ತದೆ. ಸನ್ನಿಪಾತದ ಲಕ್ಷಣಗಳು ಕಂಡುಬಂದು ಮಗು ಬಡಬಡಿಸಬಹುದು. ಫಿಟ್ಸ್ ಕೂಡ ಬರ-ಬಹುದು; ಪ್ರಜ್ಞೆ ತಪ್ಪಲೂಬಹುದು.

ಗೊಬ್ಬರದಲ್ಲಿ ಮತ್ತೊಂದು ಪ್ರಕಾರವೂ ಇದೆ: '[illegible] ಗೊಬ್ಬರ' [illegible] ಗೊಬ್ಬರವೆಂದೂ ರೂಢಿಯಲ್ಲಿ ಹೆಸರಿದೆ, ಗೊಬ್ಬರವನ್ನು [illegible] ಹುಟ್ಟುವ ಮಕ್ಕಳು ಹುಟ್ಟುಗುರುಡರಾಗಿ, ಹುಟ್ಟು ಕಿವುಡರಾಗಿ ಜನಿಸಬಹುದು, ಚಿಕ್ಕ ಬಾಯಿಯುಳ್ಳವರಾಗಿ ಹುಟ್ಟಬಹುದು, ಇಂಥ-[illegible]

ಅಂತೂ ಗೊಬ್ಬರದಷ್ಟು ಸಣ್ಣ ಕಾಯಿಲೆಗೆ ಸಾಕಷ್ಟು ಗಾಬರಿಯುಂಟುಮಾಡುವ ಮಾತು-ಗಳನ್ನೆಲ್ಲ ಹೇಳಿದಂತಾಯಿತು. ಎಲ್ಲ ಪ್ರಸಂಗ-[illegible] ಸಾಧ್ಯತೆ-ಗಳನ್ನು ವಿವರಿಸಿಯಾಯಿತು.

ಇನ್ನು ಗೊಬ್ಬರ ಬಾರದಂತೆ ನಿಯಂತ್ರಿಸಲು ಸಾಧ್ಯವಿದೆಯೇ ನೋಡೋಣ. ಇದೆ, ಗೊಬ್ಬರ ಒಮ್ಮೆ ಬಂದರೆ ಮತ್ತೊಮ್ಮೆ ಬರುವುದಿಲ್ಲ ಎಂದು ಹೇಳಿದೆನಷ್ಟೆ. ಅದಕ್ಕೆ ಕಾರಣವಿಲ್ಲದಿಲ್ಲ. ಗೊಬ್ಬರ [illegible] ಅದರೊಂದಿಗೆ ಹೋರಾಡಲು [illegible] ಗುಣಗಳು ಕೆಲವೊಂದು ಪ್ರತಿರೋಧಕ ವಸ್ತುಗಳನ್ನು (Gamma Globulins) ನಿರ್ಮಿಸಿಕೊಂಡು ತಮ್ಮದೇ ಆದ ಸಂರಕ್ಷಣಾತ್ಮಕ ಪಡೆಯನ್ನು ಕಟ್ಟಿಕೊಳ್ಳು-ತ್ತವೆ. ಇವು ರಕ್ತದಲ್ಲಿ [illegible] ಮತ್ತೊಮ್ಮೆ ಗೊಬ್ಬರ ಬರದಂತೆ ನೋಡಿಕೊ-ಳ್ಳುವದರಲ್ಲಿ ಸಫಲವಾಗುತ್ತವೆ. ಇವುಗಳನ್ನು ರಕ್ತದಿಂದ ಬೇರ್ಪಡಿಸಿ ಗೊಬ್ಬರದಿಂದ ಬಳಲ-ಬಹುದಾದ ಮಕ್ಕಳಿಗೆ ಕೊಡುವದರಿಂದ ಗೊಬ್ಬರ ಬಾರದಂತೆ ನೋಡಿಕೊಳ್ಳಲು ಸಾಧ್ಯವಿದೆ.

ಇದಲ್ಲದೇ ಗೊಬ್ಬರದ ಮೂಲಕಾರಣಗಳಾದ ವೈರಸುಗಳನ್ನೇ ಅರೆಜೀವಮಾಡಿ ಅವುಗಳ-ಲ್ಲಿಯ ವಿನಾಶಕಾರಿಯಾದ ಅಂಶವನ್ನು ತೆಗೆದು [illegible] ಗೊಬ್ಬರದ ವಿರುದ್ಧ [illegible] ಸಂರಕ್ಷಣಾತ್ಮಕ [illegible] ವುದು ಸಾಧ್ಯವಿದೆ.

ಈ ವಿಧಾನಗಳನ್ನು [illegible] ಗೊಬ್ಬರ ಅಷ್ಟೇ ಸಣ್ಣ ವಿಷಯವೂ ಆಗ-ಬಹುದು, ದೊಡ್ಡ ಅಪಾಯವೂ ಆಗುವ ಸಾಧ್ಯತೆಯಿದೆ.

ವಿಶ್ವಾಸ

ಸೇಠ ಕರೋಡಮಲ್ಲರ ಬಳಿ ಎರಡು ವರ್ಷಗಳಿಂದಲೂ ದುಡಿಯುತ್ತಿದ್ದ ನೌಕರ ಒಂದು ಸಲ, ತನ್ನ ಮಾಲೀಕರೆದುರು ಗಡಸು ಧ್ವನಿಯಿಂದ ಹೇಳಿದ: "ನಾ ನಿಮ್ಮ ಬಳಿ ಕೆಲಸ ಮಾಡಲು ತಯಾರಿಲ್ಲ, ಸೇಠ ಸಾಹೇಬ್ರೆ. ನೀವು ನನ್ನ ಮೇಲೆ ಸ್ವಲ್ಪವೂ ನಂಬುಗೆಯಿಟ್ಟಿಲ್ಲ."

"ಛೇ ಛೇ ಹಾಗೇಕೆ ತಿಳಿದುಕೊಂಡೀ?" ಕರೋಡ್‌ಮಲ್ಲರು ತಮ್ಮ ನೌಕರನನ್ನು ಸಮಜಾಯಿಸಿದರು. "ನೋಡು, ನಾನು ನನ್ನ ತಿಜೋರಿ ಕೀಲಿಯನ್ನೇ ನಿನ್ನ ಕೈಯಲ್ಲಿ ಕೊಟ್ಟಿದ್ದೇನೆಂದಮೇಲೆ ನಿನ್ನ ಮೇಲೆ ಎಷ್ಟು ಭರವಸೆ ಇಟ್ಟಿದ್ದೇನೆಂಬುವನ್ನು ನೀನೇ ಲೆಕ್ಕ ಹಾಕು."

"ಕೀಲಿ ಕೊಟ್ಟ ಮಾತ್ರಕ್ಕೆ ಏನು ಮಾಡಿದ ಹಾಗಾಯ್ತು ಸಾರ್!" ನೌಕರ ತಲೆ ಕೆಳಗೆ ಹಾಕಿ ಕುತ್ತಿಗೆ ತಿಕ್ಕುತ್ತ ನುಡಿದ: "ತಿಜೋರಿಯಲ್ಲಿ ಒಂದು ಪೈಸೆಯನ್ನೂ ಇಟ್ಟಿರೋದಿಲ್ಲಲ್ಲ."

ಯುವಕ ಏನಾದ?

ತಮ್ಮ ಊರನ್ನು ನೋಡಲು ಬಂದ ಪ್ರವಾಸಿಗಳಿಗೆ ಗೈಡ್ ಒಂದು ನಿಡಿದಾದ ಬೆಟ್ಟವನ್ನು ತೋರಿಸುತ್ತ ಹೇಳಿದ: "ಇದು ನೋಡಿ ಸಾರ್, ನಮ್ಮೂರ ಗುಡ್ಡ. ಈ ಕ್ಷೇತ್ರದಲ್ಲಿಯೇ ಇಂಥ ಬೆಟ್ಟ ಇನ್ನೊಂದಿಲ್ಲ. ಒಂದು ಸಲ ಹಿಂಗಾಯ್ತು ಸಾರ್, ಜೀವನದಲ್ಲಿ ಜಿಗುಪ್ಸೆಗೊಂಡ ಒಬ್ಬ ಯುವಕ ಈ ಬೆಟ್ಟದ ಮೇಲೆ ಹೋದವ ವಾಪಸ್ಸು ಬರಲೇ ಇಲ್ಲ."

"ಅಂದ್ರೆ, ಅವನು ಸತ್ತುಹೋದ್ನಾ?" ಪ್ರವಾಸಿ ಆತಂಕದಿಂದ ಕೇಳಿದ.

"ಛೇ ಛೇ ಇಲ್ಲ ಸಾರ್, ಆಚೆ ಕಡೆಯಿಂದ ಇಳಿದು ಮನೆಗೆ ಹೋದ," ಗೈಡ್ ವಿವರಣೆ

ಮುನ್ನಾ ನಡೆದ

ಎಂದಿನಂತೆ, ಬೆಳಗ್ಗೆ ಪತ್ರಿಕೆ ಓದುವುದರಲ್ಲೇ ಮಗ್ನರಾಗಿದ್ದ ಪ್ರೊಫೆಸರ ಸಾಹೇಬರಿಗೆ, ಅವರ ಪತ್ನಿ ಹೇಳಿದಳು: "ರೀ ಕೇಳಿದ್ದೀರೇನು ಸುದ್ದಿ? ನಮ್ಮ ಮುನ್ನಾ ಈಗ ನಡೆಯೋದು ಕಲ್ತಿದ್ದಾನೆ. ಮೊನ್ನೆ, ಅಡಿಗೆ ಮನೆಯಿಂದ ಅಂಗಳದ ವರೆಗೂ ಒಬ್ಬನೇ ಹೋದ?"

ಪ್ರೊಫೆಸರ್ ಸಾಹೇಬರು ಪೇಪರ್ ಮಡಿಚಿ ಕೇಳಿದರು: "ಓಹ್ ಎಂದಿನಿಂದ ನಡೆಯೋದು ಕಲ್ತ?"

"ಮೊನ್ನೆಯಿಂದ."

"ಓಹ್ ಮೊದ್ಲೇ ಯಾಕೆ ಹೇಳ್ಲಿಲ್ಲ?" ಪ್ರೊಫೆಸರರು ಹೆಂಡತಿಯನ್ನು ಬಯ್ಯುತ್ತಲೇ ಶರ್ಟು ಹಾಕಿ ಹೊರಡುತ್ತ ಹೇಳಿದರು. "ಇಷ್ಟೊತ್ತಿಗೆ ಅವನು ಮುಂದಿನ ಬೀದಿ ದಾಟ ಬಿಟ್ಟಿರ್ತಾನೆ."



"ನಿನ್ನ ಕೋಪದ ಮಾತು ಕೇಳಿ ಆಫೀಸರ್ ಜತೆಗೆ ನಾನೂ ಬೆವೆತು ಬಿಟ್ಟೆ, ಕಣೋ-

ಹುಚ್ಚ ಹೇಳಿದ್ದು

ಮುಂದಿನ ಓಣಿಯ ಹುಚ್ಚನಿಗೂ, ಹಿಂದಿನ ಓಣಿಯ ಹುಚ್ಚನಿಗೂ ಅದು ಹೇಗೋ ಗೆಳೆತನವಾಗಿ ಬಿಟ್ಟಿತು. ಅವರು ಪ್ರತಿದಿನ ಸಂಧಿಸುತ್ತಿದ್ದರು. ಒಬ್ಬ ಚಂದ್ರಲೋಕದ ಬಗ್ಗೆ ಮಾತಾಡಿದರೆ ಮತ್ತೊಬ್ಬ ಚನ್ನಬಸಪ್ಪನ ವಿಷಯ ಕೇಳುತ್ತಿದ್ದ.

ಒಂದು ದಿನ ಮುಂದಿನ ಓಣಿಯ ಹುಚ್ಚ ದಿನದ ವೇಳೆಗಿಂತ ಸ್ವಲ್ಪ ಲೇಟಾಗಿ ಬಂದ. ಇನ್ನೊಬ್ಬ ಹುಚ್ಚ ತಡವಾದದ್ದಕ್ಕೆ ಕಾರಣ ಕೇಳಿದ.

"ನೋಡಪ್ಪ! ರಸ್ತೆಯಲ್ಲಿ ಬರುತ್ತಿದ್ದೆ..." ಮುಂದಿನ ಓಣಿಯ ಹುಚ್ಚ ಹೇಳಿದ, "ದಾರಿಯಲ್ಲಿ ಇಬ್ಬರು ಲಫಂಗರು ಜಗಳಾ ನಡೆಸಿದ್ದರು. ಇಬ್ಬರ ಕೈಯಲ್ಲೂ ಚಾಕು ಇತ್ತು. ಜಗಳಾ ಹೆಚ್ಚಾದಂತೆ, ಅವನ ರುಂಡ ಇವನು ಇವನ ರುಂಡ ಅವನು, ಕರಕ್ಕನೆ ಕೊಯ್ದು ಕೈಯಲ್ಲಿ ಹಿಡಿದುಕೊಂಡರು."

"ಮುಂದೆ?" ಮತ್ತೊಬ್ಬ ಪ್ರಶ್ನಿಸಿದ.

"ಮುಂದೇನಾಗುತ್ತೆ? ಆಸ್ಪತ್ರೆಗೆ ಕರೆದುಕೊಂಡು ಹೋದ್ರು- ಅಲ್ಲಿ ಜೋಡಿಸಿದ ಕೂಡಲೇ ಮತ್ತೆ ಜಗಳಾಡೋದಕ್ಕೆ ಸುರು ಮಾಡೋದ?"

ಗಾಯಕನ ಉಪಯೋಗ

ಒಬ್ಬ ಸಿನೆಮಾ ಹಿನ್ನೆಲೆ ಗಾಯಕ ಪ್ರೇಕ್ಷಕರಿಗೆ ಸಂಗೀತ ಸುಧೆಯನ್ನುಣಿಸಿ ಹೊರಗೆ ಬರುತ್ತಿದ್ದ. ಹಾಲಿನ ಹೊರಗೆ ನಿಂತಿದ್ದ ಶ್ರೀಮಂತ ಯುವತಿ ಗಾಯಕನನ್ನು ತಡೆದು ಕೇಳಿದಳು, "ಪೂರ್ಣ ಹಿಂದಿನ ಬೆಂಚಿನಲ್ಲಿ ಕುಳಿತಿದ್ದ ಶ್ರೋತೃವಿಗೂ ಕೇಳುವಂತೆ ಹಾಡಿದ ಶ್ರೀ...ಇವರು ತಾವೇ ಏನು?"

"ಹೌದು!" ಗಾಯಕ. ಹೆಮ್ಮೆಯಿಂದ ಹೇಳಿದ.

"ಛೇ ಛೇ! ಏನ ಧ್ವನೀರಿ ತಮ್ಮದೂ... ನೋಡಿ! ನನಗೆ ಸ್ವಲ್ಪ ಹೆಲ್ಪ ಮಾಡಿ, ನನ್ನ ಡ್ರೈವರನ್ನ ಕೂಗ್ತೀರಾ! ಅವನ ಹೆಸರು-ಯಂಕೂ ಅಂತ."

ಫೋಟೋ ಯಾಕೆ?

ಸಿನೇಮಾ ನಡೆದಾಗ ಪಕ್ಕದಲ್ಲಿ ಕುಳಿತಿದ್ದು ಅಲ್ಲದೆ, ಹೊರಬಂದಾಗಲೂ ದುರುಗುಟ್ಟಿ ನೋಡುತ್ತಿದ್ದ ಕುರುಚಲು ಗಡ್ಡದವನನ್ನು ಆಕೆಂಯೇ ಮಾತಾಡಿಸಿದಳು: "ರೀ ನಿಮ್ಮ ಫೋಟೋ ಇದ್ದರೆ ಕೊಡ್ತೀರಾ?"

"ಫೋಟೋ?" ಕುರುಚಲು ಗಡ್ಡದವ ಹಿಗ್ಗಿನಿಂದ ಕೇಳಿದ: "ಓಹೋ ಕೊಡ್ತೀನಿ! ನಾಳೆ ತರತೀನಿ!"

"ದಯವಿಟ್ಟು ತಂದುಕೊಡಿರಪ್ಪ- ನನ್ನ ಮಕ್ಕಳು ಮೊಂಡತನ ಮಾಡಿದಾಗ ತೋರಿಸಿ, ಹೆದರಿಸ್ತೀನಿ!"

ಎಷ್ಟು ಮಕ್ಕಳು?

ತನ್ನ ಹೆಂಡತಿಯ ಹೆರಿಗೆ ನಿರಪಾಯಕರವಾಗಲೆಂದು, ಆಸ್ಪತ್ರೆಯ ಆಪರೇಶನ್ ಥಿಯೇಟರಿನ ಮುಂದೆ ಕುಳಿತಿದ್ದ ಭೀಮಸಿಂಗನಿಗೆ ನಿಮಿಷ ನಿಮಿಷಕ್ಕೂ ಕಳವಳ ಅನ್ನಿಸುತ್ತಿತ್ತು. ತನ್ನ ಹಿಂಜರಿಕೆಗಳ ತಾಕಲಾಟ ತಾಳಲಾರದೆ, ಭೀಮಸಿಂಗ್ ಒಂದು ಬಾಟಲಿ ಬಾಯಿಗಿಳಿಸಿ, ಸುಮ್ಮನೆ ಕುಳಿತ.

ವಾರ್ಡಿನಿಂದ ನರ್ಸೊಬ್ಬಳು ನಗುತ್ತ ಬಂದು ಹೇಳಿದಳು: "ಭೀಮಸಿಂಗ ಅವರೇ, ತಮ್ಮ ಪತ್ನಿಯ ಹೆರಿಗೆ ಜರುಗಿತು. ತಾವು ಒಳಹೋಗಿ ನೋಡಬಹುದು."

ಭೀಮಸಿಂಗ್ ಜೋಲಿ ಹೊಡೆಯುತ್ತಲೇ ಒಳಗೆ ಹೋದ. ಅವನ ಹೆಂಡತಿಗೆ ಅವಳಿ ಮಕ್ಕಳಾಗಿದ್ದುವು. ಕುಡಿದದ್ದು ತಲೆಗೇರಿದ್ದರಿಂದ ಭೀಮಸಿಂಗನಿಗೆ ಒಂದೊಂದು ವಸ್ತು ಎರಡಾಗಿ ಕಾಣುತ್ತಿದ್ದುವು. ಹೆಂಡತಿಯ ಪಕ್ಕದಲ್ಲಿ ಮಲಗಿದ್ದ ಮಕ್ಕಳನ್ನು ನೋಡಿದ ಕೂಡಲೇ ಅವನಿಗೆ ಮೂರ್ಛೆ ಬಂತು.

ಎರಡು ಚೀನೀ ಪದ್ಯಗಳು


ಸುವಾಸಿನಿ

ಸುವಾಸಿನೀ, ಇದ್ದಿದ್ದರೆ ನೀನಿಲ್ಲಿ
ಈ ಮನೆಯನ್ನೆಲ್ಲ ತುಂಬಿಸುತ್ತಿದ್ದೆ
ಹೂವುಗಳಿಂದ.
ಸುವಾಸಿನೀ, ಮೋಹಕ ಮಂಚವನ್ನು
ಖಾಲಿ ಬಿಟ್ಟು
ನೀನು ಹೊರಟುಹೋದೆ.
ಖಾಲಿ ಖಾಲಿ ಹಾಸಿಗೆಯಲ್ಲೀಗ ಕುಶಲ
ಕಸೂತಿಯ ಮೇಲ್ಹಾಸು
ಮುದುರಿ ಬಿದ್ದಿದೆ; ನಾನು ನಿದ್ರಿಸಲಾರೆ.
ಮೂರು ಚೈತ್ರಗಳು ಉರುಳಿ ಹೋದವು;
ಆದರೀಗಲೂ
ನೀನು ಬಿಟ್ಟು ತೆರಳಿದ ಘಮಘಮ ಪರಿಮಳ
ಇನ್ನೂ ನನ್ನ ಬೆಂಬಿಡದೆ ಕಾಡುತ್ತಿದೆ.
ಈ ಘಮಘಮ ನನ್ನ ಎಂದಿಗೂ
ತೊರೆಯುವುದಿಲ್ಲ. ಆದರೆ. ಚೆಂದದವಳೇ
ನೀನೆಲ್ಲಿ ಇರುವೆ?
ಹಳದಿ ಎಲೆಗಳು ತೊಟ್ಟು ಕಳಚಿ
ನೆಲಕ್ಕುರುಳುವಾಗ
—ನಾನು ಬಿಕ್ಕಳಿಸುತ್ತೇನೆ.
ಮಿಂಚುವ ನಕ್ಷತ್ರಗಳೆಲ್ಲ ಮುಂಜಾನೆ
ಹಸಿರು ತಪ್ಪಲಿನಲ್ಲಿ ಪುತುಪುತು ಉದುರಿ
ಮಂಕಾಗುವಾಗ
—ಅಯ್ಯೋ ನಾನು ದುಃಖಿಸುತ್ತೇನೆ.

ನವಿಲೂರಿನ ಕುಮಾರಿ

ದ್ರಾಕ್ಷಿ ಗೊಂಚಲಿನಿಂದ ಭಟ್ಟಿ ಇಳಿಸಿದ
ಹುಳಿಸಿಹಿಯಾದ ದ್ರಾಕ್ಷಾರಸ—
ಅದ ಹೀರಲು ಬಂಗಾರದ ಬಟ್ಟಲುಗಳು—
ಜೊತೆಗೆ, ನವಿಲೂರಿನ ಹುಡುಗಿ—
ಆಹಾ, ಬರುತ್ತಾಳವಳು ಪುಟುಪುಟು ಓಡಿ
ಮರಿಗುದುರೆಯೇರಿ; ಹದಿಹರೆಯದ
ಕುಮಾರಿ!
ಅವಳಿಗೆ: ನೀಲಿ ಬಿಂದಿ ಲೇಪಿಸಿದ
ಬಿಂಕದ ಬಾಗು ಕುಡಿಹುಬ್ಬುಗಳು;
ಜೀವ ಜುಮ್ಮೆನ್ನುವ ಸೂಜಿಗಲ್ಲಿನ
ಮಾತುಗಳು;
ಜೊತೆಗೆ, ಆಕಾಶದುದ್ದಕೂ ತೇಲಿಸುವಂತೆ
ಹಾಡುತ್ತಾಳೆ ಹಾಯ್, ಸವಿಗೊರಳ
ಸಂಗೀತ!
ಮೋಜಿನ ಮೇಜವಾನಿಯಲಿ ಔತಣದೂಟ,
ತಿನ್ನಲು ಆಮೆಚಿಪ್ಪಿನೊಳತಿರುಳ ಖಾದ್ಯ.
ಕೂತು ನನ್ನ ತೊಡೆಯ ಮೇಲವಳು
ಹೀರುತ್ತಾಳೆ ಹನಿಹನಿ ಸವಿರಸದ ಮಧು
ಮತ್ತಲ್ಲಿ, ನಾಜೂಕು ಕಸೂತಿಯ
ನವಿರು ನೈದಿಲೆಗಳಿರುವ
ಅವಳ ದಾವಣಿಯ ಮರೆಗೆ [illegible]
ಚಂದ್ರಮಗಳೆರಡು!
ಕಿಶೋರಿ, ಅದ ಬಿಗಿದಪ್ಪಿದರೆ ನಾನು ... ...

(ಪ್ರಾಚೀನ ಚೀನಿ ಕವಿ ಲಿ. ಪೋನ ಈ ಕವನಗಳನ್ನು ಕನ್ನಡಕ್ಕಿಳಿಸಿದವರು ಎಂ. ಎನ್. ಕೃಷ್ಣ...



ಶಾಂತಿದೂತ ಸಾದಾತ್

ಸುರೇಂದ್ರ ದಾನಿ

"ನಾವು ನಿಮ್ಮನ್ನು ತಿರಸ್ಕರಿಸುತ್ತಿದ್ದೆವು, ನಿಜ. ನಿಮ್ಮನ್ನು ಎಲ್ಲಿಯೂ ಭೆಟ್ಟಿ ಆಗಲು ನಾವು ಸಿದ್ಧರಿರಲಿಲ್ಲ, ನಿಜ. ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ನಮ್ಮ ಪ್ರತಿನಿಧಿಗಳು ನಿಮ್ಮ ಪ್ರತಿನಿಧಿಗಳೊಡನೆ ಶುಭಾಶಯಗಳ ವಿನಿಮಯ ಸಹ ಮಾಡುತ್ತಿರಲಿಲ್ಲ, ನಿಜ. ೧೯೭೩ ರ ಜಿನೀವಾ ಶಾಂತಿ ಸಮ್ಮೇಳನದಲ್ಲಿ ನಮ್ಮ ಪ್ರತಿನಿಧಿಗಳು ನಿಮ್ಮೊಡನೆ ನೇರವಾಗಿ ಒಂದು ಶಬ್ದವನ್ನೂ ಮಾತಾಡಲಿಲ್ಲ, ನಿಜ ಆದರೂ ಇಂದು ನಾವು ಶಾಶ್ವತವಾಗಿ ನಿಮ್ಮೊಡನೆ ಶಾಂತಿ ಮತ್ತು ನ್ಯಾಯಯುತವಾಗಿ ಬಾಳಲಪೇಕ್ಷಿಸುತ್ತೇವೆ ಇಸ್ರೇಲ್ ಇಂದು ವಾಸ್ತವಿಕ ಸತ್ಯವಾಗಿದೆ. ಪ್ರಪಂಚವೆಲ್ಲ ಅದನ್ನು ಒಪ್ಪಿದೆ. ಬಲಿಷ್ಠ ರಾಷ್ಟ್ರಗಳು ಅದಕ್ಕೆ ಮನ್ನಣೆಯಿತ್ತಿವೆ. ನೀವು ನಮ್ಮೊಡನೆ ಶಾಂತಿ ಮತ್ತು ಭದ್ರತೆಯಿಂದ ಇರಬೇಕೆಂದು ನಿಮ್ಮನ್ನು ನಾನು ಸ್ವಾಗತಿಸುತ್ತೇನೆ."

ಇಜಿಪ್ಟಿನ ಅಧ್ಯಕ್ಷ ಅನ್ವರ್ ಸಾದಾತ್ ಕಳೆದ ಡಿಸೆಂಬರ್ ೨೧ ರಂದು ಇಸ್ರೇಲ್ ಸಂಸತ್ತನ್ನುದ್ದೇಶಿಸಿ ಮಾಡಿದ ಭಾಷಣದ ಶೈಲಿ ಇದು. ಶೇಕ್ಸ್‌ಪಿಯರ್ ಬರೆದ 'ಜೂಲಿಯಸ್ ಸೀಸರ್' ನಾಟಕದಲ್ಲಿ ಆ್ಯಂಟೋನಿ ಸೀಸರನ ಮೃತದೇಹವನ್ನು ಇಟ್ಟುಕೊಂಡು ಮಾಡಿದ ಭಾಷಣದ ನೆನಪು ತರುತ್ತದೆ. ಇಸ್ರೇಲ್ ೧೯೪೮ ರಲ್ಲಿ ಅಸ್ತಿ-

ತ್ವಕ್ಕೆ ಬಂದಂದಿನಿಂದ ಅದರ ಚರಿತ್ರೆಯಲ್ಲಿ ಇಂಥ ಮಹತ್ವದ ಘಟನೆ ನಡೆದಿರಲಿಲ್ಲ. ಅನ್ವರ್ ಸಾದಾತರ ಈ ಭಾಷಣ ಉಭಯ ರಾಷ್ಟ್ರಗಳ ಲ್ಲಿಯ ೨೯ ವರ್ಷಗಳ ದ್ವೇಷ, ಮತ್ಸರ, ಹಿಂಸೆ, ರಕ್ತಪಾತಪೂರಿತವಾದ ಸಂಬಂಧದ ಸಮಾಧಿ ಮಾಡಿ ಹೊಸ ಸ್ನೇಹ ಸೌಹಾರ್ದ ಸಂಬಂಧದ ನಾಂದಿ ಹಾಡಿತು. ಈ ಎರಡು ರಾಷ್ಟ್ರಗಳಲ್ಲಿ ಮಾತ್ರವಲ್ಲ, ಪಶ್ಚಿಮ ಏಶಿಯದ, ಅಷ್ಟೇ ಏಕೆ ಸಮಗ್ರ ಪ್ರಪಂಚದ ಇತಿಹಾಸಕ್ಕೇ ಇದು ಹೊಸ ತಿರುವು ಕೊಟ್ಟಿತು. ಸಾದಾತರೇ ಹೇಳಿರುವಂತೆ ಇದು 'ಏ ದ್ಭು ದಾ ಘಾ ತ ಮುತ್ಸದ್ದಿತನ.'

ಸಾದಾತ್ ಆಧ್ಯಾತ್ಮವಾದಿ. ದೇವರಲ್ಲಿ ನಂಬುಗೆ ಇದೆ. ಮಾನವಕೋಟಿಯನ್ನೆಲ್ಲ ಪ್ರೇಮ ದೃಷ್ಟಿಯಿಂದ ನೋಡುವ ಪ್ರಜ್ಞಾವಂತ. ಆದರೂ ಅವರೇನೂ ಸಂತರಲ್ಲ. ಅತ್ಯಂತ ವ್ಯಾವಹಾರಿಕ ರಾಜಕಾರಣಿ. ಆದ್ದರಿಂದಲೇ ಅವರು ಈ ಶಾಂತಿಯಾತ್ರೆಯನ್ನು ತೀರ ಅನಿವಾರ್ಯವೆನಿಸಿದಾಗಲೇ ಕೈಕೊಂಡರೆಂದು ವಿಶ್ಲೇಷಿಸುವ ರಾಜಕೀಯ ಭಾಷ್ಯಕಾರರು ಇದ್ದಾರೆ. ಇಸ್ರೇಲಿನ ಮೇಲೆ ಅದು ಜನ್ಮವೆತ್ತಿದ ದಿನದಿಂದಲೇ ಕತ್ತಿ ಮಸೆಯುತೊಡಗಿದ ಇಜಿಪ್ತ್ ಮತ್ತು ಅರಬ್ ರಾಷ್ಟ್ರಗಳು ಅದರೊಡನೆ ಯುದ್ಧವಿಲ್ಲದೆ ಒಂದು ದಶಕವನ್ನೂ ಕಳೆದಿಲ್ಲ. ನಿತ್ಯ ಘರ್ಷಣೆಗಳಲ್ಲದೆ ೧೯೪೮, ೧೯೫೬, ೧೯೬೭ ಮತ್ತು ೧೯೭೩ ಈ ರೀತಿ ನಾಲ್ಕು ಸಲ ಉಭಯ ರಾಷ್ಟ್ರಗಳು ಪರಸ್ಪರರ ಮೇಲೆ ಯುದ್ಧ ಸಾರಿವೆ ಒಂದೊಂದು ಸಲವೂ ಅದು ಜಗತ್ತಿನ ಶಾಂತಿಯನ್ನೇ ಕದಡುವ ಭೀತಿ ಒಡ್ಡಿತ್ತು. ಈ ಯುದ್ಧಗಳಲ್ಲೆಲ್ಲ ತಾನೇ ಅಧಿಕ ಕಷ್ಟ ನಷ್ಟಗಳನ್ನು ಸಹಿಸಬೇಕಾಗುತ್ತದೆಂಬ ದೂರು ಇಜಿಪ್ತಿಯನ್ನರಲ್ಲಿದೆ. ಇನ್ನುಳಿದ ಅರಬ್ ರಾಷ್ಟ್ರಗಳು ಹಣ ಮತ್ತು ಮದ್ದು ಗುಂಡುಗಳನ್ನು ಒದಗಿಸುತ್ತಿವೆಯೇ ಹೊರತು ಜನಬಲವನ್ನಲ್ಲ ೧೯೬೭ ರ ಆರು ದಿನಗಳ ಯುದ್ಧವೊಂದರಲ್ಲೇ ಇಜಿಪ್ತಿನ ೩೦೦೦ ಜನರು ಸತ್ತರೆ ಸಿರಿಯದ ೬೦೦ ಜನರು ಮತ್ತು ಜೋರ್ಡಾನಿನ ೬೯೬ ಜನರು ಮಾತ್ರ ಸತ್ತರೆಂದು ದಾಖಲೆಗಳಿವೆ. ಪೆಲೆಸ್ಟೀನಿಯನ್ನರಿಗಾಗಿ ಇಜಿಪ್ತಿಯನ್ನರ ರಕ್ತವನ್ನೇಕೆ ಹರಿಸಬೇಕು? ಎಂದು ಅರಬ್ ಸೈನ್ಯಾಧಿಕಾರಿಗಳು ಕೇಳತೊಡಗಿದ್ದಾರೆ. ಇಜಿಪ್ತಿನ ಜನತೆಯೂ ಯುದ್ಧದ ರಕ್ತಪಾತಕ್ಕೆ ರೋಸಿ ಹೋಗಿದೆ. ತನ್ನ ಬೊಕ್ಕಸದ ಶೇಕಡ ೨೮ ರಷ್ಟನ್ನು ಇಜಿಪ್ತ್ ಪ್ರತಿ ವರ್ಷ ರಕ್ಷಣಾ ವೆಚ್ಚಕ್ಕಾಗಿಯೇ ಮೀಸಲಾಗಿಡಬೇಕಾಗಿದೆ.

ಇತ್ತ ಇಜಿಪ್ತಿನ ಅರ್ಥವ್ಯವಸ್ಥೆಯಂತೂ ದಿವಾಳಿಯ ಅಂಚನ್ನು ಮುಟ್ಟಿದೆ. ಅದರ ವ್ಯಾಪಾರೀನಷ್ಟ ವಾರ್ಷಿಕ ಒಟ್ಟು ಆದಾಯದ ಐದರಲ್ಲೊಂದು ಪಾಲೆಂದು ಲೆಕ್ಕ ಹಾಕಲಾಗಿದೆ. ಸೌದಿ ಅರೇಬಿಯಾ, ಕುವೈತ್ ಮತ್ತು ಅಮೇರಿಕಗಳು ಆಗಾಗ ಕೊಡುತ್ತಿರುವ ಕೈಸಾಲ ಕೈಗಡಗಳೇ ಇಜಿಪ್ತಿನ ಮುಖ್ಯ ಆಧಾರ. ಜನಸಂಖ್ಯೆ ಪ್ರತಿವರ್ಷ ಶೇಕಡ ೨.೩ ರಂತೆ ಏರುತ್ತಿದೆ ಇದನ್ನು ತಡೆಗಟ್ಟದೆ ಹೋದರೆ ಈ ಶತಮಾನದ ಕೊನೆಯ ಹೊತ್ತಿಗೆ ಅದು ೮ ಕೋಟಿಯನ್ನು ತಲುಪಬಹುದು. ೧೯೭೧ರಲ್ಲಿ ಆಸ್ವಾನ್ ಅಣೆಕಟ್ಟನ್ನು ಕಟ್ಟಿದ ನಂತರ ಕೃಷಿಗೆ ಹೊಸ ಚೈತನ್ಯ ದೊರೆಯಿತಾದರೂ ದೇಶದ ಆಹಾರೋತ್ಪಾದನೆ ಬೆಳೆಯುತ್ತಿರುವ ಹೊಟ್ಟೆಗೆ ಸಾಲುವಂತಿಲ್ಲ ಪ್ರತಿ ವರ್ಷವೂ ಅಪಾರ ಹಣ ಸುರಿದು ವಿದೇಶಗಳಿಂದ ಆಹಾರಧಾನ್ಯ ತರಿಸಬೇಕಾಗುತ್ತದೆ. ಕಳೆದ ವರ್ಷ ಜನವರಿಯಲ್ಲಿ ಆಹಾರ ಧಾನ್ಯಗಳ ಬೆಲೆಗಳನ್ನು ಏರಿಸಿದರೆ ಕೈರೋ, ಅಲೆಕ್ಸಾಂಡ್ರಿಯಾಗಳಲ್ಲಿ ಭೀಕರ ದಂಗೆಗಳೇ ನಡೆದವು. ಕೊನೆಗೂ ಬೆಲೆ ಏರಿಕೆಯನ್ನೂ ಹಿಂತೆಗೆದುಕೊಳ್ಳಬೇಕಾಯಿತು.

ಕೈರೋ ಕಲಕತ್ತೆಯನ್ನು ಮೀರಿಸುವಷ್ಟು ಕೊಳೆಯ ಕೊಳಚೆಗಳಿಂದ ತುಂಬಿದೆ. ಈಗಾಗಲೇ ೮೦ ಲಕ್ಷಕ್ಕೆ ಮುಟ್ಟಿರುವ ಈ ನಗರದ ಜನಸಂಖ್ಯೆ ದಿನವೂ ಒಂದು ಸಾವಿರದಂತೆ ಬೆಳೆಯುತ್ತಿದೆ. ಕೊಳಚೆ ಪ್ರದೇಶಗಳಲ್ಲಿಯ ಜನದಟ್ಟಣೆ ಚದುರ ಮೈಲಿಗೆ ಎರಡೂವರೆ ಲಕ್ಷವನ್ನು ಮೀರುತ್ತದೆ. ಶಿಕ್ಷಣ ಕಡ್ಡಾಯ ಮತ್ತು ಉಚಿತವಾಗಿದ್ದರೂ ಸಾಕ್ಷರತೆಯ ಪ್ರಮಾಣ ಶೇಕಡ ೨೫ ಕ್ಕೇ ನಿಂತಿದೆ. ಶ್ರೀಮಂತ ಮತ್ತು ಬಡವರ

ನಡುವಿನ ಅಂತರ ಹೆಚ್ಚುತ್ತಲೇ ಇದೆ. ಒಬ್ಬ ಸರಕಾರೀ ನೌಕರನ ಕನಿಷ್ಠ ಮಾಸಿಕ ಆದಾಯ ಸುಮಾರು ೩೦೦ ರೂಪಾಯಿ ಆದರೆ ಇದ್ದುಳ್ಳವರು ನಗರದ ಆಕರ್ಷಕ ಭಾಗವೆನಿಸಿರುವ 'ಜಾಕೀಜ್ ಡಿಸ್ಕೋ'ದಲ್ಲಿ ಒಂದು ಸಂಜೆಗೆ ರೂ. ೫೦೦ ವೆಚ್ಚ ಮಾಡುತ್ತಾರೆ.

ಯುದ್ಧ ಸನ್ನದ್ಧತೆಯಿಂದ ಸ್ವಲ್ಪ ವಿಶ್ರಾಂತಿ ದೊರೆತರೆ ದೇಶದ ಆರ್ಥಿಕ ಸ್ಥಿತಿ ಸುಧಾರಣೆಗೆ ಲಕ್ಷ್ಯ ಕೊಡಬಹುದೆಂದು ಸಾದಾತರ ಅಭಿಪ್ರಾಯ. ೧೯೭೦ ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದಲೂ ಇಜಿಪ್ತಿನ ಅರ್ಥ ವ್ಯವಸ್ಥೆಯ ಸುಧಾರಣೆಗೆ ಅವರು ಒಂದಿಲ್ಲೊಂದು ಚುಚ್ಚು ಮದ್ದು ಕೊಡುತ್ತಲೇ ಇದ್ದಾರೆ. ಇವರು ಕೈಗೊಂಡ ಮೊದಲ ಕ್ರಮವೇ ಹಿಂದಿನ ಅಧ್ಯಕ್ಷ ನಾಸೆರರ ಸಮಾಜವಾದೀ ರಾಷ್ಟ್ರದ ಕಲ್ಪನೆಗೆ ಲಗಾಮು ಹಾಕಿ ವಿದೇಶೀ ಬಂಡವಾಳವನ್ನು ದೇಶಕ್ಕೆ ಆಮಂತ್ರಿಸಿದ್ದು. ನಾಲ್ಕು ವರ್ಷಗಳ ಕಾಲ ಮುಚ್ಚಲ್ಪಟ್ಟು ಇಜಿಪ್ತದ ಬಹುಭಾಗದ ಆದಾಯ ಕರಗಲು ಕಾರಣವಾಗಿದ್ದ ಸುಯೇಜ್ ಕಾಲುವೆಯನ್ನು ೧೯೭೫ ರಲ್ಲಿ ಸಾದಾತ್ ಮುಕ್ತಗೊಳಿಸಿದರು. ಅದೀಗ ಪ್ರತಿ ವರ್ಷ ೫೦೦ ಕೋಟಿ ರೂಪಾಯಿ ಆದಾಯ ತರುತ್ತದೆ. ೧೯೭೩ರಲ್ಲಿ ಇಸ್ರೇಲ್ ಮೇಲೆ ಮಿಂಚಿನ ದಾಳಿ ನಡೆಸಿದುದರ ಉದ್ದೇಶವು ಶಾಂತಿ ಸ್ಥಾಪನೆಯೇ ಆಗಿತ್ತೆಂದು ಸಾದಾತ್ ಹೇಳುತ್ತಾರೆ. "ಯುದ್ಧದಿಂದ ಇಜಿಪ್ತನ್ನು ಮಣಿಸುವದು ಸಾಧ್ಯವಿಲ್ಲವೆಂಬುದನ್ನು ಅವರಿಗೆ ಮನಗಾಣಿಸಿ ಕೊಡಬೇಕಾಗಿತ್ತು," ಎಂದವರು ನುಡಿಯುತ್ತಾರೆ. ಈ ಯುದ್ಧದಿಂದ ಕದಡಿದ ಶಾಂತಿಯನ್ನು ಪುನಃ ಸ್ಥಾಪಿಸಲು ಪ್ರಪಂಚ ಸಂಸ್ಥೆಯ ಮಧ್ಯಸ್ಥಿಕೆಯಿಂದ ಪ್ರಾರಂಭವಾದ ಜಿನೇವಾ ಸಮ್ಮೇಳನ ಯಾವ ಪ್ರಗತಿ ಸಾಧಿಸದೆ ಸ್ಥಗಿತಗೊಂಡದ್ದೇ ಸಾದಾತರ ಜೆರೂಸಲೇಮ್ ಯಾತ್ರೆಯ ದಿಟ್ಟ ಸಾಹಸಕ್ಕೆ ಪ್ರೇರಣೆ.

೧೯೪೮ ರಲ್ಲಿ ಬ್ರಿಟಿಷರು ಪೆಲೆಸ್ಟೀನಿನಿಂದ ಹೊರಟು ಹೋಗುವಾಗ ಸುಮಾರು ಎಂಟು ಸಾವಿರ ಚದುರ ಮೈಲು ವಿಸ್ತಾರದ ಇಸ್ರೇಲ್ ರಾಷ್ಟ್ರವನ್ನು ನಿರ್ಮಿಸಿದರು. ಇದಕ್ಕೆ ಪ್ರಪಂಚ ಸಂಸ್ಥೆಯ ಮನ್ನಣೆ ಇದ್ದರೂ ಇಜಿಪ್ತ, ಸೌದಿ ಅರೇಬಿಯಾ ಸುಡಾನ್ ಮೊದಲಾದ ಅರಬ್ ರಾಷ್ಟ್ರಗಳು ಇದರ ಅಸ್ತಿತ್ವವನ್ನು ಸಹಿಸಲಿಲ್ಲ. ಅದರ ಅಸ್ತಿತ್ವವನ್ನೇ ಅಳಿಸಿ ಹಾಕುವ ಉದ್ದೇಶದಿಂದ ಅವು ದಾಳಿ ಮಾಡಿದರೂ ಕೆಲ ಪ್ರದೇಶವನ್ನು ಮಾತ್ರ ಹಿಡಿದುಕೊಳ್ಳುವಲ್ಲಿ ಸಮರ್ಥರಾದರು. ೧೯೫೬ ರಲ್ಲಿ ಇಸ್ರೇಲ್ ಇದರ ಸೇಡನ್ನು ತೀರಿಸಿಕೊಂಡಿತು. ಸಿನಾಯಿ ಮರುಳ್ನಾಡಿನ ಬಹುಭಾಗವನ್ನೆಲ್ಲ ಆಕ್ರಮಿಸಿ ಸುಯೇಜ್ ಆಖಾತದ ವರೆಗೂ ತನ್ನ ಗಡಿಯನ್ನು ವಿಸ್ತರಿಸಿತು. ಇದರಿಂದ ಇಸ್ರೇಲಿನ ವಿಸ್ತಾರ ನೂರಕ್ಕೆ ೪೦ ರಷ್ಟು ಹೆಚ್ಚಿದೆಯೆಂದು ಹೇಳಲಾಗಿದೆ; ಈ ಆಕ್ರಮಿತ ಪ್ರದೇಶದಲ್ಲಿ ಇಸ್ರೇಲ್ ತನ್ನ ಜನರಿಗಾಗಿ ಕೆಲ ವಸಾಹತುಗಳನ್ನು ಸಹ ನಿರ್ಮಿಸಿದೆ. ನಂತರ ನಡೆದ ಎರಡು ಯುದ್ಧಗಳಲ್ಲೂ ಸಿನಾಯಿ ಪ್ರದೇಶ-



"ದಾವಣಗೆರೀನ ಕೊಂಡ್ಕೊಳೋವಷ್ಟು ದುಡ್ಡು ನಮ್ಮತಾವ ಎಲ್ಲೈತೆ ಮಾರಾಯಾ!!..."

ವನ್ನು ತೆರವು ಮಾಡುವ ಪ್ರಶ್ನೆ ಅನಿರ್ಣೀತವಾಗಿಯೆ ಉಳಿದಿದೆ. ಜಿನೀವಾ ಸಮ್ಮೇಳನ ಮುಂದುವರಿಯದೆ ಇರುವದಕ್ಕೆ ಇಸ್ರೇಲಿನ ಅಸಹಕಾರವೇ ಕಾರಣವಾಯಿತು. ಸಾದಾತರ ಜೆರೂಸಲೇಮ್ ಯಾತ್ರೆಯ ನಂತರ ಇಸ್ಮಾಲಿಯಾದಲ್ಲಿ ನಡೆದ ಸಾದಾತ್-ಬೇಗಿನ್ ಮಾತುಕತೆಗಳು ಸಹ ಈ ದಿಸೆಯಲ್ಲಿ ಇನ್ನೂ ಯಾವದೇ ಹೊಸ ಹಜ್ಜೆ ಇಟ್ಟಿಲ್ಲ. ಇಜಿಪ್ತ ಇಸ್ರೇಲಿನ ಅಸ್ತಿತ್ವವನ್ನು ಒಪ್ಪಲು ಮುಂದೆ ಬಂದಿದ್ದರೂ ಸಿನಾಯಿ ಪ್ರದೇಶವನ್ನು ಬಿಟ್ಟುಕೊಡಲು ಸಿದ್ಧವಿಲ್ಲ. ಇಸ್ರೇಲ್ ತಾನೀಗಾಗಲೇ ಸ್ಥಾಪಿಸಿರುವ ವಸಾಹತುಗಳನ್ನು ಹಿಂತೆಗೆದುಕೊಳ್ಳುವ ಪ್ರಶ್ನೆಯೇ ಉದ್ಭವಿಸುವದಿಲ್ಲವೆಂದು ಪಟ್ಟು ಹಿಡಿದಿದೆ. ಇಷ್ಟೇ ಅಲ್ಲ ಅವುಗಳ ರಕ್ಷಣೆಗಾಗಿ ಸೈನ್ಯವನ್ನಿಡುವುದಾಗಿ ಸಾರಿದೆ. ಕೈರೋ ಸಮ್ಮೇಳನ ಸೇರಿದಾಗ ಚರ್ಚೆ ಮುಂದುವರಿಯಲಿದೆ.

ಸ್ನೇಹಿತರು ಸಹಕಾರಿಗಳಿಂದ ದೂರವಿದ್ದು ಮಹತ್ವದ ನಿರ್ಣಯಗಳನ್ನೆಲ್ಲ ಏಕಾಂಗಿಯಾಗಿಯೇ ಕೈಕೊಳ್ಳುವ ಅನ್ವರ್ ಸಾದಾತ್ ತೀರ ಬಡ ಕುಟುಂಬದಲ್ಲಿ ಹುಟ್ಟಿ ಬಂದವರು, ತಂದೆ ಮಿಲಿಟರಿ ಆಸ್ಪತ್ರೆಯೊಂದರಲ್ಲಿ ಕಾರಕೂನ, ತಾಯಿ ನಿರಕ್ಷರಕುಕ್ಷಿ. ೧೯೩೬ ರಲ್ಲಿ ಸೈನ್ಯಶಿಕ್ಷಣಶಾಲೆ ಇಜಿಪ್ತಿಯನ್ನರಿಗೆಲ್ಲ ಮುಕ್ತವಾದಾಗ ಸೇರಿದ ೫೨ ವಿದ್ಯಾರ್ಥಿಗಳಲ್ಲಿ ಗಮಾಲ್ ಅಬ್ದುಲ್ ನಾಸೇರರೊಡನೆ ಅನ್ವರ್ ಸಾದಾತರೂ ಒಬ್ಬರು. ಬ್ರಿಟಿಷ್ ದ್ವೇಷ ರಕ್ತಗತವಾಗಿತ್ತು. ಸೈನ್ಯ ಸೇವೆಯಲ್ಲಿ ಸೇರಿದರೂ ಅದು ಕಡಿಮೆಯಾಗಲಿಲ್ಲ. ದ್ವಿತೀಯ ಮಹಾಯುದ್ಧದಲ್ಲಿ ಜರ್ಮನ್ನರೊಡನೆ ಸಹಕಾರಿಸಿದ್ದೂ ಆಯಿತು. ಎರಡು ಸಲ ಜೇಲಿಗೆ ಕಳಿಸಲ್ಪಟ್ಟ ಸಾದಾತ್ ಒಮ್ಮೆ ಜೇಲು ಒಡೆದು ಪಾರಾಗಿ ಬಂದದ್ದುಂಟು. ೧೯೪೨ ರಲ್ಲಿ ಸೈನ್ಯಸೇವೆಯಿಂದ ಹೊರಗೆ ಬಂದು ೧೯೫೦ ರಲ್ಲಿ ಮತ್ತೆ ಸೇರಿಕೊಂಡರು; ಅದೇ ವರ್ಷ ಅರಸು ಫರೂಕರನ್ನು ಪದಚ್ಯುತಗೊಳಿಸಿದ ಸೈನ್ಯ ಕ್ರಾಂತಿಯ ನಾಯಕತ್ವ ವಹಿಸಿದ ೨೩ ಸೈನ್ಯಾಧಿಕಾರಿಗಳಲ್ಲಿ ಇವರೂ ಒಬ್ಬರು. ಹದಿನಾರು ವರ್ಷ ತನ್ನ ವಜ್ರಮುಷ್ಟಿಯಿಂದ ಆಳಿದ ನಾಸೇರರಿಗೆ ಸಾದಾತ್ ಹತ್ತಿರದವರಾಗಿದ್ದರೂ ತಮ್ಮ ಮಹತ್ವಾಕಾಂಕ್ಷೆಯನ್ನೆಂದೂ ಪ್ರದರ್ಶಿಸಲಿಲ್ಲ. ಸಹಕಾರಿಗಳೆಲ್ಲ ಇವರನ್ನು ನಾಸೇರರ ನಾಯಿ ಎಂದು ಕರೆಯುತ್ತಿದ್ದರು. ನಾಸೇರರು ಸಹ ಸಾದಾತರನ್ನು 'ಕರಿ ಕತ್ತೆ' ಎಂದು ವರ್ಣಿಸುತ್ತಿದ್ದರು. "ನನ್ನ ಸಾಮರ್ಥ್ಯದ ಬಗ್ಗೆ ಅವರಿಗೆ ಸ್ವಲ್ಪ ಸಂಶಯ ಬಂದಿದ್ದರೂ ನನ್ನ ಇತಿಶ್ರೀ ಆಗುತ್ತಿತ್ತು" ಎಂದೀಗ ಸಾದಾತ್ ಹೇಳುತ್ತಾರೆ. ಹಾಗೆಂದೇ ೧೯೬೯ರಲ್ಲಿ ನಾಸೇರ್ ಸಾದಾತರನ್ನು ಉಪಾಧ್ಯಕ್ಷ ಪದವಿಗೆ ಆಯ್ಕೆ ಮಾಡಿದರು. ಮರುವರ್ಷ ಅವರು ನಿಧನ ಹೊಂದಿದಾಗ ಅಧ್ಯಕ್ಷಪದ ಅಯಾಚಿತವಾಗಿ ಸಾದಾತರಿಗೆ ದೊರೆಯಿತು.

ಮೇಲಧಿಕಾರಿಗಳು ಮಾತ್ರವಲ್ಲ, ಕೆಳಗಿನವರೂ ಸಾದಾತರನ್ನು ಪೆದ್ದರೆಂದೇ ಭಾವಿಸಿದ್ದರು. ೧೯೭೧ರಲ್ಲಿ ಕೆಲ ಸೈನ್ಯಾಧಿಕಾರಿಗಳು ಅಲಿ ಸಾಬ್ರಿಯವರ ನಾಯಕತ್ವದಲ್ಲಿ ಸಂಘಟಿತರಾಗಿ ಅಧ್ಯಕ್ಷ ಸಾದಾತರನ್ನು ಕಂಡು ತಮ್ಮ ಬೇಡಿಕೆಗಳನ್ನು ಮಂಡಿಸಿದರು. ಅಧ್ಯಕ್ಷರ ಮುಖದ ಮೇಲೆ ಯಾವ ಕೋಪಾವೇಶಗಳೂ ವ್ಯಕ್ತವಾಗಲಿಲ್ಲ. ಆದರೆ ಸದ್ದಿಲ್ಲದೆ ಅವರೆಲ್ಲ ಜೇಲಿಗಟ್ಟಲ್ಪಟ್ಟರು. ಇದು ಜನತೆಯಲ್ಲಿ ಸಾದಾತರ ದಕ್ಷತೆಯ ಬಗ್ಗೆ ಪ್ರಭಾವ ಬೀರಿದ್ದಿಷ್ಟೇ ಅಲ್ಲ; ಅವರಲ್ಲಿಯೂ ಆತ್ಮವಿಶ್ವಾಸವನ್ನು ಕುದುರಿಸಿತು. ಮರುವರ್ಷ ನಾಸೇರರ ವಿಶಾಲ ಅರಬಸ್ತಾನದ ಕಲ್ಪನೆಯನ್ನು ಕಡಿದುಹಾಕಿದರು. ಅವರ ಸಮಾಜವಾದೀ ರಾಷ್ಟ್ರದ ಕನಸೂ ರಶಿಯನ್ ಸೈನಿಕರ ಸಾನ್ನಿಧ್ಯವೂ ಇಜಿಪ್ತನ್ನು ವಿನಾಶದತ್ತ ಒಯ್ಯುತ್ತಿವೆಯೆಂದು ಸಾರುವ ದಿಟ್ಟತನ ತೋರಿಸಿ ಆ ದಿಸೆಯಲ್ಲಿ ಕ್ರಮಗಳನ್ನು ಕೈಕೊಂಡರು. ನಾಸೇರರ ಕಾಲದಲ್ಲಿದ್ದ ಬಂದಿಗಳ ಶಿಬಿರಗಳನ್ನು ರದ್ದುಗೊಳಿಸಿ ಇಜಿಪ್ತಿಗೆ ಶಾಶ್ವತ ಸಂವಿಧಾನವನ್ನೂ ಕಾನೂನಿನ ಪಾರಮ್ಯವನ್ನೂ ನೀಡಿದ ಶ್ರೇಯಸ್ಸು ಸಾದಾತರಿಗಿದೆ. ರಶಿಯನ್ನರ ಬಗ್ಗೆ ತಿರಸ್ಕಾರ ಭಾವವಿರುವಷ್ಟೇ ಸಾದಾತರಿಗೆ ಅಮೇರಿಕನ್ನರ ಬಗ್ಗೆ ಗೌರವವಿದೆ. ಅಬ್ರಹಾಂ ಲಿಂಕನ್ ಅವರ ಮೇಲೆ

ಪ್ರಭಾವ ಬೀರಿದ ನಾಯಕರಲ್ಲೊಬ್ಬ. ಅಮೇರಿಕದ ಇಸ್ರೇಲ್ ಪಕ್ಷಪಾತತನವನ್ನು ನಿಷ್ಕ್ರಿಯಗೊಳಿಸಲು ಇದೊಂದೇ ಮಾರ್ಗವೆಂದೂ ಅವರು ನಂಬುತ್ತಾರೆ. ಕಳೆದ ತಿಂಗಳು ಅವರು ಜೆರೂಸಲೇಮ್ ಯಾತ್ರೆ ಕೈಕೊಳ್ಳುವ ಮೊದಲು ಜಿನೇವಾ ಸಮ್ಮೇಳನ ಸ್ಥಗಿತಗೊಂಡ ಬಗ್ಗೆ ವಿವಂಚನೆ ವ್ಯಕ್ತಮಾಡಿ ಅಮೇರಿಕದ ಅಧ್ಯಕ್ಷ ಕಾರ್ಟರರಿಗೆ ಪತ್ರ ಬರೆದಿದ್ದರು. ಇದಕ್ಕಾಗಿ ತಾವು ಯಾವುದಾದರೊಂದು ಮಿಂಚಿನ ಕ್ರಮ ಕೈಕೊಳ್ಳುವ ವಿಚಾರ ತಿಳಿಸಿ ಅದಕ್ಕೆ ಅವರ ಸಮ್ಮತಿಯನ್ನು ದೊರಕಿಸಿಕೊಂಡಿದ್ದರು. ಆದರೆ ಇದು ಯಾವ ಕ್ರಮವೆಂಬುದನ್ನು ಮಾತ್ರ ಅವರು ಯಾರಿಗೂ ಹೇಳಿರಲಿಲ್ಲ. ಅವರ ಪತ್ನಿ ಜೀಹಾನಗೆ ಸಹ ಅವರ ಸುಳಿವಿರಲಿಲ್ಲ. ✿

ಅತಃಶಕ್ತಿ

೧೯೪೭-೪೮ ರಲ್ಲಿ ಇಜಿಪ್ತಿನ ಹಿಂದಿನ ಅರಸು ಫರೂಕರ ಸೆರೆಯಲ್ಲಿ ಕಳೆದ ದಿನಗಳು ಸಾದಾತರಿಗೆ 'ಆತ್ಮ'ನ ದರ್ಶನ ಮಾಡಿಸಿದವು. ಅವರ ಮಾತಿನಲ್ಲೇ................

ಮನುಷ್ಯ ತನ್ನಿಂದ ತಾನು ತಪ್ಪಿಸಿಕೊಳ್ಳುವುದನ್ನು ಅಸಾಧ್ಯಗೊಳಿಸುವ ಎಡೆಗಳೆಂದರೆ ಒಂದು ರಣರಂಗ, ಎರಡನೆಯದು ಸೆರೆಮನೆ. ೫೪ ನೇ ನಂಬರಿನ ಕೋಣೆಯಲ್ಲಿ ನನ್ನ ಜೊತೆಗಾರ ನಾನೇ. ಹಗಲು-ರಾತ್ರಿ ಯಾವಾಗಲೂ ಅಷ್ಟೆ. ಆದ್ದರಿಂದ ಅಲ್ಲಿ ನನಗೆ "ನನ್ನ" ಅರಿವು ಉಂಟಾದದ್ದು ಸ್ವಾಭಾವಿಕ. ಈ ಮೊದಲು ನನಗೆಂದೂ ಇಂಥ ಸಂದರ್ಭ ಒದಗಿರಲಿಲ್ಲ. ಸೈನ್ಯದ ನೌಕರಿಯಲ್ಲಿ, ರಾಜಕಾರಣದಲ್ಲಿ, ನಿತ್ಯದ ಜೀವನ ಪ್ರವಾಹದಲ್ಲಿ ಒಂದಿಲ್ಲೊಂದು ವಿಧದಿಂದ ನಾನು ಮಗ್ನನಾಗಿರುತ್ತಿದ್ದೆ.

ಈಗ ನಾನು ೫೪ ನೇ ನಂಬರಿನ ಕೋಣೆಯಲ್ಲಿ ಏಕಾಂಗಿ. ಹೊರಗಿನ ಪ್ರಪಂಚದೊಡನೆ ಯಾವ ಸಂಪರ್ಕವೂ ಇಲ್ಲ. ವೃತ್ತಪತ್ರಿಕೆಗಳು, ರೇಡಿಯೋ ಸಮಾಚಾರಗಳು ಸಹ ಇಲ್ಲ. ನನ್ನ ಈ ಏಕಾಂಗಿತನವನ್ನು ಕಳೆಯಬೇಕಾದರೆ ನನ್ನ ಒಳಗಿರುವ 'ಆತ್ಮ'ನ ಸ್ನೇಹವನ್ನು ಬಯಸದೇ ಗತ್ಯಂತರವೇ ಇರಲಿಲ್ಲ. ಅದು ಅಷ್ಟೊಂದು ಸುಲಭವಾಗಿರಲಿಲ್ಲ. ಅದಕ್ಕಾಗಿ ಕಷ್ಟ ಪಡಬೇಕಾಯಿತು. ಮನಸ್ಸನ್ನು ಆವರಿಸಿದ್ದ ಅನೇಕ ವಿಕಾರಗಳನ್ನು ದೂರ ಮಾಡಬೇಕಾಯಿತು.

ನನ್ನ ತಾಪದ ಅರಿವಿಗಿಂತ ಹೆಚ್ಚಿನದು ಇನ್ನೊಂದಿಲ್ಲ. ನನಗೆ ಏನು ಬೇಕೆಂಬ ಅರಿವು ಒಮ್ಮೆ ಮೂಡಿದ ಮೇಲೆ ನನಗೆ ಬೇಡವಾದುದನ್ನು ದೂರ ಮಾಡುವದು ಸುಲಭವಾಯಿತು, ಶಾಂತಮನಸ್ಕನಾಗಿರುವದನ್ನು ಕಲಿತೆ.

ನಮಗೆ ಪುಸ್ತಕ, ಪತ್ರಿಕೆ, ನಿಯತಕಾಲಿಕಗಳನ್ನು ಓದಲು ಕೊಟ್ಟಾಗ ಹಿಂಗದ ಹಸಿವಿನಿಂದ ಓದತೊಡಗಿದೆ. ಓದಿದ ಪ್ರತಿಯೊಂದು ಶಬ್ದದಲ್ಲಿಯೂ ನಾವೀನ್ಯವನ್ನು ಕಾಣತೊಡಗಿದೆ. ಆಗ ನಾನು 'ರೀಡರ್ಸ್ ಡೈಜೆಸ್ಟ್'ನಲ್ಲಿ ಓದಿದ ಒಂದು ಲೇಖನಕ್ಕಾಗಿ ಕೃತಜ್ಞನಾಗಬೇಕಾಗಿದೆ. ಅಮೇರಿಕನ್ ಮನಃಶಾಸ್ತ್ರಜ್ಞನೊಬ್ಬ ಬರೆದ ಲೇಖನ ಅದು. ನನ್ನ ಎಲ್ಲ ತೊಂದರೆಗಳಿಂದ ಪಾರಾಗಲು ಅದು ನೆರವಾಯಿತು. ಅದರ ಮುಖ್ಯಾಂಶವೆಂದರೆ ಮನುಷ್ಯನ ಜೀವನದ ಯಾವದೇ ಘಟ್ಟದಲ್ಲಿ ಒಂದು ಆಘಾತ ಉಂಟಾಗಬಹುದು, ಅದರಿಂದ ಅವನಲ್ಲಿ ತನ್ನ ಮುಂದಿನ ದಾರಿಗಳೆಲ್ಲ ಮುಚ್ಚಲ್ಪಟ್ಟಿವೆಯೆಂಬ ಭಾವನೆ ಉಂಟಾಗುತ್ತದೆ. ಜೀವನವೆಂದರೆ ಶಾಶ್ವತವಾಗಿ ಕೀಲಿ ಹಾಕಲ್ಪಟ್ಟ ಸೆರೆಮನೆಯೆಂಬ ಅನಿಸಿಕೆ ಮೂಡುತ್ತದೆ.


ಈ ಬಾಗಿಲಿಗೆ ಒಂದಕ್ಕಿಂತ ಹೆಚ್ಚು ಕೀಗಳಿರುತ್ತವೆ. ಮೊದಲನೆಯದಾಗಿ ಮನುಷ್ಯ ತಾನು ತೊಂದರೆಗೆ ಒಳಗಾದ ಮೂಲಗಳೇನೆಂಬುದನ್ನು ಗುರುತಿಸಬೇಕು. ಎರಡನೆಯದಾಗಿ ಅವುಗಳ

ನಂಬುಗೆ ಇರಬೇಕು. ನಂಬುಗೆಯೆಂದರೆ ತನಗೆ ಬರುವ ಆಪತ್ತುಗಳೆಲ್ಲ ದೈವಪ್ರೇರಿತವಾದವುಗಳು. ಅವುಗಳನ್ನು ಅನುಭವಿಸದೆ ಗತ್ಯಂತರವೇ ಇಲ್ಲವೆಂಬ ಶ್ರದ್ಧೆ. ಇದರಿಂದ ಆಪತ್ತುಗಳ ಪರಿಣಾಮಗಳನ್ನು ಎದುರಿಸುವ ಶಕ್ತಿ ಉತ್ಪನ್ನವಾಗುತ್ತದೆ. ಯಾವ ಸಮಸ್ಯೆಯೂ ಪರಿಹಾರಾತೀತವಾದುದಲ್ಲ. ಪ್ರತಿಯೊಂದಕ್ಕೂ ಪರಿಹಾರವೆಂಬುದೊಂದು ಇದ್ದೇ ಇರುತ್ತದೆ ಈ ಭಾವನೆ ನಮ್ಮಲ್ಲಿ ಮೂಡಬೇಕಾದರೆ ದೇವರು ನಮ್ಮನ್ನು ಇಲ್ಲಿ ಕೆಲ ವಿಶಿಷ್ಟ ಕಾರ್ಯೋದ್ದೇಶಗಳಿಗಾಗಿ ಹುಟ್ಟಿಸಿದ್ದಾನೆಂಬ ವಿಶ್ವಾಸ ನಮ್ಮಲ್ಲಿ ಇರಬೇಕು. ನಮ್ಮನ್ನು ಸೃಷ್ಟಿಸಿದ ದೇವರು ದುಷ್ಟನಾಗಿರಲಾರ, ಅವನು ಒಳ್ಳೆಯವನು, ಕಲ್ಯಾಣಕಾರಿ. (ನಮ್ಮ ಹಳ್ಳಿಯಲ್ಲಿ ಖುರಾನನ್ನು ಹೇಳುವಾಗ ಶೇಖರು ನಮಗೆ ನೀಡಿದ ಭೀಕರ ಮತ್ತು ಭಯಂಕರ ಕಲ್ಪನೆಗೆ ಇದು ತೀರ ವ್ಯತಿರಿಕ್ತ.)

ಮನುಷ್ಯ ಮತ್ತು ದೇವರಲ್ಲಿ ಇರಬೇಕಾದ ಆದರ್ಶಸಂಬಂಧ ಭೀತಿಯನ್ನಾಧರಿಸಿರದೆ ಉನ್ನತ ಮೌಲ್ಯವಾದ ಸ್ನೇಹವನ್ನಾಧರಿಸಿರಬೇಕು. ಸೃಷ್ಟಿಕರ್ತನು ಕರುಣಾಮಯಿ, ನ್ಯಾಯಪಕ್ಷಪಾತಿ ಮತ್ತು ಪ್ರೇಮಮೂರ್ತಿ. ಸರ್ವಸೃಷ್ಟಿಗೂ ಅವನೇ ಕಾರಣನಾಗಿರುವುದರಿಂದ ಅವನು ಸರ್ವಶಕ್ತ. ಅವನು ನಿಮ್ಮ ಸ್ನೇಹಿತನಾದರೆ ಎಂಥ ಸಂದರ್ಭಗಳಲ್ಲೂ ನಿಮಗೆ ಮನಸ್ಸಿನ ನೆಮ್ಮದಿ ಉಳಿಯುತ್ತದೆ.

ಆ ಮನಃಶಾಸ್ತ್ರಜ್ಞನ ವಿಶ್ಲೇಷಣೆ ಪ್ರೇಮದ ವಿಶ್ವರೂಪವನ್ನೇ ನನ್ನೆದುರು ಬಿಡಿಸಿತು. ಪ್ರಪಂಚದಲ್ಲಿಯ ಪ್ರತಿಯೊಂದು ವಸ್ತುವಿನೊಡನಿರುವ ನನ್ನ ಸಂಬಂಧ ಪುನರ್ರಚಿತವಾಗತೊಡಗಿತು. ನನ್ನ ಭಾವನೆ ಮತ್ತು ಕೃತಿಗಳಿಗೆ, ಪ್ರೇಮವೇ ಮೂಲಚೇತನವಾಗತೊಡಗಿತು, ನನ್ನ ವೈಯಕ್ತಿಕ ಮತ್ತು ಸಾರ್ವಜನಿಕ ಜೀವನದಲ್ಲಿ ಬಂದ ಎಂಥ ಸಂಕಟಗಳನ್ನು ಎದುರಿಸುವಾಗಲೂ ನಾನು ಈ ಶ್ರದ್ಧೆ ಮತ್ತು ಸ್ಥಿತಪ್ರಜ್ಞತೆಯಿಂದ ವರ್ತಿಸುವುದರಿಂದ ಅದು ನನಗೆ ಏನನ್ನೂ ಮಾಡಲು ಸಮರ್ಥವಾಗಿಲ್ಲ.

ನಾನು ಸ್ವಭಾವತಃ ಪ್ರೇಮಪ್ರೀತ. ಆದ್ದರಿಂದ ನಾನು ಯಾರನ್ನೂ ದ್ವೇಷಿಸಲಾರೆ. ೫೪ ನೇ ನಂಬರಿನ ಕೋಣೆಯಲ್ಲಿ ನಾನು ಅನುಭವಿಸಿದ ಕಷ್ಟ-ಕಾರ್ಪಣ್ಯಗಳಲ್ಲಿ ಇದು ಇನ್ನಷ್ಟು ಹೆಚ್ಚು ಸ್ಪಷ್ಟವಾಯಿತು. ಕಷ್ಟ ಮನುಷ್ಯನ ಆತ್ಮಶಕ್ತಿಯನ್ನು ದೃಢಗೊಳಿಸುತ್ತದೆ. ಗಂಡುಳ್ಳ ಮನುಷ್ಯ ತನ್ನ ಆಳವನ್ನು ಅರಿತುಕೊಂಡು ತನ್ನ ತನುವನ್ನು ಮರೆಯಬೇಕಾದರೆ ಕಷ್ಟಗಳು ಅವನಿಗೆ ಬರಲೇಬೇಕು. ನನಗೆ ಕಷ್ಟ ಪರಂಪರೆಗಳು ಪ್ರಾಪ್ತವಾದುದರಿಂದಲೇ ನಾನು ಸ್ವಭಾವತಃ ಒಳ್ಳೆಯದನ್ನು ಮಾಡಬಲ್ಲೆನೆಂಬುದನ್ನೂ ನನ್ನ ಎಲ್ಲ ಕೃತಿಗಳ ಹಿಂದಿನ ಪ್ರೇರಣೆ ಪ್ರೇಮವೇ ಇರುತ್ತದೆಂಬುದನ್ನೂ ಅರಿತುಕೊಂಡೆ. ಪ್ರೇಮವಿಲ್ಲದೆ ನಾನು ಯಾವ ಕಾರ್ಯವನ್ನೂ ಮಾಡಲಾರೆ. ಪ್ರೇಮವೇ ನನಗೆ ಶ್ರದ್ಧೆಯನ್ನೂ ಆತ್ಮವಿಶ್ವಾಸವನ್ನೂ ನನ್ನ ಪರಿಸರದ ಪ್ರತಿಯೊಂದನ್ನೂ ನೀಡುತ್ತದೆ. ನನ್ನ ದೇವಪ್ರೇಮವೇ ನನಗೆ ವಿಶ್ವಪ್ರೇಮವನ್ನೂ ಕಲಿಸಿದೆ. ಸೃಷ್ಟಿ-





"ನಿಮ್ಮ ಕಾಯಿಲೆ ಬಗ್ಗೆ ಪೂರ್ಣ 'ತಪಾಸಣೆ' ನಡೆಸಬೇಕಾಗಿದೆ, ಒಂದನೇ ತಾರೀಖು ಬನ್ನಿ...?"

ಕರ್ತನೇ ನನ್ನ ಸ್ನೇಹಿತನಾಗಿರುವದರಿಂದ ನಾನು ಮನುಷ್ಯರಿಗೆ ಹೆದರುವುದಿಲ್ಲ. ಅವರ ಜೀವನ ಮತ್ತು ಸಕಲ ಸೃಷ್ಟಿಯೂ ಅವನ ನಿಯಂತ್ರಣಕ್ಕೇ ಒಳಪಟ್ಟಿರುತ್ತದೆ.


(ಏಪ್ರಿಲ್‌ನಲ್ಲಿ ಪ್ರಕಟವಾಗಲಿರುವ ಅನ್ವರ್ ಸಾದಾತರ ಆತ್ಮಚರಿತ್ರೆಯಿಂದ)

ದಿಟ್ಟ ಹೆಜ್ಜೆಯ ಹಿಂದೆ

ಅಧ್ಯಕ್ಷ ಅನ್ವರ್ ಸಾದತ್ ಬಾಹ್ಯ ಜಗತ್ತಿನ ನಿರೀಕ್ಷೆಗೆ ಮೀರಿ, ತನ್ನ ಮಿತ್ರರ ವಿರೋಧವನ್ನು ಎದುರು ಹಾಕಿಕೊಂಡು ಅರಬರ ಕಡು ವೈರಿಯ ಮನೆಗೆ ಹೋಗುವ ಕ್ರಮ ಕೈಕೊಂಡುದರ ಹಿಂದೇನು?

ನಾನೊಂದು ದಿಟ್ಟ ಕ್ರಮಕ್ಕಾಗಿ ಆಲೋಚನೆಮಾಡತೊಡಗಿದೆ. ಇಸ್ರೇಲಿಗಳೊಡನೆ ನಮಗೆ ಭಿನ್ನಾಭಿಪ್ರಾಯ ಇದ್ದೇ ಇದೆ. ಆದರೆ ಅದಕ್ಕಿಂತ ದುರ್ದೈವದ ಸಂಗತಿಯೆಂದರೆ ಅರಬ್ ಪ್ರಪಂಚದಲ್ಲಿ ನಮ್ಮ ನಮ್ಮಲ್ಲೇ ಕ್ರಮಾನುಸಾರಣೆಯ ಬಗ್ಗೆ ಇದ್ದ ಭಿನ್ನಾಭಿಪ್ರಾಯ. ಆದ್ದರಿಂದ ನಾನು ಮೊದಲು ಬೇಗಿನ್ನರಿಗಾದರೂ (ಇಸ್ರೇಲಿನ ಪ್ರಧಾನಮಂತ್ರಿ) ಶಾಂತಿ ನಿಜವಾಗಿ ಬೇಕಾಗಿದೆಯೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಬಯಸಿದೆ. ಅದಕ್ಕಾಗಿ ನಾನು ರುಮೇನಿಯಕ್ಕೆ ಹೋದೆ. ಅಲ್ಲಿಯ ಅಧ್ಯಕ್ಷ ಚ್ಯೂಸೆಸ್ಕು ಅವರೊಡನೆ ಸುದೀರ್ಘ ಚರ್ಚೆ ನಡೆಸಿದೆ. ಅವರು ನಮ್ಮ ನಿಜವಾದ ಸ್ನೇಹಿತರಲ್ಲೊಬ್ಬರು. ಇಸ್ರೇಲಿಗಳಿಗೂ ಅಷ್ಟೇ. "ಬೇಗಿನ್ನರ ಮನಸ್ಸಿನಲ್ಲೇನಿದೆ? ಅವರಿಗೆ ನಿಜವಾಗಿಯೂ ಶಾಂತಿ ಬೇಕಾಗಿದೆಯೇ?" ನಾನವರನ್ನು ಕೇಳಿದೆ. ಹೌದೆಂದು ನನಗವರು ಉತ್ತರವಿತ್ತರು. ಕೆಲವೇ ದಿನಗಳ ಮೊದಲು ಅವರು ಬೇಗಿನ್ನರನ್ನು ಭೆಟ್ಟಿಯಾಗಿದ್ದರು. ಆಗ ಅವರು ನಡೆಸಿದ ಮಾತುಕತೆಗಳ ವಿವರಗಳನ್ನು ನನಗವರು ಹೇಳಿದರು. ಬೇಗಿನ್ನರಿಗೆ ಶಾಂತಿ ಬೇಕಾಗಿದೆಯೆಂಬುದು ಅದರಿಂದ ಅರ್ಥವಾಯಿತು. ನನಗೆ ಇನ್ನು ಒಂದು ಪ್ರಶ್ನೆಯ ಉತ್ತರ ಬೇಕಾಗಿತ್ತು. ಅದೆಂದರೆ ಬೆಗಿನ್ನರ ಬಲಾಬಲಗಳೇನು? ಎಂಬದು. ದುರ್ಬಲ ಸರಕಾರ ಇಲ್ಲವೆ, ದುರ್ಬಲ ನಾಯಕನೊಡನೆ ವ್ಯವಹರಿಸುವದು ನನಗೆ ಇಷ್ಟವಿರಲಿಲ್ಲ. ಚ್ಯೂಸೆಸ್ಕ್ಯು ತಾನು ಬೇಗಿನ್ನರೊಡನೆ ಚರ್ಚಿಸಿದ್ದನ್ನು ವಿವರಿಸಿದರು. ಆಗ ಬೇಗಿನ್ನರಿಗೆ ಬಲಸಾಕಷ್ಟಿದೆಯೆಂದು ನಿರ್ಣಯಿಸಿದೆನು.

ಅಲ್ಲಿಂದ ನಾನು ಇರಾಣಿಗೆ ಹೋದೆ. ನಾನು ಈ ಮೊದಲೇ ಕಾರ್ಟರರಿಗೆ (ಅಮೇರಿಕದ



[೧೧೩ನೇ ಪುಟಕ್ಕೆ ಮುಂದುವರಿದಿದೆ]→

ವಿಜ್ಞಾನ ಆದಿಭೌತಿಕಕ್ಕೆ ಹತ್ತಿರವಾಗುತ್ತಿದೆಯೆ?

ಕಿರ್ಲಿಯನ್ ಫೋಟೋಗ್ರಫಿ ಮತ್ತು ಜೀವಪ್ರಭಾವಲಯ

ಕೆ. ಚಿದಾನಂದ

ಕಪ್ಪು ಬಣ್ಣದ ಹಿನ್ನೆಲೆಯಲ್ಲಿ ನೀಲಿ, ನೇರಳೆ, ಹಳದಿ ಮತ್ತು ಬಂಗಾರದ ಬಣ್ಣದ ಕಿಡಿಗಳು ಮಿನುಗುತ್ತಿವೆ. ಇವುಗಳಲ್ಲಿ ಕೆಲವು ಕಿಡಿಗಳು ಒಂದೇ ಸಮನಾದ ಪ್ರಭೆಯಿಂದೊಡಗೂಡಿ ಹೊಳೆಯುತ್ತಿವೆ: ಕೆಲವು ಕಿಡಿಗಳು ಕ್ಷಣಕ್ಷಣಕ್ಕೂ ಬದಲಾವಣೆ ಹೊಂದುವ ದೀಪ್ತಿಯಿಂದೊಡಗೂಡಿ ಮಿಂಚುತ್ತಿವೆ ; ಇನ್ನೂ ಕೆಲವು ಕಿಡಿಗಳು ಮಿಂಚುಹುಳಗಳಂತೆ ಒಮ್ಮೆ ಆರಿ ತಕ್ಷಣ ಮಿನುಗಲಾರಂಭಿಸುತ್ತವೆ. ಪ್ರಭೆಯನ್ನು ಹೊರ ಸೂಸುವ ಈ ಕಣಸಮೂಹದ ಕೆಲವು ಭಾಗಗಳು ನಿಶ್ಚಲವಾಗಿವೆ; ಇನ್ನುಳಿದ ಭಾಗಗಳು ಚಕ್ರಾಕಾರವಾಗಿ ಸುತ್ತುತ್ತಿವೆ. ಇವುಗಳ ನಡುವೆ ನೂರಾರು ಬಣ್ಣಬಣ್ಣದ ಕಿಡಿಗಳು ಬೆಳಕಿನ ಕಾರಂಜಿಯಂತೆ ಬೆಳಕನ್ನು ಚಿಮ್ಮುತ್ತಿವೆ. ತುಸು ಮಸುಕಾದ ಮೋಡಗಳು ಅಲ್ಲಲ್ಲಿ ಹಗುರವಾಗಿ ತೇಲುತ್ತಿವೆ,

ಇದು ಭಗವಂತನ ವಿಶ್ವರೂಪದ ವರ್ಣನೆಯಲ್ಲ— ಪ್ರತಿಯೊಬ್ಬ ಮನುಷ್ಯನ ದೇಹವನ್ನು ಆವರಿಸಿರುವ ಪ್ರಭಾವಲಯ,

ಸರ್ವತೋ ದೀಪ್ತಿಮಂತಮ್

'ತೇಜೋರಾಶಿಂ ಸರ್ವತೋ ದೀಪ್ತಿಮಂತಮ್' ಎಂದು ಅರ್ಜುನನು ಭಗವಂತನ ವಿಶ್ವರೂಪವನ್ನು ನೋಡಿ ಉದ್ಗರಿಸಿದುದರಲ್ಲಿ ಆಶ್ಚರ್ಯವಿಲ್ಲ. ಏಕೆಂದರೆ ಪ್ರತಿಯೊಂದು ಜೀವಿಯನ್ನೂ ಒಂದು ತೇಜಃಪುಂಜ ವಲಯವು ಆವರಿಸಿಕೊಂಡಿದೆ ಎಂದು ಇಂದು ವೈಜ್ಞಾನಿಕವಾಗಿ ತಿಳಿದುಬಂದಿದೆ. ಮಾನವನ ದೇಹವು ಚರ್ಮದ ಹೊರ ಆವರಣದೊಳಗೆ ಹುದುಗಿರುವ ಎಲವು, ಮಾಂಸ, ರಕ್ತ ಮತ್ತು ನರನಾಡಿಗಷ್ಟೇ ಸೀಮಿತವಾದುದಲ್ಲ. ನಮ್ಮ ಪಂಚೇಂದ್ರಿಯಗಳ ಗ್ರಹಿಕೆಗೆ ಮೀರಿದ ಹಲವು ಊಹಾತೀತ ವಿಸ್ಮಯಕರ ಅಂಶಗಳು ಮಾನವ ದೇಹದಲ್ಲಿ ಹಾಸುಹೊಕ್ಕಾಗಿವೆ. ಇಂತಹ ಹಲವು ವಿಸ್ಮಯಗಳಲ್ಲಿ ಜೀವಪ್ರಭಾವಲಯವೂ ಒಂದು.

ಜೀವಪ್ರಭಾವಲಯವು ಮಾನವ ದೇಹವನ್ನು ಆವರಿಸಿರುವ, ಆದರೆ ಬರಿಯ ಕಣ್ಣಿಗೆ ಕಾಣಿಸದ ಒಂದು ತೇಜಃಪುಂಜ ವಲಯ. ಇದು ಅಂಡಾಕಾರದಲ್ಲಿ ದೇಹವನ್ನು ಆವರಿಸಿದೆ. ಶಿರೋಭಾಗದಲ್ಲಿರುವ ಪ್ರಭಾವಲಯವು ಪಾದಭಾಗದಲ್ಲಿರುವುದಕ್ಕಿಂತ ಹೆಚ್ಚು ಅಗಲವಾಗಿರುತ್ತದೆ. ಇದು ದೇಹದ ಸುತ್ತಲೂ ಸುಮಾರು ಒಂದು ಅಡಿ ದಪ್ಪ ಮತ್ತು ಎರಡು ಪದರುಗಳಲ್ಲಿ ಆವರಿಸಿರುತ್ತದೆ. ದೇಹಕ್ಕೆ ಸಮೀಪವಿರುವ ಒಳ ಪದರವು ಹೆಚ್ಚು

ಪ್ರಭೆಯಿಂದ ಬೆಳಗುತ್ತಿರುತ್ತದೆ. ಹೊರ ಭಾಗದ ಪದರವು ಮಂದಪ್ರಕಾಶವನ್ನು ಹೊಂದಿರುತ್ತದೆ. ಈ ಪದರಗಳ ನಡುವೆ, ಚರ್ಮಕ್ಕೆ ಲಂಬವಾಗಿ, ಅನೇಕ ಬಣ್ಣಬಣ್ಣದ ಕಿಡಿಗಳು ದೇಹದಿಂದ ಹೊರಟು ಹಲವು ಅಂಗುಲಗಳಷ್ಟು ದೂರಕ್ಕೆ ಚಿಮ್ಮಿ ಅದೃಶ್ಯವಾಗುತ್ತವೆ.

ಈ ಪ್ರಭಾವಲಯವು ಪ್ರತಿಯೊಬ್ಬ ಮನುಷ್ಯ ಮತ್ತು ಪ್ರತಿಯೊಂದು ಜೀವಿಯನ್ನು ಆವರಿಸಿರುವುದಾದರೂ ಇದು ಸಾಮಾನ್ಯ ಜನರಿಗೆ ಬರಿಯ ಕಣ್ಣಿಗೆ ಕಾಣಿಸುವುದಿಲ್ಲ. ಆದರೆ ಸಮರ್ಥರಾದ ಯೋಗಿಗಳಿಗೆ ಇದು ಬರಿಯ ಕಣ್ಣಿಗೇನೇ ಕಾಣಿಸುತ್ತದಂತೆ, ಇದು ಎಷ್ಟರ ಮಟ್ಟಿಗೆ ನಿಜವೋ ಗೊತ್ತಿಲ್ಲ. ಆದರೆ ಕಿರ್ಲಿಯನ್ ಫೋಟೋಗ್ರಫಿಯ ಮೂಲಕ ಪ್ರಭಾವಲಯದ ಛಾಯಾಚಿತ್ರವನ್ನು ತೆಗೆಯುವುದಂತೂ ಸಾಧ್ಯ.

ಚಿತ್ರವಿಚಿತ್ರವೀ ಛಾಯಾಚಿತ್ರ

ಕಿರ್ಲಿಯನ್ ಫೋಟೋಗ್ರಫಿಯು ಒಂದು ವಿಶಿಷ್ಟವಾದ ಮತ್ತು ಕೌತುಕಪೂರ್ಣವಾದ ಛಾಯಾಚಿತ್ರಗ್ರಹಣ ವಿಧಾನ. ಇದನ್ನು ಕಂಡು ಹಿಡಿದ (೧೯೩೯) ಕೀರ್ತಿಯು ರಶಿಯದ ಸೆಮಿಯಾನ್ ಕಿರ್ಲಿಯನ್ ಹಾಗೂ ಅವನ ಪತ್ನಿ ವೇಲೆಂಟೀನಾಗೆ ಸಲ್ಲುತ್ತದೆ. ಆದರೆ ಆಗ ಕಿರ್ಲಿಯನ್ ಸಂಶೋಧನಾವೃತ್ತಿಯಲ್ಲಿರಲಿಲ್ಲ. ಅವನು ಒಬ್ಬ ಸಾಮಾನ್ಯ ವಿದ್ಯುತ್ ಕೆಲಸಗಾರನಾಗಿದ್ದ. ವಿದ್ಯುತ್ ಉಪಕರಣಗಳನ್ನು ಜೋಡಿಸುವುದು, ಪರೀಕ್ಷಿಸುವುದು ಮತ್ತು ಅವುಗಳನ್ನು ನಿರ್ವಹಿಸುವುದು ಅವನ ಉದ್ಯೋಗವಾಗಿತ್ತು. ೧೯೩೯ ರಲ್ಲಿ ಒಂದು ದಿನ ವಿಶ್ವವಿದ್ಯಾನಿಲಯವೊಂದರ ಒಂದು ವಿದ್ಯುತ್ ಚಿಕಿತ್ಸಾ ಉಪಕರಣದ ದುರಸ್ತಿಗಾಗಿ ಕಿರ್ಲಿಯನ್ನನಿಗೆ ಕರೆ ಹೋಯಿತು. ಕಿರ್ಲಿಯನ್ ಅಲ್ಲಿಗೆ ಹೋಗಿ ಅದನ್ನು ಸರಿಪಡಿಸಿದನು. ಸ್ವಲ್ಪ ಹೊತ್ತಿನ ಬಳಿಕ ಒಬ್ಬ ರೋಗಿಗೆ ಆ ಉಪಕರಣದ ಸಹಾಯದಿಂದ ಚಿಕಿತ್ಸೆ ನೀಡಲಾಯಿತು. ಈ ಚಿಕಿತ್ಸೆ ನಡೆಯುತ್ತಿರುವಾಗ ಆ ಉಪಕರಣದ ಎಲೆಕ್ಟ್ರೋಡುಗಳ ನಡುವೆ ಕಿಡಿಗಳು ಹಾರುವುದು ಅಲ್ಲೇ ಇದ್ದ ಕಿರ್ಲಿಯನ್ನನಿಗೆ ಸೋಜಿಗವನ್ನು ಉಂಟುಮಾಡಿತು. ಎಲೆಕ್ಟ್ರೋಡುಗಳ ನಡುವೆ ನೆಗೆಯುವ ಕಿಡಿಗಳ ಸಹಾಯದಿಂದ ಛಾಯಾಚಿತ್ರ ತೆಗೆಯುವುದು ಸಾಧ್ಯವಾಗಲಾರದೆ? ಎಂದು ಅವನು ಯೋಚಿಸಲಾರಂಭಿಸಿದ. ಹಾಗೆ ಛಾಯಾಚಿತ್ರ ತೆಗೆಯುವುದು ಸಾಧ್ಯ ; ಅಲ್ಲದೇ ಹಾಗೆ ಛಾಯಾಚಿತ್ರ ತೆಗೆಯಲು ಛಾಯಾಚಿತ್ರ ಗ್ರಾಹಕವೂ ಬೇಕಾಗುವುದಿಲ್ಲವೆಂದು ಆತ ಪ್ರಾಯೋಗಿಕವಾಗಿ ಕಂಡುಕೊಂಡ. ಬೆರಳಿನ ಕಿರ್ಲಿಯನ್ ಛಾಯಾಚಿತ್ರ ಪಡೆಯಲು ಎಲೆಕ್ಟ್ರೋಡು ಮತ್ತು ಬೆರಳುಗಳ ನಡುವೆ ಫೋಟೋಗ್ರಾಫಿಕ್ ಫಿಲ್ಮನ್ನು ಇಟ್ಟರೆ ಸಾಕಾಗುತ್ತಿತ್ತು. ಅಧಿಕ ಆವರ್ತನಾಂಕದ ವಿದ್ಯುತ್ ಕಿಡಿಯು ಎಲೆಕ್ಟ್ರೋಡು ಮತ್ತು ಬೆರಳುಗಳ ನಡುವೆ ಚಿಮ್ಮಿದಾಗ ಬೆರಳಿನ ಕಿರ್ಲಿಯನ್ ಚಿತ್ರ ಚುಕ್ಕಿ ಮತ್ತು ಗೆರೆಗಳ ರೂಪದಲ್ಲಿ ಫಿಲ್ಮಿನಲ್ಲಿ ಮೂಡುತ್ತಿತ್ತು, ಈ ರೀತಿಯ ಛಾಯಾಚಿತ್ರವನ್ನು ಪರಿಷ್ಕರಿಸಲು ಕಿರ್ಲಿಯನ್ ಮತ್ತು ಅವನ ಪತ್ನಿ ೨೫ ವರ್ಷಗಳ ಕಾಲ ಹೆಣಗಬೇಕಾಯಿತು. ಅವರ ನಿರಂತರ ಪರಿಶ್ರಮಕ್ಕೆ ೧೯೬೪ ರಲ್ಲಿ ಯಶಸ್ಸು ದೊರಕಿತು. ಕಿರ್ಲಿಯನ್ ಛಾಯಾಚಿತ್ರ ತಂತ್ರವನ್ನು ಪರಿಷ್ಕರಿಸುವುದರಲ್ಲಿ ಅವರು ಕೃತಕೃತ್ಯರಾದರು. ಇಂದು ರಶಿಯ ಮತ್ತು ಅಮೇರಿಕಗಳಲ್ಲಿ ಪರಿಷ್ಕೃತವಾದ ಕಿರ್ಲಿಯನ್ ಛಾಯಾಗ್ರಾಹಕಗಳು ದೊರೆಯುತ್ತವೆ. ಪರಮಾಣು ಹಾಗೂ ಪ್ರಾಣಿ ಶಾಸ್ತ್ರಗಳ ಸಂಶೋಧನಾ ಕೇಂದ್ರಗಳಲ್ಲಿ ಈ ಛಾಯಾಗ್ರಾಹಕಗಳು ಇಂದು ಬಳಸಲ್ಪಡುತ್ತಿವೆ. ತಿರುಪತಿಯಲ್ಲಿರುವ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಯೋಗ ಎಂಡ್ ಅಲೈಡ್ ಸೈನ್ಸಸ್'ನಲ್ಲೂ ಒಂದು ಕಿರ್ಲಿಯನ್ ಛಾಯಾಗ್ರಾಹಕವಿದೆ.

ಈಗ ಕಿರ್ಲಿಯನ್ ಛಾಯಾಗ್ರಾಹಕ ಹೇಗಿರುತ್ತದೆಂಬ ಪ್ರಶ್ನೆ ಸ್ವಾಭಾವಿಕವಾಗಿಯೇ ನಿಮ್ಮಲ್ಲಿ ಮೂಡಬಹುದು. ಅದರ ರಚನೆ ಹೀಗೆ : ಇದರಲ್ಲಿ ೭೫೦೦೦ ದಿಂದ ೧೦೦,೦೦೦ ಹರ್ಟ್ಸ್ ಆವರ್ತನಾಂಕದ ವಿದ್ಯುಚ್ಛಕ್ತಿಯನ್ನು ಉಂಟುಮಾಡುವ ಒಂದು ಸಂಕೇತ ಜನಕ (Signal generator) ಇರುತ್ತದೆ. ಈ ಉನ್ನತ ಆವರ್ತನಾಂಕದ ವಿದ್ಯುಚ್ಛಕ್ತಿಯು ಪ್ರಮಾಣ-

ದಲ್ಲಿ ವರ್ಧಿಸಲ್ಪಟ್ಟು ಒಂದು ಪವರ್ ಆ್ಯಂಪ್ಲಿಫಯರಿನ ಮೂಲಕ ಸತ್ವಯುತವಾಗಿ ಮಾಡಲ್ಪಟ್ಟು, ಒಂದು ಫೆರೈಟ್ ಪರಿವರ್ತಕಕ್ಕೆ ನೀಡಲ್ಪಡುತ್ತದೆ. ಈ ಪರಿವರ್ತಕವು ಉನ್ನತ ಆವರ್ತನಾಂಕದ ಮತ್ತು ೧೦,೦೦೦ ದಿಂದ ೧೫,೦೦೦ ವೋಲ್ಟ್ ಒತ್ತಡದ ವಿದ್ಯುಚ್ಛಕ್ತಿಯನ್ನು ನೀಡುತ್ತದೆ. ಈ ಉನ್ನತ ವೋಲ್ಟೇಜು ಕಿರ್ಲಿಯನ್ ಛಾಯಾಗ್ರಾಹಕದ ಎಲೆಕ್ಟ್ರೋಡುಗಳಿಗೆ ಕೊಡಲ್ಪಡುತ್ತದೆ. ಛಾಯಾಚಿತ್ರವನ್ನು ಪಡೆಯಲು ಕಿರ್ಲಿಯನ್ ಛಾಯಾಗ್ರಾಹವನ್ನು ಕತ್ತಲ ಕೋಣೆಯಲ್ಲಿ ಬಳಸಬೇಕಾಗುತ್ತದೆ. ಫಿಲ್ಮಿನ ಒಳ ಭಾಗವು ಬೆರಳಿನತ್ತ ಮುಖ ಮಾಡಿರುವಂತೆ ಮಾಡಿ ಎಲೆಕ್ಟ್ರೋಡುಗಳ ನಡುವೆ ಅಧಿಕ ಆವರ್ತನಾಂಕದ ಮತ್ತು ಅಧಿಕ ಒತ್ತಡದ ಕಿಡಿ ಹಾರುವಂತೆ ಮಾಡುವುದರಿಂದ ಬೆರಳಿನ ಕಿರ್ಲಿಯನ್ ಛಾಯಾಚಿತ್ರವು ದೊರೆಯುತ್ತದೆ

ಕುಂಡಲಿನಿ ಯೋಗಕ್ಕೆ ಸಮರ್ಥನೆ

ಕಿರ್ಲಿಯನ್ ಛಾಯಾಚಿತ್ರದ ಮೂಲಕ ಜೀವ ಪ್ರಭಾವಲಯವು ಮೊದಲ ಬಾರಿಗೆ ಚಿತ್ರಿಸಲ್ಪಟ್ಟಿತ್ತು, ಎಂಬುದೇನೋ ನಿಜ. ಆದರೆ ಈ ಜೀವ ಪ್ರಭಾವಲಯದ ಅಸ್ತಿತ್ವವು ಭಾರತೀಯ ಯೋಗಿಗಳಿಗೆ ಬಹಳ ಹಿಂದೆಯೇ ಪರಿಚಿತವಿತ್ತು. ಕುಂಡಲಿನಿ ಯೋಗಶಾಸ್ತ್ರವು ಈ ಜೀವ ಪ್ರಭಾವಲಯವನ್ನು ಕುರಿತು ಉಲ್ಲೇಖಿಸುವುದು ಮಾತ್ರವಲ್ಲದೆ ಈ ಪ್ರಭಾವಲಯದಲ್ಲಿ ಆರು ವಿಶಿಷ್ಟ ಚಕ್ರಗಳಿವೆ ಎನ್ನುತ್ತದೆ. ಜೀವಪ್ರಭಾವಲಯದೊಳಗೆ ಶಿರೋಭಾಗದಲ್ಲಿ ಅಜ್ಞಚಕ್ರ, ಕಂಠಭಾಗದಲ್ಲಿ ವಿಶುದ್ಧ ಚಕ್ರ, ಎದೆಯ ಭಾಗದಲ್ಲಿ ಅನಾಹತ ಚಕ್ರ, ಹೊಟ್ಟೆಯ ಭಾಗದಲ್ಲಿ ಮಣಿಪೂರ ಚಕ್ರ, ಜಘನ ಭಾಗದಲ್ಲಿ ಸ್ವಾದಿಶಾನ ಚಕ್ರ ಮತ್ತು ಲೈಂಗಿಕ ಭಾಗದಲ್ಲಿ ಮೂಲಾಧಾರ ಚಕ್ರಗಳು ಇರುತ್ತವೆ ಎನ್ನುತ್ತದೆ ಕುಂಡಲಿನಿ ಯೋಗಶಾಸ್ತ್ರ. ಮೂಲಾಧಾರ ಚಕ್ರ ಭಾಗದಲ್ಲಿ ಸುಪ್ತವಾಗಿರುವ ಕುಂಡಲಿನಿ ಶಕ್ತಿಯನ್ನು ಜಾಗ್ರತಗೊಳಿಸಿ, ಅದು ನಡುವಣ ಚಕ್ರಗಳ ಮಜಲುಗಳನ್ನೇರಿ ಮತ್ತೆ ಅವುಗಳನ್ನು ದಾಟಿ, ಕೊನೆಗೆ ಅಜ್ಞಚಕ್ರವನ್ನು ತಲುಪಿದಾಗ ಕುಂಡಲಿನಿ ಸಿದ್ಧಿಯಾಯಿತು ಎನ್ನುತ್ತಾರೆ. ಹೀಗೆ ಕುಂಡಲಿನಿ ಸಿದ್ಧಿಯನ್ನು ಪಡೆದವನು ಅಲೌಕಿಕ ಶಕ್ತಿಗಳನ್ನು ಹೊಂದಿರುತ್ತಾನೆ ಎನ್ನುತ್ತದೆ ಕುಂಡಲಿನಿ ಯೋಗಶಾಸ್ತ್ರ. ಕಿರ್ಲಿಯನ್ ಸಂಶೋಧನೆಯ ಬೆಳಕಿನಲ್ಲಿ ಕುಂಡಲಿನಿ ಯೋಗಶಾಸ್ತ್ರಕ್ಕೆ ಸಮರ್ಥನೆ ದೊರಕಿದೆ.

ಪ್ರೀತಿ, ಕೋಪ, ಮತ್ಸರ, ವಶೀಕರಣ, ಧ್ಯಾನ ಮೊದಲಾದುವುಗಳಿಂದಾಗಿ ಮಾನವನ ಪ್ರಜ್ಞೆಯ ಸ್ತರಗಳು ಬದಲಾದಂತೆ ಕಿರ್ಲಿಯನ್ ಛಾಯಾಚಿತ್ರವೂ ಬದಲಾವಣೆ ಹೊಂದುವುದು ಎನ್ನುವುದು ಪ್ರಾಯೋಗಿಕವಾಗಿ ಸಿದ್ಧವಾಗಿದೆ. ಒಂದು ಜೀವಕ್ಷೇತ್ರವು ಇನ್ನೊಂದು ಜೀವಕ್ಷೇತ್ರದೊಡನೆ ಬೆರೆಯಬಲ್ಲುದು ಮತ್ತು ಭಾವೋದ್ರೇಕಗಳು ದೇಹಸ್ಪರ್ಶವಿಲ್ಲದಿದ್ದರೂ ಜೀವಕ್ಷೇತ್ರದ ಮೂಲಕ ಒಬ್ಬನಿಂದ ಇನ್ನೊಬ್ಬನಿಗೆ ವರ್ಗಾಯಿಸಲ್ಪಡುವವು. ಕೋಪೋದ್ರಿಕ್ತನಾದ ವ್ಯಕ್ತಿಯೊಬ್ಬನ ಬೆರಳಿನ ತುದಿಯಿಂದ ಹಾರಿದ ಕೆಂಪು ಕಿಡಿಯೊಂದು ಆ ವ್ಯಕ್ತಿಯ ಸಮೀಪ ನಿಂತಿದ್ದ ಇನ್ನೊಬ್ಬ ವ್ಯಕ್ತಿಯ ಬೆರಳಿನ ಜೀವಪ್ರಭಾವಲಯದಿಂದ ಆಕರ್ಷಿಸಲ್ಪಟ್ಟು ಅದರಲ್ಲಿ ಬೆರೆತುಹೋದುದನ್ನು ಚಿತ್ರಿಸಿದ ಕಿರ್ಲಿಯನ್ ಛಾಯಾಚಿತ್ರದಿಂದ ಇದು ಸಿದ್ಧವಾಗಿದೆ.

ಭೂತದ ಅಭೂತಪೂರ್ವ ಚಿತ್ರ

ಮನುಷ್ಯನು ಕಣ್ಣಿಗೆ ಕಾಣಿಸುವ ಸ್ಥೂಲಶರೀರಕ್ಕಷ್ಟೇ ಸೀಮಿತನಲ್ಲ; ಅವನು ಒಂದು ಸೂಕ್ಷ್ಮಶರೀರವನ್ನೂ ಹೊಂದಿದ್ದಾನೆ ಎಂಬುದು ಹಲವರ ನಂಬಿಕೆ. ಮಾನವಶರೀರವು ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ ಕೋಶಗಳಿಂದಾಗಿದೆ ಎಂದು ಭಾರತೀಯ ಶಾಸ್ತ್ರಗಳು ಹೇಳುತ್ತವೆ. ಮನುಷ್ಯನು ಸತ್ತಾಗ ಭೌತಿಕ ಶರೀರ ಮಾತ್ರ ನಾಶಹೊಂದುತ್ತದೆ; ಆದರೆ ಭೌತಿಕ ಶರೀರವನ್ನೇ ಹೋಲುವ ಅಗೋಚರ ಸೂಕ್ಷ್ಮಶರೀರವು ನಾಶ ಹೊಂದುವುದಿಲ್ಲ ಎಂದು ಹೇಳಲಾಗುತ್ತದೆ. ಈ ಸೂಕ್ಷ್ಮಶರೀರಗಳು ಭೂತಪ್ರೇತಗಳಾಗಿ ಕಾಣಿಸಿಕೊಳ್ಳುತ್ತವೆ ಎಂದೂ

ಹಲವರು ನಂಬುತ್ತಾರೆ.

ಕಾಲುಗಳನ್ನು ಕಳೆದುಕೊಂಡವರು ಕೆಲವರು ಮೊದಲು ಕಾಲ್ಬೆರಳಿದ್ದ ಸ್ಥಾನದಲ್ಲಿ ತುರಿಕೆಯಾಗುತ್ತದೆ ಎಂದು ಹೇಳುವುದಿದೆ. ಇದು ಸೂಕ್ಷ್ಮಶರೀರದ ಇರುವಿಕೆಗೆ ಸಮರ್ಥನೆ ಎಂದು ಕೆಲವರು ವಾದಿಸಬಹುದು. ಆದರೆ ಹೀಗೆ ತುರಿಕೆಯಾಗುವುದು ಸೂಕ್ಷ್ಮಶರೀರದ ಅಸ್ತಿತ್ವದಿಂದಾಗಿಯಲ್ಲ; ಮಿದುಳಿನಲ್ಲಿ ಹಳೆಯ ಸಂವೇದನೆಯು ಮರುಕಳಿಸಿ ಅಂತಹ ಅನುಭವವಾಗುವ ಸಾಧ್ಯತೆಯಿದೆ ಎಂದು ದೇಹಶಾಸ್ತ್ರಪರಿಣತರು ಉತ್ತರಿಸಬಹುದು. ಆದರೆ ಅತೀಂದ್ರಿಯ ಶಕ್ತಿಸಂಪನ್ನರು ಕೆಲವರು ತಾವು ಬರಿಯ ಕಣ್ಣಿನಿಂದ ಸೂಕ್ಷ್ಮಶರೀರವನ್ನು ನೋಡಬಲ್ಲೆವು ಎನ್ನುತ್ತಾರೆ. ಅವರ ಮಾತುಗಳು ದಿಟವಾಗಿರುವ ಸಾಧ್ಯತೆಯಿದೆ. ಏಕೆದಂರೆ ಗಿಡ, ಮರ, ಎಲೆಗಳು ಕೂಡ ಸೂಕ್ಷ್ಮಶರೀರವನ್ನು ಹೊಂದಿರಬಹುದು ಎಂಬುದು ಕಿರ್ಲಿಯನ್ ಛಾಯಾಚಿತ್ರಗಳನ್ನು ಪರಿಶೀಲಿಸಿದಾಗ ವ್ಯಕ್ತವಾಗುತ್ತದೆ. ಗಿಡದಲ್ಲಿರುವ ಆರೋಗ್ಯಯುತವಾದ ಹಸಿರೆಲೆಯ ಕಿರ್ಲಿಯನ್ ಛಾಯಾಚಿತ್ರವನ್ನು ತೆಗೆದಾಗ ಆ ಎಲೆಯ ಅಂಚುಗಳ ಸುತ್ತ ಮತ್ತು ನರಮಂಡಲಗಳ ಮೂಲಕ ಪ್ರಭೆಯು ಹೊರಸೂಸುವುದನ್ನು ಕಾಣಬಹುದು. ಅದೇ ಎಲೆಯ ಅರ್ಧಭಾಗವನ್ನು ಕತ್ತರಿಸಿಹಾಕಿ ಅದರ ಕಿರ್ಲಿಯನ್ ಚಿತ್ರ ತೆಗೆದಾಗಲೂ ಇಡೀ ಎಲೆಯ ಕಿರ್ಲಿಯನ್ ಚಿತ್ರ ಕಾಣಿಸಿಕೊಳ್ಳುವುದು. ಎಲೆಯ ಅರ್ಧಭಾಗವನ್ನು ಕತ್ತರಿಸಿ ಬಿಸುಟಿಲ್ಲವೇನೋ ಎಂಬ ಭ್ರಮೆ ಪ್ರಯೋಗಕರ್ತನಿಗೆ ಉಂಟಾಗುವುದು. ಇದು ವಿಜ್ಞಾನಿಗಳಿಗೆ ವಿಸ್ಮಯವನ್ನುಂಟುಮಾಡಿದೆ.

ಅಕ್ಯುಪಂಕ್ಚರಿನ ರಹಸ್ಯ

'ಅಕ್ಯುಪಂಕ್ಚರ್' ಎಂಬುದರ ಶಬ್ದಾರ್ಥ ಸೂಜಿಯಿಂದ 'ಚುಚ್ಚುವುದು' ಎಂದು. ಇದು ಚೀನದ ಒಂದು ವಿಶಿಷ್ಟ ವೈದ್ಯಕೀಯ ವಿಧಾನ. ರೋಗಿಯೊಬ್ಬನ ದೇಹದ ನಿರ್ದಿಷ್ಟ ಭಾಗಗಳನ್ನು ಸೂಜಿಯಿಂದ ಚುಚ್ಚುವುದರ ಮೂಲಕ ರೋಗವನ್ನು ಗುಣಪಡಿಸುವುದು ಸಾಧ್ಯ ಎನ್ನುತ್ತದೆ ಈ ವೈದ್ಯವಿಧಾನ. ಅಲ್ಲದೆ ಅಕ್ಯುಪಂಕ್ಚರ್ ಮಾಡುವುದರ ಮೂಲಕ ಕಠಿಣವಾದ ಶಸ್ತ್ರಕ್ರಿಯೆಗಳನ್ನು ಅರಿವಳಿಕೆಗಳ ಬಳಕೆಯಿಲ್ಲದೆ ನಿರ್ವಹಿಸಬಹುದು ಎನ್ನುವುದನ್ನು ಚೀನದ ಅಕ್ಯುಪಂಕ್ಚರ್ ತಜ್ಞರು ಸಾಧಿಸಿತೋರಿಸಿದ್ದಾರೆ. ಅಕ್ಯುಪಂಕ್ಚರಿನ ಬಳಕೆ ಮತ್ತು ಪ್ರಯೋಜನಗಳು ಬಹಳ ಕಾಲದಿಂದ ಪ್ರಚಲಿತವಿದ್ದರೂ ಅದು ಹೇಗೆ ಕಾರ್ಯನಿರ್ವಹಿಸುತ್ತದೆ ಎನ್ನುವುದು ಒಂದು ರಹಸ್ಯವಾಗಿಯೆ ಉಳಿದಿತ್ತು. ಅಕ್ಯುಪಂಕ್ಚರ್ ಮತ್ತು ಜೀವಪ್ರಭಾವಲಯಗಳ ನಡುವೆ ನೇರವಾದ ಸಂಬಂಧವಿದೆ ಎಂಬುದನ್ನು ತೋರಿಸಿ ಕೊಟ್ಟ ಕೀರ್ತಿ ರಶಿಯದ ಶಸ್ತ್ರವೈದ್ಯನಾದ ಮಿಖಾಯಿಲ್ ಗೈಕಿನ್ನನಿಗೆ ಸಲ್ಲುತ್ತದೆ. ಒಮ್ಮೆ ಕಿರ್ಲಿಯನ್ನನ ಪ್ರಯೋಗಶಾಲೆಯನ್ನು ಸಂದರ್ಶಿಸಿದಾಗ ಆತ ಅಲ್ಲಿ ತನ್ನ ಕೈಯ ಪ್ರಭಾವಲಯವನ್ನು ಸೂಕ್ಷ್ಮವಾಗಿ ಪರೀಕ್ಷಿಸತೊಡಗಿದ. ಕೈಯ ವಿವಿಧ ಭಾಗಗಳಿಂದ ಪ್ರಭೆಯನ್ನು ಸೂಸುವ ಕಿಡಿಗಳು ಹಾರುತ್ತಿದ್ದವು. ಹಾಗೆ ಕಿಡಿಗಳು ಹೊರಹೊಮ್ಮುವ ಭಾಗವು ಯಾವುದೇ ರಕ್ತನಾಳ ಇಲ್ಲವೇ ನರವು ಕೊನೆಗೊಳ್ಳುವ ಸ್ಥಳಕ್ಕೆ ಅನುಗುಣವಾಗಿರಲಿಲ್ಲ. ಹಾಗಾದರೆ ಕಿಡಿಯು ಹೊರಹೊಮ್ಮುವ ಸ್ಥಳದ ವೈಶಿಷ್ಟ್ಯವೇನಿರಬಹುದು? ಆಗ ಅವನಿಗೆ ಹಿಂದೆ ತಾನು ಅಕ್ಯುಪಂಕ್ಚರ್ ಮಾಡಲು ಕಲಿತುದು ಜ್ಞಾಪಕ್ಕೆ ಬಂತು. ಅಕ್ಯುಪಂಕ್ಚರ್ ಮಾಡುವ ಸ್ಥಳ ಮತ್ತು ಪ್ರಭಾವಲಯದಲ್ಲಿ ಕಿಡಿಗಳು ಹಾರುವ ಸ್ಥಳಗಳು ಒಂದೇ ಆಗಿರುವುದನ್ನು ಅವನು ಗಮನಿಸಿದನು. ಇದರ ನಿಜಾಂಶವನ್ನರಿಯಲು ಅವನು ಲೆನಿನ್‌ಗ್ರಾಡಿಗೆ ಹಿಂದಿರುಗಿದ ಬಳಿಕ, ಅಕ್ಯುಪಂಕ್ಚರಿನ ನಕಾಶೆಯೊಂದನ್ನು ಕಿರ್ಲಿಯನ್ನನಿಗೆ ಕಳುಹಿಸಿ ತನ್ನ ಅನುಮಾನವನ್ನು ವ್ಯಕ್ತಪಡಿಸಿದನು. ಕಿರ್ಲಿಯನ್ನನು ಅಕ್ಯುಪಂಕ್ಚರಿನ ನಕಾಶೆಯಲ್ಲಿ ಸೂಜಿ ಚುಚ್ಚುವ ಸ್ಥಳ ಮತ್ತು ಪ್ರಭಾವಲಯದಲ್ಲಿ ಕಿಡಿಗಳು ಹಾರುವ ಸ್ಥಳ ಇವುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಅವುಗಳೆರಡೂ ಒಂದೇ ಎಂಬುದನ್ನು ಗೈಕಿನ್ನನಿಗೆ ತಿಳಿಸಿದನು. ಆ ಬಳಿಕ ಗೈಕಿನ್ ಮತ್ತು ಕಿರ್ಲಿಯನ್ ಜೊತೆಗೆ ಕೆಲಸಮಾಡಿ ಟೊಬಿಸ್ಕೋಪ್ ಎಂಬ ಎಲೆಕ್ಟ್ರಾನಿಕ್ ಉಪಕರಣವೊಂದನ್ನು

ತಯಾರಿಸಿದರು. ಪ್ರಭಾವಲಯದ ಕಿಡಿಗಳು ದೇಹದ ಯಾವ ನಿರ್ದಿಷ್ಟ ಭಾಗದಿಂದ ಹಾರುತ್ತವೆ ಎಂಬುದನ್ನು ಈ ಯಂತ್ರವು ಸರಿಯಾಗಿ ಗುರುತಿಸಬಲ್ಲದು.

ಹಸಿರು ರೋಗಿಗಳು !

ಒಮ್ಮೆ ವೈಜ್ಞಾನಿಕ ಸಂಶೋಧನಾಲಯದ ಹಿರಿಯ ಅಧಿಕಾರಿಗಳೊಬ್ಬರು ಕಿರ್ಲಿಯನ್ ಪ್ರಯೋಗಶಾಲೆಯನ್ನು ಸಂದರ್ಶಿಸಲು ಬರುವಾಗ ಒಂದೇ ಜಾತಿಯ ಎರಡು ಗಿಡಗಳ ಎರಡು ಎಲೆಗಳನ್ನು ತಂದಿದ್ದರು. ಕಿರ್ಲಿಯನ್ ದಂಪತಿಗಳು ಆ ಎಲೆಗಳ ಚಿತ್ರಗಳನ್ನು ಪ್ರತ್ಯೇಕವಾಗಿ ತೆಗೆದು ಪರೀಕ್ಷಿಸಿ ಬಹಳ ಆಶ್ಚರ್ಯಪಟ್ಟರು. ಕಾರಣ ಆ ಎರಡು ಚಿತ್ರಗಳು ಒಂದನ್ನೊಂದು ಸ್ವಲ್ಪವೂ ಹೋಲುತ್ತಿರಲಿಲ್ಲ. ಆ ಎರಡೂ ಎಲೆಗಳು ಒಂದೇ ಜಾತಿಯ ಗಿಡಗಳಿಂದ ಬಂದುದಾದ್ದರಿಂದ ಅವರ ಹಿಂದಿನ ಪರಿಶೋಧನೆಗಳ ಫಲಿತಾಂಶಗಳ ಆಧಾರದ ಮೇಲೆ ಅವುಗಳೆರಡರ ಚಿತ್ರಗಳು ಒಂದೇ ತೆರನಾಗಿರಬೇಕಿತ್ತು. ಹಾಗಿಲ್ಲದಿರುವುದು ಅವರಿಗೆ ಅಚ್ಚರಿಯುಂಟುಮಾಡಿತು. ಅವರು ಬಳಸಿದ ಉಪಕರಣಗಳೇನಾದರೂ ಕೆಟ್ಟು ಹೋಗಿರುವುವೇ ? ಅಥವಾ ಚಿತ್ರ ಪಡೆಯಲು ಅನುಸರಿಸಿದ ವಿಧಾನದಲ್ಲಿ ಅವರೇನಾದರೂ ತಪ್ಪನ್ನು ಮಾಡಿದ್ದಾರೆಯೆ ? ಕಿರ್ಲಿಯನ್ ದಂಪತಿಗಳು ರಾತ್ರಿಯಲ್ಲಿ ಆ ಎರಡು ಎಲೆಗಳನ್ನು ಕುರಿತಾದ ಸಂಶೋಧನೆಯನ್ನು ಮುಂದುವರಿಸಿದರು. ಏನು ಮಾಡಿದರೂ ಆ ಎರಡು ಎಲೆಗಳ ಚಿತ್ರಗಳು ವಿಭಿನ್ನವಾಗಿಯೇ ಕಂಡುಬರುತ್ತಿದ್ದವು. ಆ ಎಲೆಗಳನ್ನು ಕೊಟ್ಟಿದ್ದ ಹಿರಿಯ ಅಧಿಕಾರಿಗಳು ಮರುದಿನ ಬೆಳಗ್ಗೆ ಪ್ರಯೋಗಶಾಲೆಗೆ ಬಂದಾಗ ಕಿರ್ಲಿಯನ್ ದಂಪತಿಗಳು ತಮ್ಮ ಪ್ರಯೋಗದ ಫಲಿತಾಂಶದಲ್ಲಿ ಕಂಡುಬಂದ ವೈಲಕ್ಷಣ್ಯವನ್ನು ವಿವರಿಸಿದರು. ಅವರು ವಿವರಿಸುತ್ತಿದ್ದಂತೆ ಆ ಹಿರಿಯ ಅಧಿಕಾರಿಗಳ ಮುಖ ಹೆಚ್ಚುಚ್ಚು ಪ್ರಫುಲ್ಲವಾಗತೊಡಗಿತು. ಕಿರ್ಲಿಯನ್‌ರ ಮಾತು ಮುಗಿಯುತ್ತಿದ್ದಂತೆ, ಆ ಹಿರಿಯ ಅಧಿಕಾರಿಗಳು, "ನೀವು ಪತ್ತೆಮಾಡಿದಿರಿ ! ಆ ಎರಡೂ ಎಲೆಗಳು ಒಂದೇ ಜಾತಿಯ ಗಿಡವು ಎಂಬುದೇನೋ ನಿಜ. ಆದರೆ ಅವುಗಳಲ್ಲಿ ಒಂದು ಎಲೆ ಆರೋಗ್ಯಯುತವಾದ ಗಿಡದಿಂದ ಕೊಯ್ಯಲ್ಪಟ್ಟದ್ದು. ಇನ್ನೊಂದು ರೋಗಿಷ್ಟವಾದ ಗಿಡದಿಂದ ಬಂದದ್ದು. ಬೇರೆ ಯಾವ ವಿಧಾನದಿಂದಲೂ ಆ ಎರಡು ಎಲೆಗಳ ನಡುವಿರುವ ವ್ಯತ್ಯಾಸವನ್ನು ಅರಿಯಲು ನಮಗೆ ಸಾಧ್ಯವಾಗಲಿಲ್ಲ. ಆದರೆ ನೀವಿಂದು ಆ ಕಾರ್ಯದಲ್ಲಿ ಸಫಲರಾಗಿದ್ದೀರಿ, ಗಿಡಗಳಲ್ಲಿ ರೋಗವು ಕಾಣಿಸಿಕೊಳ್ಳುವ ಮೊದಲೇ ಅದರ ಪೂರ್ವಸೂಚನೆಯನ್ನು ನಿಮ್ಮ ಚಿತ್ರಗಳು ಕೊಡಬಲ್ಲವು," ಎಂದು ಉದ್ಗರಿಸಿದರು. ಈ ಹೊಸ ವಿಧಾನದಿಂದ ಸಸ್ಯಗಳಿಗೆ ತಗಲಬಹುದಾದ ರೋಗಗಳನ್ನು ಮೊದಲೇ ಪತ್ತೆಹಚ್ಚಿ ರೋಗಗಳನ್ನು ನಿವಾರಿಸಲು ಸಾಧ್ಯವಾದದ್ದರಿಂದ ರಶಿಯದ 'ಹಸಿರು ಕ್ರಾಂತಿ'ಗೆ ಅದೊಂದು ವರವಾಗಿ ಪರಿಣಮಿಸಿತು.

ರೋಗದ ಮುನ್ಸೂಚನೆ

ಒಂದು ದಿನ ಕಿರ್ಲಿಯನ್ ದಂಪತಿಗಳು ಮಾಸ್ಕೋ ಇನ್‌ಸ್ಟಿಟ್ಯೂಟಿನಿಂದ ಇಬ್ಬರು ವಿಜ್ಞಾನಿಗಳ ಬರವನ್ನು ನಿರೀಕ್ಷಿಸುತ್ತಿದ್ದರು. ಗಣ್ಯವ್ಯಕ್ತಿಗಳ ಆಗಮನಕ್ಕೆ ಮುಂಚಿತವಾಗಿಯೇ ಎಲ್ಲಾ ಉಪಕಣಗಳನ್ನೂ ಸಿದ್ಧಗೊಳಿಸಿ ತಯಾರಾಗಿರುವುದು ಕಿರ್ಲಿಯನ್ ದಂಪತಿಗಳ ಪದ್ಧತಿ. ಹಾಗಾಗಿ ಆ ದಿನವೂ ಸೆಮಿಯಾನ್ ಕಿರ್ಲಿಯನ್ ಎಲ್ಲಾ ಉಪಕರಣಗಳನ್ನೂ ಅಣಿಗೊಳಿಸಿ ತನ್ನ ಬೆರಳಿನ ಕಿರ್ಲಿಯನ್ ಚಿತ್ರವನ್ನು ತೆಗೆದ. ಆದರೆ ನಿರೀಕ್ಷೆಗೆ ವ್ಯತಿರಿಕ್ತವಾಗಿ ಚಿತ್ರವು ತುಂಬಾ ಅಸ್ಪಷ್ಟವಾಗಿ ತೋರಿಬಂತು. ಆತ ಇನ್ನೂ ಕೆಲವು ಚಿತ್ರಗಳನ್ನು ತೆಗೆದು ನೋಡಿದ. ಆದರೆ ಅವೆಲ್ಲವೂ ಅಸ್ಪಷ್ಟವಾಗಿ, ಮುಸುಕು ಮುಸುಕಾಗಿದ್ದುವು. ಉಪಕರಣವು ಕೆಟ್ಟುಹೋಗಿರಬೇಕೆಂದು ಭಾವಿಸಿ, ಬಿಡಿ ಭಾಗಗಳನ್ನೆಲ್ಲಾ ಕಳಚಿ, ಮತ್ತೆ ಜೋಡಿಸತೊಡಗಿದಾಗ, ಅನಿರೀಕ್ಷಿತವಾಗಿ ಅವನಿಗೆ ತಲೆ ಸುತ್ತುತೊಡಗಿತು. ಆತನನ್ನು ಆಗಾಗ ಪೀಡಿಸುತ್ತಿದ್ದ ಒಂದು ಕಾಯಿಲೆಯ ಪೂರ್ವ ಸೂಚನೆ ಅದೆಂದು ಅವನಿಗೆ ತಕ್ಷಣ ಹೊಳೆಯಿತು. ಸೆಮಿಯಾನನಿಗೆ ವಿಶ್ರಾಂತಿ ತೀರ ಅಗತ್ಯವಾಗಿದ್ದುದರಿಂದ ವೇಲೆಂಟೀನಾಳು ತನ್ನ ಪತಿಗೆ

ವಿಶ್ರಾಂತಿ ಪಡೆಯುವಂತೆ ಹೇಳಿ ಉಪಕರಣಗಳನ್ನೆಲ್ಲ ಸಮರ್ಪಕವಾಗಿ ತಾನೇ ಜೋಡಿಸಿದಳು. ವಿಜ್ಞಾನಿಗಳು ಬಂದಾಗ ಅವಳು ಅವರೆದುರೇ ತನ್ನ ಬೆರಳುಗಳ ಚಿತ್ರವನ್ನು ತೆಗೆದಳು. ಚಿತ್ರವು ತುಂಬಾ ಸ್ಪಷ್ಟವಾಗಿ, ಬಹಳ ಆಕರ್ಷಕವಾಗಿ ಮೂಡಿಬಂತು. ಅತಿಥಿಗಳು ಎಲ್ಲವನ್ನೂ ನೋಡಿ ತುಂಬಾ ಪ್ರಭಾವಿತರಾಗಿ ಹೊರಟುಹೋದರು. ಅವರು ಹೋದ ಬಳಿಕ ಸೆಮಿಯಾನ್ ಕಿರ್ಲಿಯನ್ ರೋಗದ ತಾಪದಿಂದ ತೂರಾಡುತ್ತಾ ಪ್ರಯೋಗಶಾಲೆಗೆ ಬಂದ. ಅತಿಥಿಗಳು ಬಂದಿದ್ದಾಗ ತನ್ನ ಪತ್ನಿ ತೆಗೆದ ಚಿತ್ರಗಳು ಸ್ಪಷ್ಟವಾಗಿ ಬಂದಿದ್ದವು ಎಂಬುದನ್ನು ತಿಳಿದು ಅವನಿಗೆ ಆಶ್ಚರ್ಯವಾಗಿತ್ತು; ಅವನು ಮತ್ತೆ ತನ್ನ ಬೆರಳಿನ ಚಿತ್ರವನ್ನು ತೆಗೆದುನೋಡಿದನು. ಅದು ತೀರ ಅಸ್ಪಷ್ಟವಾಗಿತ್ತು. ವೇಲೆಂಟೀನಾ ಎರಡನೆಯ ಬಾರಿ ತನ್ನ ಬೆರಳಿನ ಚಿತ್ರವನ್ನು ತೆಗೆದು ನೋಡಿದಳು. ಅದು ಸ್ಪಷ್ಟವಾಗಿಯೇ ಇತ್ತು. ಅವರು ಹಲವು ಚಿತ್ರಗಳನ್ನು ತೆಗೆದರು. ವೇಲೆಂಟೀನಾಳ ಬೆರಳಿನ ಚಿತ್ರಗಳೆಲ್ಲ ಸ್ಪಷ್ಟವಾಗಿದ್ದುವು. ಆದರೆ ಸೆಮಿಯಾನ್‌ನ ಬೆರಳಿನ ಚಿತ್ರಗಳೆಲ್ಲಾ ಅಸ್ಪಷ್ಟವಾಗಿದ್ದವು. ಅದರ ಕಾರಣ ನಿಧಾನವಾಗಿ ಅವರಿಗೆ ಹೊಳೆಯಿತು. ಪ್ರಾರಂಭದಲ್ಲಿ ಸೆಮಿಯಾನ್ ತೆಗೆದ ತನ್ನ ಬೆರಳಿನ ಚಿತ್ರ ಅಸ್ಪಷ್ಟವಾಗಿರಲು ಅವನ ಅಸ್ವಸ್ಥತೆಯೇ ಕಾರಣವಾಗಿರಬೇಕು. ದೈಹಿಕವಾಗಿ ಪ್ರಕಟಗೊಳ್ಳುವ ಮೊದಲೇ ಅದು ಪ್ರಭಾವಲಯದಲ್ಲಿ ಕಾಣಿಸಿಕೊಂಡಿತ್ತು.

ಈ ಸಂಶೋಧನೆಯ ಮಹತ್ವವನ್ನು ಕುರಿತು ಯೋಚಿಸುತ್ತಾ ಸೆಮಿಯಾನ್ ಹಾಸಿಗೆಯಲ್ಲಿ ಮಲಗಿಕೊಂಡ. ಪ್ರಾಯಶಃ ಕ್ಯಾನ್ಸರ್ ರೋಗವು ಗಡ್ಡೆಯ ರೂಪದಲ್ಲಿ ಕಾಣಿಸಿಕೊಳ್ಳುವ ಮೊದಲೇ ಪ್ರಭಾವಲಯದ ಪರೀಕ್ಷೆಯ ಮೂಲಕ, ಅದು ತಗುಲುವ ಸಂಭವವನ್ನು ಪತ್ತೆಹಚ್ಚಬಹುದೆಂದು ಅವನಿಗೆ ಅನಿಸಿತು. ಹೇಗಿದ್ದರೂ ದೇಹದ ಅಸ್ವಸ್ಥತೆಯು ಪ್ರಭಾವಲಯದ ಚಿತ್ರಣವನ್ನು ಬಹಳವಾಗಿ ಬದಲಾಯಿಸುತ್ತದೆಂಬುದು ಅವನಿಗೆ ಖಚಿತವಾಗಿತ್ತು.

ರೋಗಪೂರ್ವ ಚಿಕಿತ್ಸೆ

ಒಬ್ಬ ವ್ಯಕ್ತಿಯ ದೇಹಸ್ಥಿತಿಗೆ ಅನುಗುಣವಾಗಿ ಅವನ ಪ್ರಭಾವಲಯದ ಆಕಾರ ಮತ್ತು ಬಣ್ಣಗಳು ವ್ಯತ್ಯಾಸಗೊಳ್ಳುವುದರಿಂದ ಪ್ರಭಾವಲಯದ ಆಕಾರ ಮತ್ತು ಬಣ್ಣಗಳು ವ್ಯತ್ಯಾಸ ಹೊಂದುವುದರಿಂದ ಪ್ರಭಾವಲಯವನ್ನು ವೈದ್ಯಕೀಯ ಪರಿಶೀಲನೆಗೆ ಬಳಸಬಹುದೆಂದು ೧೯೦೦ರಷ್ಟು ಹಿಂದೆಯೇ ಲಂಡನ್ನಿನ ಸೇಂಟ್ ಥಾಮಸ್ ಆಸ್ಪತ್ರೆಯ ವಾಲ್ಟರ್ ಕಿಲ್ನರ್ ಹೇಳಿದ್ದ. ಯಾವುದೊಂದು ಗಿಡದ ಎಲೆಗಳ ಪ್ರಭಾವಲಯಗಳು ಒಂದನ್ನೊಂದು ಹೋಲಿದರೂ ಅವುಗಳಲ್ಲಿ ಒಂದು ಎಲೆಯು ರೋಗಗ್ರಸ್ತವಾಗಿದ್ದರೆ ಆ ಎಲೆಯ ಪ್ರಭಾವಲಯವು ಬೇರೆಯವುಗಳಿಗಿಂತ ತೀರಾ ಭಿನ್ನವಾಗಿರುತ್ತದೆ. ಹಾಗೆಯೇ ಒಂದು ದೇಹವು ಈಗಾಗಲೇ ರೋಗಗ್ರಸ್ತವಾಗಿದ್ದರೆ ಅಥವಾ ಅನಾರೋಗ್ಯ ಹೊಂದುವ ಸ್ಥಿತಿಯಲ್ಲಿದ್ದರೆ ಅದನ್ನು ಆ ದೇಹದ ಕಿರ್ಲಿಯನ್ ಛಾಯಾಚಿತ್ರವು ತೋರಿಸಿಕೊಡುವುದು. ಹೀಗಾಗಿ ಪ್ರಭಾವ-



"ಒಂದು ಮಹಾಕಾವ್ಯ ಬರೀಬೇಕೂಂತಿದ್ದೀನಿ"

ಲಯವನ್ನು ಮಾನವನ ಆಂತರಿಕ ಪ್ರಕೃತಿಯನ್ನು ಪ್ರತಿಬಿಂಬಿಸುವ ಕನ್ನಡಿ ಎಂದೂ ಕರೆಯಬಹುದು. ಕಾಲಿಫೋರ್ನಿಯಾದ ಸ್ಟಕಟೋನ್ ಹಿಲ್ಸ್ ಸಂಶೋಧನಾಲಯದ ಡಾಕ್ಟರುಗಳಾದ ಡೇನಿಯಲ್ ಕಿಯೇನ್ಸ್ ಮತ್ತು ರಿಚರ್ಡ್‌ಸನ್ ಜೋಸೆಫ್‌ರವರು ಒಬ್ಬ ವ್ಯಕ್ತಿಯ ಬೆರಳಿನ ಛಾಯಾಚಿತ್ರವನ್ನು ಪರಿಶೀಲಿಸಿ ಅದರ ಆಧಾರದ ಮೇಲೆ ಅವನಿಗೆ ಇನ್‌ಫ್ಲುಯೆಂಜ಼ಾ ಬರಲಿದೆ ಎಂದು ಹೇಳಿದ. ಹದಿನಾರು ಗಂಟೆಗಳಲ್ಲಿ ಆ ವ್ಯಕ್ತಿ ಫ್ಲೂಜ್ವರಕ್ಕೆ ತುತ್ತಾದ. ರೋಗದ ಚಿಹ್ನೆಯು ದೇಹದಲ್ಲಿ ಕಾಣಿಸಿಕೊಳ್ಳುವುದಕ್ಕಿಂತ ಮುಂಚೆಯೇ ಪ್ರಭಾವಲಯದಲ್ಲಿ ಕಾಣಿಸಿಕೊಳ್ಳುತ್ತದೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ರೋಗವು ದೇಹದಲ್ಲಿ ಕಾಣಿಸಿಕೊಂಡ ಬಳಿಕ ಚಿಕಿತ್ಸೆ ನಡೆಸುವ ಈಗಿನ ವೈದ್ಯಕೀಯ ವಿಧಾನಕ್ಕಿಂತ ಭಿನ್ನವಾದ, ರೋಗವು ದೇಹದಲ್ಲಿ ಪ್ರತ್ಯಕ್ಷವಾಗುವದಕ್ಕಿಂತ ಮುಂಚೆಯೇ ಅದನ್ನು ಪತ್ತೆಹಚ್ಚಿ, ಅದು ದೇಹವನ್ನು ಆಕ್ರಮಿಸದಂತೆ ಮಾಡುವ ರೋಗನಿರೋಧ ವಿಧಾನದ ಹೊಸ ರೀತಿಯ ವೈದ್ಯಕೀಯ ಪದ್ಧತಿಗೆ ಕಿರ್ಲಿಯನ್ ಛಾಯಾಚಿತ್ರವು ನಾಂದಿಯಾಗುತ್ತದೆ.

ಬಯೋ–ಪ್ಲಾಸ್ಮಾ

ಎಲೆಯ ಅರ್ಧಭಾಗವನ್ನು ಕತ್ತರಿಸಿಹಾಕಿ ಕಿರ್ಲಿಯನ್ ಛಾಯಾಚಿತ್ರ ತೆಗೆದಾಗ, ಎಲೆಯನ್ನು ಕತ್ತರಿಸಿ ಹಾಕಿದೆಯೇ ಎಂದು ಸಂಶಯ ಬರುವಷ್ಟು ಸ್ಪಷ್ಟವಾಗಿ ಸಂಪೂರ್ಣ ಎಲೆಯ ಕಿರ್ಲಿಯನ್ ಚಿತ್ರ ಕಾಣಿಸಿಕೊಳ್ಳುತ್ತದೆ. ಒಬ್ಬ ವ್ಯಕ್ತಿಯ ಬೆರಳಿನ ರೇಖೆಗಳನ್ನು ಸಂಪೂರ್ಣವಾಗಿ ಉಜ್ಜಿ ತೆಗೆದು, ಆ ಬೆರಳಿನ ಕಿರ್ಲಿಯನ್ ಚಿತ್ರ ಪಡೆದಾಗ ಅದರಲ್ಲಿ ಮೊದಲು ಬೆರಳಿನಲ್ಲಿದ್ದ ರೇಖೆಗಳು ಸ್ಪಷ್ಟವಾಗಿ ಕಾಣಿಸಿಕೊಳುತ್ತವೆ. ಇದು ಇಂದಿನ ವಿಜ್ಞಾನದ ವಿವರಣೆಗೆ ಮೀರಿದ ವಿಷಯ. ಪ್ರಾಯಶಃ ಎಲ್ಲ ಜೀವಿಗಳ ಸ್ಥೂಲಶರೀರವು, ಅದನ್ನೇ ಹೋಲುವ ಸೂಕ್ಷ್ಮಶರೀರದ ಪಡಿಯಚ್ಚಾಗಿರಬಹುದು. ಕಿರ್ಲಿಯನ್ ಚಿತ್ರದಲ್ಲಿ ಕಾಣಿಸಿಕೊಳ್ಳುವುದು ಈ ಸೂಕ್ಷ್ಮಶರೀರವಾಗಿರಬಹುದು. ಇದು ವಿಲಕ್ಷಣ ಕಣಗಳ ಜಾಲವಾಗಿದೆ. ರಶಿಯಾದ ಕಿರೋವ್ ಸ್ಟೇಟ್ ಯುನಿವರ್ಸಿಟಿಯಲ್ಲಿ ಈ ಜಾಲವನ್ನು ಎಲೆಕ್ಟ್ರಾನ್ ಸೂಕ್ಷ್ಮದರ್ಶಕಗಳ ಸಹಾಯದಿಂದ ಪರೀಕ್ಷಿಸಿದ್ದಾರೆ. ಅತ್ಯಂತ ಸೂಕ್ಷ್ಮವಾದ ಈ ಜಾಲವು ಒಂದು ರೀತಿಯ ಪ್ಲಾಸ್ಮಾ ಕಣಗಳಿಂದಾಗಿ ಉಂಟಾಗಿದೆಯೆಂದು ಅಲ್ಲಿಯ ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. ಒಂದು ಅನಿಲದ ಎಲ್ಲಾ ಪರಮಾಣುಗಳು ಎಲೆಕ್ಟ್ರಾನುಗಳು ತಮ್ಮ ಕಣ ಕೇಂದ್ರಗಳ ಆಕರ್ಷಣೆಯಿಂದ ವಿಮುಕ್ತಗೊಂಡು ಸ್ವತಂತ್ರವಾಗಿದ್ದರೆ ಆ ಅನಿಲವನ್ನು ಪ್ಲಾಸ್ಮಾ ಎಂದು ಕರೆಯುತ್ತಾರೆ. ಒಂದು ಅನಿಲವು ಪ್ಲಾಸ್ಮಾ ಆಗಿ ಪರಿವರ್ತನೆಯನ್ನು ಹೊಂದಬೇಕಾದರೆ ಅದರ ಉಷ್ಣತೆಯನ್ನು ಕೋಟ್ಯವಧಿ ಡಿಗ್ರಿ ಸೆಂಟಿಗ್ರೇಡಿಗೆ ಏರಿಸಬೇಕಾಗುತ್ತದೆ. ಇಷ್ಟು ಅಧಿಕ ಪ್ರಮಾಣದ ಉಷ್ಣತೆಯನ್ನು ಪರಮಾಣು ರಿಯಾಕ್ಟರುಗಳಲ್ಲಿ ಮಾತ್ರ ಉಂಟುಮಾಡುವುದು ಸಾಧ್ಯ. ಆದರೆ ದೇಹದ ಸಾಮಾನ್ಯ ಉಷ್ಣತೆಯಲ್ಲಿ ಪ್ಲಾಸ್ಮಾ ಉಂಟಾಗುವುದು ಸಾಧ್ಯವೆ? ಎಂಬ ಪ್ರಶ್ನೆ ಇಲ್ಲಿ ಏಳುವುದು ಸ್ವಾಭಾವಿಕ. ದೇಹದ ಸಾಮಾನ್ಯ ಉಷ್ಣತೆಯಲ್ಲಿ ಪ್ಲಾಸ್ಮಾ ಉಂಟಾಗಲಾರದು ಎಂದು ಖಚಿತವಾಗಿಯೂ ಹೇಳುವಂತಿಲ್ಲ. ವೈಜ್ಞಾನಿಕ ಜ್ಞಾನದ ಪರಿಧಿಯು ಇನ್ನೂ ವಿಸ್ತರಿಸಿದಾಗ ಇದರ ಮೇಲೆ ಹೆಚ್ಚು ಬೆಳಕು ಬೀಳಬಹುದು. ಉಸಿರನ್ನು ಚೆನ್ನಾಗಿ ಒಳಗೆಳೆದುಕೊಂಡಾಗ ಪ್ಲಾಸ್ಮಾ ಕಣಗಳ ಸಂಖ್ಯೆ ಹೆಚ್ಚಾಗಿ, ಕಿರ್ಲಿಯನ್ ಚಿತ್ರದಲ್ಲಿ ಸುಧಾರಣೆ ಕಂಡುಬರುವುದೆಂದು ತಿಳಿದುಬಂದಿದೆ. ಇದರ ಬೆಳಕಿನಲ್ಲಿ ಭಾರತೀಯ ಯೋಗಶಾಸ್ತ್ರಗಳಲ್ಲಿ ಶ್ವಾಸಾಭ್ಯಾಸಕ್ಕೆ ಕೊಟ್ಟ ಮಹತ್ವವು ಅರ್ಥವತ್ತಾಗಿ ಕಂಡುಬರುತ್ತದೆ.

ಕಿರ್ಲಿಯನ್ ಚಿತ್ರದ ಸಂಶೋಧನೆಯು ಕೆಲವು ಹಳೆಯ ಪ್ರಶ್ನೆಗಳಿಗೆ ತೃಪ್ತಿಕರವಾದ ಉತ್ತರವನ್ನು ಕೊಡುವಂತೆ ಕಾಣುವುದಾದರೂ ಅದು ಹಲವಾರು ಹೊಸ ಹೊಸ ಪ್ರಶ್ನೆಗಳನ್ನೂ ಮುಂದೊಡ್ಡಿದೆ, ಆದರೆ ಆ ಮಾತು ಬೇರೆ. ✿

ಕಡಿಮೆ ಹಣ ಖರ್ಚು ಮಾಡಿ!

ಹೆಚ್ಚು ಬಟ್ಟೆಗಳನ್ನು ಒಗೆಯಿರಿ

ಶ್ರೀ ರಾಮಕೃಷ್ಣ ಆಯಿಲ್ ಮಿಲ್

KASTURI

NEELAM SOAP

KASTURI

WOODY/



ಪಯಣ

ಎಂ. ಎಚ್. ನಾಯಕಬಾಡ

ಜೋಲಾರಪೇಟೆ ನಿಲ್ದಾಣದಲ್ಲಿ ರೈಲು ನಿಂತಾಗ ಸಂಜೆಯ ನಾಲ್ಕು ಗಂಟೆ, ಹೊರಗೆ ಮೋಡ ಕವಿದ ಮಂಕು ವಾತಾವರಣ. ನಿಲ್ದಾಣದಲ್ಲಿ ಹೇಳಿಕೊಳ್ಳುವಂತಹ ರಶ್ಶೂ ಇದ್ದಿರಲಿಲ್ಲ. ಆದರೆ ಡಬ್ಬಿಯ ಒಳಗೆ ಮಾತ್ರ ಇದಕ್ಕೆ ತೀರ ವಿರುದ್ಧವಾದ ಸ್ಥಿತಿಯಿತ್ತು. ರೈಲು ಬೆಂಗಳೂರು ಬಿಟ್ಟಾಗಿನಿಂದಲೂ ಒಂದು ಬಗೆಯ ತಲೆ ಚಿಟ್ಟು ಹಿಡಿಸುವಂತಹ ಗದ್ದಲ. ಕನ್ನಡ, ತಮಿಳು, ತೆಲಗು, ಮಳಿಯಾಳಿ ಮಾತಾಡುವ ಜನರಿಂದ ತುಂಬಿದ ಡಬ್ಬಿ. ಅವರ ನಗು. ಕೇಕೆ, ಗದ್ದಲ ಅಟ್ಟಹಾಸಗಳಿಂದ ಭಯಂಕರವಾಗಿತ್ತು. ಅವರಲ್ಲಿ ಬಹಳಷ್ಟು ಜನ ರೈಲಿನಲ್ಲಿಯೇ ಒಬ್ಬರಿಗೊಬ್ಬರು ಪರಿಚಿತರಾದವರಾಗಿದ್ದರು. ಅವರು ನಡೆಸಿದ ದಾಂಧಲೆ ನೋಡಿದರೆ, ಆಡುವುದನ್ನೆಲ್ಲ ಇದೊಂದೇ 'ಪಯಣವಲ್ಲಿ ಆಡಿ ಮುಗಿಸಿ ಮುಂದೆ ಬದುಕಿನುದ್ದಕ್ಕೂ ಮೂಕರಾಗಿ ಉಳಿಯುವ ಪ್ರತಿಜ್ಞೆ ಮಾಡಿದಂತಿತ್ತು.

ಒಂದು ತುದಿಯಲ್ಲಿ ಒಂಟಿಯಾಗಿ ಕುಳಿತು ಇದನ್ನೆಲ್ಲ ಗಮನಿಸುತ್ತ ಅವರ ಕುರಿತೇ ಯೋಚಿಸುತ್ತ, ಅವರ ಹಾಗೆ ನನಗೇಕೆ ಸಾಧ್ಯವಾಗುತ್ತಿಲ್ಲ? ಎಂದು ವ್ಯಸನಪಡುತ್ತ, ಸಧ್ಯ ಯಾವುದಾದರೂ ನಿಲ್ದಾಣ ಬಂದರೆ ಸಾಕು ಎಂಬಂತಹ ಸ್ಥಿತಿಯಲ್ಲಿದ್ದ ಆತ ರೈಲು ನಿಲ್ಲುತ್ತಲೇ ಒಂದೇ ಉಸುರಿಗೆ ಹೊರಕ್ಕೆ ಜಿಗಿದ. ಮೊದಲು ಮೋರೆಗೊಂದಿಷ್ಟು ನೀರು ಕಾಣಿಸಬೇಕು; ಆಮೇಲೊಂದು ಲೋಟಾ ಬಿಸಿ ಕಾಫಿ. ನಂತರ ಒಂದು ಸಿಗರೇಟು ಹಚ್ಚಿ ಕೆಲವು ನಿಮಿಷಗಳನ್ನು ಹೊರಗಿನ ಸ್ವಚ್ಛ ಗಾಳಿಗೆ ಮೈಯೊಡ್ಡಿ ನಿಂತು ಕಳೆಯಬೇಕು. ಮದ್ರಾಸು ಸೇರುವ ತನಕ ಮತ್ತೆ ಆ ಗೋಳು ತಪ್ಪಿದ್ದಲ್ಲ ಎಂದುಕೊಳ್ಳುತ್ತ ನಿಲ್ದಾಣವಲ್ಲಿ ನಿಂತು ಒಮ್ಮೆ ಆಚೀಚೆ ದೃಷ್ಟಿ ಹರಿಸಿದ. ಸ್ವಲ್ಪ ದೂರದಲ್ಲಿದ್ದ ನಲ್ಲಿಯಿಂದ ನೀರು ಬರುತ್ತಿತ್ತು. ಆತ ಆ ಕಡೆ ನಡೆದ. ಯುವತಿಯೊಬ್ಬಳು ಅವನಿಗೆ ಬೆನ್ನು ಮಾಡಿ ನಿಂತು ತಂಬಿಗೆಯಲ್ಲಿ ನೀರು ಹಿಡಿಯುತ್ತಿದ್ದಳು. ಲಂಗ ಹಾಗೂ ಬ್ಲೌಜ್ ತೊಟ್ಟ ಹತ್ತು–ಹನ್ನೆರಡು ವರ್ಷದ ಹುಡುಗಿಯೊಬ್ಬಳು ಅವಳ ಪಕ್ಕದಲ್ಲಿ ನಿಂತು ಅದೇನೋ ಮಾತಾಡುತ್ತ ಮಧ್ಯೆ ಮಧ್ಯೆ ಬಾಯಿಗೆ ಕೈ ಅಡ್ಡ ಹಿಡಿದು ಮುಸಿ ಮುಸಿ ನಗುತ್ತಿದ್ದಳು. ಈ ಹುಡುಗಿ ಆ ಯುವತಿಯ ತಂಗಿ ಇರಬಹುದು. ಆ ಯುವತಿಗೆ ಇನ್ನೂ ಮದುವೆಯಾಗಿರಲಿಕ್ಕಿಲ್ಲ. ಮದುವೆ ಆಗಿದ್ದರೂ ಮಕ್ಕಳಾಗಿರಲಿಕ್ಕಿಲ್ಲ. ಆ ಲಂಗದ ಹುಡು-

ಗಿಯ ಮುಂದಿನ ಮೂರ್ನಾಲ್ಕು ಹಲ್ಲುಗಳು ಬಿದ್ದಿರಬಹುದು. ಇಲ್ಲವಾದರೆ ನಗುವಾಗ ಬಾಯಿಗೆ ಕೈ ಅಡ್ಡ ಹಿಡಿಯುವುದು ಯಾಕೆ? ಎಂದು ಏನೆಲ್ಲ ಯೋಚಿಸುತ್ತಿದ್ದವ ಆ ಯುವತಿ ಈ ಕಡೆ ತಿರುಗಿದಾಗ ಬೆಚ್ಚಿ ಬಿದ್ದು ತಡವರಿಸುತ್ತ ಮೆಲ್ಲನೆ 'ಅಸಿತಾ' ಎಂದ. ಯಾವುದೋ ಮಾತಿನ ಎಳೆಯನ್ನು ಹಿಡಿದು ಹುಡುಗಿಯ ಜೊತೆಗೆ ಲೋಕಾಭಿರಾಮವಾಗಿ ಮಾತಾಡುತ್ತಿದ್ದ ಯುವತಿಗೆ ಇವೆಲ್ಲಾ ತೀರ ಅನಿರೀಕ್ಷಿತವಾಗಿ ಒಂದು ಕ್ಷಣ ಏನು ಮಾಡುವುದೆಂದು ತೋಚದೆ ತನ್ನನ್ನು ತಾನೇ ಸಾವರಿಸಿಕೊಂಡು ಮೆಲ್ಲನೆ, 'ನೀ...ವು!' ಎಂದಳು. ಒಂದೆಯೇ ಹುಡುಗಿಯತ್ತ ತಿರುಗಿ 'ನೋಡು ಯಾವಾಗಲೂ ನೀನು ಅವರ ಕತೆಗಳ ಕುರಿತು ಹೇಳ್ತಿರ್ತೀಯಲ್ಲ, ಇವರೇ ಶ್ರೀಕಾಂತ ಎಂದರೆ' ಎಂದಾಗ ಹುಡುಗಿ ಮುಗುಳು ನಗುತ್ತ ಲಕ್ಷಣವಾಗಿ ಕೈ ಜೋಡಿಸಿದಳು. ಆತನೂ ಪ್ರತಿವಂದಿಸಿದ. ಯುವತಿ ಅವನಿಗೆ ಹುಡುಗಿಯ ಪರಿಚಯ ಮಾಡಿಕೊಡುತ್ತ, 'ಇವಳು ನನ್ನ ಮಗಳು ಸುಮಾ. ಅವರ ಮೊದಲ ಹೆಂಡತಿಯ ಮಗಳು. ನಿಮ್ಮ ಕತೆಗಳೆಂದರೆ ಇವಳಿಗೆ ಪ್ರಾಣ. ನಿಮ್ಮ ಬಗ್ಗೆ ತುಂಬಾ ಅಭಿಮಾನ. ನಾನು ಹೇಳಿ ಬರಿಸಿದ ಅಭಿಮಾನವಲ್ಲದು' ಎಂದಾಗ ಆತನ ಮೋರೆ ಯಾವುದೋ ಅವ್ಯಕ್ತ ವೇದನೆಯಿಂದ ಘಾಸಿಗೊಂಡಂತಾಗಿ ಅದನ್ನು ಅವಳಿಂದ ಮುಚ್ಚಿಡಲೆಂಬಂತೆ ನಗಲು ಪ್ರಯತ್ನಿಸುತ್ತ ಕ್ಷಣ ಬಿಟ್ಟು ಏನೋ ಯೋಚಿಸಿ, ಆಮೇಲೆ ಏನೋ ಹೇಳಲು ಹೊರಟು 'ಅನಿತಾ' ಎಂದ.

ಅವಳು 'ಹೂಂ' ಎಂದಳು. ಪಕ್ಕದಲ್ಲಿನ ಹುಡುಗಿ ಗಲಿಬಿಲಿಗೊಂಡದ್ದನ್ನು ಗಮನಿಸಿ ಅವಳತ್ತ ತಿರುಗಿ 'ಅದವರ ಕತೆಯ ಹೆಸರಾಗಿತ್ತು. ನಾನದನ್ನು ಎಷ್ಟು ಮೆಚ್ಚಿಕೊಂಡಿದ್ದೆನೆಂದರೆ ಕೊನೆಗೆ ನಾನು ಆ ಹೆಸರನ್ನೇ ಇಟ್ಟುಕೊಂಡು ಬಿಟ್ಟೆ. ಮನೆಯಲ್ಲಿ ಅಪ್ಪ, ಅಮ್ಮ, ಅಣ್ಣ, ಎಲ್ಲರೂ ನನ್ನನ್ನು ಅದೇ ಹೆಸರಿನಿಂದ ಕೂಗುತ್ತಿದ್ದರು,' ಎಂದು ಹೇಳಿ ಸಮರ್ಥನೆಗಾಗಿ ಅವನತ್ತ ತಿರುಗಿದಾಗ ಆತ ತಾನು ಏನನ್ನೋ ಹೇಳಲು ಬಾಯಿ ತೆರೆದಿದ್ದನಲ್ಲ ಎಂದು ನೆನಪಿಸಿಕೊಂಡು 'ಅಸಿತಾ ನೀವೆಲ್ಲ ಎಲ್ಲಿಗೋ ಹೊರಟಂತಿದೆ?' ಎಂದ. ಅದಕ್ಕವಳು ಕ್ಷಣ ನಿಧಾನಿಸಿ, 'ನಮ್ಮ ಯಜಮಾನರಿಗೆ ಮದ್ರಾಸಿನಲ್ಲಿ ಕೆಲಸ. ನಾವೆಲ್ಲ ಮದ್ರಾಸಿಗೆ ಹೊರಟಿದ್ದೇವೆ. ಹೆಂಗಸರ ಡಬ್ಬಿಯಲ್ಲಿ ಅತ್ತೆ, ಅಮ್ಮ, ಅತ್ತಿಗೆಯರಿದ್ದಾರೆ. ಬನ್ನಿ ನಿಮಗೆ ನಮ್ಮತ್ತೆಯ ಪರಿಚಯ ಮಾಡಿಸುತ್ತೇನೆ' ಎಂದು ಹುಡುಗಿಯತ್ತ ತಿರುಗಿ, 'ನೋಡಮ್ಮಾ, ಕಾಫಿ ಫ್ಲಾಸ್ಕು, ಗ್ಲಾಸು ತೆಗೆದುಕೊಂಡು ಬಾ' ಎಂದಾಗ ಹುಡುಗಿ ಅವಸರಪಡುತ್ತ ಓಡಿದಳು.

ಈ ಬದುಕಿನಲ್ಲಿ ಅಸಿತಾಳ ಭೇಟಿ ಇನ್ನೊಮ್ಮೆ ಆಗುವುದರ ಕುರಿತು ಸಂಶಯ ಹೊಂದಿದ್ದ ಆತನಿಗೆ ಅವಳು ಇದ್ದಕ್ಕಿದ್ದಂತೆಯೇ ಭೇಟಿಯಾದುದು–ಆದರೆ ವಾಸ್ತವ ತನ್ನ ಕಲ್ಪನೆಯನ್ನೆಲ್ಲ ಮೆಟ್ಟಿ ಹುಡಿ ಹಾರಿಸಿದುದು ನೆನೆದಾಗ ಮಿಂಚೊಂದು ಸಳ್ಳನೆ ಹೊಳೆದು ಮಾಯವಾದಂತೆ ಈ ಹುಡುಗಿ ತನ್ನ ಬದುಕಿನಲ್ಲಿ ಹೊಳೆದು ಅಷ್ಟೇ ಶೀಘ್ರವಾಗಿ ಮಾಯವಾಗುವುದರಲ್ಲಿ ತಮ್ಮಿಬ್ಬರ ಪಾತ್ರವೆಷ್ಟು, ವಿಧಿಯ ಆಟವೆಷ್ಟು ಎಂದು ಮುಂತಾಗಿ ಯೋಚಿಸುತ್ತ ಮುಖ ತೊಳೆಯಬೇಕೆಂಬ ತನ್ನ ಮುಂಚಿನ ನಿರ್ಧಾರವನ್ನು ಮರೆಬಿಟ್ಟನು. ಅವಳನ್ನು ಹಿಂಬಾಲಿಸಿದವ ಏನನ್ನೋ ಕೇಳುವ ಆಸೆಯಿಂದ ಮೆಲ್ಲನೆ 'ಅಸಿತಾ' ಎಂದ.

ಅದಕ್ಕವಳು ತಿರುಗಿ ನೋಡದೆ 'ಹೂಂ' ಎಂದು, ಒಂದು ಕ್ಷಣ ಬಿಟ್ಟು 'ಹಳೆಯದನ್ನೆಲ್ಲ ನೀವು ಪೂರ್ತಿಯಾಗಿ ಮರೆತುಬಿಡಬೇಕು. ನಾನೂ ಮರೆತಿದ್ದೇನೆ. ಈ ನಡುವೆ ನೀವು ಏನನ್ನೂ ಬರೆಯುತ್ತಿಲ್ಲ. ಒಂದು ಹೆಣ್ಣಿಗಾಗಿ ಇದೆಲ್ಲ ಎಂದರೆ ನಾನು ಒಪ್ಪೋಲ್ಲ. ನೀವೊಬ್ಬ ಸೃಜನಾತ್ಮಕ ಬರಹಗಾರರು, ನಿಮ್ಮಿಂದ ಸಮಾಜ ಬಹಳಷ್ಟನ್ನು ನಿರೀಕ್ಷಿಸುತ್ತದೆ. ನೀವು ನನ್ನನ್ನು ನಿರಾಶೆಗೊಳಿಸಬಾರದು. ಈಗಾದಂತೆ ಇನ್ನೊಮ್ಮೆ ನಾವಿಬ್ಬರೂ ಭೇಟಿಯಾಗುತ್ತೇವೋ ಇಲ್ಲವೋ ತಿಳಿಯದು. ಭೇಟಿಯಾಗಲಿ ಬಿಡಲಿ, ನಾನಂತೂ ಕೊನೆಯ ತನಕ ನಿಮ್ಮ ಶ್ರೇಯಸ್ಸಿಗಾಗಿ ಹಾರೈಸುತ್ತಿರುತ್ತೇನೆ, ನನ್ನದೊಂದು ಮಾತು ನಡೆಸಿ ಕೊಡುತ್ತೀ?' ಎಂದು ಮಾತು ನಿಲ್ಲಿಸಿ ತಿರುಗಿದವಳು ಆತ ಇನ್ನೂ ತಲೆ ಬಗ್ಗಿಸಿಕೊಂಡು ಮೆಲ್ಲನೆ ನಡೆದು ಬರುತ್ತಿರುವುದನ್ನು

ನೋಡಿ, ನೀವು ಆದಷ್ಟು ಬೇಗ ಮದುವೆಯಾಗಿ ಬಿಡಬೇಕು. ಅದೂ ಹಳ್ಳಿಯ ಪರಿಸರದಲ್ಲಿ ಬೆಳೆದ ಹುಡುಗಿಯನ್ನು. ಅವಳು ಕಡಿಮೆ ಓದಿರಬೇಕು, ನಿಮ್ಮ ಸುಖ ಹಾಗೂ ಶ್ರೇಯಸ್ಸನ್ನಲ್ಲದೇ ಅವಳು ನಿಮ್ಮಿಂದ ಇನ್ನಾವುದರ ಆಸೆಯನ್ನೂ ಮಾಡುವವಳಿರಬಾರದು. ಯಾಕೆಂದರೆ ನೀವು ತುಂಬಾ ಭಾವುಕರು. ಚಿಕ್ಕಪುಟ್ಟ ವಿಷಯಗಳನ್ನೆಲ್ಲ ಗಂಭೀರವಾಗಿ ತೆಗೆದುಕೊಂಡು ನೊಂದುಕೊಳ್ಳುತ್ತೀರಾ... ಹೇಳುತ್ತ ಹೇಳುತ್ತ ಅವಳ ದನಿ ಸಣ್ಣಗಾಯ್ತು. ಆತ ಮೋರೆ ಮೇಲೆತ್ತಿ ಅವಳ ಮುಖವನ್ನು ದಿಟ್ಟಿಸಿದ್ದರೆ ಅವಳ ಕಣ್ಣುಗಳಲ್ಲಿ ತುಳುಕಿದ ಹನಿಯನ್ನು ಗಮನಿಸಬಹುದಿತ್ತು. ಆದರೆ ಆತ ಅವಳ ಕುರಿತಾದ ಹಿಂದಿನ ನೆನಪುಗಳಿಗೆ ರಕ್ತ ಮಾಂಸ ತುಂಬುವದರಲ್ಲಿ ಮಗ್ನನಾಗಿದ್ದರಿಂದ ತಲೆಎತ್ತಲಿಲ್ಲ.

'ಚಿಕ್ಕಮ್ಮಾ' ಎಂದು ಹತ್ತಿರದಲ್ಲಿ ಯಾರೋ ಕರೆದಂತಾಗಿ ಆತ ತಲೆಯೆತ್ತಿದ. ನಾಲ್ಕೈದು ವರ್ಷದ ಪುಟ್ಟ ಬಾಲಕ ಕೆಲವೇ ಅಡಿಗಳ ಅಂತರದಲ್ಲಿ ನಿಂತಿದ್ದ, ಕೈಯಲ್ಲಿ ಕಾಫೀ ಫ್ಲಾಸ್ಕು ಹಿಡಿದು ಅದೇ ಲಂಗದ ಹುಡುಗಿ ಆ ಹುಡುಗನ ಹಿಂದೆ ನಿಂತಿದ್ದಳು, ಅವಳ ಪಕ್ಕದಲ್ಲಿ ಸ್ಥೂಲ ಕಾಯದ ಇಬ್ಬರು ಹೆಂಗಸರು ಹಾಗೂ ಚೆನ್ನಾಗಿ ಸಿಂಗರಿಸಿಕೊಂಡ ತೆಳ್ಳನೆ ದೇಹದ ಒಬ್ಬ ಯುವತಿಯೂ ನಿಂತಿದ್ದರು. ಹುಡುಗನನ್ನು ತೋರಿಸುತ್ತ ಅವಳೆಂದಳು. 'ಈತ ನನ್ನ ಮಗ. ಅವರಿಬ್ಬರೇ. ಈತ ಒಂದು ಕ್ಷಣವೂ ನನ್ನನ್ನು ಬಿಟ್ಟಿರೋಲ್ಲ, ಆ ಮಗೂಗೆ ಚಿಕ್ಕಮ್ಮನಾಗಿ ನಾನು ದೊರೆತದ್ದು ನನ್ನ ಅದೃಷ್ಟವೆಂದೇ ನನ್ನ ಭಾವನೆ, ಇದೆಲ್ಲ ಹೇಗೆ ಎಂದು ಮಾತ್ರ ಕೇಳಬೇಡಿ,



ಒಟ್ಟಿನಲ್ಲಿ ಇದೆಲ್ಲ ಆಗುವುದಿತ್ತು. ಆದರಿಂದ ನನಗೇನೂ ದುಃಖವಿಲ್ಲ...'

ರೈಲು ಇದ್ದಕ್ಕಿದ್ದಂತೆಯೇ ಸಿಳ್ಳು ಹಾಕಿತು. ಎಲ್ಲರೂ ಒಟ್ಟಿಗೇ ಗಲಿಬಿಲಿಗೊಂಡರು. ಆತ ತನ್ನ ಬೋಗಿಗೆ ಹೊರಡುವುದಕ್ಕಾಗಿ ತಿರುಗುತ್ತ ಅವಳಿಗೆ ಕೈ ಮಾಡಿದ. ಹುಡುಗಿಯು ಕೈಯಿಂದ ಕಾಫೀ ಫ್ಲಾಸ್ಕು ಹಾಗೂ ಗ್ಲಾಸನ್ನು ಹಿಡಿದ ಅವಳು ಏನೂ ಮಾಡಲೂ ತೋಚದೇ ಒಂದು ಕ್ಷಣ ಅವನ ಹಿಂದೆಯೇ ಧಾವಿಸಿ ರೈಲು ಮೆಲ್ಲನೆ ಚಲಿಸಲಾರಂಭಿಸಿದ್ದರಿಂದ ತಿರುಗಿ ತನ್ನ ಬೋಗಿಗೆ ನುಸುಳಿಕೊಳ್ಳಲು ಅವಸರಪಡುತ್ತ ಧಾವಿಸಿದಳು. ತನ್ನ ಡಬ್ಬಿಯನ್ನೇರಿ ಬಾಗಿಲಲ್ಲಿ ನಿಂತು ಆತ ಒಮ್ಮೆ ತಿರುಗಿ ನೋಡಿದ. ಅವಳಾಗಲೇ ಒಳ ಸೇರಿದ್ದಳು.

*

ಹೊಸ ವರ್ಷದ ಮೊದಲ ದಿನದಂದು ಅವನ ಹೆಸರಿಗೊಂದು ಸುಂದರ ವಿನ್ಯಾಸದ ಕವರು ಬಂತು. ಹೊಸ ವರ್ಷದ ಶುಭಾಶಯಗಳನ್ನು ಹೊತ್ತ ಆ ಕವರನ್ನು ಕಳಿಸಿದವಳು ಒಬ್ಬ ಹುಡುಗಿಯೆಂಬುದು ತಿಳಿಯಲು ಆತನಿಗೆ ಹೆಚ್ಚು ಹೊತ್ತು ಹಿಡಿಯಲಿಲ್ಲ. ಶುಭಾಶಯದ ಸಾಲುಗಳ ಕೆಳಗೆ 'ಅನಿತಾ' ಎಂದಿತ್ತು. ಜೊತೆಗೊಂದು ಸುಂದರ ಬರಹದ ಪುಟ್ಟ ಪತ್ರ. ಪತ್ರದಲ್ಲಿ ಅವಳು ತಾನು ಅವನ ಕತೆಗಳನ್ನು ಯಾಕೆ ಮೆಚ್ಚುತ್ತೇನೆ ಎಂಬುದರ ವಿಶ್ಲೇಷಣೆಯ ಜೊತೆಗೆ ಕೆಲವೇ ದಿನಗಳ ಹಿಂದೆ ಪ್ರಕಟವಾದ ಅವನದೊಂದು ಮಿನಿ ಕಾದಂಬರಿ 'ಅನಿತಾ' ತನ್ನ ಮೇಲೆ ಮಾಡಿದ ಅಚ್ಚಳಿಯದ ಪರಿಣಾಮ ಹಾಗೂ ಆ ಕತೆಯು ಕಥಾನಾಯಕಿಗೆ ಅನುಕಂಪದ ಪ್ರತೀಕವಾಗಿ ತಾನು ತನ್ನ ಹೆಸರನ್ನು 'ಅನಿತಾ' ಎಂದು ಬದಲಿಸಿಕೊಂಡಿದ್ದರ ಕುರಿತು ಬರೆದಿದ್ದಳು. ತನಗೆ ಪತ್ರ ಬರೆಯಬೇಕೆಂದೂ ತಾನು ಉತ್ತರಿಸುತ್ತೇನೆಂದೂ ಕಳಕಳಿಯಿಂದ ವಿನಂತಿಸಿಕೊಂಡಿದ್ದಳು.

ಪತ್ರಿಕೆಯಲ್ಲಿ ಕತೆ ಪ್ರಕಟವಾಗತೊಡಗಿದಂತೆ ಆತನಿಗೆ ಕೆಲವು ಮಂದಿ ಹುಡುಗರು ಹಾಗೂ ಹುಡುಗಿಯರು ಪತ್ರ ಬರೆಯುತ್ತಿದ್ದರು. ಹೊಸ ವರ್ಷದ ಪ್ರಾರಂಭದ ದಿನ ಹಾಗೂ ಇತರ ಮಹತ್ವದ ಸಂದರ್ಭಗಳಲ್ಲಿ ಗ್ರೀಟಿಂಗ್ಸ್ ಕಳಿಸುತ್ತಿದ್ದರು. ತನಗೆ ಬರೆದವರಿಗೆಲ್ಲ ಆತನೂ ತಿರುಗಿ ಬರೆಯುತ್ತಿದ್ದ. ಅವುಗಳಲ್ಲೇನೂ ವಿಶೇಷವಾದ ಸಂಗತಿಗಳಿರುತ್ತಿರಲಿಲ್ಲ. ಅನಿತಾಳ ಪತ್ರ ಬಂದಾಗಲೂ ಕೂಡ ಆತ ಅದೇ ಭಾವನೆಯಿಂದ ಅವಳ ಶುಭಾಶಯಗಳಿಗಾಗಿ ಧನ್ಯವಾದಗಳನ್ನರ್ಪಿಸಿ ಅವಳಿಗೆ ಖುಷಿಯಾಗಲಿಯೆಂದು ಕವರಿನ ಮೇಲೆ 'ಅನಿತಾ' ಎಂದು ಸುಂದರ ವಿನ್ಯಾಸದಲ್ಲಿ ಬರೆದು ಕಳಿಸಿದ್ದ. ಮುಂದೆರಡು ದಿನಗಳಲ್ಲಿ ಅದೆಲ್ಲ ಪೂರ್ತಿಯಾಗಿ ಮರೆತಿದ್ದ. ಅವರೆ ಅದಾದ ಎರಡು ದಿನಗಳಲ್ಲಿ ಅನಿತಾಳಿಂದ ಮಾರೋಲೆ ಬಂತು. ಅವಳು ತುಂಬಾ ಬರೆದಿದ್ದಳು. ತನ್ನ ತಂದೆ-ತಾಯಿಯರ ಕುರಿತು, ಅಣ್ಣ-ತಮ್ಮಂದಿರ ಕುರಿತು, ಅಕ್ಕ-ತಂಗಿಯರ ಕುರಿತು, ತನ್ನ ಕುರಿತು, ತನ್ನ ವಿಧ ವಿಧದ ಹವ್ಯಾಸ ಕುರಿತು, ಕೊನೆಯಲ್ಲಿ ತನಗೇಕೆ ಅವನ ಬರಹಗಳು ಹಿಡಿಸುತ್ತವೆಯೆಂಬುದನ್ನು ಕುರಿತು. ಅವನ ಕುರಿತು ವಿವರವಾಗಿ ಬರೆಯುವಂತೆ ವಿನಂತಿಸಿ ಕೊಂಡಿದ್ದಳು. ನಿಮ್ಮ ಪತ್ರದ ದಾರಿ ನೋಡುತ್ತೇನೆ, ನಿರಾಶೆ ಮಾಡಬೇಡಿ ಎಂದು ಬರೆದು, ಕೊನೆಯಲ್ಲಿ ನಿಮ್ಮವಳು 'ಅನಿತಾ' ಎಂದು ತಿದ್ದಿ ತಿದ್ದಿ ಬರೆದಿದ್ದಳು. ಆ ಪತ್ರ ಕೈಗೆ ಬಂದಾಗ ಆತ 'ಹುಚ್ಚು ಹುಡುಗಿ' ಎಂದುಕೊಂಡರೂ ಅವಳು ಕೇಳಿದ್ದಕ್ಕೆಲ್ಲ ಉತ್ತರಿಸದೆ ಇರುವುದು ಅವನಿಂದ ಸಾಧ್ಯವಾಗಿರಲಿಲ್ಲ.

ಪತ್ರಗಳಿಂದ ಪ್ರಾರಂಭವಾದ ಅವರ ಪರಿಚಯ ಗೆಳೆತನವಾಗಿ ಮಾರ್ಪಟ್ಟು ಸಲಿಗೆಯಲ್ಲಿ ಮುಂದುವರೆದಿತ್ತು. ಅವರಿಬ್ಬರೂ ಪರಸ್ಪರರ ಪತ್ರಗಳಿಗಾಗಿ ಎದುರು ನೋಡುತ್ತಿರುವುದೇ ದಿನಚರಿಯನ್ನಾಗಿ ಮಾಡಿಕೊಂಡರು. ಆತ ಪತ್ರಿಕೆಗಳಿಗೆ ಬರೆಯುವುದನ್ನು ಪೂರ್ತಿಯಾಗಿ ನಿಲ್ಲಿಸಿದ್ದ. ಅವಳ ಪತ್ರ ಬರುವುದಕ್ಕೆ ಒಂದು ದಿನ ವೇನಾದರೂ ಲೇಟಾದರೆ ತನಗೆ ಅತೀವ ವೇದನೆಯಾಗುತ್ತಿದೆ ಎಂಬ ಮಟ್ಟಕ್ಕೆ ಬಂದು ತಲುಪಿದ್ದ.

ಅಂತಹ ದಿನಗಳಲ್ಲಿ ಒಂದು ಭಾನುವಾರ ತಮ್ಮ ಮನೆಗೆ ಬರುವಂತೆ ಅವಳು ಅವನಿಗೆ ಬರೆದಳು. ಹೇಗೆ ಬರಬೇಕು, ಯಾವ ಬಸ್ಸಿನಲ್ಲಿ, ಎಲ್ಲಿ

ಇಳಿದು, ಯಾವ ಕ್ಲಾಸ್ಸಿನಲ್ಲಿ ತಿರುಗಬೇಕು ಎಂಬುದನ್ನೆಲ್ಲ ವಿವರವಾಗಿ ಬರೆದಿದ್ದಳು.

ಆ ಭಾನುವಾರ ತುಂಬಾ ಸುಂದರವಾಗಿತ್ತು. ಆತ ಮುಂಜಾನೆಯೇ ಹೊರಟು ಅವರ ಮನೆಯನ್ನು ತಲುಪಿ ಅಡ್ರೆಸ್ಸು ಸರಿಯಾಗಿದೆಯೆ ಎಂದು ಎಂದು ಖಚಿತ ಪಡಿಸಿಕೊಂಡು ಗೇಟಿನಲ್ಲಿ ನಿಂತ. ಪುಟ್ಟಹುಡುಗಿಗೆ 'ಅನಿತಾ ಇಲ್ಲೇ ಇರೋದಾ?' ಎಂದು ಕೇಳಿದಾಗ ಬಾಗಿಲು ತೆರೆದದ್ದೂ ತೆರೆದ ಬಾಗಿಲಿನಿಂದ ಅವಳು ಪ್ರತ್ಯಕ್ಷಳಾಗಿ 'ಬನ್ನಿ, ನಿಮಗಾಗಿಯೇ ಕಾಯುತ್ತ ಇದ್ದೆವು' ಎಂದುದೂ ಎಲ್ಲೋ ದೂರದಲ್ಲಿ ಬೇರೆ ಯಾರೋ ಹೇಳಿದಂತೆ ಆಯಿತು ಅವನಿಗೆ. ಯಾಕೆಂದರೆ ಅವಳನ್ನು ನೋಡುತ್ತ ಆತ ತನ್ನಿರವನ್ನೇ ಮರೆತು ಬಿಟ್ಟಿದ್ದ. ಅಷ್ಟು ಸುಂದರಳಾದ ಹುಡುಗಿಯನ್ನು ಆತ ಈ ಹಿಂದೆ ಎಲ್ಲೂ ನೋಡಿರಲಿಲ್ಲ. ತಾರುಣ್ಯದಲ್ಲಿಯೇ ಗಂಡನನ್ನು ಕಳೆದುಕೊಂಡು ನೀತಿವಂತಳಾಗಿ ಬದುಕುವುದಕ್ಕೆ ಸಮಾಜ ಹಾಗೂ ಪರಿಸರ ಅವಕಾಶವನ್ನು ಕೊಡದೇ ಕೊನೆಗೆ ವೇಶ್ಯೆಯಾಗಿ ಬಿಡುವ ಕತೆಯನ್ನೊಳಗೊಂಡ ಅವನ 'ಅನಿತಾ' ಕಾದಂಬರಿಗೆ ಕಲಾವಿದನೊಬ್ಬ ಸುಂದರವಾದ ಚಿತ್ರ ಬರೆದಿದ್ದ. ಆ ಚಿತ್ರ ಆತನನ್ನು ತುಂಬಾ ಆಕರ್ಷಿಸಿತು. ತನ್ನ ಕೃತಿಗಿಂತಲೂ ಆ ಚಿತ್ರ ಹೆಚ್ಚು ಅರ್ಥಪೂರ್ಣವಾಗಿದೆ ಎಂದು ಅವನಿಗೆ ಅನ್ನಿಸಿತ್ತು. ಆದರೆ ಇಂದು ಅನೀತಾಳನ್ನು ನೋಡಿದಮೇಲೆ ಇವೆಲ್ಲ ಒಂದಕ್ಕೊಂದು ಪೂರಕವಾದ ಸಂಬಂಧಗಳನ್ನು ಹೊಂದಿರಬಹುದೇ ಎಂಬ ಅನುಮಾನ ಅವನಿಗಾಯ್ತು. ಆ ದಿನವನ್ನೆಲ್ಲ ಆತ ಅವರ ನಡುವೆ ಒಂದು ವಿಧದ ಗುಂಗಿನಲ್ಲಿಯೇ ಕಳೆದ. ಸಂಜೆ ತನ್ನ ರೂಮಿಗೆ ಹಿಂದಿರುಗುವಾಗ ಅವನಿಗೆ ಏನೋ ಒಂದು ವಿಧದ ನೋವಿನ ಅನುಭವವಾಗತೊಡಗಿತ್ತು.

ಮುಂದಿನ ಒಂದೆರಡು ದಿನಗಳನ್ನು ಆತ ಬಹು ಪ್ರಯಾಸದಲ್ಲಿ ಕಳೆದ. ತನ್ನ ಮನಸ್ಸಿನಲ್ಲಿ ಮೂಡಿದ ಭಾವನೆಗಳನ್ನೆಲ್ಲ ಯಾವ ಮುಚ್ಚುಮರೆಯೂ ಇಲ್ಲದೇ ಕಾಗದದ ಮೇಲೆ ಗೀಚುವುದು, ಇದನ್ನೆಲ್ಲ 'ಅನಿತಾ'ಳಿಗೆ ಕಳಿಸಬೇಕು ಎಂದುಕೊಳ್ಳುವುದು ಹಿಂದೆಯೇ ಇದೆಲ್ಲಾ ಅರ್ಥವಿಲ್ಲದ್ದು ಎಂದು ಹರಿದು ಹಾಕುವುದದನ್ನೂ ಮಾಡಿದ. ಬರೆದ ಹರಿದುಹಾಕಿದ. ಮತ್ತೆ ಬರೆದ, ಮತ್ತೆ ಹರಿದ, ಬೀಸಾಡಿದ. ಕೊನೆಗೆ ಏನಾದರಾಗಲಿ ಅವಳಿಗೆ ತಿಳಿಸಿಬಿಡುವುದೇ ವಾಸಿಯೆಂದು ಎಲ್ಲವನ್ನೂ ವಿವರವಾಗಿ ಬರೆದು ಅಂಚೆಗೆ ಹಾಕಿದ. ಅವಳಿಂದ ಬರಬಹುದಾದ ಉತ್ತರಕ್ಕಾಗಿ ಚಾತಕ ಪಕ್ಷಿಯಂತೆ ಕಾದ. ಅವಳಿಂದ ಉತ್ತರ ಬಾರದಿದ್ದಾಗ ಮತ್ತೆ ಬರೆದ. ಬರೆದ ಪತ್ರವೇ ತಿರುಗಿ ಬಂತು. ಅವಳನ್ನೇ ಸ್ವತಃ ಭೆಟ್ಟಿಯಾಗಿ ಎಲ್ಲವನ್ನೂ ಹೇಳಬೇಕೆಂದು ನಿಶ್ಚಯಿಸಿ ಅವರ ಮನೆಗೆ ಹೋದ. ಅವರೆಲ್ಲ ಮನೆ ಖಾಲಿ ಮಾಡಿದುದು ತಿಳಿದು ಏನು ಮಾಡುವುದೆಂದು ತೋಚದೇ ಮರಳಿ ಬಂದ. ಮುಂದಿನ ದಿನಗಳನ್ನೆಲ್ಲ ಅವಳ ಬರಬಹುದಾದ ಪತ್ರದ ನಿರೀಕ್ಷೆಯಲ್ಲಿಯೇ ಕಳೆದ.

*

ಮದ್ರಾಸ್ ಸೆಂಟ್ರಲ್ ನಿಲ್ದಾಣದಲ್ಲಿ ರೈಲು ನಿಂತಾಗ ರಾತ್ರಿಯಾಗಿತ್ತು. ಎಷ್ಟು ರಾತ್ರಿಯಾಗಿದೆಯೆಂಬುದು ಅವನಿಗೆ ಬೇಕಿರಲಿಲ್ಲ. ಅವನ ತಲೆಯೆಲ್ಲ ವಿಚಿತ್ರವಾದ ಕಳವಳಗಳಿಂದ ತುಂಬಿತ್ತು. ಈಗಂತೂ ತಾವಿಬ್ಬರೂ ಬದುಕಿನ ಪ್ರವಾಹದಲ್ಲಿ ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಪಯಣಿಸುತ್ತಿದ್ದೇವೆ. ತಮ್ಮಿಬ್ಬರ ಮಧ್ಯೆ ದಾಟಲಸಾಧ್ಯವಾದಂತಹ ಕಂದರವಿದೆ. ಆದರೂ ಅನಿತಾಳನ್ನು ಕೇಳಿಯೇ ಬಿಡಬೇಕು. ಇಂತಹ ಸ್ಥಿತಿಗೆ ತನ್ನನ್ನು ಒಪ್ಪಿಸಿಕೊಳ್ಳುವಲ್ಲಿ ಅವಳ ಮೇಲೆ ಪ್ರಭಾವ ಬೀರಿದಂತಹ ಒತ್ತಡ ಯಾವುದು! ಆತ ಅವಸರದಲ್ಲಿ ಇಳಿದು ನಿಲ್ದಾಣದ ಆ ಜನಸಾಗರದಲ್ಲಿ ಅವಳಿಗಾಗಿ ಪ್ರತಿಯೊಂದು ಬೋಗಿಯನ್ನೂ ಹುಡುಕುತ್ತ ಹಿಂದೆ ಹಿಂದೆ ಸಾಗಿದ. ಆದರೆ ಆ ದಟ್ಟಣೆಯಲ್ಲಿ, ಆ ಜನಸಾಗರದಲ್ಲಿ ಆತ ಸ್ವತಃ ಕಳೆದುಹೋದಂತವನಾಗಿ ತನಗರಿವಿಲ್ಲದೆ ನಿಲ್ದಾಣದ ಹೊರಕ್ಕೆ ತರಲ್ಪಟ್ಟಿದ್ದ. ✡





ಕೋಲ್ಗೇಟ್ ಡೆಂಟಲ್ ಕ್ರೀಮ್‌ನಿಂದ ಉಸಿರಿನ ದುರ್ವಾಸನೆಯನ್ನು ನಿವಾರಿಸಿರಿ... ದಂತಕ್ಷಯವನ್ನು ಎದುರಿಸಿರಿ

ಪ್ರತಿ ಸಲ ಊಟವಾದ ಮೇಲೆ ಕೋಲ್ಗೇಟಿನಿಂದ ಹಲ್ಲುಜ್ಜಿರಿ. ಅದು ಜಗತ್ತಿನಾದ್ಯಂತ ದಂತವೈದ್ಯರು ಶಿಫಾರಸು ಮಾಡುವ ರೀತಿಯಲ್ಲಿ ನಿಮ್ಮ ಹಲ್ಲುಗಳಿಗೆ ರಕ್ಷಣೆ ನೀಡುತ್ತದೆ.


ಹಲ್ಲುಗಳೆಡೆಯಲ್ಲಿ ಉಳಿಯುವ ಆಹಾರ ಕಣಗಳಲ್ಲಿ ರೋಗಾಣುಗಳು ಬೆಳೆಯುತ್ತವೆ. ಇವು ಉಸಿರಿನ ದುರ್ವಾಸನೆಗೆ ಕಾರಣವಾಗುತ್ತವೆ — ಆಮೇಲೆ ಇವು ನೋಯುವ ದಂತ ಕ್ಷಯವನ್ನು ಉಂಟುಮಾಡುತ್ತವೆ.

ಆದುದರಿಂದ ಯಾವಾಗಲೂ ಆಹಾರವನ್ನು ಸೇವಿಸಿದ ನಂತರ ಕೂಡಲೇ ಕೋಲ್ಗೇಟ್ ರೀತಿಯಲ್ಲಿ ಹಲ್ಲುಜ್ಜಿರಿ. ನಿಮ್ಮ ಶ್ವಾಸವನ್ನು ರುಚಿಗೊಳಿಸಲು, ಹಲ್ಲುಗಳನ್ನು ಬಿಳುಪಾಗಿಸಲು ಮತ್ತು ದಂತಕ್ಷಯವನ್ನು ಎದುರಿಸಲು ಅದು ಅತ್ಯಂತ ಪರಿಣಾಮಕಾರಿ ಎಂದು ಪ್ರಮಾಣಿತವಾಗಿದೆ.


ಕೋಲ್ಗೇಟ್‌ನ ವಿಶ್ವಸನೀಯ ಸೂತ್ರವು ಕೆಲಸ ಮಾಡುವ ರೀತಿ:



ಉಸಿರಿನ ದುರ್ವಾಸನೆಯನ್ನು ಮತ್ತು ದಂತ ಕ್ಷಯವನ್ನು ಉಂಟುಮಾಡುವ ರೋಗಾಣುಗಳು ನಿಮ್ಮ ಹಲ್ಲುಗಳೆಡೆಯಲ್ಲಿ ಸಿಕ್ಕಿಕೊಂಡ ಆಹಾರ ಕಣಗಳಲ್ಲಿ ಬೆಳೆಯುತ್ತವೆ.




[illegible]



[illegible]

ಅಧಿಕ ರುಚಿಯಾದ, ದುರ್ವಾಸನೆ ರಹಿತವಾದ ಉಸಿರಿಗಾಗಿ ಮತ್ತು ಅಧಿಕ ಬಿಳುಪಾದ ಹಲ್ಲುಗಳಿಗಾಗಿ ಹೆಚ್ಚು ಜನರು ಜಗತ್ತಿನಲ್ಲಿ ಬೇರೆ ಯಾವುದೇ ಟೂಥ್‌ಪೇಸ್ಟ್‌ಗಿಂತ ಅಧಿಕವಾಗಿ ಕೋಲ್ಗೇಟನ್ನು ಕೊಳ್ಳುತ್ತಾರೆ.



ದಂತವೈದ್ಯರು ಮಾತ್ರ ನಿಮಗೆ ಉತ್ತಮತರ ದಂತರಕ್ಷಣೆಯನ್ನು ನೀಡಬಲ್ಲರು

DC.G.64 KN

ಆಫ್ರಿಕನ್ ರಾಣಿಗಳಿಂದ ಅಪಾಯ

ರಾಮಚಂದ್ರ

ಸದಿಚ್ಛೆಯಿಂದಲೇ ಒಂದು ಕಾರ್ಯವನ್ನು ಮಾಡಿದರೂ ಅದರ ಪರಿಣಾಮ ಕೆಲವೊಮ್ಮೆ ತದ್ವಿರುದ್ಧವಾಗುವುದಿದೆ. ಇಂದು ಬ್ರೆಜಿಲ್ ದೇಶದ ಬಹುಭಾಗ ಜನತೆ ಕ್ಷುಲ್ಲಕ ಪ್ರಾಣಿಗಳೆನ್ನಬಹುದಾದ ಜೇನು ನೊಣಗಳಿಂದ ತತ್ತರಿಸುವಂತಾದದ್ದು, ಅಂಥ ಒಂದು ದುರದೃಷ್ಟ ಪ್ರಸಂಗದಿಂದ.

ಒಂಭತ್ತು ವರ್ಷಗಳ ಹಿಂದೆ ವಾರ್ವಿಕ್ ಕೆರ್ ಎಂಬೊಬ್ಬ ಬ್ರೆಜಿಲ್ ದೇಶದ ಕೃಷಿಕ ಆಫ್ರಿಕದಿಂದ ಹಿಂದಿರುಗುವಾಗ ತನ್ನೊಡನೆ ೨೦ ರಾಣಿ ಜೇನ್ನೊಣಗಳನ್ನು ತಂದ. ಆಫ್ರಿಕದ ಜೇನ್ನೊಣಗಳು ತುಸು ಕ್ರೂರ ಸ್ವಭಾವದವಾಗಿದ್ದರೂ ಆಗ ಬ್ರೆಜಿಲಿನಲ್ಲಿ ಮುಖ್ಯವಾಗಿದ್ದ ಇಟಾಲಿಯನ್ ಅಥವಾ ಜರ್ಮನ್ ಜೇನ್ನೊಣಗಳಿಗಿಂತ ಇವು ಶೇಕಡಾ ೨೦ ರಷ್ಟು ಹೆಚ್ಚು ಜೇನು ತಯಾರಿಸಬಲ್ಲವು. ಅಲ್ಲದೆ ಪ್ರತಿಕೂಲ ಹವಾಮಾನದಲ್ಲೂ ಇತರ ಜೇನ್ನೊಣಗಳ ಹಾಗೆ ಆಫ್ರಿಕನ್ ಜೇನ್ನೊಣಗಳು ಕಡಿಮೆ ಜೇನನ್ನು ಉತ್ಪಾದಿಸುವುದಿಲ್ಲ. ಆದ್ದರಿಂದ ಈ ಆಫ್ರಿಕನ್ ರಾಣಿಗಳಿಗೆ ದೇಶಿ ಜೇನ್ನೊಣಗಳಿಂದ ಸಂಭೋಗ ಮಾಡಿಸಿದರೆ, ಬರುವ ಪೀಳಿಗೆ ಆಫ್ರಿಕನ್ ಜಾತಿಯಷ್ಟು ಭಯಂಕರವಾಗಲಿಕ್ಕಿಲ್ಲ ಎಂಬ ವಿಚಾರ ಕೆರ್‌ನಿಗಿತ್ತು.

ಆದರೆ ವಿಚಾರವನ್ನು ಕಾರ್ಯರೂಪಕ್ಕೆ ತಂದಾಗ ಪರಿಣಾಮ ವಿಪರೀತವಾಗಿ ಬ್ರೆಜಿಲ್ಲಿನ ಎಂಟು ರಾಜ್ಯಗಳು ತತ್ತರಿಸುವಂತಾಯಿತು. ಆ ಇಪ್ಪತ್ತು ರಾಣಿ ಹುಳಗಳು ಮೊದಲ ಒಂದು ವರ್ಷದಲ್ಲೇ ೪,೫೦,೦೦೦ ಹುಳಗಳಿಗೆ ಜನ್ಮವಿತ್ತು, ಅವುಗಳಿಂದ ಮತ್ತಷ್ಟು ಹುಳಗಳು ಹುಟ್ಟತೊಡಗಿ, ಇಂದು ಈ ದುಷ್ಟ ಪೀಳಿಗೆಯ ಸಂಖ್ಯೆ ಅಗಣಿತವಾಗಿದೆ, ಕೆರ್ ಭಾವಿಸಿದಂತೆ ಅವು ಸಾಧುವಾಗುವುದರ ಬದಲು ಮತ್ತಷ್ಟು ಕ್ರೂರಸ್ವಭಾವದವಾದವು. ಮುಟ್ಟಿದರೆ ಮುಸಿಯುವ ಸ್ವಭಾವದ ಈ ಜೇನ್ನೊಣಗಳು ಸ್ಥಳಿಕ ಇಟಾಲಿಯನ್ ಮತ್ತು ಜರ್ಮನ್ ಜೇನ್ನೊಣಗಳ ಗೂಡುಗಳನ್ನು ಒಂದೊಂದಾಗಿಯೇ ನಾಶಗೊಳಿಸುತ್ತಿವೆ; ಅಲ್ಲದೆ ಈ ಮಿಶ್ರ ಜೇನ್ನೊಣಗಳಲ್ಲಿನ ಗಂಡು ಹುಳಗಳು ತಮ್ಮ ರಕ್ತವನ್ನು ಸ್ಥಳಿಕ ಹೆಣ್ಣು ಹುಳಗಳ ಶರೀರದೊಳಗೂ ಸೇರಿಸಿ, ತಮ್ಮ ರಕ್ತಬೀಜಗುಣವನ್ನು ಅವುಗಳಲ್ಲೂ ಉಂಟುಮಾಡುತ್ತಿವೆ. ಇದರಿಂದಾಗಿ ಬ್ರೆಜಿಲಿನ ಜೇನು ವ್ಯವಸಾಯಿಗಳ ಜೀವ-ಜೀವಿತಗಳು ಅಪಾಯಕ್ಕೊಳಗಾಗಿದ್ದು, ಇತರ ಅಸಂಖ್ಯಾತ ಜನರೂ ಈ ರಾಕ್ಷಸ ಪ್ರಾಣಿಗಳಿಂದ ತಲ್ಲಣಗೊಂಡಿದ್ದಾರೆ.

ಈ ಶನಿ ಸಂತಾನ ಸಿಕ್ಕ ಸಿಕ್ಕಲ್ಲೆಲ್ಲ ತಮ್ಮ ಮನೆ ಕಟ್ಟತೊಡಗಿವೆ. ಹಾಳುಬಿದ್ದ ಗೋಡೆಗಳು, ಬಂಡೆಗಳ ಅಡಿಭಾಗಗಳು, ಗವಿಗಳು, ಮರದ ಬೇರುಗಳು, ಟೆಲಿಫೋನ್ ಬೂತುಗಳು, ಬೀದಿ ದೀಪಗಳು— ಹೀಗೆ ಎಲ್ಲ ಸ್ಥಳಗಳಲ್ಲೂ ಅವು ತಮ್ಮ ಗೂಡು ಕಟ್ಟತೊಡಗಿವೆ. ಈಗಾಗಲೇ ಈ ಜೇನ್ನೊಣಗಳು, ಅನೇಕ ಹಕ್ಕಿಗಳು, ಕೋಳಿ-

ಗಳು, ನಾಯಿಗಳು, ಹಂದಿಗಳು, ಕುದುರೆಗಳನ್ನಲ್ಲದೆ ನಾಲ್ವರು ಮನುಷ್ಯರನ್ನೂ ಕೊಂದುಬಿಟ್ಟಿವೆ.

ಅವುಗಳು ಎಷ್ಟು ಭಯಂಕರವಾಗಿವೆ ಎಂಬುದಕ್ಕೆ ಕೆಲವು ಕಾಲದ ಹಿಂದೆ ಕ್ಯೆರಾನ್ ಎಂಬಲ್ಲಿನ ಬಾರಿನಲ್ಲಿ ನಡೆದ ಒಂದು ಘಟನೆಯೆ ಉತ್ತಮ ಉದಾಹರಣೆ. ಆ ಬಾರಿನ ಹೊಗೆನಳಿಗೆಯಲ್ಲಿದ್ದ ಇಂಥ ಒಂದು ಜೇನುಗೂಡನ್ನು ಯಾವನೋ ಒಬ್ಬ ಸುಟ್ಟು ಬಿಡುವ ದುಃಸ್ಸಾಹಸಕ್ಕೆ ಕೈಹಾಕಿದ್ದೇ ತಡ, 'ಘೂಯ್' ಎಂದು ಹೊರಟ ಆ ಜೇನ್ನೊಣಗಳು ಒಂದು ಗಂಟೆಯಲ್ಲಿ ೫೦೦ ಜನರನ್ನು ಕಡಿದು, ಮತ್ತೆ ಹತ್ತಿರದ ತೋಟಗಳಿಗೆ ನುಗ್ಗಿ ಕೆಲವು ಕೋಳಿಗಳನ್ನೂ ನಾಯಿಗಳನ್ನೂ ಎರಡು ಕುದುರೆಗಳನ್ನೂ ಕಡಿದು ಗಾಸಿಗೊಳಿಸಿದವು. ಅಷ್ಟಕ್ಕೇ ತೃಪ್ತವಾಗದೆ ಬಾರಿನಲ್ಲಿದ್ದ ಒಬ್ಬ ಪ್ರವಾಸಿ ಮದ್ಯ ವ್ಯಾಪಾರಿಯನ್ನೂ ಕಡಿದು ಮೂರ್ಛೆಗೊಳಿಸಿದವು. ಬಾರಿನ ಒಬ್ಬ ಕೆಲಸಗಾರನ ಬೋಳು ತಲೆಯನ್ನು ಅವು ಎಷ್ಟು ಸಲ ಕಚ್ಚಿದವೆಂದರೆ ಬಡಪಾಯಿಗೆ ತನ್ನ ತಲೆಯಲ್ಲಿ ಹೊಸದಾಗಿ ಕೂದಲುಗಳು ಆ ಹುಟ್ಟುತ್ತಿವೆಯೋ ಎಂಬ ಭಾವನೆ ಬಂದಿತಂತೆ.

ಅಲ್ಲಿನ ಪ್ರಸಿದ್ಧ ಜೇನುವ್ಯವಸಾಯ ತಜ್ಞ ಫಾದರ್ ನೆಡೆಲ್‌ರ ಸಾವೋ ಲಿಯೋಪಾಲ್ಡೊ ವಿಶ್ವವಿದ್ಯಾಲಯದಲ್ಲಿನ ಆಫ್ರಿಕನ್ ಕಾಲೋನಿಯು ಒಬ್ಬನ ಮೇಲೆ ಈ ಜೇನ್ನೊಣಗಳೆರಗಿದವು. ಆಗ ಆತ ಒಂದು ಟ್ರಕ್ಕಿನ ಹಿಂದೆ ತಲೆಮರೆಸಿದಾಗ, ಆ ಜೇನ್ನೊಣಗಳು ಮತ್ತೊಬ್ಬನ ಮೇಲೆ ಎರಗಿದವು; ಎರಡು ನಾಯಿಗಳನ್ನೂ ಕೆಲವು ಮಕ್ಕಳನ್ನೂ ಕಡಿದವು. ಮರುದಿನ ಫಾದರ್ ನೆಡೆಲ್ ತಮ್ಮ ಎಂಟು ಆಫ್ರಿಕನ್ ರಾಣಿ ಹುಳಗಳನ್ನು ಕೊಲ್ಲಲು ಹೇಳಿದರು.

ಕೆಲವೇ ವಾರಗಳ ಹಿಂದೆ ಅವು ಲಿಯೋದ ಪ್ರಸಿದ್ಧ ವ್ಯವಹಾರ ಸ್ಥಳವಾದ ಲಿಯೋ ಬ್ರಾಂಕೋದ ಬೀದಿಯನ್ನೂ ಮುತ್ತತೊಡಗಿದವು. ಅಲ್ಲಿನ ಸೇನಾದಳದ ದೊಡ್ಡ ಕಟ್ಟಡದ ಎದುರು ಒಂದು ದೊಡ್ಡ ಕಪ್ಪುಗುಂಪು ಇನ್ನೂ ನೇತಾಡುತ್ತಿದೆ. ಮಶೀನ್ ಗನ್ನುಗಳಿರುವ ಪಹರೆಯೋಧರನ್ನು ಅವು ಲೆಕ್ಕಿಸುವುದೇ ಇಲ್ಲ.

ಇವುಗಳ ಗೂಡುಗಳಿಂದ ಜೇನನ್ನು ತೆಗೆಯುವುದೂ ಕಷ್ಟವೇ. ಹಾಗಾಗಿ ಬ್ರೆಜಿಲ್‌ನಲ್ಲಿ ಜೇನಿನ ಬೆಲೆಯೂ ಏರತೊಡಗಿದೆ.

ಈ ಆಪತ್ತಿನಿಂದ ಬ್ರೆಜಿಲ್ ಪಾರಾಗಬೇಕಾದರೆ ಫಾದರ್ ನೆಡೆಲ್ ಹೇಳುವಂತೆ, ಅವನ್ನು ಸಂಪೂರ್ಣ ಕೊಂದುಬಿಡಬೇಕು. ಆದರೆ ರಕ್ತಬೀಜಾಸುರನಂತೆ ಬೆಳೆದ ಅವುಗಳನ್ನು ನಿರ್ಮೂಲಗೊಳಿಸಲಾದೀತೇ ಎನ್ನುವುದು ಈಗಿರುವ ಪ್ರಶ್ನೆ. ✡



ಪ್ರಜಾಪ್ರಭುತ್ವ

"ಚುನಾವಣೆ ಎಂದರೇನೇ ಹಣ; ಎಷ್ಟಿದ್ದರೂ ಹಣ ಸಾಲದ ಉತ್ಸವ ಅದು."

"ಈ ಜನತಾ ಜಂಗ್ಲಿಯಲ್ಲಿ ಅಸತ್ಯ-ಹಿಂಸೆಗಳೇ ಜೀವನಾಧಾರ. ಅವನ್ನು ಬಿಟ್ಟರೆ ಬದುಕಿಲ್ಲ!"

"ನಮ್ಮ ರಾಜಕೀಯ ಎನ್ನುವುದು— ಸ್ವಂತ ಬಂಡವಾಳ ಹಿಂದಿಷ್ಟು ಹಾಕದೇ, ಹರಿಸೂವಧಿ ಲಾಭವನ್ನು ಗಳಿಸುವ ಒಂದು ಹೊಸ ಉದ್ಯೋಗವಾಗಿದೆ."

"ಚುನಾವಣೆಗೆ ಯಾರೇ ನಿಲ್ಲಲಿ, ಯಾವ ಪಕ್ಷವೇ ನಿಲ್ಲಲಿ, ದುಡ್ಡಿನ ಸಂತರ್ಪಣೆ ನಡೆಯಲೇಬೇಕು."

(ಶಿವರಾಮ ಕಾರಂತರ 'ಮೂಜನ್ಮ'ದಿಂದ)

ಸಂ: ಕೃಷ್ಣ ಗಿರಿ ಮುರಳೀಧರ

ಕನ್ನಡದಲ್ಲಿ ವಿಜ್ಞಾನ ವಾಙ್ಮಯ

ಜಿ. ಟಿ. ನಾರಾಯಣರಾವ್

ಆಧುನಿಕ ವಿಜ್ಞಾನದ ಚಟುವಟಿಕೆಗಳು ಬೆಳೆದು ಅಭಿವರ್ಧಿಸಿರುವುದು ಪಾಶ್ಚಾತ್ಯ ರಾಷ್ಟ್ರಗಳಲ್ಲಿ. ಹೀಗಾಗಿ ಅಲ್ಲಿನ ಭಾಷೆಗಳು ವಿಜ್ಞಾನದ ಭಾವನೆಗಳನ್ನು ಸಮರ್ಥವಾಗಿಯೂ ಸ್ವಾಭಾವಿಕವಾಗಿಯೂ ಅಭಿವ್ಯಕ್ತಿಸಬಲ್ಲವು. ಈ ಭಾವನೆ–ಭಾಷೆ ಸಮಶ್ರುತಿತ್ವ–ಸಮಗತಿತ್ವದ ಪರಿಣಾಮವಾಗಿ ಯಾವುದೇ ಪಾಶ್ಚಾತ್ಯ ಭಾಷೆಯಲ್ಲಿ ವಿಜ್ಞಾನ ವಿಚಾರಗಳನ್ನು ನಿರೂಪಿಸುವುದು ಸಾಹಿತ್ಯದ ವಿವಿಧ ಪ್ರಕಾರಗಳನ್ನು, ಉದಾಹರಣೆಗೆ ಕತೆ, ಕಾದಂಬರಿ, ವಿಚಾರ ಸಾಹಿತ್ಯ ಬರೆಯುವಷ್ಟೇ ಸುಲಭ ಮತ್ತು ಸಹಜ ಕ್ರಿಯೆ ಆಗುವದು. ಉದಾಹರಣೆಗೆ ಗೆಲಿಲಿಯೊ ಗೆಲಿಲಿ ಬಳಸಿರುವ ಇಟಾಲಿಯನ್ ಭಾಷೆ, ಆಲ್ಬರ್ಟ್ ಐನ್‌ಸ್ಟೈನ್ ಬಳಸಿರುವ ಜರ್ಮನ್ ಭಾಷೆ, ಜೇಮ್ಸ್ ಜೀನ್ಸ್ ಬಳಸಿರುವ ಇಂಗ್ಲೀಷ್ ಭಾಷೆ ಶಿಷ್ಟ ಸಾಹಿತ್ಯ ಶೈಲಿಯಾಗಿಯೂ ಮನ್ನಣೆ ಪಡೆದಿವೆ.

ಪಾಶ್ಚಾತ್ಯ ದೇಶಗಳಲ್ಲಿ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ವಿಜ್ಞಾನ ವಾಙ್ಮಯದ ಅನುವಾದ ವಿಶೇಷ ತ್ರಾಸವನ್ನು ಎದುರೊಡ್ಡುವುದಿಲ್ಲ. ಇದಕ್ಕೆ ಕಾರಣಗಳು ಮುಖ್ಯವಾಗಿ ಮೂರು : ಆ ರಾಷ್ಟ್ರಗಳು ವಿಜ್ಞಾನದ ಅಭಿವರ್ಧನೆಯ ದೃಷ್ಟಿಯಿಂದ ಸರಿಸುಮಾರಾಗಿ ಸಮಮಟ್ಟದಲ್ಲಿವೆ, ಅರ್ಥಾತ್ ಅವುಗಳಲ್ಲಿ ಒಂದೇ ತೆರನಾದ ವಿಜ್ಞಾನ 'ಹವೆ' ಪಸರಿಸಿದೆ; ಆ ರಾಷ್ಟ್ರಗಳ ಭಾಷೆಗಳೆಲ್ಲವೂ ಸೋದರ ಸಂಬಂಧಿಗಳು; ಹೀಗಾಗಿ ಅಲ್ಲಿ ಕೊಡು–ಕೊಳ್ಳುವ ಪ್ರಕ್ರಿಯೆ ಸಲೀಸಾಗಿ ನಡೆಯುವುದು ಸಾಧ್ಯ; ವಿಜ್ಞಾನದ ಪಾರಿಭಾಷಿಕ ಪದ ಪ್ರತೀಕ ಚಿಹ್ನೆಗಳೆಲ್ಲವೂ ಅಂತಾರಾಷ್ಟ್ರೀಯವಾಗಿರುವುದರಿಂದ, ಅಂದರೆ ಭಾಷಾತೀತವಾಗಿರುವುದರಿಂದ, ಮತ್ತು ಹೆಚ್ಚಿನವು ಪಾಶ್ಚಾತ್ಯ ಭಾಷೆಗಳ ಮೂಲ ಸೆಲೆಗಳಾದ ಗ್ರೀಕ್–ಲ್ಯಾಟಿನ್‌ಜನ್ಯ ಅಥವಾ ಛಾಯಾಯುತ ಆಗಿರುವುದರಿಂದ ಅವನ್ನು ಬುಡಹತ್ತ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಒಯ್ದು ಮಡಗಬಹುದು. ಅರ್ಥಾತ್ ಇಲ್ಲಿ ಅನುವಾದ ಅನಗತ್ಯ.

ಮಕ್ಕಳಿಗೆ ತಾಯಿನುಡಿಯಲ್ಲಿ ಸಮಸ್ತ ಶಿಕ್ಷಣವೂ ಒದಗಿದರೆ ಅಲ್ಲಿ ಕಲಿಕೆ ದೈನಂದಿನ ಚಟುವಟಿಕೆಗಳ ಅಂಗವೇ ಆಗುವುದು. ಭಾಷೆ ಭಾವನೆಯನ್ನು ಸಲೀಸಾಗಿ ಸಂವಹನಿಸುವ ಪಾರದರ್ಶಕ ಮಾಧ್ಯಮ ಮತ್ತು ಉತ್ತಮ ವಾಹಕ ಆಗುವುದು. ಇದರಿಂದ ಉಳಿತಾಯವಾಗುವ ಮಾನಸಿಕ ಶಕ್ತಿ ಹೊಸತನ್ನು ಕಲಿಯಲು ಹಾಗೂ ತಿಳಿಸಲು ಒದಗಿಬರುತ್ತದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ, ರಾಜಕೀಯವಾಗಿ ಅವು ಯಾವ ಸ್ಥಿತಿಯಲ್ಲಿದ್ದರೂ, ತಾಯಿನುಡಿಯೇ ಶಿಕ್ಷಣ ಮಾಧ್ಯಮವಾಗಿರುವುದರಿಂದ

ವಿಜ್ಞಾನ ಚಟುವಟಿಕೆಗಳೂ ವಾಙ್ಮಯ-ಸೃಷ್ಟಿಯೂ ಅಧಿಕ ವೇಗೋತ್ಕರ್ಷದಿಂದ ಮುಂದೋಡುತ್ತಿವೆ.

೩

ಮೇಲೆ ವಿವರಿಸಿದ ಮೂರು ಮುಖ್ಯ ಭಾವನೆಗಳ—ವಿಜ್ಞಾನವಿಕಾಸ, ವಿಜ್ಞಾನ ವಾಙ್ಮಯ ಅನುವಾದ, ಶಿಕ್ಷಣ ಮಾಧ್ಯಮ—ಒಸ್ಸೆಲೆಯಲ್ಲಿ ಭಾರತವನ್ನು ಅವಲೋಕಿಸಿದರೆ ಅವುಗಳ ಗೈರು ಹಾಜರಿಯೇ ಇಲ್ಲಿನ 'ಸೊತ್ತು' ಎಂದು ಹೇಳಬೇಕಾಗುತ್ತದೆ. ಕರ್ನಾಟಕ ರಾಜ್ಯವಾಗಲಿ ಕನ್ನಡ ಭಾಷೆಯಾಗಲಿ ಇದಕ್ಕೆ ಅಪವಾದ ಅಲ್ಲ.

ಆಧುನಿಕ ವಿಜ್ಞಾನದ ಚಟುವಟಿಕೆಗಳು ಭಾರತದಲ್ಲಿ ವಿಕಸಿಸಲಿಲ್ಲ. ಹೀಗಾಗಿ ಭಾರತೀಯ ಭಾಷೆಗಳಿಗೂ ವಿಜ್ಞಾನ ಭಾಷೆಗಳಿಗೂ ನಡುವೆ ಆಳ ಮತ್ತು ಅಗಲ ಕಂದಕ ಏರ್ಪಟ್ಟಿದೆ. ಆಯುರ್ವೇದ ಮೊದಲಾದ ದೇಶೀಯ ವಿಜ್ಞಾನ ವಾಙ್ಮಯ, ಲಲಿತ ಸಾಹಿತ್ಯ, ತತ್ತ್ವಶಾಸ್ತ್ರ, ಕಾವ್ಯ, ಕಾದಂಬರಿ ಮೊದಲಾದ ಪ್ರಕಾರಗಳಲ್ಲಿ ಪ್ರಪಂಚದ ಯಾವುದೇ ಪ್ರೌಢ ಭಾಷೆಗೆ ಸರಿಸಾಟಿ ಆಗಿ ನಿಲ್ಲಬಲ್ಲ ತಾಕತ್ತು ನಮ್ಮ ಭಾಷೆಗಳಿಗೆ ಇದ್ದರೂ ಆಧುನಿಕ ವಿಜ್ಞಾನ ಭಾವನೆಗಳನ್ನು ಅಭಿವ್ಯಕ್ತಿಸುವಲ್ಲಿ ಇವು ಸೋಲುವುದು ಈ ಕಾರಣದಿಂದ ಈ ಕೃತಕ ಐತಿಹಾಸಿಕ ಸನ್ನಿವೇಶದಿಂದ. ಆದ್ದರಿಂದ ಇದು ಭಾರತೀಯ ಭಾಷೆಗಳಲ್ಲಿ ಅಂತರ್ಗತವಾಗಿರಬಹುದಾದ ಯಾವುದೇ ದೌರ್ಬಲ್ಯದಿಂದ ಅಲ್ಲ ಎಂಬುದು ಸ್ಪಷ್ಟ. ವಾಸ್ತವವಾಗಿ ಯಾವ ಭಾಷೆಯೂ ಹುಟ್ಟಾ ಸಬಲವೂ ಅಲ್ಲ, ದುರ್ಬಲವೂ ಅಲ್ಲ. ಅದಕ್ಕೆ ಜನ ಊಡಿಸುವ ಶರ್ಕರ, ಜೀವಾತು, ಮೇದಸ್ಸು ಮೊದಲಾದ ಪೌಷ್ಟಿಕಗಳನ್ನು ಅವಲಂಬಿಸಿ ಅದರ ಮುಂದಿನ ವಿಕಾಸ ಉಂಟು

ಅನುವಾದದ ಪ್ರಶ್ನೆ ಬಂದಾಗ ಎಲ್ಲ ಭಾರತೀಯ ಭಾಷೆಗಳೂ ಮುಖ್ಯವಾಗಿ ಇಂಗ್ಲೀಷನ್ನು ಆಶ್ರಯಿಸುವುದು ಅನಿವಾರ್ಯವಾಗಿದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸಲ್ಲುವ, ಈ ಹಿಂದೆ ಹೇಳಿರುವ, ಮೂರು ಮುಖ್ಯ ಸೌಲಭ್ಯಗಳು ಇಲ್ಲಿ ಹಿರಿದಾದ ತೊಂದರೆಗಳಾಗಿವೆ. ವಿಜ್ಞಾನದ ಅಭಿವರ್ಧನೆಯ ದೃಷ್ಟಿಯಲ್ಲಿ ಪಾಶ್ಚಾತ್ಯ ರಾಷ್ಟ್ರಗಳಿಗೂ ಭಾರತಕ್ಕೂ ನಡುವೆ ಸಮಾನತೆಯ ಸಂಬಂಧ ಇಲ್ಲ: ಅಲ್ಲಿಗೂ ಇಲ್ಲಿಗೂ ಇರುವ ವಿಜ್ಞಾನದ ಹವಾ ವ್ಯತ್ಯಾಸ ತೀವ್ರವಾಗಿದೆ; ಇಂಗ್ಲೀಷ್ ಭಾಷೆಗೂ ಭಾರತದ ಯಾವ ಭಾಷೆಗೂ ನಡುವೆ ಜ್ಞಾತಿಸಂಬಂಧ ಇಲ್ಲ; ಅದು ಪೂರ್ಣ ಪರಕೀಯ ಭಾಷೆ. ಹೀಗಾಗಿ ಇಲ್ಲಿ ಕೊಡು-ಕೊಳ್ಳುವ ಪ್ರಕ್ರಿಯೆ ಹಲವಾರು ಬಗೆಯ ಹೊಸ ಸಮಸ್ಯೆಗಳಿಗೆ ಎಡೆಮಾಡಿಕೊಟ್ಟಿದೆ. ವಿಜ್ಞಾನದ ಪಾರಿಭಾಷಿಕ ಪದಗಳು ಭಾರತದ ಮಟ್ಟಿಗೆ ಪೂರ್ಣ ಗ್ರೀಕ್ ಮತ್ತು ಲ್ಯಾಟಿನ್ನೇ. ಅವನ್ನು ತದ್ವತ್ತಾಗಿ ತಂದು ಇಲ್ಲಿ ನಾಟಿ ಹಾಕಿದರೆ ವ್ಯವಸ್ಥೆ ಸ್ವೀಕರಿಸದು. ಆದ್ದರಿಂದ ಪಾರಿಭಾಷಿಕ ಪದಗಳನ್ನು ಕುರಿತಂತೆ ವಿಶೇಷ ಜಿಜ್ಞಾಸೆ ಅಗತ್ಯ.

ಎಲ್ಲ ಹಂತಗಳಲ್ಲಿಯೂ ಶಿಕ್ಷಣ ಮಾಧ್ಯಮ ತಾಯಿನುಡಿಯೇ ಆಗಬೇಕು ಎನ್ನುವ ಹಂಬಲ ಕರ್ನಾಟಕದಲ್ಲಂತೂ ಘನೀಭವಿಸಿಲ್ಲ. ಕಾಲೇಜು ತರಗತಿಗಳಲ್ಲಿ ಇಂಗ್ಲೀಷ್ ಸರ್ವವ್ಯಾಪಿ ಮತ್ತು ಸರ್ವಗ್ರಾಹಿಯಾಗಿ ನೆಲೆಸಿದೆ ಹೀಗಾಗಿ ಶಿಕ್ಷಣಾರ್ಥಿ ಜ್ಞಾನದ ಹೂರಣ ಸವಿಯಲು ಪರಭಾಷೆಯ ಅಪಾರದರ್ಶಕ ಮತ್ತು ಅವಾಹಕ ಮಾಧ್ಯಮವನ್ನು ಪ್ರಯತ್ನಪೂರ್ವಕವಾಗಿ ಉತ್ತರಿಸಬೇಕಾಗಿದೆ. ಈ ಕೆಲಸದಲ್ಲಿ ಸಾಕಷ್ಟು ಶಕ್ತಿಹ್ರಾಸವಾಗಿ ವಾಸ್ತವಿಕ ಜ್ಞಾನಗ್ರಹಣಕ್ಕೆ ಉಳಿಯುವ ಶಕ್ತಿ ಕಡಿಮೆ ಆಗುವದು. ಇಂಥಲ್ಲಿ ಕಲಿಕೆ ಅಪೂರ್ಣ ಮತ್ತು ತರುವಾಯದ ಸೃಷ್ಟ್ಯಾತ್ಮಕ ಕ್ರಿಯೆ ಅಗಣನೀಯವಾಗುವದು ನಿರೀಕ್ಷಿತವೇ.

೪

ಇಷ್ಟು ಹೇಳಿದ ಬಳಿಕ ಒಂದು ಅಂಶ ಸ್ಪಷ್ಟವಾಗುತ್ತದೆ. ವಿಜ್ಞಾನ ಚಟುವಟಿಕೆಗಳಿಂದ ವಿಜ್ಞಾನವಾಙ್ಮಯದ ಸೃಷ್ಟಿ ಆಗುವುದು, ವಿಜ್ಞಾನ ವಾಙ್ಮಯದ ಅಧ್ಯಯನದಿಂದ ನೂತನ ವಿಜ್ಞಾನ ಚಟುವಟಿಕೆಗಳಿಗೆ ವೇದಿಕೆ ಒದಗುವುದು. ಐತಿಹಾಸಿಕ ಕಾರಣಗಳಿಂದ ಪಾಶ್ಚಾತ್ಯ ರಾಷ್ಟ್ರಗಳು ಇಂಥ ಅನುಕೂಲ ಸನ್ನಿವೇಶದಲ್ಲಿವೆ ಅವೇ ಕಾರಣಗಳಿಂದ ಭಾರತ ಪ್ರತಿಕೂಲ ಸನ್ನಿವೇಶದಲ್ಲಿದೆ.

ಇದಕ್ಕೆ ಪರಿಹಾರವೇನು ?

ಕಾಲಚಕ್ರವನ್ನು ಹಿಮ್ಮೊಗವಾಗಿ ಉರುಳು-ವಂತೆ ಮಾಡುವುದೇ ? ಇದು ಅಸಾಧ್ಯ.

ಸುಗ್ರೀವಾಜ್ಞೆ ಹೊರಡಿಸಿ ದತ್ತ ಮುಹೂರ್ತ ದಿಂದ ಭಾರತದ ಸಮಸ್ತ ರಾಜ್ಯಗಳಲ್ಲಿಯೂ ವಿಜ್ಞಾನ ಚಟುವಟಿಕೆಗಳು ಆಯಾ ರಾಜ್ಯ ಭಾಷೆ-ಯಲ್ಲಿಯೇ ನಡೆಯತಕ್ಕದ್ದು ಎಂದು ವಿಧಿಸು-ವುದೇ ? ಇದು ಅಪ್ರಾಯೋಗಿಕ.

ಪಾಶ್ಚಾತ್ಯ ರಾಷ್ಟ್ರಗಳ ವಿಜ್ಞಾನವನ್ನು ಬಹಿಷ್ಕರಿಸಿ ಸ್ವದೇಶೀಯ ವಿಜ್ಞಾನ ಸ್ವದೇ-ಶೀಯ ಭಾಷೆಗಳಲ್ಲಿ ವಿಕಾಸ ಆಗುವಂತೆ ಸನ್ನಿವೇಶ ವನ್ನು ಏರ್ಪಡಿಸುವುದೇ ? ಇದು ಆತ್ಮವಂಚ-ನೆಯ ಹಾಗೂ ಆತ್ಮಹತ್ಯೆಯ ಹಾದಿ.

"ಆ ಭಾಷೆ ಈ ಭಾಷೆ ಎಂದು ಹಲುಬುವು-ದೇಕೆ? ಇಂಗ್ಲೀಷನ್ನೇ ನಮ್ಮ ಭಾಷೆ ಎಂದು ಅಂಗೀಕರಿಸೋಣ" ಅತಿ ಸುಲಭೀಕರಣದ ಈ ನಿಲುವನ್ನು ತಳೆಯುವುದೇ ? ಇದು ಪೂರ್ಣ ಅಪ್ರಾಯೋಗಿಕ, ಆತ್ಮಘಾತಕ ಕೂಡ. ಈ ತೆರನಾದ ಭಾಷಾತಿಕ್ರಮಣವನ್ನು ಯಾವ ನಾಗರಿಕತೆಯೂ ಒಪ್ಪದು.

ಪೂರ್ಣ ಪೌರಸ್ತ್ಯ ದೇಶವಾದ ಜಪಾನಿನ ಅನುಭವವನ್ನು ಪರಿಶೀಲಿಸೋಣ. ಆ ದೇಶ ಇಂದು ವಿಜ್ಞಾನ ಮತ್ತು ತಂತ್ರವಿದ್ಯೆಯಲ್ಲಿ ಅಮೇರಿಕ-ರಶಿಯಗಳೊಡನೆ ಕೂಡ ಯಶಸ್ವಿ-ಯಾಗಿಸ್ಪರ್ಧೆ ಪೋಟಿ ನಡಿಸುತ್ತಿದೆ; ಈ ಪವಾಡವನ್ನು ಜಪಾನ ಸಾಧಿಸಿದ್ದು ಹೇಗೆ? ಅದು ಪಾಶ್ಚಾತ್ಯ ವಿಜ್ಞಾನ ಭಾವನೆಗಳನ್ನೂ ವಿಧಾನಗಳನ್ನೂ ತನ್ನ ಭಾಷೆಯ ಮೂಲಕ ವ್ಯವಸ್ಥಿತವಾಗಿ ಆಮದು ಮಾಡಿಕೊಳ್ಳುತ್ತಿದೆ. ಇದರಿಂದಾಗಿ ಪ್ರಪಂಚದ ಯಾವುದೇ ಮೂಲೆಯಲ್ಲಿ ಯಾವುದೇ ಭಾಷೆ-ಯಲ್ಲಿ ವಿಜ್ಞಾನದ ಯಾವುದೇ ಸಂಶೋಧನೆ ಪ್ರಕಟವಾದರೂ ಅದು ಬಹುತೇಕ ಆಗಾ-ಗಲೇ ಜಪಾನೀ ವಿಜ್ಞಾನಿಗಳಿಗೆ ಅವರ ತಾಯಿ ನುಡಿಯ ಮೂಲಕ ನಿರ್ದುಷ್ಟವಾಗಿ ಲಭಿ-ಸುವುದು. ಅವರು ಪರಭಾಷೆಯ ಅಪಾರ-ದರ್ಶಕ ಮಾಧ್ಯಮದ ಪ್ರತಿಕೂಲ ಬಲವನ್ನು ಎದುರಿಸಬೇಕಾಗಿಲ್ಲ. ಸ್ವಭಾಷೆಯ ಪಾರದರ್ಶಕ ಮಾಧ್ಯಮದ ಅನುಕೂಲಬಲದಿಂದ ಉತ್ತೇಜಿತ-ರಾಗುತ್ತಾರೆ.

ಆದ್ದರಿಂದ ಸಹಜವಾದ ಪರಿಹಾರ ಎಂದರೆ ಆಧುನಿಕ ವಿಜ್ಞಾನದ ಭಾವನೆ ಸ್ವಭಾಷೆಯ ಮೂಲಕ-ಕರ್ನಾಟಕದಲ್ಲಿ ಕನ್ನಡದ ಮೂಲಕ-ಜನತೆಗೆ ಒದಗುವಂತೆ ಮಾಡುವುದು. ಈ ಕಾರ್ಯ ರಾಜ್ಯಮಟ್ಟದಲ್ಲಿ ತುಂಬ ವ್ಯವ-ಸ್ಥಿತವಾಗಿಯೂ ಏಕಸೂತ್ರೀಯವಾಗಿಯೂ ನಡೆಯಬೇಕು.

ಇಂದು ಭಾರತದ ಎಲ್ಲ ಭಾಷೆಗಳಲ್ಲಿಯೂ ಆಧುನಿಕ ವಿಜ್ಞಾನದ ಭಾವನೆಗಳು ಪ್ರಕಟ-ವಾಗುತ್ತಿವೆ; ಆದರಿಂದ ಜನತೆಗೆ ಸ್ವಭಾಷೆಯ ಮೂಲಕ ವಿಜ್ಞಾನಪ್ರಪಂಚಕ್ಕೆ ಪ್ರವೇಶ ದೊರೆಯುತ್ತಿದೆ ಎಂಬುದಾಗಿ ಹಲಬಗೆಯ ವರದಿಗಳಿಂದ ತಿಳಿಯುತ್ತೇವೆ. ಕನ್ನಡದಲ್ಲಿ ಏನಾಗಿದೆ ಎಂಬುದನ್ನು ಈಗ ಸೂಕ್ಷ್ಮವಾಗಿ ಪರಿಶೀಲಿಸೋಣ.

೪

ಪ್ರೌಢಶಾಲೆಯ ವಿದ್ಯಾಭ್ಯಾಸದಲ್ಲಿ ಶಿಕ್ಷಣ ಮಾಧ್ಯಮವಾಗಿ ಕನ್ನಡವನ್ನು ಅಂಗೀಕರಿಸಿ ಐಚ್ಛಿಕವಾಗಿ ವಿಧಿಸಲಾಗಿದೆ. ಸರ್ಕಾರವೇ ಕೇಂದ್ರೀಯವಾಗಿ ಪಠ್ಯ ಹಾಗೂ ಉಪಪಠ್ಯ ಪುಸ್ತಕಗಳನ್ನು ಒದಗಿಸುತ್ತಿದೆ.

ಹಳ್ಳಿಗಳಲ್ಲಿರುವ ಜ್ಯೂನಿಯರ್ ಕಾಲೇಜುಗಳಲ್ಲಿ ಪ್ರೀಯೂನಿವರ್ಸಿಟಿ ತರಗತಿಯ ಬೋಧನೆ-ಯನ್ನು ಬಹುತೇಕ ಕನ್ನಡದಲ್ಲೇ ನಿರ್ವಹಿಸ-ಲಾಗುತ್ತಿದೆ- ಆದರೆ ಪಟ್ಟಣದ ಕಾಲೇಜುಗಳಲ್ಲಿ ಕನ್ನಡಕ್ಕೆ ಬರಕತ್ತಿಲ್ಲ, ಬರವೇ. ಸ್ನಾತಕ ತರ-ಗತಿಗಳಲ್ಲಿನ ವಿಜ್ಞಾನ ವಿಭಾಗಗಳಲ್ಲಿ ಕನ್ನಡಕ್ಕೆ ಪ್ರವೇಶ ತೀರ ನಿಯಮಿತ. ಈ ತರಗತಿಗಳಿಗೆ ಬೇಕಾಗುವ ವಿಜ್ಞಾನ ಪಠ್ಯ ಪುಸ್ತಕಗಳು ಕನ್ನಡ-ದಲ್ಲಿವೆ. ಆಕರ ಗ್ರಂಥಗಳೂ- ಹೆಚ್ಚಾಗಿ ಇಂಗ್ಲೀಷಿನಿಂದ ಕನ್ನಡಕ್ಕೆ ಅನುವಾದವಾದವು-ದೊರೆಯುವುವು.

ಸ್ನಾತಕೋತ್ತರ ತರಗತಿಗಳಲ್ಲಿ ಕನ್ನಡ ಪೂರ್ಣ ವರ್ಜ್ಯ. ಪಾಲಿಟೆಕ್ನಿಕ್, ಎಂಜಿನಿಯರಿಂಗ್, ವೈದ್ಯಕ, ಕೃಷಿ ಮೊದಲಾದ ತಾಂತ್ರಿಕ ವಿಭಾಗ-ಗಳಲ್ಲಿಯೂ ಕನ್ನಡಕ್ಕೆ ಸ್ಥಾನವಿಲ್ಲ.

ಹೀಗೆ ವಿದ್ಯಾಭ್ಯಾಸದ ವಿವಿಧ ಮಜಲುಗಳಾದ ಪ್ರೌಢಶಾಲೆ, ಪಿ.ಯು.ಸಿ. ಸ್ನಾತಕ, ಸ್ನಾತಕೋತ್ತರ ಹಂತಗಳನ್ನು ಏಕರೂಪವಾಗಿ ಬಂಧಿಸುವ ಹಾಗೂ ಸಂಬಂಧಿಸುವ ಒಂದು ಭಾಷೆ ಕರ್ನಾಟಕದಲ್ಲಿಲ್ಲ. ಅನುಸ್ಯೂತವಾಗಿ ಹರಿಯುತ್ತಿರಬೇಕಾದ ಏಕಮಾಧ್ಯಮದ ಹಾದಿ ಈಗ ಅಲ್ಲಲ್ಲಿ ವಿಚ್ಛಿನ್ನವಾಗಿದೆ. ಇದರಿಂದ ಹೆಚ್ಚಿನ ವಿದ್ಯಾರ್ಥಿಗಳು ಮತ್ತು ಈ ಮನೋರಹಿತ ಕಾರ್ಖಾನೆಯಿಂದ ಸಿದ್ಧವಸ್ತುಗಳಾಗಿ ಹೊರಬಂದ ಯುವಕರು ಕನ್ನಡ ಬಾರದ ಮತ್ತು ಇಂಗ್ಲೀಷ ತಿಳಿಯದ ಎಡಬಿಡಂಗಿತನದಲ್ಲಿ ನೇತಾಡುತ್ತಿದ್ದಾರೆ. ಕರ್ನಾಟಕದ ವಿವಿಧ ಪ್ರದೇಶಗಳಲ್ಲಿನ ವಿದ್ಯಾರ್ಥಿಗಳೂ ಯುವಕರೂ ಆಡುವ ಹಾಗೂ ಬರೆಯುವ ಭಾಷೆಯನ್ನು– ಇಂಗ್ಲೀಷ್ ಕನ್ನಡ ಎರಡರಲ್ಲಿಯೂ–ಎಚ್ಚರಿಕೆಯಿಂದ ಗಮನಿಸಿದರೆ ಈ ಹೇಳಿಕೆಯ ಯಾಥಾರ್ಥ್ಯ ಅರಿವಾದೀತು.

ಶಿಕ್ಷಣ ಮಾಧ್ಯಮದ ವಿಚ್ಛಿನ್ನತೆ ಒಂದೇ ಇದರ ಕಾರಣವಲ್ಲ. ಶಿಕ್ಷಣವನ್ನು ನಾವು ಗಂಭೀರವಾಗಿ, ಇದೊಂದು ತಪಸ್ಸು ಎಂಬ ಭಾವದಿಂದ ಸ್ವೀಕರಿಸಿಲ್ಲ. ಈ ರಂಗದಲ್ಲಿ ನಡೆದಿರುವಷ್ಟು ನಿಷ್ಪ್ರಯೋಜಕ ಮತ್ತು ನಿರಂತರ ಪ್ರಯೋಗಗಳು ಪ್ರಾಯಶಃ ಬೇರೆ ಯಾವ ರಂಗದಲ್ಲಿಯೂ ನಡೆದಿಲ್ಲ. ಈಗಲೂ ಹಾಗೆಯೇ. ಶಿಕ್ಷಣ ಮತ್ತು ಶಿಕ್ಷಣ ಮಾಧ್ಯಮವನ್ನು ಕುರಿತಂತೆ ಪ್ರತಿಯೊಬ್ಬನೂ ತಜ್ಞನೇ, ಪ್ರತಿಯೊಬ್ಬನೂ ಪ್ರಯೋಗಪಟುವೇ. ಪ್ರತಿಯೊಬ್ಬನೂ ಅಧಿಕಾರಯುತವಾಗಿ ಅಪ್ಪಣೆ ನೀಡಲು ಅರ್ಹತೆ ಪಡೆದವನೇ. ಇನ್ನು ಸಾರ್ವಜನಿಕ ವಲಯವನ್ನು ಪರಿಶೀಲಿಸಿದರೆ, ನಾವು ಹುಟ್ಟಿನಿಂದ ಕನ್ನಡಿಗರು ನಿಜ. ಆದರೆ ಕಲಿಕೆಯಿಂದ ಮತ್ತು ನಡವಳಿಕೆಯಿಂದ ಬಹುತೇಕ ಅ–ಕನ್ನಡಿಗರು. ಶುದ್ಧ ಕನ್ನಡದಲ್ಲಿ ಎಷ್ಟರ ಮಟ್ಟಿಗೆ ನಾವು ನಮ್ಮ ಭಾವನೆಗಳನ್ನು ಹೇಳಬಲ್ಲೆವು ಅಥವಾ ಬರೆಯಬಲ್ಲೆವು? ಕನ್ನಡ ಸಾಹಿತ್ಯವನ್ನು ನಾವು ಶಾಸ್ತ್ರೋಕ್ತವಾಗಿ ಅಭ್ಯಸಿಸಿದ್ದೇವೆಯೇ? ನಮ್ಮ ವಿದ್ಯಾವಂತರ ಮೇಲೆ ಇಂಗ್ಲೀಷ್ ಗಾಳಿಯ ದಾಳಿಯ ಪರಿಣಾಮವಾಗಿ ಇಂಗ್ಲೀಷಿನ ದುರ್ವಾಸನೆ ಉಳಿದಿದೆ ಕನ್ನಡದ ಸುವಾಸನೆ ಇಲ್ಲವಾಗಿದೆ. ಇಂಥ ಪರಿಸರದಲ್ಲಿ ಯಾವ ಮಟ್ಟದ ವಿಜ್ಞಾನ ಸಾಹಿತ್ಯ ತಾನೇ ಉದ್ಭವಿಸೀತು?

೫

ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ 'ಸಿಂಹಭಾಗ' ಸರ್ಕಾರ, ವಿಶ್ವವಿದ್ಯಾಲಯಗಳು ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಇವುಗಳ ಪ್ರಕಟಣೆಗಳೇ. ಇಲ್ಲಿಯೂ ಸಿಂಹಭಾಗ ಮೀಸಲಾಗಿರುವುದು ಪಠ್ಯ ಮತ್ತು ಉಪಪಠ್ಯ ವಿಷಯಗಳಿಗೆ ಮಾತ್ರ. ಆಕಾಶಯಾನ, ಭೂಯುಗಗಳು, ಪ್ರಾಣಿಪ್ರಪಂಚ, ತಳಿವಿಜ್ಞಾನ ಈ ವಿವಿಧ ವಿಷಯಗಳ ಬಗ್ಗೆ ಅಧಿಕೃತ ಜನಪ್ರಿಯ ವಿಜ್ಞಾನ ವಾಙ್ಮಯ ದೊರೆಯುವುದು ಅತಿ ವಿರಳ. ಖಗೋಳ ವಿಜ್ಞಾನದಂಥ ಅತಿ ಪ್ರಾಚೀನ, ಚಿರನೂತನ ಹಾಗೂ ರೋಮಾಂಚಕ ಪ್ರಕಾರದಲ್ಲಿಯೂ ಆರ್. ಎಲ್. ನರಸಿಂಹಯ್ಯನವರ 'ಜಗತ್ತುಗಳ ಹುಟ್ಟು, ಸಾವು' ಬಂದ ಬಳಿಕ (೧೯೫೨) ಇನ್ನೊಂದು ಆ ತೂಕದ ಗ್ರಂಥ ಈ ತನಕ ಬಂದಿಲ್ಲ. ಆದ್ದರಿಂದ ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ಎಂದರೆ ಬಹುತೇಕ ಪಠ್ಯಪುಸ್ತಕ ಸಾಹಿತ್ಯವನ್ನೇ ಗಮನಿಸಬೇಕಾಗುವುದು. ಇತರ ಪ್ರಕಾರಗಳು ಪ್ರಕಟವಾಗದಿರುವುದು ವಿಂಡಿತವಾಗಿಯೂ ಚಿಂತಾಜನಕ ಪರಿಸ್ಥಿತಿ.

ಪಠ್ಯ ಪುಸ್ತಕಗಳ ಪ್ರಕಟಣೆಯನ್ನು ಔದ್ಯೋಗಿಕ ಗಾತ್ರದಲ್ಲಿ ಕೈಗೆತ್ತಿಕೊಂಡಿರುವ ಸಾರ್ವಜನಿಕ ಸಂಸ್ಥೆಗಳು (ಸರ್ಕಾರದ ಪಠ್ಯಪುಸ್ತಕ ನಿರ್ದೇಶನಾಲಯ ಹಾಗೂ ರಾಜ್ಯದ ನಾಲ್ಕು ವಿಶ್ವವಿದ್ಯಾಲಯಗಳು) ವಿಜ್ಞಾನ ಸಾಹಿತ್ಯ ನಿರ್ಮಾಣಕ್ಕೆ ಶಿಷ್ಟ ವಿಧಾನ ಯಾ ಸೂತ್ರವೊಂದನ್ನು ರೂಪಿಸಿ ತದನುಸಾರ ಎಲ್ಲ ಹಸ್ತಪ್ರತಿಗಳನ್ನೂ ತಪಾಸಿಸಿ ಮುದ್ರಿಸಿ ಪ್ರಕಟಿಸುವುವು (ಇಂದರೆ ಜಪಾನೀ ಮಾದರಿಯಲ್ಲಿ) ಎಂದು ನಿರೀಕ್ಷಿಸುವುದು ಸಹಜವಾದುದು. ಅರ್ಥಾನುಸಾರ ವಿಷಯದ ಆಳವಡಿಕೆ, ಅಂದವಾದ ಹಾಗೂ ಶುದ್ಧ ಕನ್ನಡ ಶೈಲಿ, ಪಾರಿಭಾಷಿಕ ಪದಗಳಲ್ಲಿ ಏಕರೂಪತೆ, ಚಿತ್ರ ಹಾಗೂ ನಕ್ಷೆಗಳಲ್ಲಿ ಶಿಷ್ಟೀಕರಣ, ಮುದ್ರಣ ವಿನ್ಯಾಸದಲ್ಲಿ

ಅಚ್ಚುಕಟ್ಟು ಮೊದಲಾದ ಬಿಡಿ ವಿವರಗಳತ್ತ ಅತ್ಯಂತ ಕಾಳಜಿಯ ಲಕ್ಷ್ಯ ಹರಿಸುವುದು ಅವಶ್ಯ. ಆದರೆ ಈಗ ಪ್ರಕಟವಾಗಿರುವ ಹೇರಳ ವಿಜ್ಞಾನ ಸಾಹಿತ್ಯವನ್ನು ಅವಲೋಕಿಸಿದರೆ ಇಂಥ ಯಾವ 'ಅಪರಾಧ'ವೂ ಘಟಿಸಿದ್ದಕ್ಕೆ ಪುರಾವೆ ದೊರೆಯುತ್ತಿಲ್ಲ. ಹೆಚ್ಚಿನವು ಕನ್ನಡ ಲಿಪಿಯಲ್ಲಿರುವ ವಿಕಾರರೂಪಿಗಳು. ವಿಜ್ಞಾನದ ಯಾವುದೋ ಒಂದು ವಿಭಾಗದ ಹೆಸರನ್ನು ಹೊತ್ತು ಕನ್ನಡ ಲಿಪಿಯಲ್ಲಿ ಪ್ರಕಟವಾಗಿರುವ ಪುಸ್ತಕಗಳು ವಿಜ್ಞಾನ ಸಾಹಿತ್ಯ ಎನ್ನಿಸವು.

ಇದು ಹೀಗೇಕೆ? ಹಿಂದೆಯೂ ಹೀಗೆಯೇ ಇತ್ತೇ? ಸುಮಾರಾಗಿ ೧೯೬೦ಕ್ಕೆ ಮೊದಲು ಪ್ರಕಟವಾದ ಪುಸ್ತಕಗಳು ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ಬಗ್ಗೆ ಭರವಸೆ ಮೂಡಿಸುವ ಮಟ್ಟದವು. ಅಲ್ಲಿ ಗುಣ ಅಧಿಕ, ಗಾತ್ರ ಕಡಿಮೆ. ವಿಷಯದ ಮೇಲೆ ಪ್ರಭುತ್ವವಿದ್ದು ಕನ್ನಡದಲ್ಲಿ ಬರೆಯುವ ಗೀಳುಹತ್ತಿದ್ದ ಕೆಲವೇ ಮಂದಿ ಆಗ ಬರೆಯುತ್ತಿದ್ದರು. ಆಗ ಇಂಥ ಪರಿಸರವಿದ್ದುದರಿಂದಲೇ ಶಿವರಾಮ ಕಾರಂತರ 'ವಿಜ್ಞಾನ ಪ್ರಪಂಚ'ದ ನಾಲ್ಕು ಸಂಪುಟಗಳು ಬೆಳಕು ಕಾಣುವುದು ಸಾಧ್ಯವಾಯಿತು (೧೯೫೯-೬೪); 'ಜ್ಞಾನಗಂಗೋತ್ರಿ' ಯ ಏಳು ಸಂಪುಟಗಳ ನಿರ್ಮಾಣ ಯಶಸ್ವಿಯಾಯಿತು (೧೯೭೦-೭೪); 'ಕನ್ನಡ ವಿಶ್ವಕೋಶ'ದ ಮಹಾಯೋಜನೆ ಭಾಗಶಃ ಕಾರ್ಯರೂಪಕ್ಕೆ ಇಳಿಯಿತು (೧೯೬೯ ರಿಂದ. ಈಗ, ೧೯೭೮, ಹತ್ತನೆಯ ಸಂಪುಟದ ಸಿದ್ಧತೆ ನಡೆದಿದೆ.)

೧೯೬೮ರ ವೇಳೆಗೆ ಕೇಂದ್ರ ಸರ್ಕಾರ ಎಲ್ಲ ರಾಜ್ಯಗಳಿಗೂ ಪ್ರಾದೇಶಿಕ ಭಾಷೆಗಳಲ್ಲಿ ವಿಜ್ಞಾನ ಸಾಹಿತ್ಯ ನಿರ್ಮಾಣಕ್ಕಾಗಿ ಹಿರಿಮೊತ್ತದ ಧನಸಹಾಯವನ್ನು (ಒಂದೊಂದು ರಾಜ್ಯಕ್ಕೆ ಒಂದು ಕೋಟಿ ರೂಪಾಯಿ) ಒದಗಿಸಿತು. ಉದ್ದೇಶ ಘನವಾದದ್ದೆ. ಕರ್ನಾಟಕ ಸರ್ಕಾರ ಈ ಮೊಬಲಗನ್ನು ರಾಜ್ಯದ ನಾಲ್ಕು ವಿಶ್ವವಿದ್ಯಾಲಯಗಳಿಗೆ ಸಮಪಾಗಿ ಹಂಚಿ ಅವುಗಳ ಮೂಲಕ ಈ ಕೆಲಸ ನಡೆಯಬೇಕೆಂದು ಅಪೇಕ್ಷಿಸಿತು, ಹಣವನ್ನು ಒದಗಿಸಿ, ಖರ್ಚಿನ ಮಿತಿಯನ್ನು ವಿಧಿಸಿ, ನಿಶ್ಚಿತ ವೇಳೆಯೊಳಗೆ ಆ ಗುರಿಯನ್ನು ಮುಟ್ಟಿದುದಾದರೆ ಅಭಿವರ್ಧನೆ ತಂತಾನೆ ಸಿದ್ಧಿಸುತ್ತದೆ ಎಂಬ ಸಾರ್ವಜನಿಕ ಕಾಮಗಾರಿ ಇಲಾಖೆಯ ಮನೋಭಾವ ಅಲ್ಲಿ ಹೇಗೋ ಇಲ್ಲಿಯೂ ಹಾಗೆ ಒಡನೆ ಗಾತ್ರವನ್ನು ಹಿಗ್ಗಿಸುತ್ತದೆ ಗುಣವನ್ನು ತಗ್ಗಿಸುತ್ತದೆ. ಕನ್ನಡ ವಿಜ್ಞಾನ ಸಾಹಿತ್ಯಕ್ಕೆ ಬಡಿದಿರುವ ಗರ ಇದು–ಗಾತ್ರ ವ್ಯಾಕೋಚನ, ಗುಣ ಸಂಕೋಚನ.

ಇಂದು ಪುಸ್ತಕ ಪ್ರಕಟಣೆ ಲೇಖಕರಿಗೆ ಆರ್ಥಿಕ ಆದಾಯವನ್ನು ತರುತ್ತದೆ. ಅವರ ಕೀರ್ತಿ ಪ್ರತಿಷ್ಠೆಗಳನ್ನು ವರ್ಧಿಸುತ್ತದೆ. ದೇವತೆಗಳು ಕಾಲಿಡಲು ಅಂಜುವಲ್ಲಿ ಮೂರ್ಖರು ಧಾವಿಸುವುದು ಪ್ರಾಯಶಃ ನೈಸರ್ಗಿಕ ನಿಯಮ. ಕನ್ನಡ ಲಿಪಿಯಲ್ಲಿರುವ ಹಸ್ತಪ್ರತಿಗಳು ಭರದಿಂದ ಸಿದ್ಧವಾಗುತ್ತವೆ, ಮುದ್ರಣಾಲಯಗಳನ್ನು ಸೇರುತ್ತವೆ, ಅಲ್ಲಿಂದ ನೇರ ಗೋದಾಮುಗಳನ್ನೊ ಸಾರ್ವಜನಿಕ ಸಂಸ್ಥೆಗಳ ಗ್ರಂಥಾಲಯಗಳನ್ನೊ ತಲುಪಿ ಅಲ್ಲಿ ಕನ್ನಡದ ಸಾರಸ್ವತ ವೈಭವವನ್ನು ಸಾರುವ ಭವ್ಯ ಅಲಭ್ಯ ಪ್ರತೀಕಗಳಾಗಿ ರಾರಾಜಿಸುತ್ತವೆ.

ಕನ್ನಡದಲ್ಲಿ ವಿಜ್ಞಾನ ವಾಙ್ಮಯದ ಗುಣಮಟ್ಟ ಗಾತ್ರಾನುಸಾರ ಏರದಿರುವುದು ವಿಷಾದದ ಸಂಗತಿ. ಇದರ ಪರಿಣಾಮವಾಗಿ ಪ್ರಕಟಣೆಗಳ ನಿಜೋದ್ದೇಶ– ಜನರ ಕೈಸೇರಿ ಅವರ ವಿಜ್ಞಾನ ಪ್ರಜ್ಞೆಯನ್ನು ಪಟ್ಟಗೊಳಿಸಿ ಬದುಕನ್ನು ಸುಧಾರಿಸುವುದು ಹಾಗೂ ತನ್ಮೂಲಕ ನವವಿಜ್ಞಾನ ಸಾಹಿತ್ಯ ಸೃಷ್ಟಿಗೆ ಹವೆಯನ್ನು ಉಂಟು ಮಾಡುವುದು– ಈಡೇರಿರುವುದಿಲ್ಲ.

ವಾಸ್ತವವಾಗಿ ಸಾರ್ವಜನಿಕ ಸಂಸ್ಥೆಗಳಲ್ಲಿ ಹಸ್ತಪ್ರತಿಗಳ ಮುದ್ರಣಪೂರ್ವ ತಪಾಸಣೆ ಪರಿಷ್ಕರಣಗಳ ಬಗ್ಗೆ ಅರಿವು ಉಂಟು. ಇದಕ್ಕಾಗಿ ಅವು ಸಿಬ್ಬಂದಿಯನ್ನು ನೇಮಿಸಿರುವವು, ತಜ್ಞರ ಸಲಹೆಯನ್ನು ಪಡೆಯುವವು. ಆದರೆ ಇಲ್ಲೆಲ್ಲ ರಂಗವಲ್ಲಿ ಕೆಳಗೆ ನುಸುಳಿ ಗುರಿ ಸೇರುವ ಚಾಕಚಕ್ಯ ಪ್ರದರ್ಶನವೊಂದೇ ಸಾಧಾರಣವಾಗಿ ಕಾಣುವುದು ವಾಡಿಕೆ. ಇದರಿಂದ ಲೇಖಕರ ನಿಷ್ಠೆ ಮತ್ತು ನೈತಿಕ ಮಟ್ಟಗಳ ಬಗ್ಗೆ ಸಂದೇಹ ಬರುವಂತಾಗಿದೆ. ಅವಕ್ವ ಶಿಕ್ಷಣ ಪದ್ಧತಿಯ ಅಪಕ್ವ ಫಲಗಳಿಂದ ಪ್ರಾಯಶಃ ಹೆಚ್ಚಿನದನ್ನು ನಿರೀಕ್ಷಿ-

ಸುವುದು ಅತ್ಯಾಶಾವಾದವೋ ಏನೋ!

೬

ಕನ್ನಡದಲ್ಲಿ ಇರುವ ವಿಜ್ಞಾನ ಸಾಹಿತ್ಯದ ಬಗ್ಗೆ ನಾವು ವಿಶೇಷ ಹೆಮ್ಮೆ ಏನೂ ತಳೆಯುವಂತಿಲ್ಲ. ಈ ಹತಾಶ ಪರಿಸ್ಥಿತಿ ತೊಲಗಿ ಉಜ್ವಲ ಪ್ರಕಾಶ ಬರುವಂತಾಗಲು ಹಲವಾರು ವಿಧಿನಿಯಮ-ಗಳನ್ನು ಸಂಬಂಧಿಸಿದವರು ಪಾಲಿಸುವುದು ಅತ್ಯವಶ್ಯ.

೧ ಲೇಖಕರು ತಾಕತ್ತಿನ ತಾಣದಿಂದ ಬರೆಯ-ಬೇಕು. ವಿಷಯ ಪ್ರಭುತ್ವ, ನಿರಂತರ ಅಧ್ಯ-ಯನ, ಇಂಗ್ಲೀಷು- ಕನ್ನಡ ಎರಡೂ ಭಾಷೆಗಳ ಮೇಲೆ ಹಿಡಿತ ಇವುಗಳಿಂದ ಲೇಖಕರಿಗೆ ತಾಕತ್ತು ಒದಗುವುದು.

೨ 'ಕೂಗಿ ಕೂಗಿ ರಾಗ, ಬಡಿದು ಬಡಿದು ತಾಳ' ಎಂಬ ಗಾದೆ ಉಂಟು. ಹಾಗೆಯೇ 'ಗೀಚಿ ಗೀಚಿ ಶೈಲಿ.' ನಮ್ಮ ಬಹುತೇಕ ಲೇಖಕರು 'ಹಲಗೆ ಬಳಪದ ಹಿಡಿಯದೊಂದಗ್ಗಳಿಕೆ' ಯವರು. ಕುಮಾರವ್ಯಾಸನ ಪ್ರತಿಭೆ ಇಲ್ಲದ ಇವರು ಜಳ್ಳನ್ನು ಕಾಳೆಂದು ಭ್ರಮಿಸುವುದು ಸಹಜವೇ. ಆದರೆ ಓದುಗ ಈ ಪಂಥಕ್ಕೆ ಸೇರಿ-ದವನಲ್ಲವಷ್ಟೆ. ಸಾಹಿತ್ಯಾಧ್ಯಯನ ಹಾಗೂ ಲೇಖನವನ್ನು ಶಾಸ್ತ್ರೀಯವಾಗಿ ನಿರ್ವಹಿಸುವುದು ಅತ್ಯವಶ್ಯ.

೩ ವಿಜ್ಞಾನ ಪಾರಿಭಾಷಿಕ ಪದಗಳ ಶಿಷ್ಟೀ-ಕರಣ ಒಡನೆ ಜರಗಿ ಅಧಿಕೃತ ಕೋಶ ಜರೂರಾಗಿ ಸಿದ್ಧವಾಗಲೇಬೇಕು.

೪ ವಿಜ್ಞಾನ ಪ್ರಕಟಣೆಯಲ್ಲಿ ನಿರತವಾಗಿರುವ ಸಾರ್ವಜನಿಕ ಸಂಸ್ಥೆಗಳು ವಿಜ್ಞಾನ ಸಾಹಿತ್ಯದ ಗುಣಮಟ್ಟವನ್ನು ಕಾಪಾಡುವ ದಿಶೆಯಲ್ಲಿ ಶಿಷ್ಟ ವಿಧಿಯೊಂದನ್ನು ರೂಪಿಸುವುದು ಅಗತ್ಯ.

೫ ಕಿರಿಯರ ಸಾರ್ವತ್ರಿಕ ವಿಶ್ವಕೋಶ, ಮೂಲವಿಜ್ಞಾನ ಪುಸ್ತಕಗಳು, ಸಚಿತ್ರ ವಿವರಣಾ ತ್ಮಕ ನಿಘಂಟುಗಳು, ವಿಜ್ಞಾನಿಗಳ ಜೀವನಚರಿತ್ರೆ ಗಳು, ವಿಜ್ಞಾನದ ಇತಿಹಾಸ ಮೊದಲಾದವು ಬಹುಮಟ್ಟಿಗಳಲ್ಲಿ ಪ್ರಕಟಗೊಂಡು ಬಹು ಜನರಿಗೆ ಸುಲಭಗ್ರಾಹ್ಯವಾಗಬೇಕು.

೬ ವಿಜ್ಞಾನ ಬೇರೆ ಬೇರೆ ಪ್ರಕಾರಗಳ ಮೇಲೆ ವಿಶ್ವಕೋಶಗಳು ಹಾಗೂ ನಿಘಂಟುಗಳು ಅಧಿಕ ಸಂಖ್ಯೆಯಲ್ಲಿ ಪ್ರಕಟವಾಗಬೇಕು.

೭ ವಿಜ್ಞಾನ ಪುಸ್ತಕಗಳ ಒಂದು 'ಡೈಜೆಸ್ಟ್' ಪ್ರತಿ ತಿಂಗಳೂ ಪ್ರಕಟವಾಗಬೇಕು. ('ಪುಸ್ತಕ ಪುರವಣಿ' ಮತ್ತು 'ಗ್ರಂಥಲೋಕ' ಈ ನಿಟ್ಟಿನಲ್ಲಿ ಸ್ವಾಗತಾರ್ಹ ನೂತನ ನಿಯತ ಕಾಲಿಕೆಗಳು, ೧೯೭೭ ರಿಂದ ಆರಂಭ). Science Today ಯಂಥ ಒಂದು ಮಾಸಿಕ ಕನ್ನಡದಲ್ಲಿ ಪ್ರಕಟ-ವಾಗಲು ಈಗ ಕಾಲ ಪಕ್ವವಾಗಿದೆ. (ಜನಪ್ರಿಯ ವಿಜ್ಞಾನ ಪರಬೇಕಾದ ಎತ್ತರ ಸಾಕಷ್ಟು ಇದೆ. 'ವಿಜ್ಞಾನ ಲೋಕ' ಇನ್ನಷ್ಟು ಮೈ ತುಂಬಿ ಸಕಾಲಿಕವಾಗಿ ಬರಬೇಕು.)

೮ ಬರೆದಾತನಿಗೂ ಪ್ರಕಟಿಸಿದಾತನಿಗೂ ಸಂತೃಪ್ತಿ ಲಭಿಸುವುದು ಬರಹಗಳು 'ಓದುಗನ ಕೈ ಸೇರಿದಾಗ. ಇವಕ್ಕೆ ಸಂಬಂಧಪಟ್ಟ ವ್ಯಾಪಾರೀ ಸೂತ್ರಗಳನ್ನು ಎಲ್ಲ ಪ್ರಕಾಶಕರು ಮುಖ್ಯವಾಗಿ ಸಾರ್ವಜನಿಕ ಸಂಸ್ಥೆಗಳು, ಗಮನಿಸಿ ಯೋಗ್ಯ ಕಾರ್ಯಕ್ರಮವನ್ನು ಜಾರಿಗೆ ತರ-ಬೇಕು.

೯ ಕನ್ನಡ ನಾಡಿನಲ್ಲಿ ಎಲ್ಲ ಚಟುವಟಿಕೆಗಳೂ- ಆಡಳಿತ ಶಿಕ್ಷಣ ಸಾರ್ವಜನಿಕ ಸಂಪರ್ಕ ವ್ಯವಹಾರ ಕನ್ನಡದಲ್ಲೇ ನಡೆಯಬೇಕು ಎಂದು ವಿಧಿಸಿ, ಎದುರಾಗುವ ಸಮಸ್ಯೆಗಳನ್ನು ವಿಜ್ಞಾನದ ನಿರಪೇಕ್ಷ ತಳದಲ್ಲಿ ಸ್ವೀಕರಿಸಿ ಪರಿಹರಿಸಿದರೆ ತಂತಾನೆ ಕನ್ನಡ ವಿಜ್ಞಾನ ಸಾಹಿತ್ಯದ ಗುಣ ಮಟ್ಟ ಏರುವುದು. ✡



ಬರ್ಲಿಂಗ್‌ಹ್ಯಾಮಿನ ಸಾರ್ವಜನಿಕ ವಾಚನಾಲಯದಿಂದ ಒಯ್ದ ಪುಸ್ತಕವನ್ನು ಒಬ್ಬಾತ ಹದಿನೆಂಟು ವರ್ಷಗಳ ನಂತರ ಹಿಂದಿರುಗಿಸಿದ. ಪುಸ್ತಕದ ಹೆಸರು: ಕಾಂಗ್ರೆಷ್ಯ ವಾಂಸಂಷ್ಯನೆ."

ಮರ, ಪಶು ಹಾಗೂ ಮನುಷ್ಯ

ಮೂಲ : ಕನ್ನಯ್ಯಾಲಾಲ ಮಿಶ್ರ, 'ಪ್ರಭಾಕರ'
ಕನ್ನಡಕ್ಕೆ: ಎಸ್. ಜಿ. ಮಂಜುನಾಥ ಸ್ವಾಮಿ

ನನ್ನ ಕಿಟಕಿಯ ಎದುರಿನಲ್ಲಿ ಒಂದು ಮರ ನಿಂತಿದೆ. ನನ್ನಂತೆಯೇ ಅದಕ್ಕೂ ಸಾಧಾರಣ ದೇಹವಿದೆ. ಆದರೆ ಅದರ ಮೇಲೆ ಹೂ ಬಿಟ್ಟಾಗ ನನಗಂತೂ ಆಕಾಶದಿಂದ ದೃಷ್ಟಿಗೈದ ದೇವತೆಗಳ ನಗುವಿನ ಸಮೂಹವೋ ಎಂಬಂತೆ ಕಾಣುತ್ತದೆ! ಸುತ್ತಲೂ ನಸುಗೆಂಪು ಹೂಗಳು ಮರದ ಎಲೆಗಳನ್ನು ಮುಚ್ಚಿ ನಿಂತಿವೆ.

ನಾನು ನನ್ನ ಮಂಚದ ಮೇಲೆ ಕುಳಿತು ಗಂಟೆಗಟ್ಟಲೆ ನೋಡುತ್ತಲೆ ಇರುತ್ತೇನೆ. ಆದರೂ ತೃಪ್ತಿಯಾಗುವುದಿಲ್ಲ. ನಾನು ಅನೇಕ ಸಾರಿ ಯೋಚಿಸಿದ್ದೇನೆ... ಕಪ್ಪು ಮಣ್ಣಿನ ಮೇಲೆ ಬೆಳೆದ ಈ ಮರದಲ್ಲಿ ಇಷ್ಟು ಕೋಮಲವಾದ ಎಲೆಗಳ ಮತ್ತು ಇಷ್ಟು ಸುಂದರವಾದ ಹೂಗಳ ಸೃಷ್ಟಿ... ಏನು ಚಮತ್ಕಾರ! ಯೋಚಿಸುತ್ತ, ಯೋಚಿಸುತ್ತ ಎಷ್ಟೋಬಾರಿ ನನ್ನ ಭಾವುಕತೆಯ ಆವೇಶದಲ್ಲಿ ಹೋಗಿ ಆ ಮರವನ್ನು ಆಲಂಗಿಸಿಕೊಂಡಿದ್ದೇನೆ. ಆದರಿಂದ ಸ್ನೇಹಿತನೊಡನೆ ಸೇರಿದಾಗ ಎಷ್ಟು ಆನಂದವಾಗುವುದೋ ಅಷ್ಟೆ ಆನಂದದೊರಕಿದೆ.

ಶಾಸ್ತ್ರ ಮತ್ತು ವಿಜ್ಞಾನಗಳೆರಡೂ ವೃಕ್ಷಗಳನ್ನು ಸಜೀವವೆಂದು ಪರಿಗಣಿಸುತ್ತವೆ. ನನಗೂ ಈ ವಿಷಯದಲ್ಲಿ ಸಾಧಾರಣ ನಂಬಿಕೆ ಇತ್ತು. ಆದರೆ ೧೯೪೨ರ ಜೈಲು ಯಾತ್ರೆಯಲ್ಲಿ ನನ್ನ ಜೊತೆಗಾರರೊಡನೆ ಡಕಾಯಿತರ ವಾರ್ಡಿನಲ್ಲಿ ಬಂಧಿಸಲ್ಪಡುವದಕ್ಕಿಂತ ಸ್ವಲ್ಪ ದಿನವೆ ಮೊದಲು ನನ್ನ ಹೆಂಡತಿ ಸತ್ತ ಕಾರಣ ನನ್ನ ಮನಸ್ಸಿನಲ್ಲಿ ಕವಿದ ಶೂನ್ಯತೆ ಮತ್ತೂ ದಟ್ಟವಾಯಿತು. ಶೂನ್ಯತೆಯ ಇದೇ ವಾತಾವರಣದಲ್ಲಿ ಒಂದು ದಿನ ಬೆಳದಿಂಗಳರಾತ್ರಿಯಲ್ಲಿ ಇದ್ದಕ್ಕಿದ್ದಂತೆಯೇ ಚೌಕದಲ್ಲಿ ನಿಂತ ವೃಕ್ಷದಲ್ಲಿ ಜೀವನ ಶಕ್ತಿಯ ಅನುಭವ ನನಗೆ ಸಾಕ್ಷಾತ್ತಾಗಿ ಉಂಟಾಯಿತು. ನನ್ನ ಮೇಲೆ ಕವಿದ ಶೂನ್ಯತೆಯ ಆವರಣ ಸ್ವಲ್ಪ ದೂರ ಸರಿದಂತಾಯಿತು. ಆಗಿನಿಂದ ವೃಕ್ಷಗಳೊಡನೆ ನನ್ನ ಆತ್ಮೀಯತೆ ಇನ್ನೂ ಗಾಢವಾಯಿತು.

ಅಂದು ನಾನು ಸ್ವಲ್ಪ ಇಂತಹ ಒಂದು "ಮೂಡ್" ನಲ್ಲಿದ್ದೆ. ಇದ್ದಕ್ಕಿದ್ದಂತೆ ಆ ಮರದ ಬಳಿ ತಲುಪಿದೆ. ಸಂಜೆಯ ಸಮಯವಾಗಿತ್ತು; ಸೂರ್ಯನ ಹೊಂಗಿರಣಗಳಿಂದ ಅದು ಇನ್ನೂ ಭವ್ಯವಾಗಿ ತೋರುತ್ತಾ ಇತ್ತು.

ನಾನು ಹೇಳಿದೆ, "ಎಲೈ ಸ್ನೇಹಿತನೆ, ನಿನ್ನ ಸಂತೋಷದಲ್ಲಿ ನೀನೇ ಮೈಮರೆತಿರುವೆ, ಏನು ವಿಶೇಷ?" ಪಾಪ, ಆ ಮರ ಏನು ತಾನೆ ಹೇಳೀತು? ಆದರೆ ಆಗಲೆ ಕೆಲವು ಹೂಗಳು ನನ್ನ ಬಳಿ ಬಿದ್ದವು. ನನ್ನ ಭಾವುಕತೆಯಲ್ಲಿ ನನಗನ್ನಿಸಿತು ಈ ಹೂಗಳೇ ನನ್ನ ಪ್ರಶ್ನೆಗೆ ಉತ್ತರ ಎಂದು. ಮತ್ತೆ ಆಗಲೆ ಆತ್ಮೀಯತೆಯ ಪ್ರವಾಹದಲ್ಲಿ ಮುಳುಗಿ ಹೋದ ನಾನು ಹರೆಗಳನ್ನು ಪ್ರೀತಿಯಿಂದ ತಟ್ಟಿ ಹೇಳಿದೆ, 'ಸರಿ; ಹೊರಡು, ಸ್ವಲ್ಪ ಸುತ್ತಿ ಬರೋಣ.'

ಆದರೆ ಆ ಕೂಡಲೆ ನನ್ನ ಮದ ಕಡಿಮೆಯಾಯಿತು. ಭಾವುಕತೆಯ ಆಕಾಶದಿಂದ

ಯಥಾರ್ಥವೆಂಬ ಪೃಥ್ವಿಯ ಮೇಲೆ ಬಂದು-ಬಿಟ್ಟೆ. ಇಲ್ಲಾದರೂ ಮರ ಮರವೆ, ಮನುಷ್ಯ ಮನುಷ್ಯನೆ! ಈಗ ನನ್ನಷ್ಟಕ್ಕೆ ನಾನೆಂದುಕೊಂಡೆ 'ಎಲಾ ಹುಚ್ಚೆ, ಇದು ಮರ; ಇದು ಎಲ್ಲಿಗೆ ಹೋಗುತ್ತೆ'? ಮನಸ್ಸಿನಲ್ಲಿ ಪಶ್ಚಾತ್ತಾಪ-ವುಂಟಾಯಿತು. ಮರಗಳು ನಡೆಯುವಂತಾಗಿದ್ದರೆ! ಅನ್ನಿಸಿತು.

ಮತ್ತೆ ನಾನು ವಿಚಾರಲಹರಿಯಲ್ಲಿ ಮಗ್ನ-ನಾದೆ. ಈ ಮರದಲ್ಲಿ ಜೀವನ ಇದೆ, ಸೌಂದರ್ಯ ಇದೆ ಮತ್ತು ಬಹಳ ವಿಚಾರಗಳಲ್ಲಿ ಇದು ಇಂದಿನ ಮಾನವನಿಗಿಂತ ಶ್ರೇಷ್ಠವಾಗಿದೆ. ಆದರೆ ಇದರಲ್ಲಿ ಗತಿ ಇಲ್ಲ ಆದ್ದರಿಂದ ಇದು ಸ್ಥಾವರ.

ಇದೇ ಸರಣಿಯಲ್ಲಿ ಯೋಚಿಸುತ್ತಾ ತಿರು-ಗಾಡಲು ಹೊರಟೆ. ಹೊಲದ ಹತ್ತಿರ ಹೋಗುತ್ತಿದ್ದಂತೆಯೇ ನನಗೊಂದು ಸೂತ್ರ ಭಾಸ-ವಾಯಿತು. ಅದಕ್ಕೆ ಮೂರು ಧಾರೆಗಳಿವೆ:

–ಒಂದರಲ್ಲಿ ಜೀವನವಿದೆ, ಆದರೆ ಗತಿ ಇಲ್ಲ– ಅದು ಮರ,

–ಮತ್ತೊಂದರಲ್ಲಿ ಜೀವನವಿದೆ ಮತ್ತು ಗತಿ ಇದೆ– ಅದು ಪಶು.

–ಇದರೆ ಇನ್ನೊಂದರಲ್ಲಿ ಜೀವನವಿದೆ, ಗತಿ ಇದೆ ಮತ್ತು ಗತಿಗೆ ಸರಿಯಾದ ದಿಕ್ಕು ಇದೆ– ಪ್ರಗತಿಯೂ ಇದೆ. ಅವನು ಮನುಷ್ಯ.

ಈ ಮೂರು ಧಾರೆಗಳ ಸಮನ್ವಿತ ಭಾಷ್ಯ ಪ್ರಗತಿಶೀಲತೆ ಎಂದಾಯಿತು. ಇದೇ ಮಾನವಜೀವನದ ಒರೆಗಲ್ಲು ಮತ್ತು ಇದೇ ಅವನನ್ನು ವೃಕ್ಷ ಮತ್ತು ಪಶುವಿನಿಂದ ಬೇರ್ಪಡಿಸುವುದು. ★



ಇದೇನು ಸಿನಿಮಾ ರಂಗದಲ್ಲಿ ಹೊಸದಲ್ಲ. ೧೯೩೫ರಲ್ಲಿ ತೆರೆಕಂಡ ಪ್ರಥಮ ಹಿಂದಿ ಸಾಮಾಜಿಕ "ಜವಾನಿ-ಕಿ-ಹವಾ" ಚಿತ್ರಕ್ಕೆ ಒಬ್ಬ ಜರ್ಮನಿಯ ನಿಪುಣ ಫ್ರಾನ್ಜ ಆಕ್ಸಟನ್ ನಿರ್ದೇಶನ ಮಾಡಿದರೆಂದರೆ ಈಗ ನಮಗೆ ಆಶ್ಚರ್ಯವಾಗದೆ ಇರದು. ಅದು ಬಾಂಬೆ ಟಾಕೀಸ್‌ನವರ ತಯಾರಿಕೆ. ದೇವಿಕಾರಾಣಿ, ನಿಜಾಮ್-ಉಲ್-ಹುಸೇನ್ ಮುಖ್ಯ ಕಲಾವಿದರುಗಳು. ಹಿಂದಿ ಭಾಷೆಯ ಗಂಧವೇ ತಿಳಿಯದಿದ್ದರೂ ಇವರು ಅನೇಕ ಯಶಸ್ವಿ ಹಿಂದಿ ಚಿತ್ರಗಳನ್ನು ನಿರ್ದೇಶಿಸಿದರು.

ಗುಬ್ಬೀ ವೀರಣ್ಣನವರೇ ತಯಾರಿಸಿದ "ಜೀವನ ನಾಟಕ" ಚಿತ್ರ ಕೊಯಿಮತ್ತೂರಿನಲ್ಲಿ ತಯಾರಾಯಿತು. ಇದರ ನಿರ್ದೇಶಕರು ಎ. ವಹಾಬ್. ಕನ್ನಡ ಗಂಧವೆ ಗೊತ್ತಿಲ್ಲದವರು. ಈ ಚಿತ್ರದ ಸಂಭಾಷಣೆ ದಿ|| ಅ. ನ. ಕೃಷ್ಣರಾಯರದು. ೧೯೪೨ರಲ್ಲಿ ತೆರೆ ಕಂಡ ಈ ಚಿತ್ರದಲ್ಲಿ ಅಭಿನಯಿಸಿದವರು ಗುಬ್ಬೀ ವೀರಣ್ಣ, ಹುಬ್ಳೀಕರ್, ಕೆಂಪರಾಜ್, ಬಿ. ಜಯಮ್ಮ ಮುಂತಾದವರು.

ಈಗ ತಮಿಳುನಾಡಿನ ಮುಖ್ಯಮಂತ್ರಿಯಾದ ಎಂ. ಜಿ. ರಾಮಚಂದ್ರನ್ ಪ್ರಥಮ ಬಾರಿಗೆ ಬಂದು ತಮಿಳು ಚಿತ್ರದಲ್ಲಿ ಒಂದು ಪುಟ್ಟ ಪಾತ್ರವನ್ನು ವಹಿಸಿದರು. ಆ ಚಿತ್ರವೇ "ಸತಿ ಲೀಲಾವತಿ". ಕಥೆ ದಿ|| ಜೆಮಿನಿ ಎಸ್. ಎಸ್. ವಾಸನ್ ಅವರದು. ಈ ತಮಿಳು ಸಾಮಾಜಿಕ ಚಿತ್ರಕ್ಕೆ ಹಾಲಿವುಡ್ ಖ್ಯಾತಿಯ 'ಎಲಿಸ್ ಆರ್ ಡಂಗನ್ನ'ರ ನಿರ್ದೇಶನ. ಈ ಚಿತ್ರ ೧೯೩೬ರಲ್ಲಿ ಬಿಡುಗಡೆಯಾಗಿ ಹಣ-ಯಶಸ್ಸು ಎರಡನ್ನೂ ಗಳಿಸಿತು.

ಟಿ. ಈ. ಶ್ಯಾಮ್

ಗ್ರಾಮೋಫೋನ್: ಹೊಸಯುಗದ ಹರಿಕಾರ

ಎ. ಮಾಧವ ಉಡುಪ

ಸುಮಾರು ನೂರು ವರುಷಗಳ ಹಿಂದಿನ ಮಾತು. ೧೮೭೭ರ ಬೇಸಿಗೆಯ ದಿನ, ಮೆನ್ಲೋ-ಪಾರ್ಕಿನ ಪ್ರಯೋಗಶಾಲೆಯಲ್ಲಿ ಎಡಿಸನ್ನನ ಶೋಧ ಸಾಗಿದೆ. ಟೆಲಿಗ್ರಾಫಿನಿಂದ ಬರುವ ಸಂಕೇತಗಳನ್ನು ದಾಖಲು ಮಾಡಿಕೊಂಡು ಪುನಃ ಅವುಗಳನ್ನು ನುಡಿಸಲು ಸಾಧ್ಯವಾದೀತೇ? ಎಂಬುದರ ಪರೀಕ್ಷೆ ನಡೆಯುತ್ತಿದೆ. ಟೆಲಿಗ್ರಾಫಿನ ಡಾಟ್ ಮತ್ತು ಡ್ಯಾಶುಗಳ ತೀವ್ರತೆಗನುಸಾರವಾಗಿ ಧ್ವನಿಗ್ರಾಹಕದ ಪೊರೆ ಕಂಪಿಸುತ್ತಿದೆ. ಆ ಕಂಪನವು ಮೇಣ ಸವರಿದ ಕಾಗದದ ಮೇಲೆ ದಾಖಲಾಗುವಂತೆ ಸೂಜಿಯೊಂದನ್ನು ಆ ಪೊರೆಗೆ ತಗುಲಿಸುತ್ತ ತನ್ನ ಸಂಗಾತಿಗೆ ಎಡಿಸನ್ ಗಟ್ಟಿಯಾಗಿ ಏನೋ ಹೇಳಿದ. ಎದುರಿಗೇ ಇದ್ದ ಧ್ವನಿಗ್ರಾಹಕದ ಪೊರೆ ಕಂಪಿಸಿ, ಸೂಜಿ ಅವನ ಕೈಬೆರಳಿಗೆ ಚುಚ್ಚಿತು. ಎಡಿಸನ್ನನ ಅನ್ವೇಷಕ ಪ್ರಜ್ಞೆ ಜಾಗ್ರತಗೊಂಡಿತು. ಮಾತಿನ ಅಲೆಗಳೇ ಪೊರೆಯನ್ನು ಅದುರಿಸಿ ಸೂಜಿಯನ್ನಲುಗಿಸಬಲ್ಲವಾದಲ್ಲಿ ಮಾತನ್ನೇಕೆ ಪುನರುತ್ಪಾದಿಸಲಾಗುವುದಿಲ್ಲ? ಎಂಬ ವಿಚಾರ ಅವನಿಗೆ ಬಂತು.

ಆ ಯೋಚನೆ ಹೊಳೆದದ್ದೇ ತಡ, ಎಡಿಸನ್ನನ ಪ್ರಯೋಗಕ್ಕೆ ಹೊಸ ತಿರುವು ಬಂತು. ಮೇಣ ಸವರಿದ ಕಾಗದವನ್ನು ಅಣಿಗೊಳಿಸಿ, ಧ್ವನಿಗ್ರಾಹಕದ ಪೊರೆಯೆದುರು "ಹಲ್ಲೊ" ಎಂದು ಉಸುರಿದ. ಪೊರೆ ಅದುರಿ ಮೇಣದಲ್ಲಿ ಗೀರುಂಟಾಯಿತು. ಕಾಗದವನ್ನು ಹಿಂದಕ್ಕೆಳೆದು, ಗೀರಿನ ಜಾಡಿನಲ್ಲೇ ಸೂಜಿ ಚಲಿಸುವಂತೆ ಮಾಡಿದ. ಪೊರೆ ಆಗ ಪುನಃ ಕಂಪಿಸಿ "ಹಲ್ಲೊ" ಎಂದು ಅಸ್ಪಷ್ಟವಾಗಿ ಉಸಿರಿದ್ದು ಆತನ ಕಿವುಡು ಕಿವಿಗೂ ಕೇಳಿಸಿತು. ಆತನ ಅನ್ವೇಷಣೆಯ ಸಾಹಸದ ಹೊಸದೊಂದು ಲೋಕದ ಬಾಗಿಲನ್ನೇ ಅದು ತೆರೆಯಿಸಿತು. ಧ್ವನಿ ಪುನರುತ್ಪಾದಕದ ನಿರ್ಮಾಣಕ್ಕದೇ ಕಾರಣವಾಯಿತು.

ಎಡಿಸನ್ನನು ನಿದ್ರಾಹಾರಗಳಿಲ್ಲದ ದಿನಗಳನ್ನು ಕಳೆದು ದುಡಿದಿದ್ದರಿಂದ ಮಾತಾಡುವ ಯಂತ್ರ ಅವತರಿಸಿತು. ತವರದ ತೆಳುಹಾಳೆಯನ್ನು ಹೊದ್ದ-



ಮೆನ್ಲೋಪಾರ್ಕಿನ ಮಾಂತ್ರಿಕ

ಥಾಮಸ್ ಆಲ್ವಾ ಎಡಿಸನ್ ಹುಟ್ಟಿದ್ದು ೧೮೪೭ರ ಫೆಬ್ರುವರಿ ೧೧ ರಂದು–ಅಮೇರಿಕದ ಒಹಾಯೋ ರಾಜ್ಯದ ಮಿಲಾನಿನಲ್ಲಿ. ಚುರುಕು ಬುದ್ಧಿಯ ಎಡಿಸನ್ನನಿಗೆ ಬಾಲ್ಯದಿಂದಲೂ ತಿಳಿವಿನ ಹಂಬಲ, ಹೊಸತನ್ನು ಕಂಡು ಹಿಡಿಯುವ ಹುಮ್ಮಸ್ಸು. ಈ ಹುಮ್ಮಸ್ಸು ಅವನಲ್ಲಿ ಮಿತಿಮೀರಿ ಇದ್ದುದರಿಂದಲೇ ಏನೋ, ಶಾಲೆ ಸೇರಿದ ಮೂರು ತಿಂಗಳುಗಳಲ್ಲೇ ಎಲ್ಲರಿಂದಲೂ ತಲೆತಿರುಕ ಅನಿಸಿಕೊಂಡ. ಕೊನೆಗೆ ಅದರಿಂದ ಬೇಸರ ಬಂದು ಶಾಲೆಯನ್ನೆ ಬಿಟ್ಟ. ಮುಂದೆ ಮನೆಯೇ ಆತನ ಶಾಲೆಯಾಯಿತು.


ಓರಗೆಯ ಮಕ್ಕಳು ಆಡಿ ಓಡಿ ನಲಿಯುತ್ತಿರುವಾಗ ಆತ ಪ್ರಯೋಗ–ಪರೀಕ್ಷೆಗಳಲ್ಲಿ ಮುಳುಗಿರುತ್ತಿದ್ದ. ಪ್ರಯೋಗ ಸಾಧನೆಗಳಿಗಾಗಿ ಹಣ ಕೂಡಿಸಲು ತರಕಾರಿಗಳನ್ನು ರೈಲಿನಿಂದ ನೆರೆಊರಿಗೆ ಸಾಗಿಸಿ ಮಾರತೊಡಗಿದ.

ಒಮ್ಮೆ ಆತ ತರಕಾರಿ ಬುಟ್ಟಿಗಳನ್ನು ಹಿಡಿದುಕೊಂಡು ರೈಲನ್ನು ಸಮೀಪಿಸುತ್ತಿರುವಾಗ ರೈಲು ಹೊರಟೇಬಿಟ್ಟಿತು. ಆಗ ಅವನು ಲಗುಬಗೆಯಿಂದ ಓಡಿ ಹೋಗಿ ರೈಲನ್ನೇರಲು ಪ್ರಯತ್ನಿಸಿದ. ನಡೆದು ಗಾಡಿಯ ಬಾಗಿಲಿಗೆ ನಿಂತಿದ್ದ ರೈಲು ಅಧಿಕಾರಿಯೊಬ್ಬ ಆತನ ಕಿವಿಗಳನ್ನು ಹಿಡಿದು ಮೇಲಕ್ಕೆಳೆದುಕೊಂಡ. ಹೀಗಾಗಿ ರೈಲೇನೋ ಸಿಕ್ಕಿತು; ಆದರೆ ಕರ್ಣಪಟಲಕ್ಕೆ ಧಕ್ಕೆಯಾಗಿ ಕಿವಿ ಕಿವುಡಾಯಿತು. ಆದರೆ ಅವನ ಸಾಧನೆಗೇನೂ ಇದರಿಂದ ಚ್ಯುತಿ ಬರಲಿಲ್ಲ.

೧೮೭೬ರಲ್ಲಿ ನ್ಯೂಜರ್ಸಿಯ ಮೆನ್ಲೋಪಾರ್ಕಿನಲ್ಲಿ ಆತನ ಪ್ರಯೋಗಶಾಲೆ ತಲೆಯೆತ್ತಿತು. ಆತನ ಏಕಾಗ್ರಚಿತ್ತ, ಕಠಿಣ ಪರಿಶ್ರಮಗಳ ಫಲವಾಗಿ ದ್ವಿಪ್ರತಿಯಂತ್ರ, ಫೋನೋಗ್ರಾಫ್, ವಿದ್ಯುದ್ದೀಪ, ಚಲಚಿತ್ರ ಪುರೋದರ್ಶಕ, ಸಂಚಯಕೋಶ, ಸಿಮೆಂಟಿನ ಮನೆ ಮೊದಲಾದ ಹತ್ತಾರು ಬಗೆಯ ಸಾಧನಗಳು ಮೆನ್ಲೋಪಾರ್ಕಿನ ಆ ಮಹಾ ಅನ್ವೇಷಕನ ಪ್ರಯೋಗ ಶಾಲೆಯಿಂದ ಹೊರ ಬರತೊಡಗಿದವು. ಎಡಿಸನ್ನನ ಸೃಜನಶೀಲ ಪ್ರತಿಭೆಗೆ ಬೆರಗಾದ ಜನ ಆತನನ್ನು 'ಮೆನ್ಲೋಪಾರ್ಕಿನ ಮಾಂತ್ರಿಕ' ನೆಂದು ಕರೆದರು. ಮುಂದೆ ಆತ ವೆಸ್ಟ್ ಆರೆಂಜಿಗೆ ತನ್ನ ಪ್ರಯೋಗಶಾಲೆಯನ್ನು ಬದಲಿಸಿದರೂ ಆ ಹೆಸರು ಮಾತ್ರ ಆತನನ್ನು ಬಿಡಲಿಲ್ಲ.

೧೯೩೧ ರ ಅಕ್ಟೋಬರ ೧೮ ರಂದು ಆತ ಕೊನೆಯುಸಿರೆಳೆದಾಗ ಆತನ ಹೆಸರಿನಲ್ಲಿ

ಸಿಲಿಂಡರು ಧ್ವನಿಗ್ರಾಹಕದ ಸೂಜಿಗೆ ತಾಗಿ ನಿಂತಿತು. ಆತ ಆ ಸಿಲಿಂಡರಿನ ಹಿಡಿ ತಿರುಗಿಸುತ್ತಾ ಧ್ವನಿಗ್ರಾಹಕದೆದುರು ಒಂದು ಜೋಗುಳವನ್ನು ಹಾಡಿದಾಗ– ಧ್ವನಿತರಂಗಗಳು ಧ್ವನಿಗ್ರಾಹಕದ ಪೊರೆಗೆ ಬಡಿದು ಸೂಜಿಯೂ ಅಲುಗಿ ತವರದ ಹಾಳೆಯನ್ನೊತ್ತಿತು. ತವರದ ಹಾಳೆಯಲ್ಲಿ ಏರುತಗ್ಗುಗಳಿರುವ ಓರೆಕೋರೆಯಾದ ಜಾಡಿನ ಸುತ್ತುಗಳುಂಟಾದುವು. ಎಡಿಸನ್ನನೀಗ ಸಿಲಿಂಡರನ್ನು ಹಿಂದಕ್ಕೆ ತಿರುಗಿಸಿ ಆ ಜಾಡಿನ ಮೊದಲಲ್ಲೇ ಸೂಜಿಯನ್ನಿರಿಸಿದ. ಏರುತಗ್ಗಿನ ಆ ಜಾಡಿನಲ್ಲಿ ಸರಿಯುವ ಸೂಜಿಯು ಕಂಪನದಿಂದ ಪೊರೆಯೂ ಕಂಪಿಸಿದಾಗ ಜೋಗುಳದ ಹಾಡು ಮೆಲುದನಿಯಲ್ಲಿ ಆ ಯಂತ್ರದಿಂದ ಹೊರಬರತೊಡಗಿತು. ಯಂತ್ರದ ಸಂಗಾತಿಗಳೆಲ್ಲ ಅದರಿಂದ ದಂಗು



ಥಾಮಸ್ ಆಲ್ವಾ ಎಡಿಸನ್

೧೫೦೦ ಕ್ಕೂ ಮೇಲ್ಪಟ್ಟು ಹೊಸ ಅನ್ವೇಷಣೆಗಳು ದಾಖಲಾಗಿದ್ದುವು. ತನ್ನ ಈ ಅದ್ಭುತ ಯಶಸ್ಸಿಗೆ "ನೂರರಲ್ಲೊಂದು ಪಾಲು ಸ್ಫೂರ್ತಿ ಕಾರಣವಾದರೂ, ಉಳಿದ ತೊಂಬತ್ತೊಂಬತ್ತು ಪಾಲು ಕಠಿಣ ಪರಿಶ್ರಮದ ಫಲ" ಎಂದೊಮ್ಮೆ ಹೇಳಿದ್ದ.


ಬಡಿದುಹೋದರು.

ಎಡಿಸನ್ನನ ಆ ಯಂತ್ರವೇ ೧೮೭೮ರ ಫೆಬ್ರುವರಿ ೧೯ ರಂದು, 'ಫೋನೋಗ್ರಾಫ್' ಎಂದು ಪೇಟೆಂಟ್ ಆಫೀಸಿನ ದಾಖಲೆಗಳಲ್ಲಿ ನಮೂದಿಸಲ್ಪಟ್ಟಿತು. ಪತ್ರಿಕೆಗಳಂತೂ ಎಡಿಸನ್ನನ ಸಾಧನೆಯನ್ನು '೧೯ನೇ ಶತಮಾನದ ಪವಾಡ' ವೆಂದು ಬಣ್ಣಿಸಿದುವು. ಫೋನೋಗ್ರಾಫಿನ ದರ್ಶನಕ್ಕಾಗಿ ಜನ ಮೆನ್ಲೋಪಾರ್ಕನ್ನು ಮುತ್ತಿದರು. ತಮ್ಮದೇ ಹಾಡುನುಡಿಗಳನ್ನು ಫೋನೋಗ್ರಾಫಿನಲ್ಲಿ ಕೇಳಿಸಿಕೊಂಡು ನಲಿದರು. ಕಡಲಿನಾಚೆಯ ನಾಡುಗಳಿಂದಲೂ ಎಡಿಸನ್ನನ ಅತ್ಯಂತ ಪ್ರಿಯವಾದ ಈ 'ಮಗು'ವಿಗೆ ಕರೆ ಬಂತು. ಫೋನೋಗ್ರಾಫಿನ ಮಾತಿನ ಮೋಡಿಗೆ ಜನರೆಲ್ಲ ಮಾರುಹೋದರು. ಮಾತನ್ನು ಹಿಡಿದಿಟ್ಟು

ಸಾವಿನನಂತರವೂ ಅದು ಕೇಳಿಸಬಲ್ಲದೆಂಬುದರಲ್ಲಿ ಅವರಿಗೆ ಸಂಶಯ ಉಳಿಯಲಿಲ್ಲ. ವಾಣಿಜ್ಯ-ವ್ಯವಹಾರಗಳಲ್ಲೂ ಫೋನೋಗ್ರಾಫ್ ನೆರವಾಗಬಲ್ಲದೆಂದು ಎಡಿಸನ್ನನೆಂದರೂ ಜನ ಆ ಬಗ್ಗೆ ಯೋಚಿಸಲೇ ಇಲ್ಲ. ಕೇವಲ ತಮಾಷೆಯ ಆಟಿಕೆಯಾಗಿ ಕೆಲಕಾಲ ಅದು ಜನರ ಮನಸ್ಸನ್ನು ರಂಜಿಸಿತು ಅಷ್ಟೆ! ಫೋನೋಗ್ರಾಫಿನ ಇತಿಮಿತಿಗಳನ್ನೂ ಆ ನಿಟ್ಟಿನಲ್ಲಿ ಕಡೆಗಣಿಸುವಂತಿಲ್ಲ. ಎರಡುನಿಮಿಷಕ್ಕಿಂತ ಹೆಚ್ಚು ಕಾಲ ಅದು ನುಡಿಯಲಾರದಾಗಿತ್ತು. ಹೀಗಾಗಿ ಬಿಡಿನುಡಿಗಳನ್ನಲ್ಲದೆ ಇಡಿ ಸಂಗೀತ ಕೇಳುವಾಗ ನಾಲ್ಕಾರು ಬಾರಿ ತಗಡನ್ನು ಬದಲಾಯಿಸಬೇಕಾದ ಪ್ರಸಂಗ ಬಂದು ಭಾವನಷ್ಟವಾಗುತ್ತಿತ್ತು. ಅಲ್ಲದೆ ಸಿಲಿಂಡರನ್ನು ಪುನಃ ತಿರುಗಿಸುವಾಗ ಹದ ತಪ್ಪಿದಲ್ಲಿ ಮೊರೆಯುತ್ತಿತ್ತು. ಇವೆಲ್ಲವುಗಳಿಂದಾಗಿ ಬಿಡಿನುಡಿಗಳನ್ನು ಪುನರುತ್ಪಾದಿಸುವುದಲ್ಲದೆ ಅದಕ್ಕಿಂತ ಹೆಚ್ಚಿನದು ಅದರಿಂದ ಸಾಧ್ಯವಾಗಲಿಲ್ಲ. ದಿನಕಳೆದಂತೆ ಜನರಿಗೆ ಅದರಲ್ಲಿ ಆಸಕ್ತಿಯೂ ಕಡಿಮೆಯಾಗತೊಡಗಿತು. ಎಡಿಸನ್ನನೂ 'ಜಗತ್ತಿನ ಕತ್ತಲೆಯನ್ನೋಡಿಸುವ ವಿದ್ಯುದ್ದೀಪದ ಸಂಶೋಧನೆಯಲ್ಲಿ ಮುಳುಗಿದುದರಿಂದ ಫೋನೋಗ್ರಾಫನ್ನು ಕೇಳುವವರಿಲ್ಲವಾಯಿತು.

ಫೋನೋಗ್ರಾಫಿನ ಸುಧಾರಣೆಯಿಂದ ಜನಜೀವನದಲ್ಲಿ ಕ್ರಾಂತಿಯನ್ನುಂಟುಮಾಡಬಹುದೆಂದು ಮನಗಂಡವರು ಅನೇಕರಿದ್ದರು. ಎಡಿಸನನು ಅನ್ಯಮನಸ್ಕನಾಗಿರುವಾಗ ಅವರೆಲ್ಲ ಫೋನೋಗ್ರಾಫಿನ ಸುಧಾರಣೆಗೆ ಕೈಹಾಕಿದರು. ಅಥವರಲ್ಲಿ ಎಮಿಲ್ ಬರ್ಲಿನರ್‌ನೂ ಒಬ್ಬ.


ಧ್ವನಿಮುದ್ರಿಕೆಯಾಗಿ ಸಿಲಿಂಡರನ್ನು ಕಟ್ಟಿದ ತವರದ ಹಾಳೆಯ ಬದಲಿಗೆ, ಆತ ವೃತ್ತಾಕಾರದ ಮೇಣದ ತಟ್ಟೆಯನ್ನುಪಯೋಗಿಸಿದ. ಮಾತಿನ ಧ್ವನಿತರಂಗಗಳ ಹೊಡೆತಕ್ಕೆ ಸರಿಯಾಗಿ ಅದರಲ್ಲಿ ಜಾಡಿನ ಸುರುಳಿ ಕೆತ್ತಲ್ಪಟ್ಟಿತ್ತು. ಮೊದಮೊದಲು ಏರು-ತಗ್ಗುಗಳಿರುವ ಜಾಡುಗಳಲ್ಲೇ ಧ್ವನಿಯನ್ನು ದಾಖಲು ಮಾಡಿಕೊಂಡರೆ ನಂತರ ಅಂಕುಡೊಂಕಿನ ಜಾಡುಗಳಿರುವ ಧ್ವನಿಮುದ್ರಿಕೆಗಳನ್ನೇ ಆತ ಬಳಕೆಗೆ ತಂದ. ಶಬ್ದದ ಪುನರುತ್ಪಾದನೆಗಾಗಿ ಮೇಣದ ಆ ಧ್ವನಿ-



ಹಳೆಗಾಲದ ಗ್ರಾಮೋಫೋನ್ ಮಾದರಿಗಳು

ಮುದ್ರಿಕೆಯನ್ನೇ ಸೀದಾ ಬಳಸದೆ, ವಿದ್ಯುದ್ವಿಧಾನದಿಂದ ಅದರ ವಿಮುಖಪ್ರತಿ ಪಡೆದು, ಪ್ಲಾಸ್ಟಿಕ್ಕುಗಳ ಮೇಲೆ ಅವನ್ನೊತ್ತಿ ಧ್ವನಿಮುದ್ರಿಕೆ ತಯಾರಿಸಿದ. ಇದರಿಂದಾಗಿ ಶಬ್ದದ ಪುನರುತ್ಪಾದನೆ ಮತ್ತಷ್ಟು ಸ್ಪಷ್ಟವಾದರೂ ಗಟ್ಟಿಯಾಗಲಿಲ್ಲ. ಜಾಡಿನಲ್ಲಿ ಸಂಚರಿಸುತ್ತಾ ಕೇಂದ್ರದ ಕಡೆಗೆ ಸರಿಯುವ ಸೂಜಿಯ ಕಂಪನವನ್ನು ವೃದ್ಧಿಸುವುದೊಂದೇ ಅದಕ್ಕುಳಿದ ಮಾರ್ಗವಾಗಿತ್ತು. ಅದರೊಂದಿಗೇ ಪೊರೆಯ ಕಂಪನದ ಅಲೆಗಳೂ ಶಕ್ತಿಶಾಲಿಯಾಗುವಂತೆ ಮಾಡಬೇಕಿತ್ತು. ಧ್ವನಿಪೆಟ್ಟಿಗೆಯ ರಚನೆಯಿಂದಾಗಿ ಆ ಉದ್ದೇಶವೂ ಈಡೇರಿದಂತಾಯಿತು. ಸೂಜಿಯ ಕಂಪನವನ್ನು ಆಸಿಕೆಯ ಸಹಾಯದಿಂದ ವೃದ್ಧಿಸಿ ಅಭ್ರಕದ ಬಿಲ್ಲೆಗೆ ವರ್ಗಾಯಿಸುವ ವ್ಯವಸ್ಥೆ ಆ ಧ್ವನಿಪೆಟ್ಟಿಗೆಯಲ್ಲಿತ್ತು. ಆ ಅಭ್ರಕದ ಬಿಲ್ಲೆ ಕಂಪಿಸಿದಾಗ ಮೂಲ ಶಬ್ದ ಪುನರುತ್ಪಾದನೆಗೊಂಡು ತುತ್ತೂರಿಯ ಬಾಯಿಯಿಂದ ಬರುವಾಗ ಗಟ್ಟಿಯಾಗಿ ಕೇಳಿಸಿತು. ಧ್ವನಿಮುದ್ರಿಕೆಯನ್ನು ತಿರುಗಿಸುವಾಗ ಹೆಚ್ಚು ಕಡಿಮೆಯಾದರೆ ಮಾತ್ರ ಅಪಸ್ವರದ ಆರ್ತನಾದ ಮಿಡಿಯುತ್ತಿತ್ತು. ಅದನ್ನು ತಪ್ಪಿಸಲು, ಹಾಗೂ ಒಂದೇ ಸಮನಾಗಿ ಧ್ವನಿಮುದ್ರಿಕೆಯನ್ನು ತಿರುಗಿಸಲು, ಒತ್ತಿಟ್ಟ ಸ್ಪ್ರಿಂಗಿನ ಶಕ್ತಿಯನ್ನು ಬಳಸಲಾಯಿತು. ಅದರಿಂದಾಗಿ ಗಡಿಯಾರಕ್ಕೆ 'ಕೀ' ಕೊಟ್ಟಂತೆ ಇಲ್ಲಿಯೂ 'ಕೀ' ಕೊಡುವುದು ರೂಢಿಯಾಯಿತು. ಈ ಹೊಸ ಯಂತ್ರವೇ 'ಗ್ರಾಮೋಫೋನ್' ಎಂದು ಹೆಸರಾಯಿತು.

ತಾನು ಕಡೆಗಣಿಸಿದುದರಿಂದಾಗಿಯೇ ತನ್ನ 'ಮಗು'ವಿನ ಲಾಲನೆ–ಪಾಲನೆ ಇನ್ನೊಬ್ಬರಿಂದಾಗುವಂತಾದುದು ಎಡಿಸನ್ನನನ್ನು ಕೆರಳಿಸಿತು. ಆತನೀಗ ಹತ್ತು ವರ್ಷಗಳ ಹಿಂದೆ ತಯಾರಿಸಿಟ್ಟಿದ್ದ ಯಂತ್ರವನ್ನು ತರಿಸಿಕೊಂಡು ಸುಧಾರ



ಸ್ಟೀರಿಯೋಫೋನಿಕ್ ಗ್ರಾಮೋಫೋನ್

ಣೆಯ ಸಂಕಲ್ಪ ತೊಟ್ಟ. ಸತತ ದುಡಿಮೆಯ ಫಲವಾಗಿ ಹೊಸ ರೂಪದಿಂದ ಫೋನೋಗ್ರಾಫಿನ ಪುನರುತ್ಥಾನವೇನೋ ಆಯಿತು. ಆದರೆ ಅದರ ಹೆಸರು ಮಾತ್ರ ಗ್ರಾಮೋಫೋನ್ ಎಂದೇ ಚಾಲ್ತಿಯಾಯಿತು.

ಎಡಿಸನ್ನನೂ ಸಿಲಿಂಡರಿನಾಕಾರದ ಧ್ವನಿಮುದ್ರಿಕೆಯನ್ನು ಪ್ಲಾಸ್ಟಿಕ್ಕಿನ ಮೇಲ್ಮೈಯಲ್ಲಿ ತಯಾರಿಸಿದ. ಚಪ್ಪಟೆಯಾಕಾರದ ಧ್ವನಿಮುದ್ರಿಕೆಗಳು ಜನಪ್ರಿಯವಾಗುತ್ತಿರುವುದನ್ನು ಕಂಡು ಅವುಗಳನ್ನು ತಯಾರಿಸುವುದರಲ್ಲೂ ಹಿಂದಾಗಲಿಲ್ಲ. ಕೀಲಿ ಕೊಟ್ಟು ಒತ್ತಿಟ್ಟ ಸ್ಪ್ರಿಂಗಿನ ಶಕ್ತಿಯಿಂದ ಧ್ವನಿಮುದ್ರಿಕೆಯನ್ನು ಸಮವೇಗದಲ್ಲಿ ಸುತ್ತುವಂತೆಯೂ ಮಾಡಿದ. ಪುನರುತ್ಪಾದಿತ ಧ್ವನಿಯನ್ನು ಹೆಚ್ಚು ಕಾಲ ಕೇಳಲು ದೃಢವಾಗಿ ಬುಡದಲ್ಲಿರುವ ಪೆಟ್ಟಿಗೆಯೊಳಗೆ ಸುತ್ತಿರುವ ನಳಿಗೆಯನ್ನು ಸುತ್ತಿಸಿ ತುತ್ತೂರಿಗೆ ಬಿಟ್ಟ. ಭರ್ಜರಿ ತುತ್ತೂರಿಯಿದ್ದುದರಿಂದಲೂ, ಧ್ವನಿ ಮುದ್ರಣಕ್ಕೂ, ಪುನರುತ್ಪಾದನೆಗೂ ಉಕ್ಕಿನ ಸೂಜಿಯ ಬದಲಿಗೆ ವಜ್ರದ ಮೊನೆಯನ್ನಾತ ಉಪಯೋಗಿಸಿದುದರಿಂದಲೂ ಬರ್ಲಿನರನ ಗ್ರಾಮೋಫೋನನ್ನು ಅದು ಮೀರಿಸಿತು.

ಗ್ರಾಮೋಫೋನನ್ನು ಜನಪ್ರಿಯಗೊಳಿಸುವ ದೃಷ್ಟಿಯಿಂದ ಎಡಿಸನ್, ಖ್ಯಾತ ಸಂಗೀತಗಾರರನ್ನು ಕರೆಯಿಸಿ, ಅವರ ಹಾಡಿನ ಧ್ವನಿಮುದ್ರಿಕೆಗಳನ್ನು ತಯಾರಿಸಿದ. ರಾಜಕಾರಣಿಗಳ ಭಾಷಣಗಳೂ ಧ್ವನಿಮುದ್ರಿತವಾದವು. ಪ್ರಹಸನಗಳ ತುಣುಕುಗಳನ್ನೂ ಅದರಲ್ಲಿ ಕೇಳಲು ಸಾಧ್ಯವಾಯಿತು. ಅದೇ ಕಾಲಕ್ಕೆ ಎರಡೂ ಬದಿಗಳಲ್ಲಿ ಶಬ್ದದ ಜಾಡುಗಳಿರುವ ಧ್ವನಿಮುದ್ರಿಕೆಗಳೂ ಬಳಕೆಗೆ ಬಂದವು. ಒತ್ತೊತ್ತಾಗಿ ಇಂಚಿಗೆ ೨೦೦ ರಂತೆ ಜಾಡುಗಳನ್ನು ಕತ್ತುವ ಕಲೆಯೂ ಎಡಿಸನ್ನನಿಗೆ ಒಲಿದುದರಿಂದ ಒಮ್ಮೆಗೇ ನಾಲ್ಕಾರು ನಿಮಿಷಗಳ ವರೆಗೆ ಜನರ ಮನವನ್ನದು ರಂಜಿಸುವಂತಾಯಿತು. ಜನರು ತಮಗೆ ಪ್ರಿಯವಾದ ಸಂಗೀತ ರೂಪಕಗಳನ್ನು ಮನೆಯಲ್ಲೇ ಕುಳಿತು ಕೇಳಿ ಆನಂದಿಸಬಹುದಾಗಿದ್ದರಿಂದ ಅದಕ್ಕೆ ಬೇಡಿಕೆ ಹೆಚ್ಚಿತು.

ಗ್ರಾಮೋಫೋನಿನ ಜನಪ್ರಿಯತೆ ದಿನೆ ದಿನೆ ಹೆಚ್ಚುತ್ತಿರುವುದನ್ನು ಕಂಡ ಎಡಿಸನ್ನನಿಗೆ, ಸಂಗೀತ ಲೋಕದ ಉದ್ಧಾರಕ್ಕೆ ಮಾತ್ರವಲ್ಲದೆ ಜ್ಞಾನಸಂಸ್ಥೆಗಳ ಬೆಳವಣಿಗೆಗೆ ಅದು ನೆರವಾಗಬಹುದೆನಿಸಿತು. ಮುಂದೆ ಕೆಲಕಾಲದ ನಂತರ ಎಡಿಸನ್ನನು ತಾನೇ ಕಂಡುಹಿಡಿದ ಕೈನೆಟೋಸ್ಕೋಪಿನಿಂದ ತೆರೆಯ ಮೇಲೆ ಚಿತ್ರಗಳನ್ನು ಮೂಡಿಸಿ, ಅವುಗಳ ಹಾವಭಾವಗಳಿಗನುಸಾರವಾಗಿ ಆತ ಗ್ರಾಮೋಫೋನಿನಿಂದ ಧ್ವನಿ ಹೊರಡಿಸಿದ. ಇದರಿಂದಾಗಿ ಮೂಕಚಿತ್ರಗಳಲ್ಲೂ ಜೀವ ಸ್ಪಂದಿಸಿತು. ನಾವಿಂದು ನೋಡುವ ಸಿನೇಮಾಕ್ಕೆ ಅದು ಮೂಲವಾಯಿತು.

ಮೂಕಚಿತ್ರಗಳು 'ಟಾಕಿ'ಯಾಗುತ್ತಲೇ ಗ್ರಾಮೋಫೋನೋಗಳಿಗೆ ಬೆಲೆಬಂತು. ಈ ಹೊಸ ಮಾಧ್ಯಮದಿಂದ ಜನಪ್ರಿಯರಾಗುವುದು ಸುಲಭವೆಂದೆಣಿಸಿದ ಸಂಗೀತ–ನಾಟಕ ಕಲಾವಿದರು ಗ್ರಾಮೋಫೋನಿನಲ್ಲಿ ಹಾಡಲು ನಾ ಮುಂದೆ ತಾ ಮುಂದೆ ಎಂದು ಮುಂದೆ ಬಂದರು.

ಶಾಸ್ತ್ರೀಯ ಸಂಗೀತದಂತೆಯೇ ಜಾನಪದ ಸಂಗೀತಕ್ಕೂ ಗ್ರಾಮೋಫೋನನ್ನು ಸೇರುವ ಭಾಗ್ಯ ಬಂತು. ನಶಿಸುತ್ತಿದ್ದ ಜಾನಪದ ಕಲೆ ಅದರಿಂದ ಚೇತರಿಸಿಕೊಂಡಿತು. ಹಾಡುಗಾರರ ಕಂಠದೊಂದಿಗೆ ಸಂಗೀತವಾದ್ಯಗಳೂ ಧ್ವನಿಗೂಡಿಸತೊಡಗಿದವು. ವಾದ್ಯಗೋಷ್ಠಿಗಳ ಧ್ವನಿಮುದ್ರಿಕೆ ತಯಾರಿಸುವ ಪ್ರಯತ್ನ ನಡೆದರೂ ವಾದಕರು ಧ್ವನಿಗ್ರಾಹಕದಿಂದ ದೂರಕ್ಕೆ ಚದುರಿರುವುದರಿಂದ ಅದು ಕೈಗೂಡದಾಯಿತು. ಮೈಕ್ರೋಫೋನಿನ ತಯಾರಿಯಿಂದ ಆ ತೊಡಕು ದೂರವಾಯಿತು. ಇದೇ ಕಾಲಕ್ಕೆ ಗ್ರಾಮೋಫೋನ್ ಉದ್ಯಮಕ್ಕೂ ವಿದ್ಯುತ್ ಸ್ಪರ್ಶವಾಯಿತು. ಧ್ವನಿಮುದ್ರಿಕೆಗಳ ತಯಾರಿ ಅದರಿಂದ ಉತ್ತಮಗೊಂಡಿತು. ಶಬ್ದಗಳ ಪುನರುತ್ಪಾದನೆಯಲ್ಲೂ ಪರೋಕ್ಷ ವಿಧಾನಗಳನ್ನು ಉಪಯೋಗಿಸಲಾಯಿತು. ಜಾಡಿನ ಅಂಕುಡೊಂಕುಗಳಲ್ಲಿ ಸರಿಯುವ ವಜ್ರದ ಇಲ್ಲವೇ ನೀಲಮಣಿಯ ಕಂಪನದ ಧಾಟಿಯಲ್ಲೇ ವಿದ್ಯುತ್ ಪ್ರವಾಹದಲ್ಲೂ ಏರಿಳಿತಗಳನ್ನುಂಟು ಮಾಡುವಲ್ಲಿ ಹಲವು ತಂತ್ರಗಳು. ಆ [illegible] ಸಂಪಾದವು ಒತ್ತಡ ವ್ಯತ್ಯಾಸದಿಂದ ಕೆಲವು ಬಗೆಯ

ಹರಳುಗಳಲ್ಲಿ ವಿದ್ಯುತ್ಪಾದನೆ ಸಾಧ್ಯ (ಇದನ್ನೇ ಪೀಜೋ ವಿದ್ಯುತ್ ಪರಿಣಾಮ ಎನ್ನುತ್ತಾರೆ.) ಎಂಬುದು ಅವುಗಳಲ್ಲೊಂದು. ಇಂತಹ ಸ್ಫಟಿಕ ಉದ್‌ಗ್ರಾಹಕ (Pick-up) ದಿಂದ ಬರುವ ಚಂಚಲ ವಿದ್ಯುತ್ಪ್ರವಾಹವನ್ನು ವರ್ಧಕದ ಮೂಲಕ ಹರಿಸಿ, ಹಲವು ಪಟ್ಟು ವೃದ್ಧಿಸಿ, ಗಟ್ಟಿಯಾಗಿ ಊರೆಲ್ಲ ಕೇಳುವಂತೆ ಧ್ವನಿಯನ್ನು ಪುನರುತ್ಪಾದಿಸಲೂ ಸಾಧ್ಯವಾಯಿತು.

ರೇಡಿಯೋಕ್ಕೂ ಗ್ರಾಮೋಫೋನಿನ ಸಂಗೀತ, ನಾಟಕ, ಪ್ರಹಸನಗಳನ್ನು ಅಳವಡಿಸಲಾಯಿತು. ರೇಡಿಯೋದ ಜನಪ್ರಿಯತೆ ಇದರಿಂದ ಹೆಚ್ಚಿ ಗ್ರಾಮೋಫೋನ್ ಉದ್ಯಮಕ್ಕೆ ಪೆಟ್ಟು ಬಿತ್ತು. ರೇಡಿಯೋಗ್ರಾಮನ್ನು ತಯಾರಿಸುವ ಪ್ರಯತ್ನಕ್ಕೆ ಅದೇ ಹೇತುವಾಯಿತು. ಅವು ಗ್ರಾಮೋಫೋನಿನ ಸಂಗೀತಶ್ರವಣ ಮಾಡಿಸುವುದರೊಂದಿಗೆ ರೇಡಿಯೋ ಆಗಿಯೂ ವರ್ತಿಸಬಲ್ಲವು. ರೆಕಾರ್ಡುಗಳನ್ನು ತೆಗೆದುಹಾಕುವ ಕೆಲಸವನ್ನೂ ನಿರ್ವಹಿಸಬಲ್ಲ ಸ್ವಯಂಚಾಲಿತ ರೆಕಾರ್ಡ್‌ಪ್ಲೇಯರುಗಳು ಅವುಗಳಲ್ಲಿರುವುದೂ ಉಂಟು.

ರೇಡಿಯೋ ಪ್ರಸಾರದ ನಿಮಿತ್ತವಾಗಿ ಗ್ರಾಮೋಫೋನು ರೆಕಾರ್ಡುಗಳ ತಯಾರಿಯಲ್ಲಿ ಸಂಶೋಧನೆ ನಡೆದೇ ಇತ್ತು. ಅದರ ಫಲವಾಗಿ ಧ್ವನಿಯೆಷ್ಟು ಪುಷ್ಟವಾಗಿದೆಯೆಂಬುದನ್ನು ವೈಜ್ಞಾನಿಕವಾಗಿ ವಿಶ್ಲೇಷಿಸುವ ವಿಧಾನವು ಬೇಕಿಗ ಬಂತು. ಕಾಂತೀಯ ವಿಧಾನಗಳಿಂದ ಶಬ್ದವನ್ನು ದಾಖಲುಮಾಡಿಕೊಳ್ಳುವ ಟೇಪ್‌ರೆಕಾರ್ಡರಿನ ಸೃಷ್ಟಿಯೂ ಆಯಿತು. ಧ್ವನಿಗ್ರಹಣ ಸಾಹಸದಲ್ಲದೊಂದು ವೈಲುಗಲ್ಲಾಯಿತು. ಬೇಡದ ಭಾಗಗಳನ್ನು ತೆಗೆದು ಹಾಕಿ, ಸರಿಯಾಗದುದನ್ನು ಸರಿಗೊಳಿಸಿ ಜೇರಿಸಿಕೊಳ್ಳುವ ವ್ಯವಸ್ಥೆ ಅದರಲ್ಲಿದ್ದುದರಿಂದ ಎಷ್ಟೋ ಅನುಕೂಲವಾಯಿತು. ಸ್ಟುಡಿಯೋದ ಹೊರಗೂ ಬೇಕಾದಲ್ಲಿಗೆ ಅದನ್ನೊಯ್ದು ಧ್ವನಿಗ್ರಹಣ ಮಾಡಬಹುದಾಯಿತು. ವಿನೈಲ್ ಪ್ಲಾಸ್ಟಿಕ್ಕಿನಿಂದ ಉತ್ಕೃಷ್ಟ ಧ್ವನಿಮುದ್ರಿಕೆಯನ್ನು ತಯಾರಿಸಲು ಸಾಧ್ಯವಾಯಿತು. ೭ ಅಂಗುಲ ವ್ಯಾಸದ ಆ ಧ್ವನಿ ಮುದ್ರಿಕೆ ಅಂಗುಲಕ್ಕೆ ೩೦೦ ರಂತೆ ೦.೦೦೨೫ ಅಂಗುಲದಷ್ಟು ಸೂಕ್ಷ್ಮ ಜಾಡುಗಳನ್ನು ಒಳಗೊಳ್ಳಬಲ್ಲದು; ನಿಮಿಷಕ್ಕೆ ೪೫ ಸಲದಂತೆ ತಿರುಗಿ ೮ ನಿಮಿಷಗಳವರೆಗೂ ನುಡಿಯಬಲ್ಲದು. ನೈಜ ಧ್ವನಿಯೇ ಆಗ ಹೊರಡುವಂತೆ ಮಾಡುವ ಪ್ರಯತ್ನಗಳೂ ಸಾಗಿದವು. ಸ್ಟೀರಿಯೋಫೋನಿಕ್ ಗ್ರಾಮೋಫೋನುಗಳ ಸೃಷ್ಟಿಯಿಂದ ಅದು ಸಾಧ್ಯವಾಯಿತು. ಸ್ಟೀರಿಯೋಫೋನಿಕ್ ಗ್ರಾಮೋಫೋನುಗಳ ಧ್ವನಿಮುದ್ರಿಕೆಗಳಿಂದ ಒಂದೇ ಜಾಡಿನಲ್ಲಿ ದಾಖಲಾಗಿರುವ ಎರಡು ಕಡೆಯ ಧ್ವನಿಗಳು ಪುನರುತ್ಪಾದನೆಗೊಂಡು ಜೋಡಿ ಧ್ವನಿವರ್ಧಕಗಳಿಂದ ಹೊರಬರುವಾಗ ಮೂಲ ಪರಿಸರದ್ದೇ ಅನುಭವವಾಗುತ್ತದೆ. ಈ ಶಬ್ದ ನಿಷ್ಠೆಯೆಂಬುದು ನೂರು ವರುಷಗಳ ಸಿದ್ಧಿಯ ಸಂಕೇತ.

ಈ ರೇಡಿಯೋ-ಟೆಲಿವಿಷನ್ನುಗಳ ಯುಗದಲ್ಲೂ ಗ್ರಾಮೋಫೋನುಗಳ ಜನಪ್ರಿಯತೆ ಕಡಿಮೆ ಯಾಗಿಲ್ಲ. ನಮಗೆ ಇಷ್ಟವಾದ ಹಾಡನ್ನು ಕೇಳಬೇಕೆನಿಸಿದಾಗ ರೇಡಿಯೋ-ಟೆಲಿವಿಷನ್ನುಗಳಿಂದ ಅದನ್ನು ಕೇಳಲು ಸಾಧ್ಯವಾಗಲಾರದಷ್ಟೆ ? ಆದರೆ ಗ್ರಾಮೋಫೋನಿನ ಮಾತು ಹಾಗಲ್ಲ. ಹಿಟ್ಲರನ ಆರ್ಭಟ ಬೇಕೇ ? ಬೀಥೋವನ್ನನ ಸ್ವರಮೇಳವೇ? ಗಾಂಧೀಜಿಯ ಉಪದೇಶವೇ? ಮೀರಾ ಭಜನೆಯೇ ? ವೇದಘೋಷವೇ ? ಚಿತ್ರಗೀತೆಯೇ? ನಿಮಗೇನು ಬೇಕು ? ಗ್ರಾಮೋಫೋನು ಅವನ್ನೆಲ್ಲ ಬೇಕಾದಾಗ ಕೇಳಿಸಬಲ್ಲದು, ಗ್ರಾಮೋಫೋನು ಇಂದಿಗೂ ಜನರನ್ನು ಆಕರ್ಷಿಸುತ್ತಿರುವುದು ಈ ಕಾರಣದಿಂದಲೆ.

ಗ್ರಾಮೋಫೋನಿನಿಂದಾಗಿ ಸತ್ತವರಿಗೂ ಧ್ವನಿ ಚಿರಂಜೀವತ್ವವು ಪ್ರಾಪ್ತವಾದಂತಾಗಿದೆ. ಸಾಹಿತ್ಯ-ಕಲೆಗಳನ್ನು ಪ್ರೇರಿಸಿ, ಜ್ಞಾನ-ವಿಜ್ಞಾನಗಳನ್ನು ಪಸರಿಸಿ, ಜನರ ಮನದ ಸಂತಸ ಹೆಚ್ಚಿಸಿ, ಹೊಸ ಯುಗದ ಹೊಂಬೆಳಕನ್ನು ಚೆಲ್ಲಿದ ಸಿನಿಮಾ, ರೇಡಿಯೋ, ಟೇಪ್‌ರೆಕಾರ್ಡರ್, ಟೆಲಿವಿಷನ್ನುಗಳ ಸಾಲಿಗೇ ಅದೂ ಸೆರುವಂಥುದ್ದು. ✿

ಚಿನ್ನದ ಕಲಶ

ಅಲ್ಬರ್ಟೊ ಮೊರಾವಿಯಾ

ದೇಹದಲ್ಲಿ ಉಸಿರು ಇರುವವರೆಗೂ ಆಸೆಯಿರುತ್ತದೆ ಎನ್ನುತ್ತಾರೆ. ಆದರೆ ಆ ಮಳೆ ಮತ್ತು ಕಷ್ಟ ದುಃಖಗಳಿಂದ ಕೂಡಿದ ಚಳಿಗಾಲದಲ್ಲಿ ಅರ್ಧ ನಾನು ಮಾಡುತ್ತಿದ್ದ ಕೆಲಸದಿಂದಾಗಿ ಮತ್ತು ಅರ್ಧ ವಿಪರೀತ ಬಳಲಿಕೆಯಿಂದಾಗಿ ಪೂರ್ತಿ ಕಂಗಾಲಾಗಿಹೋಗಿದ್ದೆ. ನನಗೆ ಇನ್ನೂ ಇಪ್ಪತ್ತೈದು ವರ್ಷ ತುಂಬಿರದಿದ್ದರೂ ನನ್ನಲ್ಲಿ ಆಸೆಯೆನ್ನುವುದು ಉಳಿದಿರಲಿಲ್ಲ. ನಾನು ಕುರೂಪಿಯಲ್ಲ. ಬದಲು ಎತ್ತರವಾದ ಬೀಸಾದ ಆಳು. ನೋಡಲು ಚನ್ನಾಗಿದ್ದೇನೆ. ಆದರೆ ನನ್ನನ್ನು ನಾನು ಈಗ ಎಷ್ಟು ಅಲಕ್ಷಿಸಿಕೊಂಡಿದ್ದೆನೆಂದರೆ ಎಲ್ಲರೂ ನನ್ನನ್ನು ಕುರೂಪಿಯೆಂದೇ ಹೇಳುವಂತಾಗಿತ್ತು. ಬಹುಶಃ ನಾನೇ ತಿಂಗಳಿಗೊಮ್ಮೆ ಗಡ್ಡ ಮಾಡಿಕೊಳ್ಳುತ್ತಿದ್ದೆ. ಕೂದಲು ಕತ್ತರಿಸಿಕೊಳ್ಳುತ್ತಿದ್ದೆನಾದ್ದರಿಂದ ಕಾಡು ಮನುಷ್ಯನಂತೆ ಕಾಣಿಸುತ್ತಿದ್ದೆ. ಹಳೆಯದಾಗಿದ್ದ ನನ್ನ ಮೇಲಂಗಿ ಹಸಿರುಗಟ್ಟಿತ್ತು. ಅದರ ತುಂಬೆಲ್ಲ ತೇಪೆ ಹಚ್ಚಿತ್ತು; ಹರಿದ, ದಾರ ಉಚ್ಚಿದ ಚೊಣ್ಣ, ಬಣ್ಣ ಮತ್ತು ಆಕಾರ ಎರಡನ್ನೂ ಕಳೆದುಕೊಂಡಿದ್ದ ಅಗ್ಗದ ಬೂಟುಗಳು. ಆದ್ದರಿಂದ ನಾನು ನನ್ನ ಕೈಗಾಡಿಯನ್ನು ದೂಡುತ್ತ ಬೀದಿಗಳಲ್ಲಿ ಒಂದು ಬಗೆಯ ರಾಕ್ಷಸ ಸ್ವರದಲ್ಲಿ "ಬಾಟ್ಲಿಗಳು...ಮಾರುವ ಬಾಟ್ಲಿಗಳಿವೆಯೇ?" ಎಂದು ಕೂಗುತ್ತ ತಿರುಗುತ್ತಿದ್ದಾಗ ಮನೆಯ ಹೊರಗಡೆ ಕುಳಿತಿದ್ದ ಯಾವಳೊ ಒಬ್ಬಳು ತನ್ನ ತುಂಟ ಮಗುವನ್ನು ಹಿಡಿದು, "ತುಂಟತನ ಮಾಡಬೇಡ. ಮಾಡಿದರೆ ಆ ಬಾಟ್ಲಿವಾಲಾನನ್ನು ಕರೆದು ನಿನ್ನನ್ನು ಅವನಿಗೆ ಮಾರಿಬಿಡುತ್ತೇನೆ. ಆತ ಬಾಟ್ಲಿಗಳೊಂದಿಗೆ ನಿನ್ನನ್ನೂ ಕರೆದೊಯ್ದು ಬಿಡುತ್ತಾನೆ," ಎನ್ನುತ್ತಿದ್ದಳು. ನಿಜವಾಗಿ ನನ್ನನ್ನು ಕಂಡರೆ ಜನರಿಗೆ ಅಂಜಿಕೆ ಬರುತ್ತಿತ್ತು. ಆದರೆ ಅತ್ಯಂತ ಕೀಳ್ಮಟ್ಟವನ್ನು ತಲುಪಲು ಬಯಸುತ್ತಿದ್ದ ನನಗೆ ಹೀಗೆ ಜನರನ್ನಂಜಿಸುವುದು ಮೆಚ್ಚಿಗೆಯಾಗುತ್ತಿತ್ತು. ಚಳಿಗಾಲ ಮುಗಿಯುವುದೇ ಇಲ್ಲವೆನ್ನುವಷ್ಟು ದೀರ್ಘವಾಗಿತ್ತು. ಆಕಾಶ ಸ್ವಚ್ಛವಾಗುತ್ತಿರಲಿಲ್ಲ. ಮಳೆ ತಪ್ಪುತ್ತಿರಲಿಲ್ಲ. ನೆಲಮಾಳಿಗೆಯ ಆದಿ ಅಂತ್ಯವಿಲ್ಲದ, ಬೆಳಕುಗಾಳಿ ಇಲ್ಲದ ಒಂದು ಸುರಂಗ ಮಾರ್ಗದಲ್ಲಿ ನಾನು ನನ್ನ ಬಂಡಿಮತ್ತು ಕೈಗಾಡಿಗಳ ಸಹಿತ ತೆವಳುತ್ತಿದ್ದಂತೆ ಭಾಸವಾಗುತ್ತಿತ್ತು.

ಆದರೂ ಹೀಗೆ ಕೈಗಾಡಿ ದೂಡುತ್ತ ಬಾಟ್ಲಿ,

258-9

ಹಳೆಯ ಪಾತ್ರೆ ಮುಂತಾದ ಕಚಡಾ ಪದಾರ್ಥಗಳನ್ನು ಸಂಗ್ರಹಿಸಿ ಮಾರುತ್ತ ಕೆಳ ಮಟ್ಟದಲ್ಲಿದ್ದೆನಾದರೂ ನನಗಾಗಿ ಓರ್ವ ಸ್ನೇಹಿತೆಯನ್ನು ಸಂಪಾದಿಸಿಕೊಳ್ಳಲು ಸಮರ್ಥನಾಗಿದ್ದೆ. ನಾನು ಕೀಳ್ದರ್ಜೆಗೆ ಇಳಿದಿದ್ದೆನಾದ್ದರಿಂದಲೂ ನನ್ನಲ್ಲಿ ಯಾವ ಆಶೆ ಉಳಿದಿರದಿದ್ದರಿಂದಲೂ ಇಡೀ ರೋಮಿನಲ್ಲಷ್ಟೇ ಯಾಕೆ ಇಡೀ ಇಟಲಿಯಲ್ಲೇ ಕುರೂಪಿಯಾಗಿದ್ದ ಹುಡುಗಿಯನ್ನು ಆರಿಸಿಕೊಂಡಿದ್ದೆ. ಅವಳ ಹೆಸರು ಮೇರಿಟಾ, ವಿಯಾಗಿಯಾಲಿಯಾದಲ್ಲಿ ಹಳೆಯ ಮನೆಯೊಂದರಲ್ಲಿ ಒಬ್ಬಂಟಿಗನಾಗಿರುತ್ತಿದ್ದ ಮುದಿ ಗೃಹಸ್ಥನೊಬ್ಬನ ಮನೆಯಾಳಾಗಿದ್ದಳು ಅವಳು. ಮೇರಿಟಾಳ ಮುಖ ಪೆರೆನೀಸ್ ನಾಯಿಯ ಮುಖದಂತಿತ್ತು. ಏನೋ ಕಾಳಜಿಯ ಭಾವವಿರುವ ದುಂಡನ್ನ ಕಪ್ಪು ಕಣ್ಣುಗಳು, ಸ್ವಲ್ಪ ಚಪ್ಪಟೆ ಮೂಗು, ರೊಟ್ಟಿ ಅಂಗಡಿಯವನ ಹಂಚಿನಷ್ಟು ದೊಡ್ಡದಾದ ಬಾಯಿ. ಮುಖ ಕುರೂಪಿಯಾಗಿದ್ದಕ್ಕೆ ಪರಿಮಾರ್ಜನೆಯೇನೋ ಎಂಬಂತೆ ಅವಳ ಮೈಕಟ್ಟು ಮಾತ್ರ ಸುಂದರವಾಗಿತ್ತು. ಅವಳು ಎತ್ತರವಾಗಿದ್ದಳು. ಎದೆ ತುಂಬಿತ್ತು. ಎರಡು ಕೈಗಳಲ್ಲಿ ಹಿಡಿಸಬಹುದಾದಷ್ಟು ಸಣ್ಣ ಸೊಂಟ, ತುಂಬಿಕೊಂಡ ನಿತಂಬ, ನಿಡಿದಾದ ಕಾಲುಗಳು. ಅವಳನ್ನು ಕಂಡು ನಾನು ಚೇಷ್ಟೆಯಿಂದ ಅನ್ನುತ್ತಿದ್ದೆ, "ನೀನು ಮುಖ ಮುಚ್ಚಿಕೊಂಡು ಅಡ್ಡಾಡಿದರೆ, ಸೌಂದರ್ಯರಾಣಿ ಎಂದು ಖ್ಯಾತಿ ಗಳಿಸುವೆ," ಎಂದು ಕುರೂಪಿ ಮೇರಿಟಾ ಜೀವನವನ್ನು ಗಂಭೀರ ದೃಷ್ಟಿಯಿಂದ ನೋಡುತ್ತಿದ್ದಳು. ಲಗ್ನವಾಗಿ ಬಾಳಬೇಕು ಎನ್ನುತ್ತಿದ್ದಳು. ಏತಕ್ಕೋ ಏನೋ-ಬಹುಶಃ ಅವಳು ಅಷ್ಟು ಕುರೂಪಿಯಾಗಿದ್ದುದರಿಂದಲೂ ಮತ್ತು ನಾನು ಅತ್ಯಂತ ಕೀಳ್ಮಟ್ಟ ತಲುಪಲು ಬಯಸುತ್ತಿದ್ದುದರಿಂದಲೂ ಇರಬಹುದು- ಅವಳನ್ನು ಎರಡನೆಯ ಭೆಟ್ಟಿಯಲ್ಲಿಯೇ "ನನ್ನನ್ನು ಲಗ್ನವಾಗುತ್ತೀಯಾ?" ಎಂದು ಕೇಳಿದೆ. ನಾನು ಕೆಳ ಮಾರ್ಗದಲ್ಲಿದ್ದುದರಿಂದ ಹಣದ ಪ್ರಶ್ನೆಯಿರದಿದ್ದರೆ ಅವಳನ್ನು ತಕ್ಷಣ ಲಗ್ನವಾಗುತ್ತಿದ್ದೆನೇನೋ. ಲಗ್ನವಾದ ಮಾತ್ರಕ್ಕೆ ಮುಗಿಯಲಿಲ್ಲ ನೋಡಿ, ಮನೆ ಮಾಡಬೇಕಾಗುತ್ತದೆ. ಹಳೆಯ ಬಾಟ್ಲಿಗಳು ಮತ್ತು ಪಾತ್ರೆಗಳು ಇವಿಷ್ಟರಿಂದಲೇ ಮನೆ ಮಾಡಬೇಕು ನೋಡಿ-ಅಂದರೆ ನಿಮಗೆ ನನ್ನ ಮಾತಿನ ಅರ್ಥ ಗೊತ್ತಾಗುತ್ತದೆ.

ಇಂಥ ಪ್ರಕರಣ ಹೇಗೆ ನಡೆಯುತ್ತದೆ ಎಂದು ಪ್ರತಿಯೊಬ್ಬನಿಗೂ ಗೊತ್ತು. ಮನೆಯ ಯಜಮಾನ ಇಲ್ಲದ ಹೊತ್ತಿನಲ್ಲಿ ನಾನು ಆ ಮನೆಗೆ ಬಂದು ಹೋಗುವಂತೆ ಅವಳು ಮಾಡಿದಳು. ಕಟ್ಟಡದ ಮೊದಲನೇ ಅಂತಸ್ತಿನಲ್ಲಿದ್ದ ಆ ಮನೆ ವಿಶಾಲವೂ ಅಂಧಕಾರಮಯವೂ ಆಗಿತ್ತು. ಯಜಮಾನ ಎಲ್ಲಿ ಮಲಗುತ್ತಿದ್ದ ಎಂದು ನನಗೆ ತಿಳಿಯದು. ಮನೆ ವಸ್ತುಸಂಗ್ರಹಾಲಯದಂತಿತ್ತು. ಒಂದರಿಂದ ಒಂದಕ್ಕೆ ಹೊಗಬಹುದಾದ ಅನೇಕ ಕೋಣೆಗಳಿದ್ದವು; ಆ ಕೋಣೆಗಳಲ್ಲಿ ಯಥಾಪ್ರಕಾರದ ಸಾಮಾನುಗಳಲ್ಲದೆ ಕಾಜಿನ ಅನೇಕ ಪುಟ್ಟ ಪೆಟ್ಟಿಗೆಗಳಿದ್ದವು, ಈ ಪೆಟ್ಟಿಗೆಗಳಲ್ಲಿ ಬಗೆಬಗೆಯ ಕಲಶಗಳಿದ್ದವು, ಮನೆಯ ಯಜಮಾನನಿಗೆ ಕಲಶಗಳಲ್ಲಿ ತುಂಬ ಆಸಕ್ತಿಯಿತ್ತು, ಆತ ಕೂಡ ಹೆಚ್ಚು ಕಡಿಮೆ ನನ್ನ ಕೆಲಸವನ್ನೇ ಮಾಡುತ್ತಿದ್ದ. ನಾನು ಕಲಶ, ಬಾಟ್ಲಿ, ಪಾತ್ರೆಗಳನ್ನು ಪುನಃ ಮಾರಲಿಕ್ಕೆಂದು ಸಂಗ್ರಹಿಸಿದರೆ ಆತ ತನ್ನವುಗಳನ್ನು ಕಾಜಿನ ಪೆಟ್ಟಿಗೆಯಲ್ಲಿರುತ್ತಿದ್ದ. ಮೊದಲು ನನ್ನೊಡನೆ ಮಾತನಾಡಲೆಂದು ಮೇರಿಟಾ ನನ್ನನ್ನು ಮನೆಗೆ ಕರೆದಳು. ಅನಂತರ ಒಂದು ದಿನ ನಾನು ಹಸಿದಿದ್ದಾಗ ಒಂದಿಷ್ಟು ರೊಟ್ಟಿ ಮತ್ತು ಮದ್ಯದ ಒಂದು ಗ್ಲಾಸನ್ನು ಕೊಟ್ಟಳು. ನಂತರ ನನಗೆ ಪೂರ್ತಿ ಊಟವನ್ನೇ ಹಾಕುವಷ್ಟು ಧೈರ್ಯ ಅವಳಿಗೆ ಬಂತು. ಬಾಯಲ್ಲಿ ನೀರೂರುವಂಥ ರುಚಿಕಟ್ಟಾದ ಊಟವನ್ನು ಅವಳು ತಯಾರಿಸುತ್ತಿದ್ದಳು. ಮನೆಯಲ್ಲಿ ಅವಳೊಬ್ಬಳೇ ಇದ್ದು ಎಲ್ಲ ಕೆಲಸವನ್ನೂ ಮಾಡುತ್ತಿದ್ದಳು, ಆದ್ದರಿಂದ ಯಜಮಾನ ಇಲ್ಲದಾಗ ಅವಳಿಗೆ ಭಯಕ್ಕೆ ಕಾರಣವೇ ಇರಲಿಲ್ಲ. ಹೊರಗೆ ಅಂಗಳದಲ್ಲಿ ನನ್ನ ಗಾಡಿಯನ್ನು ಬಿಟ್ಟು ಮೇಲಕ್ಕೆ ಹೋಗುತ್ತಿದ್ದೆ. ಅವಳು ಬಾಗಿಲು ತೆರೆದು ನನ್ನನ್ನು ಅಡುಗೆಮನೆಗೆ ಕರೆದೊಯ್ಯುತ್ತಿದ್ದಳು, ಹಸಿದ ತೋಳದಂತೆ ನಾನು ತಿನ್ನು-

ತ್ತಿದ್ದಾಗ ಆವಳು ತನ್ನ ಕುರೂಪಿಯಾದ ಕಣ್ಣು-ಗಳಿಂದ ಊಟ ಮಾಡುತ್ತಿರುವ ಒಡೆಯನನ್ನು ಆಸೆಗಣ್ಣಿಂದ ನೋಡುತ್ತ ಕುಳಿತಿರುವ ನಾಯಿಯಂತೆ ನೋಡುತ್ತಿದ್ದಳು. ನಾಯಿಯಂತೆ ಅವಳು ಕೂಡ ನನ್ನಿಂದ ಒಂದು ಪ್ರಿಯ ಮಾತನ್ನೋ ಪ್ರೇಮ ದೃಷ್ಟಿಯನ್ನೋ ಅಪೇಕ್ಷಿ-ಸುತ್ತಿದ್ದಳು. ಬಡ ಮೇರಿಟಾ ಪ್ರೇಮಕ್ಕಾಗಿ ಹಸಿದಿದ್ದಳು. "ಪ್ರಿಯೆ" ಎಂದು ನಾನು ಅಂದರೂ ಸಾಕು, ಅವಳು ಕೃತಜ್ಞತೆಯಿಂದ ತುಂಬಿ ತುಳುಕುತ್ತಿದ್ದಳು. ನಾನು ಮಾತ್ರ ಮನ-ದಲ್ಲಿ, "ಎಂಥ ಕುರೂಪಿ ಇವಳು ! ನಾನು ಇಂಥ ಕುರೂಪಿಯನ್ನು ಲಗ್ನವಾಗಲು ಸಾಧ್ಯವೆ ?" ಎಂದುಕೊಳ್ಳುತ್ತಿದ್ದೆ.

ನಾನು ಉಣ್ಣುವುದನ್ನು ನೋಡುತ್ತ ಅವಳು ನಿಟ್ಟುಸಿರು ಬಿಡುತ್ತಿದ್ದಳು. ಈ ಉಸಿರುಗಳ ಅರ್ಥವನ್ನು ಚೆನ್ನಾಗಿ ಬಲ್ಲ ನಾನು ತಾಳ್ಮೆಗೆಟ್ಟು, "ನಾನೇನು ಮಾಡಬೇಕೆನ್ನುತ್ತಿ ? ಬಾಟ್ಲಿ ವ್ಯಾಪಾರದಲ್ಲಿ ಸಿಗುವ ಲಾಭ ತೀರ ಸ್ವಲ್ಪ ಎಂದು ಗೊತ್ತಿಲ್ಲವೆ ನಿನಗೆ ? ನಾವು ತಾಳ್ಮೆಯಿಂದಿರಬೇಕು. ನಿಧಾನವಾಗಿ ಹಣ ಒಟ್ಟು ಮಾಡಿಕೊಳ್ಳುತ್ತೇನೆ. ಆ ಮೇಲೆ ಲಗ್ನ-ವಾಗೋಣ," ಎನ್ನುತ್ತಿದ್ದೆ. ಅವಳು ಉತ್ತರ ಕೊಡದೆ ನನ್ನ ಗ್ಲಾಸಿನಲ್ಲಿ ಮದ್ಯ ಸುರುವಿ ಮತ್ತೆ ನನ್ನನ್ನೆ ನೋಡತೊಡಗುತ್ತಿದ್ದಳು. ಒಂದು ದಿನ ಹೀಗೆಯೆ ನಡೆದಿದ್ದಾಗ ನಾನವಳಿಗೆ ದೃಢ ಸ್ವರದಲ್ಲಿ ಹೇಳಿದೆ: "ಕೇಳು. ವಿಯಾದಿ ಪಾರಿ-ಯೇನಿನಲ್ಲಿ ಅಂಗಡಿಯಿರುವ ನನ್ನೊಬ್ಬ ಮಿತ್ರ-ನೊಂದಿಗೆ ಮಾತನಾಡುತ್ತಿದ್ದೆ. ಇಲ್ಲಿ ಕೂಡ ಪೆಟ್ಟಿಗೆಗಳಲ್ಲಿರುವ ಒಂದು ಕಲಶವನ್ನು ನಾನು ತಂದಿದ್ದಾದರೆ ತಾನು ಅದನ್ನು ಪ್ರಾಚೀನ ವಸ್ತು ಮಾರಾಟಗಾರನೊಬ್ಬನಿಗೆ ಒಳ್ಳೆ ಬೆಲೆಗೆ ಮಾರಬಲ್ಲೆ ಎಂದನಾತ. ನೀನೇನನ್ನುತ್ತಿ ?" ಅವಳು ತನ್ನ ದುಂಡನ್ನ ಕಣ್ಣುಗಳಿಂದ ನನ್ನನ್ನು ದಿಟ್ಟಿಸಿ ನೋಡಿದಳು, ಒಡೆಯ ಏನು ಮಾಡಲು ಹೇಳುತ್ತಿದ್ದಾನೆಂದು ತಿಳಿಯದ ನಾಯಿಯಂತೆ. ಆಮೇಲೆ, "ಆದರೆ ಅದು ಕಳ್ಳತನವಾಗುವುದು," ಎಂದಳು. "ಓ ! ಕಡ್ಡಿಯನ್ನು ಗುಡ್ಡ ಮಾಡು-ವುದು ಬೇಡ. ಅವನ ಬಳಿ ತುಂಬ ಕಲಶಗಳಿವೆ. ಒಂದು ಹೋದರೆ ಅವನಿಗೆ ಗೊತ್ತೂ ಆಗಲಿಕ್ಕಿಲ್ಲ. ಅಲ್ಲಿ ಆ ನಟ್ಟನಡುವಿನ ಪೆಟ್ಟಿಗೆಯಲ್ಲಿರುವ ಕಲಶ-



ವನ್ನು ಒಪ್ಪಬೇಕೆನ್ನುತ್ತೇನೆ. ನಾಲ್ಕೈದು ಕಲಶಗಳಿರುವ ಪೆಟ್ಟಿಗೆಯಿಂದ ಅದೇ ಮಾದರಿಯ ಒಂದನ್ನು ಈ ಪೆಟ್ಟಿಗೆಯಲ್ಲಿಟ್ಟರಾಯಿತು. ಅವನಿಗೆ ಗೊತ್ತಾಗುವುದಾದರೂ ಹೇಗೆ?" ಹೀಗೆಯೆ ಹೇಳುತ್ತ ಕಲಶ ಮಾರಿ ಬರುವ ಹಣದಿಂದ ನಮ್ಮ ಸಂಸಾರ ಹೂಡುವ ದಾರಿಯಲ್ಲಿ ಒಂದು ಹೆಜ್ಜೆ ಮುಂದಿಡುವೆವು ಎಂದೆ. ನಾನು ಮಾತಾಡುತ್ತಿದ್ದಾಗ ಅವಳು ತಲೆ ತಗ್ಗಿಸಿ ಕುಳಿತು ವಿಚಾರ ಮಾಡುವಂತೆ ಕಂಡಿತು. ಕಡೆಗೆ ಅವಳು ಮುಖವೆತ್ತಿದಾಗ ಅದು ಕಣ್ಣೀರಿನಿಂದ ತೊಯ್ದು ಹೋಗಿತ್ತು. ಅಳ ಅಳುತ್ತಲೇ ಅವಳು ನುಡಿದಳು, "ನಾನು ಯಾವಾಗಲೂ ಪ್ರಾಮಾಣಿಕತೆಯಿಂದ ನಡೆದಿದ್ದೇನೆ. ಈ ಕಲಶವನ್ನು ತೆಗೆದುಕೊಂಡರೆ ಮುಂದೆಂದೂ ನನ್ನನ್ನು ಪ್ರಾಮಾಣಿಕಳು ಎಂದುಕೊಳ್ಳಲಾರೆ. ಯಜಮಾನ ನನ್ನಲ್ಲಿ ಪೂರ್ಣ ನಂಬಿಗೆ ಇಟ್ಟಿದ್ದಾನೆ. ನಾನದಕ್ಕೆ ದ್ರೋಹ ಮಾಡಿದಂತಾದೀತು; ನನ್ನ ಮುಖವನ್ನು ಕನ್ನಡಿಯಲ್ಲಿ ನೋಡಿಕೊಳ್ಳುವುದೂ ಅಪ್ರಿಯವಾದೀತು," ತಟ್ಟನೆ ಕಲ್ಪನೆಯಿಲ್ಲದೆಯೇ ನನ್ನ ಬಾಯಿಯಿಂದ ಮಾತು ಹೊರಟಿತು: "ಹಾಗಾದರೆ ಒಳ್ಳೆಯದೇ. ಏಕೆಂದರೆ ಕನ್ನಡಿಯಲ್ಲಿ ಸುಂದರವಾದದ್ದೆಂದೂ ನಿನಗೆ ಕಾಣಿಸದು." ಆಗ ಅವಳು ಇನ್ನಷ್ಟು ಜೋರಾಗಿ ಅಳಹತ್ತಿದಳು. ಆಡಿದ ಮಾತಿಗಾಗಿ ನೊಂದುಕೊಂಡ ನಾನು ಅವಳಿಗೊಂದು ಚುಂಬನವನ್ನು ಕೊಟ್ಟು "ಅಳಬೇಡ. ನಾವು ಹಾಗಾದರೆ ಏನನ್ನೂ ಮಾಡುವುದೂ ಬೇಡ. ನನಗೆ ನೀನೇ ಜಗತ್ತಿನಲ್ಲಿಯೇ ಅತಿ ಸುಂದರಿ," ಎಂದೆ. ಆಗ ಅವಳು ನನ್ನತ್ತ ನೋಡಿ ಮುಗುಳ್ನಕ್ಕಳು. ಅವಳ ಮುಗುಳ್ನಗು ಅವಳನ್ನು ಇನ್ನಷ್ಟು ಸುರೂಪಿಯನ್ನಾಗಿ ಮಾಡುತ್ತಿತ್ತು— ಕಪ್ಪು ಮೋಡಗಳಿಂದ ಆವೃತವಾದ ಆಕಾಶದ ನಡುವೆ ಇಣುಕಿದ ಬೆಳಕಿನ ಕಿರಣದಿಂದ ಕಾಣುವ ಹಾಗೆ.

ಆದರೆ ಮುಂದೆ ಮತ್ತೆ ನಾನು ಆ ಕಲಶ ತೆಗೆದುಕೊಳ್ಳೋಣ ಎಂದು ಒತ್ತಾಯ ಮಾಡುತ್ತಿದ್ದೆ. ಆ ಕಲಶದ ಮೇಲೆ ಏಕೆ ಕಣ್ಣಿಟ್ಟೆನೋ ಗೊತ್ತಿಲ್ಲ. ನಿಜವಾಗಿಯೂ ನನಗೆ ಮೇರಿಟಾಳನ್ನು ಲಗ್ನವಾಗುವ ಮನಸ್ಸಿರಲಿಲ್ಲ. ಬಹುಶಃ ಮೊದಲೇ ಹೇಳಿದಂತೆ ಕೀಳ್ಮಟ್ಟಕ್ಕಿಳಿದ ನಾನು ಅತ್ಯಂತ ಕೀಳ್ಮಟ್ಟ ತಲುಪ ಬಯಸುತ್ತಿದ್ದುದೇ ಕಾರಣವಾಗಿರಬೇಕು. ಅಥವಾ ಮೇರಿಟಾಳನ್ನು ಇದಕ್ಕೆ ಪೀಡಿಸುವುದರಲ್ಲಿ ನನಗೆ ಸಂತೋಷವೆನಿಸುತ್ತಿದ್ದುದರಿಂದಲೂ ಇರಬಹುದು. ಇಲ್ಲವೆ ನನಗೇ ಗೊತ್ತಿರದ ಇನ್ನಾವುದಾದರೂ ಕಾರಣವಿತ್ತೇನೊ, ಅದೇನೇ ಇರಲಿ, ನಾನವಳನ್ನು ಅದಕ್ಕಾಗಿ ಪೀಡಿಸುತ್ತಿದ್ದೆ. ಅವಳು ಆ ಕಲಶ ಕದಿಯದಿದ್ದರೆ ಅದರ ಅರ್ಥ ಅವಳಿಗೆ ನನ್ನ ಮೇಲೆ ಪ್ರೀತಿಯಿಲ್ಲವೆಂದಾಗುತ್ತದೆ ಎಂದೆ. ನನ್ನ ಪೀಡೆ ತಾಳಲಾರದೆ ಅವಳು ಕೊನೆಗೆ ಈ ಕೃತ್ಯಕ್ಕೆ ಸಿದ್ಧಳಾದಳು. ಆದರೆ ಹೆಂಗಸರು ಎಂಥ ವಿಚಿತ್ರ ಪ್ರಾಣಿಗಳು! ತನ್ನ ಪ್ರಾಮಾಣಿಕತೆ ಅಳಿಯುವುದಲ್ಲ ಎಂದು ಒಂದು ನಿಮಿಷ ಅವಳು ಅತ್ತರೆ, ಮರುನಿಮಿಷದಲ್ಲಿ ನಾನಂದಂತೆ ಮಾಡಲು ಸಿದ್ಧಳಾದದ್ದು ಮಾತ್ರವಲ್ಲ, ಆ ವಿಚಾರದಿಂದ ಅವಳಿಗೆ ಆನಂದವಾದಂತೆಯೂ ಕಂಡುಬಂದಳು. ಯಾರೋ ಊಟಕ್ಕೆ ಕರೆದದ್ದರಿಂದ ಅಂದು ಮುಂಜಾನೆ ಯಜಮಾನ ಮನೆಯಲ್ಲಿರಲಿಲ್ಲ. ನನ್ನ ಕೈ ಹಿಡಿದು ನನ್ನನ್ನು ಮುಖ್ಯ ಕೋಣೆಗೆ ಕರೆದೊಯ್ದು ದೀಪವನ್ನು ಹೊತ್ತಿಸಿದಳು. ಆ ಅರೆಗತ್ತಲು ಕೋಣೆಯಲ್ಲಿ ನಟ್ಟನಡುವಿನ ಆ ಗಾಜಿನ ಪೆಟ್ಟಿಗೆಯಲ್ಲಿ ಮಾತ್ರ ಬೆಳಕು ಕಂಡಿತು. ನಾನು ಹತ್ತಿರ ಹೋಗಿ ನೋಡಿದೆ. ಯಾವ ಕಲಾಕುಸುರಿನ ಕೆಲಸವೂ ಇಲ್ಲದ ಮಣ್ಣಿನ ಪುಟ್ಟ ಕುತ್ತಿಗೆ ದೊಡ್ಡ ಹೊಟ್ಟೆಯ ಕಲಶವಾಗಿತ್ತು. ಕೆತ್ತಿ ಅಂದಗೊಳಿಸಿದ ಯಾವುದೋ ಬೆಲೆ ಬಾಳುವ ಕಟ್ಟಿಗೆಯ ಪೀಠದ ಮೇಲೆ ಕೆಂಪು ವೆಲ್ವೆಟ್ ಅರಿವೆ ಗಾದಿಯ ಮೇಲೆ ಕಲಶ ಕಂಗೊಳಿಸುತ್ತಿತ್ತು. ಸುಂದರ ಪೀಠದ ಮೇಲಿದ್ದರೂ ಆ ಕಲಶ ಸಾಮಾನ್ಯ ಗಡಿಗೆಯೇ ಆಗಿತ್ತು. "ಸರಿ ಆದರೆ ಈ ಗಡಿಗೆಗೆ ಮುನ್ನೂರು ಲೈರಿಗಿಂತ ಹೆಚ್ಚು ಹಣ ಸಿಗದು," ಎಂದು ಮೇರಿಟಾಗೆ ಹೇಳಿದೆ. "ಎಂಥ ಮಾತು! ಅದು ಚೀನದ್ದು. ತುಂಬ ಅಪರೂಪ ವಸ್ತು. ಯಜಮಾನರು ಅದನ್ನು ತಮ್ಮ ಕಣ್ಣಿನಂತೆ ಕಾಪಾಡುತ್ತಾರೆ. ಜನ ಅದನ್ನು ನೋಡಲು ಬಂದಾಗ ದೀಪದ ಬೆಳಕಿನಲ್ಲಿ ತೆರೆದ ಬಾಯಿ ಮುಚ್ಚದೆ ನೋಡುತ್ತಾರೆ. ಯಜಮಾನರ ಮುಂದೆ [illegible]-

ಯಿಂದ ತುಂಬಿಹೋಗುತ್ತದೆ," ಎಂದಳು ಪೋರಿಟಾ. ನಾನು ನನ್ನ ಜಾಕುವಿನಿಂದ ಪೆಟ್ಟಿಗೆಯ ಮುಚ್ಚಳ ಎಬ್ಬಿಸಿ, ಕಲಶವನ್ನು ಎತ್ತಿಕೊಂಡೆ. ಆಮೇಲೆ ಅದರಂತೆಯೇ ಕಾಣುತ್ತಿದ್ದ ಕಲಶವೊಂದನ್ನು ಬೇರೊಂದು ಪೆಟ್ಟಿಗೆಯಿಂದ ತಂದು ಅದರ ಸ್ಥಾನದಲ್ಲಿಟ್ಟೆ. ಪೋರಿಟಾ ನಾವು ಕದ್ದ ಕಲಶವನ್ನು ಕಾಗದದಲ್ಲಿ ಸುತ್ತಿಕೊಟ್ಟಳು. ಅವಳನ್ನು ಮುತ್ತಿಟ್ಟು ನಾನು ಹೊರಬಂದೆ.

ಬಾಗಿಲ ಹಿಡಿಕೆಯನ್ನು ನಾನಿನ್ನೂ ಹಿಡಿದಿದ್ದಂತೆಯೇ ಮೆಟ್ಟಲುಗಳ ಮೇಲೆ ಕಲಶಗಳ ಒಡೆಯ ಪ್ರತ್ಯಕ್ಷನಾದ. ಕಪ್ಪು ತೊಡಿನಂಥ ಬಾಯಿಯ ಸುತ್ತ ಬಿಳಿ ಗಡ್ಡವುಳ್ಳ ಇಳಿವಯಸ್ಸಿನ ಮುದುಕ ಆತ. ಅವನನ್ನು ನೋಡಿ ಬಲ್ಲವನಾಗಿದ್ದೆ. ಅವನ ಕಣ್ಣುಗಳು ಇರಿಯುವಂಥವು. ಕಲಶವನ್ನು ಹಿಡಿದಿದ್ದ ನನ್ನನ್ನು ಆ ಇರಿಯುವ ಕಣ್ಣುಗಳು ಸಂಶಯದಿಂದ ದಿಟ್ಟಿಸಿದವು. ನಾನು ಬೆಚ್ಚಿದೆ. ನನ್ನ ಗುಟ್ಟು ಹೊರಬಿದ್ದು ಹೋಯಿತು. "ಯಾರು ನೀನು ? ಆ ಕಾಗದದಲ್ಲೇನಿದೆ ? ಕಲಶ; ನನ್ನ ಕಲಶಗಳಲ್ಲಿ ಒಂದು," ಮೆಟ್ಟಿಲನ್ನೇರುತ್ತ ಆತ ಕೂಗಿದ. ಆತ ಹಕ್ಕಿಯ ಕಾಲುಗಳಂತಿದ್ದ ಬೆರಳುಗಳುಳ್ಳ ತನ್ನ ಕೈಯಿಂದ ನನ್ನನ್ನು ಹಿಡಿಯಲೆತ್ನಿಸಿದಾಗ ನಾನು ದೂರ ಜಿಗಿದೆ. ಆತ ಉದ್ದಕ್ಕೆ ಮೆಟ್ಟಲು ಮೇಲೆ ಬಿದ್ದ. ಮೂಗು ಜಜ್ಜಿ ಹೋಯಿತು. ನಾನು ನಾಲ್ಕು ನಾಲ್ಕು ಮೆಟ್ಟಲು ಜಿಗಿಯುತ್ತ ಅಂಗಳಕ್ಕೆ ಹೋಗಿ ಕೈಗಾಡಿಯಲ್ಲಿದ್ದ ಬಾಟ್ಲಿಗಳ ನಡುವೆ ಕಲಶವನ್ನಿಟ್ಟು ಮೇಲ್ಗಡೆಯ ಮುಸುಕು ಹಾಕಿ ಗಾಡಿಯನ್ನು ತಳ್ಳಿಕೊಂಡು ಓಡಿದೆ.

ಮಳೆ ಧಾರಾಕಾರವಾಗಿ ಬೀಳುತ್ತಿತ್ತು. ನನ್ನ ಪುಣ್ಯಕ್ಕೆ ಎಲ್ಲಿಯೂ ಯಾರೂ ಇರಲಿಲ್ಲ. ವಿಯಾ ಗಿಲಿಯಾ ನಿರ್ಜನವಾಗಿತ್ತು. ನಾನು ಮನೆಯಿಂದ ಹೊರಬರುವುದನ್ನು ಯಾರೂ ಕಾಣಲಿಲ್ಲ; ಆ ಮಳೆಯಲ್ಲಿ ಗಾಡಿ ತಳ್ಳಿಕೊಂಡು ಓಡಿದೆ. ಅಡ್ಡ ಓಣಿಯೊಂದಕ್ಕೆ ತಿರುಗಿ ಸ್ವಲ್ಪ ದೂರ ಹೋಗಿ ಮತ್ತೆ ತಿರುಗಿ ಕೊನೆಗೆ ವಿಟ್ಟೋರಿಯೊಕ್ಕೆ ಬಂದೆ. ಇಲ್ಲಿಂದ ಯಾರಿಗೂ ಸಂಶಯ ಬಾರದಿರಲೆಂದು ಸಾವಕಾಶವಾಗಿ ನಡೆದು ನನ್ನ ಮಿತ್ರ ಜೆಸುವಾಲ್ಡೊನ ಅಂಗಡಿಗೆ ಹೋದೆ.

ಆದರೆ ವಿಯಾ ದಿ ಪಾರಿಯೋನಿನಲ್ಲಿ ನಿರಾಶೆ ಕಾದಿತ್ತು. ಮಧ್ಯಾಹ್ನ ೧ ಗಂಟೆಯಾಗಿ ಹೋಗಿತ್ತು. ಜೆಸುವಾಲ್ಡೊನ ಅಂಗಡಿ ಮುಚ್ಚಿತ್ತು. ಈಗ ನನಗೆ ಭಯವಾಗಿತ್ತು. ಅಭ್ಯಾಸಬಲದಿಂದ ನಾನು ಎಂದಿನಂತೆ, "ಬಾಟ್ಲಿಗಳು, ಮಾರುವ ಬಾಟ್ಲಿಗಳಿವೆಯೆ" ಎಂದು ಕೂಗುತ್ತ ಗಾಡಿಯನ್ನು ತಳ್ಳಿದೆ. ಆದರೆ ಕೂಗುತ್ತಿದ್ದ ಹಾಗೆ ಬಾಯಿ ಒಣಗಿದ್ದು, ಎದೆ ಹಾರಿಕೊಳ್ಳುತ್ತಿದ್ದುದು, ಕಾಲುಗಳು ನಡುಗುತ್ತಿದ್ದುದು ಅರಿವಿಗೆ ಬಂತು. ಒಂದು ಕಾಫಿಗೃಹದ ಎದುರು ಬಂದಾಗ ದಣಿವು ಆರಿಸಿಕೊಂಡು ಏನಾದರೂ ವಿಚಾರ ಮಾಡಲು ಅನುಕೂಲವಾದೀತು ಎಂದು ಕಾಫಿ ಗೃಹದಲ್ಲಿ ಹೊಕ್ಕೆ.

ಒಳಗೆ ಜನರಿರಲಿಲ್ಲ. ಮೂಲೆಯ ಕುರ್ಚಿಯ ಮೇಲೆ ಕುಳಿತು ಮದ್ಯ ಮತ್ತು ತಿಂಡಿಗೆ ಹೇಳಿದೆ. ಒಂದು ತುತ್ತು ತಿಂದು ಗುಟುಕು ಮದ್ಯ ಕುಡಿದಾಗ ಮೇಲೆ ನನ್ನಲ್ಲಿ ಅಸಹನೆ ಮೂಡಿದಂತಾಯಿತು. 'ಹಾ ! ಅತ್ಯಂತ ಕೀಳ್ಮಟ್ಟಕ್ಕೆ ಬಂದು ತಲುಪಿದೆ. ನಾನು ಕಳ್ಳ; ಕದಿಯುವಾಗ ಸಿಕ್ಕಿಬಿದ್ದೆ. ನನ್ನ ಶೋಧ ನಡೆದಿರಬೇಕು. ರೋಮಿನ ಅತಿ ಕುರೂಪಿ ಹುಡುಗಿಯ ವರನಾಗಿದ್ದೇನೆ. ಇನ್ನೂ ಅಡಗಿರಬೇಕಾಗುವುದರಿಂದ ಮಾಡುವ ಕೆಲಸವೂ ಕೈ ಬಿಟ್ಟಂತೆ' ಎಷ್ಟೋ ಹೊತ್ತಿನವರೆಗೆ ಈ ವಿಚಾರಗಳಿಂದ ಮಂಕಾಗಿ ಕುಳಿತಿದ್ದೆ. ಆ ಮೇಲೆ ತಿಂಡಿಯನ್ನೆಲ್ಲ ತಿಂದು ಹಣ ಕೊಟ್ಟು ಹೊರಬಿದ್ದೆ.

ಮಳೆ ನಿಂತಿತ್ತು. ಸೂರ್ಯಕಿರಣಗಳು ಕಟ್ಟಡಗಳ ನಡುವೆ ರಸ್ತೆಯ ಕಲ್ಲುಗಳನ್ನು ಬೆಳಗುತ್ತಿದ್ದವು. ಅಲ್ಲಿಯೆ ತುಸು ದೂರದಲ್ಲಿ ನನ್ನ ಕೈಗಾಡಿಯ ಸುತ್ತ ಗುಬ್ಬಚ್ಚಿಗಳಂತೆ ಅನೇಕ ಪುಟ್ಟ ಹುಡುಗರು ನೆರೆದಿದ್ದರು. ಮೇಲ್ಪರದೆಯನ್ನು ಸರಿಸಿದ್ದರು. ಕಲಶದ ಸುತ್ತ ಕಾಗದ ಇರಲಿಲ್ಲ. ಅದರ ಬಾಯಿಗೆ ಬೂಚು ತುರುಕಿದ್ದರು. ನನಗೆ ವಿಚಾರ ಮಾಡಲೂ ಅವಕಾಶ ಕೊಡದೆ ಥು ಎಂಬ ಸಪ್ಪಳವಾಯಿತು, ಕಲಶ ನೂರಾರು ಚೂರುಗಳಾಗಿ ಸಿಡಿದು ಬಿತ್ತು,

ಪ್ರತ್ಯಕ್ಷ ಪ್ರಮಾಣ

ಹೊಸ ಶಕ್ತಿಶಾಲೀ 'ಕೀ' ಬಟ್ಟೆಗಳನ್ನು ಅಧಿಕ ಬೆಳ್ಳಗೆ ಹಾಗೂ ಅಧಿಕ ಉಜ್ವಲವಾಗಿ ಒಗೆಯುತ್ತದೆ ಎಂದು ಪ್ರಯೋಗಾಲಯದಲ್ಲಿನ ಪರೀಕ್ಷಣಗಳಿಂದ ಪ್ರಮಾಣಿತವಾಗಿದೆ. ಅದಕ್ಕೆ ಕಾರಣವೆಂದರೆ 'ಕೀ' ಅಧಿಕ ಆಳವಾಗಿ ಸ್ವಚ್ಛಗೊಳಿಸುತ್ತದೆ.
ಸುಲಭವಾಗಿ ಹೋಗದಂತಹ ಕೊಳೆಯನ್ನು ಕೂಡ ಸಂಪೂರ್ಣವಾಗಿ ತೆಗೆದುಬಿಡುತ್ತದೆ. ಅದರಲ್ಲಿ ವಿಶೇಷವಾದ, ಅತ್ಯಂತ ಕ್ರಿಯಾಶೀಲವಾದ, ಉಜ್ವಲಗೊಳಿಸುವ ಘಟಕ ಇದೆ.

ಆಹ್ಲಾದಕರ, ತಾಜಾ ಪರಿಮಳ


ಮನೆಯ ಎಲ್ಲಾ ಬಟ್ಟೆಗಳನ್ನು ಒಗೆಯಲು ಆಹ್ಲಾದಕರ ಪರಿಮಳವಿರುವ 'ಕೀ'ಯನ್ನು ಉಪಯೋಗಿಸಿರಿ. 'ಕೀ' ಬಿಸಿನೀರಿನಲ್ಲಿ ಅಥವಾ ತಣ್ಣೀರಿನಲ್ಲಿ ತಕ್ಷಣ ಕರಗುತ್ತದೆ. ಗಡಚು ನೀರಿನಲ್ಲಿಯೂ ಹೇರಳ ನೊರೆಯನ್ನೀಯುತ್ತದೆ.

ನಿಮ್ಮ ಬಟ್ಟೆಗಳಿಗೆ ಸುರಕ್ಷಿತ, ಕೈಗಳಿಗೆ ಸೌಮ್ಯ

'ಕೀ'ಯ ಸಮೃದ್ಧ ನೊರೆಯು ಒಗೆಯುವ ಕೆಲಸವನ್ನು ಬಹಳಷ್ಟು ಸುಲಭಗೊಳಿಸುತ್ತದೆ. ನಿಮ್ಮ ಕೈಗಳಿಗೆ ಅದು ಸೌಮ್ಯವಾಗಿರುತ್ತದೆ ಮತ್ತು ನಿಮ್ಮ ಬಟ್ಟೆಗಳಿಗೆ ನಿಷ್ಕಳಂಕ ಸ್ವಚ್ಛತೆಯನ್ನೀಯುತ್ತದೆ—ಪ್ರತಿ ಸಲ ಒಗೆದಾಗಲೂ ಅವುಗಳಿಗೆ ಅಧಿಕ ಬಿಳುಪು, ಅಧಿಕ ಹೊಳಪು.

50 ಗ್ರಾಮ್ ಮತ್ತು 200 ಗ್ರಾಮ್ ಕಾರ್ಟನ್‌ಗಳಲ್ಲಿಯೂ 500 ಗ್ರಾಮ್ ಮತ್ತು 1 ಕೆ.ಜಿ. ಪೊಲಿಪ್ಯಾಕ್‌ಗಳಲ್ಲಿಯೂ ದೊರೆಯುತ್ತದೆ.

ಗೋದ್ರೆಜ್
ತಯಾರಿಕೆ



ಅದನ್ನು ಕಂಡು ಓಡಿ ಹೋಗತೊಡಗಿದ ಮಕ್ಕಳು ಸಂತೋಷದಿಂದ ಕೇಕೆ ಹಾಕುತ್ತಿದ್ದರು. ಕೈಗಳನ್ನು ಜೋತು ಬಿಟ್ಟುಕೊಂಡು ಕಲಶ ಮತ್ತು ಬಾಟ್ಲಿಗಳ ಚೂರುಗಳನ್ನು ನೋಡುತ್ತ ನಾನು ನಿಂತೆ. ಮಕ್ಕಳು ಕಾರ್ಬೈಡನ್ನು ಬಾಟ್ಲಿಯಲ್ಲಿಟ್ಟು ಅದರ ಮೇಲೆ ಉಗುಳಿ ಬಾಯಿಗೆ ಬೂಚು ತುರುಕಿದ್ದರು. ಹಳೆಯ ತಂತ್ರ ಇದು. ಸ್ವಲ್ಪ ಹೊತ್ತಿನಲ್ಲಿ ಸ್ಫೋಟವಾಗಿತ್ತು.

ನಿಮಿಷಾರ್ಧದಲ್ಲಿ ಬರೀ ಕಲಶ ಮಾತ್ರ ಸಿಡಿದು ಹೋಗಿರದೆ ಬಾಟ್ಲಿವಾಲಾನಾಗಿ ನಾನು ನಡೆಸಿದ ಜೀವನ, ಮೇರಿಟಾಳೊಡನೆ ಪ್ರಣಯ-ವ್ಯವಹಾರ, ಕಲಶದ ಕಳವು ಎಲ್ಲವುಗಳ ಜರುಗಿದ ನನ್ನ ಜೀವನ ಕಾಲವೂ ಸಿಡಿದು ಸಿಡಿದುಹೋಯಿತು ಎಂಬ ಅರಿವು ಬಂತು, ಕೈಗಾಡಿಯನ್ನು ಇದಿದ್ದಲ್ಲೆ ಬಿಟ್ಟು ಸಮೀಪದಲ್ಲೆ ವಾಸಿಸುತ್ತಿದ್ದ ನನ್ನ ಮಿತ್ರ ಜೆಸುವಾಲ್ಡೋನಲ್ಲಿಗೆ ಹೋದೆ. ತುಂಬ ಅಸ್ವಸ್ಥನಾದ ನನ್ನನ್ನು ಕಂಡೊಡನೆ, "ಏನಾಯಿತು ?" ಎಂದಾತ ಕೇಳಿದ. "ಏನಿಲ್ಲ. ಏನಿಲ್ಲ. ನನಗೆ; ಬಿಸಿ ನೀರಿನ ಸ್ನಾನ ಬೇಕು. ರೇಜರ್ ಮತ್ತು ಸಬಕಾರ ಬೇಕು. ಆ ಮೇಲೆ ಏನಾದರೂ ಕೊಡಬೇಕೆಂದಿದ್ದರೆ ಜೊಣ್ಣ, ಸ್ವಚ್ಛ ಶರ್ಟು ಮತ್ತು ನೆಕ್ ಟೈ ಕೊಡು. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ, ರೊಕ್ಕ ಕೊಡುತ್ತೇನೆ," ಎಂದೆ.

ಜೆಸುವಾಲ್ಡೋನ ಮನೆ ಬಿಟ್ಟಾಗ ನಾನು ಬೇರೆ ಮನುಷ್ಯನಾಗಿಬಿಟ್ಟಿದ್ದೆ. ಈ ಬೇರೆ ಮನುಷ್ಯನಲ್ಲಿ ನಿರಾಶೆಯ ಬದಲು ಆಶೆ ತುಂಬಿಕೊಂಡಿತ್ತು. ಇಲ್ಲಿಯವರೆಗೆ ಇದ್ದ ಮನೆಗೆ ಹೋಗದೆ, ನಗರದ ಇನ್ನೊಂದು ಭಾಗಕ್ಕೆ ಪರಿಚಿತರೊಬ್ಬರ ಮನೆಯಲ್ಲಿ ವಾಸ ಹೂಡಿದೆ.

ಕೆಲ ದಿನಗಳ ನಂತರ ಹವೆ ಚನ್ನಾಗಿತ್ತು. ಹೊಟೆಲ್ ಮಾಣಿಯ ವೇಷದಲ್ಲಿ ಗಿರಾಕಿಗಳಿಗೆ ಸಾಮಾನು ಒದಗಿಸುತ್ತಿದ್ದೆ. ರೋಂನಿಂದ ಇಪ್ಪತ್ತೆಂಟು ಮೀಟರ್ ದೂರದಲ್ಲಿದ್ದ ಹೋಟೆಲಾಗಿತ್ತು ಇದು. ಕಲಶದ ಪ್ರಕರಣದ ನಂತರ ನಾನು ಮೇರಿಟಾಳನ್ನು ಕಂಡಿಲ್ಲ ಹಾಗೆಂದು ನನ್ನನ್ನು ಜರಿಯಲಾಗದು. ನಾನು ಮಾಡಿದ್ದು ದ್ರೋಹವಾಗಿರಲಿಲ್ಲ, ದುಷ್ಟತನವಾಗಿರಲಿಲ್ಲ. ಹೇಡಿ ಕೃತಿಯಾಗಿರಲಿಲ್ಲ. ಪುಸ್ತಕವೊಂದರ ಪುಟವೊಂದನ್ನು ಮಗುಚಿದಾಗ ಪರಿಚ್ಛೇದ ಮುಗಿದದ್ದು ತಟ್ಟನೆ ಗೊತ್ತಾಗುವಂತಿತ್ತು ಇವೆಲ್ಲ. ✡

ಬಹೂಪಯೋಗಿ ಪೈನಾಪಲ್

ಬ್ರಾಝಿಲ್‌ನಲ್ಲಿ ಹುಟ್ಟಿ, ಈಗ ಜಗತ್ತಿನ ಬಹುಭಾಗಕ್ಕೆ ಪರಿಚಿತವಾದ ಫಲ ಪೈನಾಪಲ್. ಅದರ ರಸಸೇವನೆಯಿಂದ, ಚಿಕ್ಕ ಪುಟ್ಟ ಗಂಟಲುರೋಗಗಳು ವಾಸಿಯಾಗುತ್ತವೆ ಎಂಬ ಇತ್ತೀಚಿನ ಸಂಶೋಧನೆಯಿಂದಾಗಿ ಪೈನಾಪಲ್‌ನ ಉಪಯೋಗ, ವೈದ್ಯಕೀಯ ಕ್ಷೇತ್ರಕ್ಕೂ ಲಭಿಸಿದೆ. ಗಾಯದಿಂದ ರಕ್ತ ಹೆಪ್ಪುಗಟ್ಟಿದ್ದರೆ, ಪೈನಾಪಲ್ ನಿವಾರಿಸುತ್ತದೆ ಎಂದೂ ಇತ್ತೀಚಿನ ಪ್ರಯೋಗಗಳು ತಿಳಿಸಿವೆ. ಫಿಲಿಪೀನ್ಸ್‌ನಲ್ಲಿ, ಪೈನಾಪಲ್‌ನ ಎಲೆಗಳಿಂದ ದಾರ ತೆಗೆದು ಬಟ್ಟೆಗಳನ್ನು ತಯಾರಿಸಲಾಗುತ್ತಿದೆಯಂತೆ. ಜಗತ್ತಿನಲ್ಲಿ ಅತಿ ಹೆಚ್ಚು ಪೈನಾಪಲ್ ಬೆಳೆಯುವ ಪ್ರದೇಶವೆಂದು ಖ್ಯಾತಿ ಪಡೆದ, ಹವಾಯಿ ದೇಶವು, ಈ ಫಲದ ರಸದಿಂದ ಬೀರ್ ಮುಂತಾದ ಮಾದಕ ಪೇಯಗಳನ್ನು ತಯಾರಿಸುವಲ್ಲಿ ಎತ್ತಿದ ಕೈ ಎನಿಸಿದೆ.

ಈಗೀಗ ಬ್ರಿಟನ್‌ನಲ್ಲಿಯೂ ಪೈನಾಪಲ್‌ಗಳನ್ನು ಬೆಳೆಸಲಾಗುತ್ತಿದೆ.

ದ್ವಿತೀಯ ಮಹಾಯುದ್ಧದ
ಕೌತೂಹಲಮಯ ಪ್ರಸಂಗ

ಹೆಣೆದ ಜಾಲ

ಮೂಲ : ಸುರಜೀತ್
ಕನ್ನಡಕ್ಕೆ : ಬಳ್ಕೂರು ಸುಬ್ರಾಯ ಅಡಿಗ

ದ್ವಿತೀಯ ಮಹಾಯುದ್ಧ ಬಹು ರಭಸದಿಂದ ನಡೆದಿತ್ತು. ಮಿತ್ರರಾಷ್ಟ್ರಗಳ ಸೈನ್ಯ ಜರ್ಮನ್ ಸೈನ್ಯವನ್ನು ಹೊಡೆದೋಡಿಸಲು ಬೆಲ್ಜಿಯಮ್ಮನ್ನು ಪ್ರವೇಶಿಸಿದ್ದವು. ಕರ್ನಲ್ ಪಿಂಟೋ ಮಿತ್ರ ಸೈನ್ಯಗಳ ಗುಪ್ತಚಾರ ಅಧಿಕಾರಿಯಾಗಿ ಡಿವಿಜನಲ್ ಹೆಡ್‌ಕ್ವಾರ್ಟರ್ ಜೊತೆಗಿದ್ದ. ಜರ್ಮನ್ ಸೇನೆಗಳು ತಮ್ಮ ಏಜಂಟರನ್ನು ಇಲ್ಲೇ ಬಿಟ್ಟುಹೋಗಿರುವ ಸಂಭವವಿತ್ತು. ಆಗ ಅವರು ಮಿತ್ರಸೇನೆಗಳ ಚಟುವಟಿಕೆಗಳನ್ನು ಜರ್ಮನರಿಗೆ ತಿಳಿಸುತ್ತ ಇವರ ಎಲ್ಲ ಯೋಜನೆಗಳನ್ನು ಅಸ್ತವ್ಯಸ್ತಗೊಳಿಸುವ ಭಯವಿತ್ತು. ಹೀಗಾಗಿ ಸ್ವತಂತ್ರಗೊಳಿಸಲಾದ ಪ್ರದೇಶಗಳ ಸಂದೇಹಾಸ್ಪದ ವ್ಯಕ್ತಿಗಳನ್ನು ಕಂಡುಹಿಡಿಯುವುದು ಕರ್ನಲ್ಲನ ಕೆಲಸವಾಗಿತ್ತು.

ಕರ್ನಲ್ ತನ್ನ ಹೆಡ್‌ಕ್ವಾರ್ಟರನ್ನು ಸ್ವತಂತ್ರ ಪ್ರದೇಶದ ಒಂದು ಕೇರಿಯ ಬಳಿ ತಂತಿ ಬೇಲಿಯ ನಡುವೆ ಮಾಡಿಕೊಂಡ. ಅವನ ಕೈಕೆಳಗಿನ ಕೆಲಸಗಾರರು ಅಕ್ಕಪಕ್ಕದ ಪ್ರದೇಶಗಳಿಂದ ಸಂಶಯಾಸ್ಪದ ವ್ಯಕ್ತಿಗಳನ್ನು ತಂದು ಅವನೆದುರು ನಿಲ್ಲಿಸುತ್ತಿದ್ದರು, ಆತ ಅವರೊಳಗೆ ಜರ್ಮನ್ ಏಜಂಟರನ್ನು ಪತ್ತೆಹಚ್ಚಿ ಅವರಿಗೆ ಶಿಕ್ಷೆ ವಿಧಿಸುತ್ತಿದ್ದ. ಬಂದವರಲ್ಲಿ ಬಹುಪಾಲು ಜನರು ಸಾಮಾನ್ಯ ಮಾತುಕತೆಗಳಿಂದಲೇ ನಿರಪರಾಧಿಗಳೆಂದು ಪ್ರಕಟವಾಗುತ್ತಿದ್ದುದರಿಂದ ಅಂತಹರನ್ನು ಬಿಟ್ಟುಬಿಡಲಾಗುತ್ತಿತ್ತು.

ಮುಂದೊಂದು ದಿನ ಅವನೆದುರು ಎಮಾಯಿಲ್ ಬೋಲಿಂಗರನನ್ನು ತಂದು ನಿಲ್ಲಿಸಲಾಯಿತು. ತೋರಿಕೆಗೆ ಅವನೊಬ್ಬ ಬೆಲ್ಜಿಯಮ್ ರೈತನಾಗಿ ಕಾಣಿಸುತ್ತಿದ್ದ. ಆದರೆ ಅವನ ಬೆಳ್ಳಗಿನ ತೀಕ್ಷ್ಣ ಕಣ್ಣುಗಳು ಕರ್ನಲ್ ಪಿಂಟೋನನ್ನು ಸಂದೇಹಕ್ಕೆ ಗುರಿಮಾಡಿದವು. ಕರ್ನಲ್ ಸ್ಥಳೀಯ ಭಾಷೆಯಲ್ಲಿ ಹಲವಾರು ಪ್ರಶ್ನೆ ಕೇಳಿದ, ಅವಕ್ಕೆ ಆತ ತೃಪ್ತಿಕರವಾಗಿ ಉತ್ತರ ನೀಡಿದ. ಅವನನ್ನು ತಂದಿದ್ದ ಕಾರ್ಯಕರ್ತರು ಆತ ಒಂದು ಹಾಳುಬಿದ್ದ ಮನೆಯ ಬಳಿ ಇದ್ದನೆಂದೂ ಅವನ ಕೈಬೆರಳುಗಳಿಂದ ನೆತ್ತರು ಹರಿದು ಹೆಪ್ಪುಗಟ್ಟಿತ್ತೆಂದೂ ಹೇಳಿದರು, ಅವನ ಕೈಗೆ ಮಣ್ಣು ಹತ್ತಿತ್ತು, ಬೋಲಿಂಗರನ ಬಳಿ ದೊರೆತ ವಸ್ತುಗಳೂ ಅಪಾಯಕರವಾಗಿರಲಿಲ್ಲ: ಒಂದು ಪೆನ್ಸಿಲ್,

ಕೆಲ ಫ್ರಾಂಕ್ ಹಾಗೂ ಒಂದು ಬ್ಲೇಡು ಮಾತ್ರ.

"ನೀನೇನು ರೈತನೇ?"– ಪ್ರಶ್ನೆಗಳನ್ನು ಮುಂದುವರಿಸುತ್ತ ಕೇಳಿದ ಕರ್ನಲ್ ಓಟೋ.

"ನಾನು ರೈತನಿದ್ದೆ...ಆದರೆ ಈಗೆಲ್ಲಿ? ಜರ್ಮನ್ ಸೈನ್ಯ ನನ್ನ ಪಶುಗಳನ್ನೆಲ್ಲ ಒಯ್ದಿತು. ಭಾರೀ ಗುಂಡುಗಳಿಂದ ನನ್ನ ಹೊಲ ಹೊಂಡಗಳಿಂದ ತುಂಬಿಹೋಯಿತು, ನನ್ನ ಹೆಂಡತಿ ಹಾಳು ಮನೆಯ ಮಣ್ಣಿನ ರಾಶಿಯಡಿ ಸತ್ತುಬಿದ್ದಿದ್ದಾಳೆ...ನಾನು ಈ ಕೈಗಳಿಂದ ಅವಳನ್ನು ಅಗೆದಗೆದು ತೆಗೆಯಲು ಯತ್ನಿಸಿದೆ. ಆದರೇನು? ಎಲ್ಲವೂ ವ್ಯರ್ಥ!" ಎನ್ನುತ್ತಾ ಆತ ತನ್ನ ಗಾಯಗೊಂಡ ಕೈಗಳನ್ನು ಎದುರು ಚಾಚಿದ.

"ನೀನು ಅಂಕೆಗಳನ್ನೆಣಿಸಬಲ್ಲೆಯಾ?" ಎಂದು ಕೇಳಿದ ಕರ್ನಲ್.

ಆತ ಆಶ್ಚರ್ಯದಿಂದ ಕರ್ನಲ್ಲನನ್ನು ದಿಟ್ಟಿಸಿ ಹೌದೆಂದು ತಲೆ ಅಲ್ಲಾಡಿಸಿದ.

ಕರ್ನಲ್ ಹತ್ತಿರದ ರಾಶಿಯಿಂದ ಒಂದಿಷ್ಟು ಬಟಾಣಿ ಕಾಳುಗಳನ್ನು ಕೊಟ್ಟು ಅವುಗಳನ್ನು ಏರುದನಿಯಲ್ಲಿ ಎಣಿಸುವಂತೆ ಹೇಳಿದ. ಆತ ೧, ೨, ೩, ೪, ೫...ಎಂದು ಗಟ್ಟಿಯಾಗಿಯೇ ಲೆಕ್ಕಿಸತೊಡಗಿದ. ಅವನು ೭೨ ಕ್ಕೆ ತಲುಪುತ್ತಲೇ, ಕರ್ನಲ್ ಅವನನ್ನು ತಡೆದ, ೭೨ಕ್ಕೆ ಸ್ಥಳೀಯ ಆಡು ಭಾಷೆಯಲ್ಲಿ ವಿಶಿಷ್ಟ ಶಬ್ದವೊಂದನ್ನು ಬಳಸಲಾಗುತ್ತಿತ್ತು. ಅದು ಸಾಮಾನ್ಯ ಫ್ರೆಂಚ್ ಶಬ್ದಕ್ಕಿಂತ ಭಿನ್ನವಾದದ್ದು. ಆದರೆ ಬೋಲಿಂಗರ್ ಸ್ಥಾನೀಯ ಶಬ್ದವನ್ನೇ ಬಳಸಿದ. ಈ ರೀತಿ ಆತ ಒಂದು ಪರೀಕ್ಷೆಯಲ್ಲಿ ಯಶಸ್ವಿಯಾಗಿ ಪಾಸಾದ. ಇಷ್ಟಾದರೂ ಕರ್ನಲ್ಲನಿಗೆ ತೃಪ್ತಿಯಾಗಲಿಲ್ಲ. ಈಗ ಆತ ಇನ್ನೊಂದು ಪರೀಕ್ಷೆ ನಡೆಸಲು ನಿರ್ಧರಿಸಿದ.

ಬೋಲಿಂಗರನನ್ನು ಒಂದು ಲಾಯದೊಳಗಿರಿಸಲಾಯಿತು. ಒಳಗೊಂದು ಮಂಚದ ಮೇಲೆ ಹಾಸಿಗೆಯಿತ್ತು. ಲಾಯದ ಬಾಗಿಲು ರಂಧ್ರದ ಮೂಲಕ ಒಳಗಿನ ದೃಶ್ಯವನ್ನು ಸ್ಪಷ್ಟವಾಗಿ ಕಾಣಬಹುದಿತ್ತು. ರಾತ್ರಿ ಮಲಗುವ ಮುನ್ನ ಬೋಲಿಂಗರ್ ಸ್ಥಳೀಯ ಭಾಷೆಯಲ್ಲೇ ಪ್ರಾರ್ಥನೆ ಮಾಡಿ ಹಾಸಿಗೆಯ ಮೇಲೊರಗಿದ. ಒಂದು ಇಲಿ ನೆಲದ ಮೇಲೋಡಿದಾಗ ಆತ ಸ್ಥಳೀಯ ರೈತರಂತೆಯೆ 'ದಾವ್ರೊ' ಎಂದ.

ಕರ್ನಲ್ಲನ ಅಪ್ಪಣೆಯಂತೆ ಲಾಯದ ಬಾಗಿಲ ಹೊರಗೆ ಹೊಟ್ಟಿನ ರಾಶಿ ಹಾಕಿ ಬೆಂಕಿ ಹಚ್ಚಲಾಯಿತು. ಈಗ ಕರ್ನಲ್ಲನ ಆಜ್ಞೆಯಂತೆ ಸಿಪಾಯಿಗಳು ಜರ್ಮನ್ ಭಾಷೆಯಲ್ಲಿ ಬೆಂಕಿ, ಬೆಂಕಿ ಎಂದು ಕೂಗುತ್ತಾ ಬಾಗಿಲ ಬಳಿಯಿಂದ ಹಾದುಹೋದರು. ಆದರೆ ಬೋಲಿಂಗರ್ ಮಗ್ಗಲು ಮಗುಚಿ ಹಾಗೆಯೇ ಮಲಗಿಕೊಂಡಿದ್ದ. ತುಸು ಹೊತ್ತಿನ ಬಳಿಕ ಆ ಸಿಪಾಯಿಗಳೇ ಫ್ರೆಂಚ್ ಭಾಷೆಯಲ್ಲಿ 'ಬೆಂಕಿ ಬೆಂಕಿ' ಎಂದು ಕೂಗಿದಾಗ ಬೋಲಿಂಗರ್ ಥಟ್ಟನೆ ಹಾಸಿಗೆಯಿಂದ ಹಾರಿ ಬಾಗಿಲು ಬಡಿಯತೊಡಗಿದ. ಬಾಗಿಲು ತೆರೆದಾಗ ಆತ ಸ್ಥಳೀಯ ರೈತನಂತೆ ಪ್ರಾರ್ಥನೆ ಮಾಡುತ್ತಿದ್ದ. ಈ ಪರೀಕ್ಷೆಯಲ್ಲೂ ಆತ ಪಾಸಾದ,

ಆದರೂ ಬೋಲಿಂಗರ್ ಅತಿ ಚತುರ ಜರ್ಮನ್ ಏಜಂಟನಿರಬಹುದೆಂಬ ಕರ್ನಲ್ಲನ ಸಂದೇಹ ಅಳಿಯಲಿಲ್ಲ. ಹೃದಯ–ಮಸ್ತಿಷ್ಕಗಳ ಮೇಲೆ ಅಸಾಧಾರಣ ಹತೋಟಿಯುಳ್ಳ ಆತ ಬಹು ಯಶಸ್ವಿಯಾಗಿ ಅಭಿನಯಿಸುತ್ತಿರಬಹುದೆಂದೇ ಕರ್ನಲ್ಲನ ಸಂದೇಹ, ಎಂತಲೇ ಆತ ಪರೀಕ್ಷೆ ಮುಂದುವರಿಸಲು ನಿರ್ಧರಿಸಿದ. ಸಹಾಯಕ ಆತ, ಅಧಿಕಾರಿಗೆ ತನ್ನ ಯೋಜನೆ ತಿಳಿಸುತ್ತ, "ನಾನು ಮೊದಲು ಕೆಲವು ಸಾಮಾನ್ಯ ಪ್ರಶ್ನೆ ಕೇಳುವೆ. ಆ ಬಳಿಕ ಜರ್ಮನ್ ಭಾಷೆಯಲ್ಲಿ– 'ಬಹಾಯು !' ಎನ್ನುವೆ. ಆಗ ನೀನೂ ಜರ್ಮನ್ನಿನಲ್ಲೇ– 'ಯಾರು?' ಎಂದು ಪ್ರಶ್ನಿಸು. ಆ ಬಳಿಕ ನಾನು ಅದೇ ಭಾಷೆಯಲ್ಲೇ ಮಾತಾಡುವೆ. ನೀನು ನಮ್ಮನ್ನೆ ಕೇಳುತ್ತಿರು" ಎಂದ.

ಮರುದಿನ ಬೋಲಿಂಗರನನ್ನು ಕರ್ನಲ್‌ನೆದುರು ಹಾಜರುಪಡಿಸಲಾಯಿತು, ಮೇಜಿನ ಒಂದೆಡೆ ಕರ್ನಲ್ ಇನ್ನೊಂದೆಡೆ ಅವನ ಸಹಾಯಕನೂ ಕುಳಿತಿದ್ದರು. ಇನ್ನೊಂದೆಡೆ ಬೋಲಿಂಗರನನ್ನು ಕುಳ್ಳಿರಿಸಲಾಯಿತು, ಬೋಲಿಂಗರನ ಬಳಿ ದೊರೆತ ವಸ್ತುಗಳನ್ನು ಮೇಜಿನ ಮೇಲಿರಿಸಲಾಗಿತ್ತು. ಕರ್ನಲ್

ಸಾಮಾನ್ಯ ಪ್ರಶ್ನೆ ಕೇಳುತ್ತ ಹೋದ. ಆ ಬಳಿಕ, "ಈ ಪೆನ್ಸಿಲ್ ಏಕೆ ಹಿಡಿದು ತಿರುಗುತ್ತಿ?" ಎಂದ.

"ಇದು ಬರೇ ಪೆನ್ಸಿಲ್," ಎಂದ ಬೋಲಿಂಗರ್.

"ಇದರಿಂದ ಶತ್ರುಗಳಿಗೆ ಸಂದೇಶ ಕಳುಹಿಸುತ್ತೀಯಾ?"

ಈ ಪ್ರಶ್ನೆ ಕೇಳಿ ಬೋಲಿಂಗರ್ ಕರ್ನಲ್ಲನನ್ನು ವಿಚಿತ್ರವಾಗಿ ನಿಟ್ಟಿಸತೊಡಗಿದ. ಇದೆಂತಹ ತಿಳಿಗೇಡಿನದ ಪ್ರಶ್ನೆ! ಎಂಬ ಭಾವನೆ ಆ ನೋಟದಲ್ಲಿತ್ತು. ಅನಂತರ ಒಂದು ಕ್ಷಣ ತಡೆದು ಇಲ್ಲವೆಂಬಂತೆ ತಲೆಯಲ್ಲಾಡಿಸಿದ.

ಅದೇ ವೇಳೆಗೆ ಸರಿಯಾಗಿ ಕರ್ನಲ್ ತನ್ನ ಸಹಾಯಕನೊಡನೆ "ಓ! ಬಡಪಾಯಿ!" ಎಂದ. "ಯಾರು?" ಎಂದ ಸಹಾಯಕ.

ಕರ್ನಲ್ ಜರ್ಮನ್ ಭಾಷೆಯಲ್ಲೇ ಹೇಳತೊಡಗಿದ: "ಏಕೆಂದರೆ ಇನ್ನೊಂದು ತಾಸಿನಲ್ಲೇ ಇವನನ್ನು ಗಲ್ಲಿಗೇರಿಸಲಾಗುತ್ತಿದೆಯೆಂಬ ಸಂಗತಿ ಇವನಿಗೆ ತಿಳಿಯದು. ಖಂಡಿತವಾಗಿಯೂ ಇವನೊಬ್ಬ ಗುಪ್ತಚಾರ!" ಮತ್ತೆ ಬೋಲಿಂಗರನನ್ನೇ ನೆಟ್ಟ ದೃಷ್ಟಿಯಿಂದ ನೋಡುತ್ತ, "ಈಗ ವೇಳೆ ೧೧ ಗಂಟೆ. ೧೨ ಗಂಟೆಗೆ ಸರಿಯಾಗಿ ಗಲ್ಲಿಗೇರಿಸಲಾಗುವುದು..." ಎಂದ.

ಕರ್ನಲ್ ಬೋಲಿಂಗರನನ್ನು ನಿರ್ನಿಮೇಷ ದೃಷ್ಟಿಯಿಂದ ನೋಡತೊಡಗಿದ. ಮುಖ್ಯವಾಗಿ ಅವನ ಕಣ್ಣು ಹಾಗೂ ಕೊರಳನ್ನು ಆತ ದೃಷ್ಟಿಸುತ್ತಿದ್ದ. ಮನುಷ್ಯ ಎಷ್ಟು ಗಟ್ಟಿಯಾಗಿದ್ದರೂ ಅವನು ಕೆಲವು ಸ್ನಾಯವಿಕ ಪ್ರತಿಕ್ರಿಯೆಗಳ ಮೇಲೆ ಹತೋಟಿಯಿರಿಸಲಾರನೆಂಬುದು ಕರ್ನಲ್ಲನಿಗೆ ತಿಳಿದಿತ್ತು.

ಬೋಲಿಂಗರ್ ಅಂತಹ ಯಾವ ಲಕ್ಷಣವನ್ನೂ



ತೋರ್ಪಡಿಸಲಿಲ್ಲ. ಅಪಾಯದ ಅರಿವೇ ಇಲ್ಲವೆಂಬಂತೆ ಸುಮ್ಮನೆ ಇದ್ದ. ಹೀಗೆ, ಆತನಿಗೆ ಜರ್ಮನ್ ಭಾಷೆ ಬರುತ್ತಿಲ್ಲವೆಂದೂ ಆತ ಜರ್ಮನ್ ಗುಪ್ತಚಾರ ಅಲ್ಲವೆಂದೂ ದೃಢಪಟ್ಟಿತು. ತಾನು ವ್ಯರ್ಥವಾಗಿ ಈ ಮನುಷ್ಯನ ಮೇಲೆ ಸಂದೇಹಪಟ್ಟೆನಲ್ಲಾ ಎಂದು ಕರ್ನಲ್‌ನಿಗೆ ಅನಿಸಿತು. ಇಷ್ಟಾದರೂ ಮನಸ್ಸಮಾಧಾನಕ್ಕಾಗಿ ಇನ್ನೊಂದು ಕ್ರಮ ಕೈಗೊಂಡ.

ಅದೇ ಪ್ರದೇಶದ ಒಬ್ಬ ದೇಶಭಕ್ತ ಬೆಲ್ಜಿಯಮ್ ರೈತನಿಗೆ ಅವನ ಭೇಟಿ ಮಾಡಿಸಲಾಯಿತು. ಕರ್ನಲ್ಲನ ಸಂಕೇತದಂತೆ ಆತ ಸ್ಥಳೀಯ ಬೇಸಾಯ ಹಾಗೂ ಹವಾಮಾನದ ಬಗ್ಗೆ ಮಾತುಕತೆ ಆರಂಭಿಸಿದ. ಬೋಲಿಂಗರ್ ಸ್ಥಳೀಯ ಬೇಸಾಯದ ವಿಧಾನಗಳನ್ನೂ ಹವಾಮಾನದ ಸ್ಥಿತಿಯನ್ನೂ ಚೆನ್ನಾಗಿ ಬಲ್ಲನೆಂಬುದು ಈ ಮಾತುಕತೆಯಿಂದ ವ್ಯಕ್ತವಾಯಿತು.

ಕರ್ನಲ್ ಪಿಂಟೋ ಈಗ ಕೊನೆಯ ಬಾಣ ಪ್ರಯೋಗಿಸಲು ಸಿದ್ಧನಾದ. ಈ ಪರೀಕ್ಷೆಯಲ್ಲೂ ಗೆದ್ದನೆಂದರೆ ಇದುವರೆಗೆ ಕೊಟ್ಟ ಯಾತನೆಗಾಗಿ ಬೋಲಿಂಗರನ ಕ್ಷಮೆ ಬೇಡಿ ಈ ಅಚಾತುರ್ಯಕ್ಕಾಗಿ ಅವನಿಗೆ ಸಾಕಷ್ಟು ಹಣ ಕೊಡುವುದೆಂದೂ ಆತ ನಿರ್ಧರಿಸಿದ.

ಮರುದಿನ ಬೋಲಿಂಗರನನ್ನು ಕರ್ನಲ್ಲನೆದುರು ತಂದು ನಿಲ್ಲಿಸಲಾಯಿತು. ಕರ್ನಲ್ ತಲೆ ತಗ್ಗಿಸಿ ಯಾವುದೋ ದಸ್ತಾವೇಜ್ ಓದುವುದರಲ್ಲಿ ಮಗ್ನನಾಗಿದ್ದ. ಟೈಪ್ ಮಾಡಿದ ದಸ್ತಾವೇಜ್ ಓದಿ ಆತ ಅದಕ್ಕೆ ಸಹಿ ಹಾಕಿದ. ಮತ್ತೆ ತಲೆಯೆತ್ತಿ ಬೋಲಿಂಗರನೊಡನೆ ಜರ್ಮನ್ ಭಾಷೆಯಲ್ಲಿ, "ಸರಿ, ನನಗೀಗ ನೀನು ಗೂಢಚಾರನಲ್ಲವೆಂಬುದರಲ್ಲಿ ಪೂರ್ತಿ ನಂಬುಗೆಯಾಯಿತು. ನೀನೀಗ ಹೋಗಬಹುದು, ಇನ್ನು ನೀನು ಸ್ವತಂತ್ರ," ಎಂದ.

ಬೋಲಿಂಗರ್ ನಿಶ್ಚಿಂತನಾಗಿ ಒಮ್ಮೆ ಬಿಡುಗಡೆಯ ನಿಟ್ಟುಸಿರು ಬಿಟ್ಟ; ಮತ್ತು ಯಾವುದೋ ಭಾರ ಇಳಿದುಹೋದಂತೆ ಭುಜ ಕೊಡಹಿದ. ಸ್ವಾತಂತ್ರ್ಯದ ಉಸಿರಾಟದ ಸವಿ ಸವಿಯಲೆಂದು ತನ್ನ ಮೋರೆಯನ್ನು ತುಸು ಮೇಲಕ್ಕೆತ್ತಿದ. ಆಗಲೇ ಕರ್ನಲ್ ಪಿಂಟೋ ಅವನನ್ನು ಗಂಭೀರದೃಷ್ಟಿಯಿಂದ ನಿಟ್ಟಿಸಿದ. ಬೋಲಿಂಗರ್ ಸಾವರಿಸಿಕೊಳ್ಳುವ ಮೊದಲೇ ಕರ್ನಲ್ಲನ ಸಂಕೇತದಂತೆ ಕಾವಲುಗಾರರು ಅವನನ್ನು ಹಿಡಿದೊಯ್ದರು.

ಆ ಬಳಿಕ ಗಲ್ಲಿಗೇರುವ ವರೆಗೆ ಬೋಲಿಂಗರ್ ತನ್ನ ಮಾತೃಭಾಷೆಯಾದ ಜರ್ಮನಿನಲ್ಲೇ ಮಾತಾಡುತ್ತಿದ್ದ! ✡

ಕೃಪೆ: ‘ನವನೀತ’ ಹಿಂದೀ ಡೈಜೆಸ್ಟ್



ಇಂಗ್ಲಿಷ್ ಭಾಷಣದಲ್ಲಿ ಒಬ್ಬ ವ್ಯಕ್ತಿ ಬಹಳ ಕಠಿಣ ಶಬ್ದಗಳನ್ನು ಉಪಯೋಗಿಸುತ್ತಿದ್ದ. ಒಬ್ಬ ಶ್ರೋತೃವಿಗೆ ಈ ಭಾಷಣ ಅರ್ಥವಾಗದೆ, ಆತ ಪಕ್ಕದಲ್ಲಿ ಕುಳಿತಿದ್ದವನನ್ನು ಕೇಳಿದ: "ಈತ ಏನು ಹೇಳುತ್ತಿದ್ದಾನೆ?" ಆತ ನುಡಿದ: "ಶಬ್ದಕೋಶ!"

•

ಪತ್ನಿ ತೌರುಮನೆಯಿಂದ ಪತಿಗೆ ಟೆಲಿಗ್ರಾಂ ಮೂಲಕ ತಿಳಿಸಿದಳು- 'ಪ್ರಿಯ, ನಿಮ್ಮ ವಿರಹದಿಂದ ನಾನು ಇಲ್ಲಿ ಒಂದು ತಿಂಗಳಿನಲ್ಲಿ ಅರ್ಧವಾಗಿದ್ದೇನೆ. ನನ್ನನ್ನು ಕರೆದೊಯ್ಯಲು ನೀವು ಯಾವಾಗ ಬರುವಿರಿ?'

'ಒಂದು ತಿಂಗಳ ನಂತರ,' ಪತಿ ಉತ್ತರ ಕಳಿಸಿದ. —ಎನ್. ಕೆ. ನರಸಿಂಹಮೂರ್ತಿ


ನೆಸ್‌ಕಾಫೆ
NESCAF

ವಾಸ್ತವ

ಮೂಲ : ಮಲ್ಲಾದಿ ವೆಂಕಟಕೃಷ್ಣ ಮೂರ್ತಿ
ಅನು: ಸುಲೋಚನಾ ಮೂರ್ತಿ

ಅಬ್ಬಬ್ಬ ! ಈತನೊಂದಿಗೆ ಬಾಳಲಾರದೆ ಸಾಯುತ್ತಿದ್ದೇನೆ, ವಯಸ್ಸು ಬಂದಿದೆ ಏಕೆ ?"

ಅದೇ ತಾನೆ ಆಫೀಸಿನಿಂದ ಬಂದ ಕುಚೇಲರಾವ್ ದಿಗ್ಭ್ರಾಂತನಾಗಿ ಹೆಂಡತಿಯ ಕಡೆ ನೋಡಿದ, ಹೂವಿನ ಪೊಟ್ಟಣ ಅವಳಿಗೆ ಕೊಟ್ಟ. ಹೂವು ಎಂದರೆ ಹೆಂಡತಿಗೆ ತುಂಬಾ ಇಷ್ಟವಾದುದರಿಂದ ಸಂತೋಷಪಡುತ್ತಾಳೆಂದು ಭಾವಿಸಿದ.

ಕುಚೇಲರಾವ್ ಊಹಿಸದ ರೀತಿಯಲ್ಲಿ ಆ ಪೊಟ್ಟಣವನ್ನು ಒಂದು ಮೂಲೆಗೆ ಬಿಸುಟಿ, ಆಕೆ ಮೇಲಿನ ಮಾತುಗಳನ್ನು ಅತ್ಯಂತ ಕಟುವಾಗಿ ಹೇಳಿದಳು.

"ನಾನೇನು ಮಾಡಿದೆ? ನಿನಗಿಷ್ಟವೆಂದು ಹೂವು ತಂದಿದ್ದು ತಪ್ಪೇ ?" ಅಭಿಮಾನಕ್ಕೆ ಪೆಟ್ಟು ಬಿದ್ದ ಕುಚೇಲರಾವ್ ಮುಖ ಕೆಂಪೇರಿ ಹೆಂಡತಿಯನ್ನು ಪ್ರಶ್ನಿಸಿದ. ಆಫೀಸಿನಲ್ಲಿ ಚಂಡಶಾಸಕನಂತಿರುವ ಆಫೀಸರೊಡನೆ ಹೆಣಗಾಡಿ ಮನೆಗೆ ಬಂದ ಆತನಲ್ಲಿ ಸ್ವಲ್ಪವೂ ತಾಳ್ಮೆ ಇರಲಿಲ್ಲ.

"ಅಲ್ಲದಿದ್ದರೆ ಮತ್ತೇನ್ರೀ? ನಿಮಗೆ ಬರುವ ಸಂಪಾದನೆಯಲ್ಲಿ ನನಗೆ ಹೂವೊಂದು ಕಡಿಮೆಯಾಗಿತ್ತೇ ? ದೊಡ್ಡವಳ ಜಾಕೀಟು ಹೊಲಿಯಲು ಕೊಟ್ಟು ವಾರದ ಮೇಲಾಯಿತು, ಅದನ್ನು ತರಬೇಕೆಂದು ಅವಳು ಒಂದೇ ವರಾತ ಮಾಡುತ್ತಿದ್ದಾಳೆ."

"ನಾಳೆ ಸಂಬಳ ಬಂದಮೇಲೆ ತರುತ್ತೇನೆಂದು ಹೇಳಲಿಲ್ವೇ? ಈ ತಿಂಗಳ ಕೊನೆಯಲ್ಲಿ ನನ್ನ ಕೈಯಲ್ಲಿ ಎರಡು ರೂಪಾಯಿಗಳಾದರೂ ಇಲ್ಲವೆಂದು ನಿನಗೆ ಗೊತ್ತಿಲ್ಲವೇ ?"

"ನನ್ನ ತಿಥಿ ಮಾಡ್ತೀರ ಅಷ್ಟೆ ನೀವು."

ಕುಚೇಲರಾವ್‌ಗೆ ಯಾವಾಗಲೂ ತಿಂಗಳ ಕೊನೆಯ ವಾರದಲ್ಲಿ ಮೂಗಿನ ಮೇಲೇ ಕೋಪ ಬರುತ್ತದೆ. ಸಾಮಾನ್ಯವಾಗಿ ಮನಸ್ಸಿಗೆ ನೋವು ಉಂಟಾಗುವಂತೆ ಯಾರಾದರೂ ಮಾತನಾಡಿದರೆ, ಸಿಕ್ಕಾಪಟ್ಟೆ ಕೋಪ ಬರುತ್ತದೆ. ಬಂದರೆ ಮತ್ತೊಂದು ವಾರದವರೆಗೂ ಕಡಿಮೆಯಾಗುವುದಿಲ್ಲ, ಒಮ್ಮೊಮ್ಮೆ ಎರಡು ಹೊತ್ತು ಊಟ ಸಹ ಮಾಡುವುದಿಲ್ಲ.

ಒಳಗೆ ಹೋಗದೆ ಹೊರಗಡೆಯೇ ಕುಚೇಲರಾವ್ ಆರಾಮ ಕುರ್ಚಿಯಲ್ಲಿ ಕಣ್ಣು ಮುಚ್ಚಿ ಮಲಗಿಕೊಂಡ. ಸುಮಾರು ಒಂದು ಗಂಟೆಯ ನಂತರ ಆತನ ಹೆಂಡತಿ ಬಾಗಿಲಲ್ಲೇ ಬಂದು ನಿಂತು ಕರೆದಳು.

"ಬಡಿಸಿದ್ದೇನೆ, ಊಟಕ್ಕೆ ಬರಬಹುದು." ಆ ಮಾತು ಕಿವಿಗೇ ಬೀಳದವನಂತೆ ಕುಚೇಲರಾವ್ ಅಲುಗಾಡಲಿಲ್ಲ.

"ನಿಮ್ಮನ್ನೇ ಪದೆ ಪದೆ ಕರೆಯುವ ತಾಳ್ಮೆ ನನಗಿಲ್ಲ. ಬಡಿಸಿದ್ದೇನೆ ಬನ್ರೀ," ಆತನ ಹೆಂಡತಿ ಮತ್ತೆ ಹೇಳಿದಳು.

"ನನಗೆ ಹಸಿವಿಲ್ಲ, ಊಟ ಬೇಡ," ಕುಚೇಲರಾವ್ ಸಾಧ್ಯವಾದಷ್ಟು ಶಾಂತನಾಗಿ ಉತ್ತರಿಸಿದ.

"ಏಕೆ ಹಸಿವಿಲ್ಲ?" ಗಟ್ಟಿಯಾಗಿ ಪ್ರಶ್ನಿಸಿದಳು,

"ಇಲ್ಲ ಅಷ್ಟೆ."

"ನನ್ನ ಮೇಲೆ ಕೋಪ ಬಂದರೆ ಅನ್ನ ಏನು ಮಾಡೀತು?" ಆತ ತುಟಿ ಎರಡು ಮಾಡಲಿಲ್ಲ.

"ನಿಮ್ಮ ಇಷ್ಟ."

"ನಮ್ಮ ಸಂಪಾದನೆ ನಮಗೆ ತಿನ್ನಲು ಸಾಲದೆಂದು ನನಗೆ ಗೊತ್ತು, ಆ ವಿಷಯ ಮತ್ತೆ ಮತ್ತೆ ನನಗೆ ನೆನಪು ಮಾಡಿ ನನ್ನ ಮನಸ್ಸಿಗೆ ನೋವುಂಟು ಮಾಡುವುದು ನಿನಗೆ ಸಂತೋಷವಾದರೆ ಹಾಗೇ ಮಾಡು," ಎಂದ ಕುಚೇಲರಾವ್.

ಆ ರಾತ್ರಿ ಸಿಟ್ಟು ಬಂದುದರಿಂದ ಕುಚೇಲರಾವ್ ಊಟ ಮಾಡಲಿಲ್ಲ. ತಾನು ಊಟ ಮಾಡದಿದ್ದರೆ ಹೆಂಡತಿ ಸಹ ಊಟ ಮಾಡುವುದಿಲ್ಲವೆಂದು ತಿಳಿದೂ ತಿಳಿದೂ ಆ ರಾತ್ರಿ



ಉಪವಾಸವೇ ಮಲಗಿಕೊಂಡ.

ಮಾರನೆಯ ದಿನ ಸಂಬಳ ಬಂದೊಡನೆಯೇ ಆ ಜಾಕೀಟು ತೆಗೆದುಕೊಂಡು ಮನೆಗೆ ಬೇಕಾದ ದಿನಸಿ ಸಾಮಾನು ಕೊಂಡುಕೊಂಡು ಕುಚೇಲ-ರಾವ್ ಮನೆಗೆ ಬಂದ. ಹಿಂದಿನ ದಿನದ ಸಿಟ್ಟು ಇನ್ನೂ ಇಳಿದಿರಲಿಲ್ಲವಾದುದರಿಂದ ಹೆಂಡತಿ-ಯೊಡನೆ ಹೇಳಿದ, "ನನಗೆ ಅನ್ನ ಮಾಡಬೇಡ, ಹಸಿವಿಲ್ಲ."

ಕುಚೇಲರಾಯನ ಹೆಂಡತಿ ತನ್ನಲ್ಲಿಯೇ ನಗುತ್ತ ರಾತ್ರಿಗೆ ಅಡಿಗೆ ಮಾಡಿ ಎಲ್ಲರಿಗೂ ಬಡಿಸಿದಳು. ಮಕ್ಕಳೆಲ್ಲಾ ಊಟ ಮಾಡಿದ ನಂತರ ಗಂಡ-ನನ್ನು ಊಟಕ್ಕೆ ಕರೆದಳು.

"ಊಟ ಮಾಡುವುದಿಲ್ಲವೆಂದು ಹೇಳಲಿಲ್ವೇ? ನನಗೇಕೆ ಅನ್ನ ಮಾಡಿದೆ?" ಸಿಟ್ಟಿನಿಂದ ಗದರಿ-ಸಿದ.

ಗಂಡನ ಪಕ್ಕದಲ್ಲೇ ಕುರ್ಚಿ ಎಳೆದುಕೊಂಡು ಕುಳಿತು ನಗುತ್ತ ಪ್ರಶ್ನಿಸಿದಳು: "ಕೋಪ ಬಂತೇ? ನಿನ್ನೆ ಬೇಕೆಂದೇ ನಿಮ್ಮ ಮೇಲೆ ಹಾಗೆ ರೇಗಿದೆ. ನಿಮಗೆ ಕೋಪ ಬರಲಿ ಎಂದೇ ಹಾಗೆ ಮಾಡಿದೆ. ನೀವು ಹೂವು ತಂದರೆ ನನಗೆ ಎಂದಾದರೂ ಸಿಟ್ಟು ಬರುವುದೇ? ಬನ್ನಿ ಊಟ ಮಾಡೋಣ"

"ನನಗೆ ಹಸಿವಿಲ್ಲ" ಒಂದೊಂದು ಅಕ್ಷರ-ವನ್ನೂ ಒತ್ತಿ ಒತ್ತಿ ಸಿಟ್ಟಿನಿಂದ ಹೇಳಿದ.

ಗಂಡನ ಭುಜದ ಮೇಲೆ ಕೈಯಿರಿಸಿ ಸಾಂತ್ವನಗೊಳಿಸುವವಳಂತೆ ಹೇಳಿದಳು: "ನಿಜ-ವಾಗಲೂ ನಿಮಗೆ ಸಿಟ್ಟು ಬರಲೆಂದೇ ಹಾಗೆ ಹೇಳಿದೆ."

"ಏಕೆ?"

"ಸಿಟ್ಟು ಬಂದ ದಿನ ಊಟ ಮಾಡದಿರುವುದು ನಿಮ್ಮ ಅಭ್ಯಾಸ. ನಿನ್ನೆ ಮನೆಯಲ್ಲಿ ಅಕ್ಕಿ, ಸೀಮೆಯೆಣ್ಣೆ ಎಲ್ಲ ಮುಗಿದುಹೋಗಿತ್ತು. ಅಡಿಗೆ ಮಾಡೋಣವೆಂದರೆ ಏನೂ ಇರಲಿಲ್ಲ. ಆ ವಿಷಯ ಹೇಳಿದರೆ ನೀವು ಮತ್ತಷ್ಟು ವ್ಯಥೆ-ಪಡುತ್ತೀರ, ನಾವೆಲ್ಲ ಉಪವಾಸವಿರುವುದನ್ನು ಕಂಡು ತುಂಬಾ ಬೇಸರ ಮಾಡಿಕೊಳ್ಳುತ್ತೀರ. ಸಿಟ್ಟು ಬಂದರೆ ಊಟ ಮಾಡುವುದಿಲ್ಲವೆಂದು, ಉಳಿದ ಯಾವ ವಿಷಯ ನಿಮಗೆ ತಿಳಿಯುವು-ದಿಲ್ಲವೆಂದು ಹಾಗೆ ಮಾಡಿದೆ, ಮನೆಯ ನಿನ್ನೆಯ ಪರಿಸ್ಥಿತಿ ನಿಮಗೆ ತಿಳಿಯುವುದು ನನಗೆ ಇಷ್ಟ-ವಿರಲಿಲ್ಲ."

ಹೆಂಡತಿಯ ಮುಖವನ್ನು ಕುಚೇಲರಾವ್ ಆಶ್ಚರ್ಯದಿಂದ ನೋಡಿದ.

"ಹೌದು, ಬನ್ನಿ ಊಟ ಮಾಡೋಣ." ಗಂಡನ ಕೈ ಹಿಡಿದು ಮೇಲಕ್ಕೆ ಎಬ್ಬಿಸಿದಳು. ಆಕೆಯ ತಲೆಯಲ್ಲಿ ಹೂವಿನ ದಂಡೆ ನಗುತ್ತಿತ್ತು. ಆಕೆ ಅದು ಬಾಡಿ ಹೋಗದಂತೆ ನೀರು ಚಿಮುಕಿಸಿ, ಒದ್ದೆ ಬಟ್ಟೆಯಲ್ಲಿ ಸುತ್ತಿ ಹಿಂದಿನ ರಾತ್ರಿ ಜೋಪಾನ ಮಾಡಿ ಇಟ್ಟಿ-ದ್ದಳು. ✡



ಒಂದೇ ವರ್ಷದ ಯೋಜನೆಯಿದ್ದರೆ ಬತ್ತವನ್ನು ಬಿತ್ತಿರಿ. ಹತ್ತು ವರ್ಷದ ಯೋಜನೆಯಿದ್ದರೆ ಗಿಡವನ್ನು ನೆಡಿರಿ. ಆದರೆ ನೂರು ವರ್ಷಗಳ ಯೋಜನೆಯಿದ್ದರೆ ಮನುಷ್ಯನನ್ನು ಶಿಕ್ಷಿತನನ್ನಾಗಿಸಲು ಪ್ರಾರಂಭಿಸಿರಿ.

— ಕುಅನ್ ತ್ಸ

ಅವರಿಲ್ಲಿ ತಮ್ಮ ಅನುಭವದ ಗಂಟು ಬಿಚ್ಚಿದ್ದಾರೆ

ನನಗೆ ನೆನಪಾದಂತೆ...

ಗೌರೀಶ ಕೈಕಿಣಿ

ಇದೇ ೨೭-೧೦-೧೯೭೭ ರ ಸಂಜೆ ನಮ್ಮಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ವಿದ್ಯಮಾನದಲ್ಲಿ ಗಮಕ ಕಲೆಯ ಪ್ರಸಾರಾರ್ಥವಾಗಿ ಶ್ರೀ ಹೊಸಬಾಳೆ ಸೀತಾರಾಮರಾವ್ ಅವರ ಬಲು ಸೊಗಸಾದ ಸುಶ್ರಾವ್ಯ ಗಮಕ ಕಾರ್ಯಕ್ರಮ ನಡೆಯಿತು. ಅವರು ಹಾಡಿದ ಕಾವ್ಯ ಭಾಗಗಳ ಕುರಿತು ರಾಷ್ಟ್ರ ಪ್ರಶಸ್ತಿ ವಿಜೇತ ಬೆಂಗಳೂರಿನ ಪ್ರೊ. ಎನ್. ರಂಗನಾಥ ಶರ್ಮಾ ಅವರು ನಡು ನಡುವೆ ಉಪನ್ಯಾಸ ಮಾಡುತ್ತಿದ್ದರು.

ಶ್ರೀ ಸೀತಾರಾಮರಾವ್ 'ಹರಿಶ್ಚಂದ್ರ ಕಾವ್ಯ'ದ ವಿಶ್ವೇಶ್ವರ ಸಾಕ್ಷಾತ್ಕಾರದ ಕಥಾ ಭಾಗವಲ್ಲದೆ 'ಮಂಕು ತಿಮ್ಮನ ಕಗ್ಗ'ದ ಕೆಲವು ಪದ್ಯಗಳನ್ನೂ ಭಾವಾರ್ಥಪೂರ್ಣವಾಗಿ ಹಾಡಿ ತಣಿಸಿದರು. ಆ ಕಗ್ಗವನ್ನು ಇಷ್ಟು ಲಲಿತವಾಗಿ ಹಾಡಲು ಸಾಧ್ಯವೆಂಬುದನ್ನು ಅವರು ಚೆನ್ನಾಗಿಯೇ ಪ್ರದರ್ಶಿಸಿದರು.

ಆಗ ನನ್ನ ನೆನಪು ಗರಿಗೆದರಿ ಕಾಲಾಂತರಿಕ್ಷದಲ್ಲಿ ಹಿಂದೆ ಹಾರಿತು. ಮೂರು ದಶಕಗಳಿಗೂ ಹಿಂದೆ ನಮಗೆಲ್ಲ ತಮ್ಮ ಲಲಿತ ಮಧುರ ವಾಗ್ಮಿತೆಯಿಂದ ಇದೇ 'ಮಂಕುತಿಮ್ಮನ ಕಗ್ಗ'ದ ಪ್ರಪ್ರಥಮ ಪರಿಚಯ ಮಾಡಿಕೊಟ್ಟಿದ್ದು ಶ್ರೀಮಾನ್ ಜಿ. ಪಿ. ರಾಜರತ್ನಂ ಅವರು. ಅವರದು ಗೋಕರ್ಣಕ್ಕೆ ಪ್ರಥಮ ಭೆಟ್ಟಿ. ಆಗ ಅವರು ಬೌದ್ಧ ವಾಙ್ಮಯವನ್ನು ಕನ್ನಡಕ್ಕೆ ತರುತ್ತಿದ್ದರು, ಸ್ವತಃ ನೋಡಲೂ ಬೌದ್ಧ ಭಿಕ್ಷುವಿನಂತೆಯೇ ಆ ವಿರಕ್ತ ವಿದ್ವನ್ಮಣಿ ತೋರುತ್ತಿದ್ದರು. 'ರತ್ನನ ಪದ'ಗಳಿಂದ ಆ ಮೊದಲೇ ನಾವು 'ಯೆಂಡ' ಕುಡಿದವರಂತೆ ಆಗಿದ್ದೆವು.

ಅವರೊಂದಿಗೆ ಮಾತನಾಡುವಾಗ ಈ ಮನುಷ್ಯ ಎಷ್ಟು ಸಾದಾ, ಸಾಧುಜೀವಿ ಎನಿಸುತ್ತಿತ್ತು. ಆದರೆ ಆ ಸ್ನಿಗ್ಧತೆಯಲ್ಲಿ ಮುಗ್ಧತೆ ಇದ್ದಿಲ್ಲ, ವಿದಗ್ಧತೆಯ ಕಿರಣಗಳು ಸೂಸಿ ಬರುತ್ತಿದ್ದವು. ನಮ್ಮ ಮಾತು ಹೇಗೋ ಶಿವರಾಮ ಕಾರಂತರತ್ತ ತೇಲಿತು. "ಅಬ್ಬ ಎಂಥ ಮನುಷ್ಯ! He lives life at every level"– ಅವರೆಂದರು.

"ದಕ್ಷಿಣ ಕನ್ನಡದಲ್ಲಿ ನಾನು ಅವರೊಂದಿಗೆ ಸುತ್ತಾಡಿದ್ದೇನೆ. ಜೆಸ್ತ, ರೈತ, ಕೂಲಿಯಾಳು– ಯಾರೊಂದಿಗೂ ಕಾರಂತರು ಸಮರಸರಾಗಿ ಅವರ ಬಾಳಿನ ಪಾತಳಿಯಲ್ಲಿ ಕೂಡಿ ಒಡನಾಡುತ್ತಾರೆ!"

ನಮ್ಮ ಜಿಲ್ಲೆಗೆ ಅವರದು ಅದೇ ಮೊದಲಿನ ಭೆಟ್ಟಿ ಅಲ್ಲ. ಅದಕ್ಕೂ ಹಿಂದೆ ಸಿರಸಿಗೆ ಬಂದಿದ್ದರು, ಏನು, ವಿಚಿತ್ರ ನೋಡಿ, ಹಿಂದೆ ಬಂದಾಗ ಅಲ್ಲಿಯ ಒಬ್ಬ ಮುಂದಾಳು ಶ್ರೀ ತೂಕದಾರ ಮರಾಠೆ ಎಂಥ ಹುರುಪಿನ ವ್ಯಕ್ತಿ: ಆದರೆ ಈ ಸಲ ಬಂದಾಗ ಕಂಡೆ– ಅವರ ಕೈ

ಮುರಿದಿತ್ತು. ಆದರೆ ಅವರ ಹುರುಪು-ಹುಮ್ಮಸ ಏನೂ ಕುಗ್ಗಿಲ್ಲ ಬಿಡಿ!" ಎಂದು ರತ್ನ ನಿಟ್ಟುಸಿರೆಳೆದರು. "ಎಲ್ಲ ಕಾಲವಶ. ಯಾವಾಗ ಏನು ಒದಗುವುದೋ ಹೇಳುವಂತಿಲ್ಲ!" ಅವರ-ಲ್ಲಿಯ ಬೌದ್ಧ ಭಿಕ್ಷು ಉದ್ಗರಿಸಿದ.!

ಆ ದಿನ ಸಂಜೆ ಊರ ವೆಂಕಟರಮಣ ದೇವ-ಸ್ಥಾನದ ಪೌಳಿಯಲ್ಲಿ ರಾಜರತ್ನಂ ಭಾಷಣ ಮಾಡಿದರು. ವಿಷಯ 'ನಮ್ಮ ಬದುಕಿನ ದಾರಿ' ಆದಾಗಲೇ ಡಿ. ವಿ. ಜಿ. ಯವರ 'ಮಂಕುತಿಮ್ಮನ ಕಗ್ಗ' ಪ್ರಕಟವಾಗಿತ್ತು. ಅದನ್ನೇ ಹಿಂದಿಟ್ಟುಕೊಂಡು ಅವರ ವಾಗ್ವೈಖರಿ ಓಜಸ್ವಿಯಾಗಿ ಹರಿಯಿತು,

ನೆಳಲು ಚೆಲ್ಲದ ಮಹಾನುಭಾವ

ಅಲ್ಲಮಪ್ರಭು ನಡೆದಾಡುವಾಗ ಅವರ ನೆಳಲೇ ಬೀಳುತ್ತಿದ್ದಿಲ್ಲವಂತೆ. ಸಮಾಜದ ಇತಿಹಾಸ-ದಲ್ಲಿಯೂ ಆಗಾಗ ಅಲ್ಲಮನಂತೆಯೇ ಯಾರ ಮೇಲೆಯೂ ತಮ್ಮ ನೆಳಲು ಚೆಲ್ಲದೆ ತನ್ನ ಹತ್ತಿರದವರನ್ನೂ ಹಿಂದಿದ್ದವರನ್ನೂ ಕೈಹಿಡಿದು ಮುಂದೆ ತಂದು ತನ್ನಂತೆಯೇ ಬೆಳಕಿನಲ್ಲಿ ನಿಲ್ಲಿಸಿ ನಡೆಯಿಸಲು ಯತ್ನಿಸಿ ಸಂತೋಷ ಪಡೆಯುವ ಮಹಾನುಭಾವರು ಕಂಡುಬರುತ್ತಾರೆ. ಅಂಥವ-ರಿಂದಲೇ ಇತಿಹಾಸ ಮುಂದರಿಯುತ್ತದೆ. "ನವ-ತರಣ ಕಲ್ಯಾಣತರಂ" ರೂಪವನ್ನು ತಾಳುತ್ತದೆ.

ನಮ್ಮ ಡಾ. ಶಂ. ಬಾ. ಜೋಶಿ ಅಂಥ ಧನ್ಯ-ಕೋಟಿಯವರು. ಸುಮಾರು ಇಪ್ಪತ್ತು-ಇಪ್ಪತ್ತೈದು ವರ್ಷಗಳ ಹಿಂದೆ ಅವರು ನಮ್ಮ ಊರಿನ ಅಂದು ಉಚ್ಛ್ರಾಯಸ್ಥಿತಿಯಲ್ಲಿದ್ದ ಕೆಳೆಯರ ಕೂಟ(ಇಂದಿನ ಕರ್ನಾಟ ಸಂಘ)ದ ವಾರ್ಷಿಕೋತ್ಸವಕ್ಕೆ ಮುಖ್ಯ ಅತಿಥಿಗಳಾಗಿ ಪ್ರಪ್ರಥಮ ಬಾರಿ ಆಗಮಿಸಿದ್ದರು, ಆಗ ಆ ನೀಳ ಬಡಕಲು ಮೈಕಟ್ಟಿನ ಶಾಲಾ ಮಾಸ್ತರಂತೆ ಕಾಣುವ ಸಾದಾ ಸಾಚಾ ವ್ಯಕ್ತಿಯ ತೇಜಸ್ವಿಯಾದ ವಾಗ್ಮಿತೆಗೆ ನಾವೆಲ್ಲ ಮನಸೋತೆವು. ಆಗಲೇ ಅವರು ತಮ್ಮ ಕಣ್ಮರೆಯಾದ ಕನ್ನಡ, ಮರಾಠಿಗರ ಮೂಲ, ಶಿವರಹಸ್ಯ, ಕರ್ನಾಟಕದ ವೀರಕ್ಷತ್ರಿಯರು ಇಂಥ ಪುಸ್ತಕಗಳಿಂದ-ನಮ್ಮ ಪುಸ್ತಕಗಳನ್ನು ಪೂರ್ತಿ ಕೆಡಿಸಿಬಿಟ್ಟಿದ್ದರು. ಅವರು ತಮ್ಮ ಭಾಷಣಗಳಲ್ಲಿ ಜನಕ್ಕೆ ಮೊದಲು ಸ್ವಾರ್ಥ ಸಾಧಿಸಿರಿ, ಆ ಮೇಲೆ ತ್ಯಾಗ ಮಾಡಿರಿ ಎಂದು ಒತ್ತಿ ಹೇಳಿದರು. "ಅಸಂತೋಷವೇ ಏಳ್ಗೆಯ ಮೂಲ" ವೆಂದು ಕನ್ನಡ ತರುಣರಿಗೆ ಕರೆಯಿತ್ತು ಎಚ್ಚರಿಸಿದರು. ಗೋಕರ್ಣದ ಸಾಂಪ್ರದಾಯಿಕ ಸಂಸ್ಕೃತ ಪಂಡಿತರಿಗೆ, "ನಿಮ್ಮ ಜ್ಞಾನನಿಧಿ ಹಳೆಯ ಇಕ್ಕೇರಿ ನಾಣ್ಯಗಳ ನಿಧಾನವಂತೆ. ಅದಕ್ಕೆ ಇಂದಿನ ಪೇಟೆ-ಯಲ್ಲಿ ಚಲಾವಣೆಯ ನಾಣ್ಯದ ಬೆಲೆ ಇಲ್ಲ-ದಿದ್ದರೂ ಅದರ ಹೊನ್ನಿನ ಬೆಲೆ ಇದ್ದೇ ಇದೆ. ಆ ಹೊನ್ನನ್ನೇ ಹೊಸರೂಪದಲ್ಲಿ ಟಂಕಿಸ ಬೇಕಾಗಿದೆ. ಅದಕ್ಕೆ ಮನಸ್ಸುಕೊಡಿರಿ," ಎಂದು ತಿಳಿಸಿ ಹೇಳಿದರು.

ಶಂಬಾ ಅವರು ಕಲಿತದ್ದು ಮೂಲತಃ ಧಾರವಾಡದ ಗಂಡುಮಕ್ಕಳ ಟ್ರೇನಿಂಗ್ ಕಾಲೇಜಿನಲ್ಲಿ. ಪ್ರಾಥಮಿಕ ಶಿಕ್ಷಕರಾಗಿ ತರಬೇತಿ ಪಡೆದದ್ದು. ವೃತ್ತಿಯಿಂದ ಕನ್ನಡ ಪಂಡಿತರಾಗಿ ದುಡಿದು ಬೆಳಗಾವಿ ವಿಕ್ಟೋರಿಯಾ ಹೈಸ್ಕೂಲಿ-ನಿಂದ ಸೇವಾನಿವೃತ್ತರಾಗಿ ತಮ್ಮ ಸಾಹಿತ್ಯ ಸಂಶೋಧನೆಗೆ ತಪಸ್ಸಾಧನೆಗೆ ತೊಡಗಿ ಸ್ವೇಚ್ಛೆ-ಯಿಂದ ಬಡತನವನ್ನು ಅಪ್ಪಿಕೊಂಡ ಅಸಿಧಾರಾ-ವ್ರತಿಗಳು. ಅವರೊಂದಿಗೇ ಟ್ರೇನಿಂಗ್ ಪಡೆದ ಶ್ರೀ ಗಜಾನನ ಭಟ್ಟ ಉಗ್ರು ಎಂಬ ಕನ್ನಡ ಶಾಲಾ ಶಿಕ್ಷಕರು ನಮ್ಮೂರಿನವರು. ಶ್ರೀ ಉಗ್ರು ಮಾಸ್ತರರಲ್ಲಿ ಹೋಗಿ ಅವರನ್ನು ಹಳೆಯ ಗೆಳೆಯರಾಗಿ ಬಿಗಿದಪ್ಪಿಕೊಂಡು ಅವರ ಕುಶಲ-ವನ್ನು ಶಂಬಾ ಅವರು ವಿಚಾರಿಸಿದರು.


ದಿ. ಉಗ್ರು ಮಾಸ್ತರರು ಅಂದು ಉತ್ತಮ ಶಿಕ್ಷಕರೆಂದು ಹೆಸರು ಗಳಿಸಿದ್ದರು. ಜತೆಗೆ ಆಯುರ್ವೇದದ 'ಪ್ರ್ಯಾಕ್ಟೀಸ್' ಕೂಡ ಮಾಡುತ್ತಿದ್ದರು. "ಆದರೆ ಕನ್ನಡಕ್ಕಾಗಿ ಏನು ಮಾಡುತ್ತಿದ್ದೀರಿ?" ಶಂಬಾ ಕೇಳಿದರು. ಆಗ ಗಜಾನನ ಭಟ್ಟರು ತುಸು ಸಂಕೋಚದಿಂದಲೇ ಹೇಳಿದರು; "ಋಗ್ವೇದದ ಹತ್ತನೆಯ ಮಂಡಲದ ಕನ್ನಡ ಅನುವಾದ ಮಾಡುತ್ತಿದ್ದೇನೆ-

ಗಳೆಯ ವೇದಮೂರ್ತಿ, ಶ್ರೀ ಸಾಂಬಭಟ್ಟ ಗಾಯತ್ರಿಯವರ ನೆರವಿನಿಂದ. ಶ್ರೀ ಸಾಂಬ ಭಟ್ಟರು ಉಡುಪಿಯಲ್ಲಿ ವರ್ಷಗಟ್ಟಲೆ ಉಳಿದು ತರ್ಕ ಓದಿಬಂದ ವೇದೋನಾರಾಯಣರು."

ಶಂಬಾ ಅವರಿಗೆ ಅದ ಹಿಗ್ಗು ಅಷ್ಟಿಷ್ಟಲ್ಲ. ಅವರು ತನ್ನ ಹಳೆಗೆಳೆಯನ ಆ ವೇದ ಭಾಷ್ಯದ ಬರಹದತ್ತ ನೋಡಿದರು, ಓದಿದರು, ಅದನ್ನು ಶೀಘ್ರ ಮುಗಿಸಲು ಹೇಳಿದರು. ಹಾಗೆಯೇ ಕೆಲವೇ ಕಾಲದಲ್ಲಿ ಆ ಋಗ್ವೇದದ ಹತ್ತನೆಯ ಮಂಡಲದ ಕನ್ನಡ ಭಾಷ್ಯವನ್ನು ಶ್ರೀ ಉಗ್ರು ಹಾಗೂ ಗಾಯತ್ರಿ ಭಟ್ಟರ ಸಂಯುಕ್ತ ಲೇಖನತ್ವದಲ್ಲಿ ಪ್ರಕಲಿಸುವ ಏರ್ಪಾಟವನ್ನೂ ಮಾಡಿಬಿಟ್ಟರು. ಮಾತ್ರವಲ್ಲ, ಈ ಗ್ರಂಥಕ್ಕೆ ಆ ವರ್ಷದ ದೇವರಾಜ ಬಹಾದ್ದೂರ ಪಾರಿತೋಷಕವನ್ನು ಶಂಬಾ ಒದಗಿಸಿಕೊಟ್ಟಂತೆ ನನ್ನ ನೆನಪು. ಕೋಟಿತೀರ್ಥಗ ಮೂಲೆಯಲ್ಲಿ ಗೋಡೆಯ ಮರೆಯ ಗಿಡವಾಗಿ ಬೆಳೆದ ಈ ಪ್ರಕೃತ ಪ್ರತಿಭೆಯ ಈ ಕುಡಿ ಹೂವನ್ನು ಚಿನ್ನಗನ್ನಡದ ಅಕ್ಕಸಾಲಿಗರಾದ ಶಂಬಾ ಅವರು ಕನ್ನಡ ಸರಸತಿಯ ಮುಡಿಗೆ ಏರುವಂತೆ ಮಾಡಿದರು.

ಅದೇ ರೀತಿ ಕನ್ನಡ ಬರಗಾರನಾಗಿ ಹುರಿದುಂಬಿಸಿ ನನ್ನನ್ನು ಮುಂದೆ ತಂದ ಸಂಪೂರ್ಣ ಜವಾಬುದಾರಿ ಪೂಜ್ಯ ಶಂಬಾ ಅವರದೇ. ನನ್ನ ಚೊಚ್ಚಲ ಲೇಖನವನ್ನು ಅಂದಿನ ಹಿರಿಯ ಮಾಸಿಕ "ಜಯಂತಿ'ಯಲ್ಲಿಯೂ ಚೊಚ್ಚಲ-ಕೃತಿ ಮನೋವಿಜ್ಞಾನದ ರೂಪರೇಷೆಯನ್ನು ಮಿಂಚಿನ 'ಬಳಿ'ಯಲ್ಲಿಯೂ ಪ್ರಕಾಶನಗೊಳಿಸಿ ನನ್ನ ಸಾಹಿತ್ಯ ದೀಕ್ಷಾ ವಿಧಿಗೆ ಶಂಬಾ ಅವರೇ ಆದ್ಯ ಗುರುಗಳಾದರು.





ಬೇಟಗೇರಿ ಕೃಷ್ಣಶರ್ಮರ ಮಹಾಭಾರತ

ನನ್ನ ಬಾಳಿನಲ್ಲಿ ಒಂದು ಹೊಸ ಆಯಾಮ

ಕಟ್ಟಿ ನಿಂತಿದ್ದು ಪೂಜ್ಯ ಶಂಬಾ ಅವರಿಂದ ಎಂಬುದನ್ನು ಹಿಂದೆಯೇ ಹೇಳಿದ್ದೇನೆ, ವಿಶೇಷತಃ ನಾನು ಪತ್ರಿಕಾ ಪ್ರಪಂಚವನ್ನು ಪ್ರವೇಶಿಸಿದ್ದು ಅವರಿಂದ— 'ಜಯಂತಿ'ಯಲ್ಲಿ ಪ್ರಕಟವಾದ 'ಕಲೆಯ ನೆಲೆ ಮತ್ತು ಬೆಲೆ' ಎಂಬ ನನ್ನ ಚೊಚ್ಚಲ ಲೇಖನದಿಂದ. ಅದುವೇ ಪೂಜ್ಯ ಬೆಟಗೇರಿ ಕೃಷ್ಣಶರ್ಮರ ಹೃದಯದಲ್ಲಿ ನನ್ನ ಬೆಲೆಯನ್ನೂ ನೆಲೆಯನ್ನೂ ಸ್ಥಿರಗೊಳಿಸಿತು.

ಕನ್ನಡದ ಹೊಸ ಸಾಹಿತ್ಯೇತಿಹಾಸದಲ್ಲಿ ಘಟಿಸಿದ ಎರಡು ದೊಡ್ಡ ದುರಂತಗಳು—ನನ್ನ ಅಭಿಮತದಂತೆ— ಗೆಳೆಯರ ಗುಂಪಿನ ಒಡಕು ಮತ್ತು 'ಜಯಂತಿ'ಯಂಥ ಸರ್ವಾಂಗ ಸುಂದರ ಆದರ್ಶಪ್ರಾಯ ಮಾಸಪತ್ರಿಕೆಯ ಅವಸಾನ. ನನ್ನಂಥ ಅನೇಕ ಹೊಸ ಲೇಖಕರಿಗೆ ಒಂದು ನಾಮರೂಪವನ್ನು ತಂದುಕೊಟ್ಟ ಅನುಭವ ಮಂಟಪವಾಗಿತ್ತು— 'ಜಯಂತಿ' ಮತ್ತು ಅದರ ಪ್ರಭುದೇವರಾಗಿದ್ದರು—ಕವಿಭೂಷಣ ಆನಂದ ಕಂದ ಬೆಟಗೇರಿ ಕೃಷ್ಣಶರ್ಮರು.

ನಾನು ಕಂಡ ಮಟ್ಟಿಗೆ ಶ್ರೀ ಬೆಟಗೇರಿಯಂಥ ಉತ್ತಮ ಸಹೃದಯ ಕಾರ್ಯದಕ್ಷ ಸಂಪಾದಕರು ನಮ್ಮಲ್ಲಿ ವಿರಳ. ಅದೂ ಮುಗಿಲಲ್ಲಿ ತೇಲಾಡುವ ಕವಿಯಾಗಿ, ಇತಿಹಾಸದಲ್ಲಿ ಓಲಾಡುವ ಕಾದಂಬರಿಕಾರರಾಗಿ ಜನಪದ ಸಾಹಿತ್ಯದಲ್ಲಿ ಲೋಲಾಡುವ ರಾಷ್ಟ್ರೀಯ ಪ್ರಜ್ಞೆಯ ಕನ್ನಡ ಕಾರ್ಯಕರ್ತರಾಗಿ, ಕೃಷ್ಣಶರ್ಮರು ಅತ್ಯಂತ ವ್ಯಾವಹಾರಿಕತೆಯ ವಿಚಕ್ಷಣತೆಯ ಸಂಪಾದಕೀಯ ಪಾತ್ರ ನಿರ್ವಹಣೆಯನ್ನು ಸಾಕಷ್ಟು ಯಶಸ್ವಿಯಾಗಿ ಅದಕ್ಕೂ ಮಿಗಿಲಾದ ಶ್ರೇಯಸ್ಸಿನಿಂದ ಒಂದು ದಶಕ ನೆರವೇರಿಸಿದ್ದು ಎಲ್ಲ ದೃಷ್ಟಿಯಿಂದಲೂ ಸ್ತುತ್ಯ.

ಅವರೊಮ್ಮೆ ನಮ್ಮಲ್ಲಿಗೆ ಬಂದಾಗ ಸಭೆಯ ಅಧ್ಯಕ್ಷತೆ ವಹಿಸಿದ್ದ ಒಬ್ಬ ಪುರ ಪ್ರಮುಖರು ಶ್ರೀಕೃಷ್ಣನ ಬಗೆಗೆ ಒಂದು ವಾದವನ್ನೇ ಉಪಸ್ಥಿತ ಮಾಡಿದರು. ಮಹಾಭಾರತ ಯುದ್ಧಕ್ಕೆ ಶ್ರೀಕೃಷ್ಣನೇ ಕಾರಣ. ಅದರ ನೈತಿಕ ಹೊಣೆ ಅವನದೇ. ಆತ ಸಂಧಾನದ ಕಾರ್ಯವನ್ನು ಸರಿಯಾಗಿ ನಿರ್ವಹಿಸಿದ್ದರೆ ಯುದ್ಧ ತಪ್ಪುತ್ತಿತ್ತು. ಮನಸಾ ಶ್ರೀಕೃಷ್ಣ ಯುದ್ಧ ಆಗಬೇಕೆಂಬ ಉದ್ದೇಶದಿಂದಲೇ ವ್ಯವಹರಿಸಿದನು, ಎಂದುಬಿಟ್ಟರು.

ಈ ಕುರಿತು ಮರುದಿನವೇ ಶ್ರೀ ಕೃಷ್ಣಶರ್ಮರ ಹಿರಿತನದಲ್ಲಿಯೇ ಒಂದು ಚರ್ಚೆ ಏರ್ಪಟ್ಟಿತು. ಆ ಚರ್ಚೆ ಇಲ್ಲಿ ನನಗೆ ಪ್ರಸ್ತುತವಲ್ಲ. ಚರ್ಚೆಯ ನಡುವೆ ನಮ್ಮ ನೆರೆಯೂರಿನ ಒಬ್ಬ ತರುಣ ಕವಿಮಿತ್ರರು ಆಗತಾನೇ ಅಲ್ಲಿಯ ಮಾಧ್ಯಮಿಕ ಶಾಲೆಯ ಅಧ್ಯಾಪಕ ವರ್ಗಕ್ಕೆ ಸೇರಿದವರು ಅಲ್ಲಿಯೇ ಉಪಸ್ಥಿತರಿದ್ದರು. ಅವರು ಒಳ್ಳೇ ಮಾತುಗಾರರೂ ಆಗಿದ್ದರು. ಅವರಿಗೂ ನಾನು ಈ ಚರ್ಚೆಯಲ್ಲಿ ಮಾತನಾಡಲು ಒತ್ತಾಯಪಡಿಸಿದೆ.

ಆ ಉತ್ಸಾಹಿ ತರುಣ ವಾಗ್ಮಿ ಎದ್ದು ನಿಂತವರೇ ಹೀಗೆ ಪ್ರಸ್ತಾಪಿಸಿದರು: "ಅನೇಕ ಮಹನೀಯರು ಮಹಾಭಾರತಗಳನ್ನು ಬರೆದಿದ್ದಿದೆ. ವ್ಯಾಸ, ಕುಮಾರವ್ಯಾಸ, ಪಂಪ ಪ್ರಭೃತಿಗಳು ಅದನ್ನು ತಮ್ಮ ತಮ್ಮ ರೀತಿಯಲ್ಲಿ ಬರೆದಿದ್ದಾರೆ. ನಮ್ಮ ಕೃಷ್ಣಶರ್ಮರೂ 'ಮಲ್ಲಮ್ಮನ ಮಹಾಭಾರತ'ವೆಂದು ಬರೆದಿದ್ದಾರೆ. ಆದರೆ ನಾನು ಇಲ್ಲಿ ಹೇಳುತ್ತಿರುವುದು ಟಿ. ಪಿ. ಕೈಲಾಸಂ ಬರೆದ ಮಹಾಭಾರತದ ಒಂದು ನಾಟಕದ ಕಥೆ. ಆ ನಾಟಕದಲ್ಲಿ ಪೂರ್ತಿಯಾಗಿ ಏಕಲವ್ಯ ನಾಟ್ಯವಸ್ತು," ಎಂದು ಮುಂದೆ ಏಕಲವ್ಯನ ಕಥೆಯನ್ನು ಸೊಗಸಾಗಿಯೇ ವರ್ಣಿಸಿ ಮುಗಿಸಿ ಕುಳಿತರು. ಈ ಹೊಸತರಲ್ಲಿ ಈ ಕವಿಮಿತ್ರರು ಎಲ್ಲೆಲ್ಲೂ ಈ ಕೈಲಾಸಂ ಕತೆಯನ್ನೇ ಹೇಳುತ್ತಿದ್ದರು.

ಆದರೆ ಅಂದಿನ ಚರ್ಚೆಗೂ ಏಕಲವ್ಯನಿಗೂ ಒಂದು ಹೆಬ್ಬೆರಳಿನಷ್ಟೂ ಸಂಬಂಧವಿದ್ದಿಲ್ಲ. ಅಲ್ಲದೆ 'ಮಲ್ಲಮ್ಮನ ಮಹಾಭಾರತ' ಒಂದು ಬಡವಿಯ ಬದುಕಿನ ಚಿತ್ರಣವಾಗಿದೆಯೇ ಹೊರತು ವ್ಯಾಸರ ಮಹಾಭಾರತಕ್ಕೂ ಇದಕ್ಕೂ ಯಾವ ರೀತಿಯಲ್ಲೂ ತಳಕು ಹಾಕಲು ಬರುವಂತಿಲ್ಲ! ✡



ವರದರಾಜ ಹುಯಿಲಗೋಳ

ನಶಿಸುತ್ತಿರುವ
ಜನಾಂಗವೊಂದರ
ಜೀವಂತ ಚಿತ್ರಣ

ದುರಗ ಮುರಗಿ

ಜಿರ್ರ್ ! ಜಿರ್ರ್ ! ಜಿರಕ್ !!

ಮಧ್ಯಾಹ್ನದ ಉರಿಬಿಸಿಲಿನಲ್ಲಿ, ಸ್ತಬ್ಧವಾದ ಓಣಿಯಲ್ಲಿ ಒಮ್ಮೆಲೆ ಈ ಸದ್ದು ಕೇಳಿಬರುತ್ತದೆ. ಕೇಳುವವರ ಕಿವಿ ಗಡಚಿಕ್ಕುತ್ತವೆ. ಮೋಡಗಳು ಆಕಾಶವನ್ನೇ ಮುತ್ತಿಡುವಂತೆ, ಈ ಧ್ವನಿಯು ಎಲ್ಲಾ ಕಡೆಗೂ ಪಸರಿಸಿಬಿಡುತ್ತದೆ; ಈ ಮಹಾಧ್ವನಿಯನ್ನು ಕೇಳಿ, ಹಗಲುಗನಸಿನಲ್ಲಿರುವವರು ಎಚ್ಚೆತ್ತು ಹೊರಗೆ ಬರುತ್ತಾರೆ. ಹೆಂಗಸರು ಮನೆಗೆಲಸ ಬಿಟ್ಟು ಬಾಗಿಲಿಗೆ ಓಡಿಬರುತ್ತಾರೆ; ಹುಡುಗರಂತೂ ಮೊದಲೇ ಓಡಿಹೋಗಿಬಿಡುತ್ತಾರೆ ! ಜಿರ್ರ್ ! ಜಿರ್ರ್ ! ಜಿರಕ್ !

ಹೂಂ ! ಇದು ದುರಗ ಮುರಿಗೆಯ ಆಗಮನ ಧ್ವನಿ ! ಹಲಗೆ ಬಾರಿಸುತ್ತಿರುವವಳು ಒಬ್ಬ ಹೆಂಗಸು. ಅವಳ ಮೈಗೆ ಕುಪ್ಪಸವಿಲ್ಲ. ಹಳೆಯ ಚಿಂದಿಯಾದ ಸೀರೆಯೊಂದನ್ನು ಉಟ್ಟಿದ್ದಾಳೆ. ಬಾಯಿ ತುಂಬ ತಾಂಬೂಲವನ್ನು ಹಾಕಿಕೊಂಡು ತುಟಿಗಳನ್ನು ಕೆಂಪಗೆ ಮಾಡಿಕೊಂಡಿದ್ದಾಳೆ. ಅವಳ ಗಂಡ ಗುಡಿಯನ್ನು ಹೊತ್ತುಕೊಂಡಿದ್ದಾನೆ. ಅವನ ಆಕಾರ ಭೀಕರ ! ತಲೆಯ ಮೇಲಿನ ಒಣ ಜಡೆಗಳು ಬೆನ್ನಿನ ತುಂಬ ಜೋತಾಡುತ್ತಿರುತ್ತವೆ. ಹಣೆಯ ತುಂಬ ಕುಂಕುಮ ! ಅವನ ಮುಖ ಹೆದರಿಕೆಯನ್ನು ಹುಟ್ಟಿಸುತ್ತಿರುವಂತೆ ಇರುತ್ತದೆ. ಆದರೂ ಅವನೊಬ್ಬ ಪೂಜಾರಿ ! ಶಕ್ತಿ ಉಪಾಸಕ ! ಟೊಂಕದ ಕೆಳಗೆ ಉಟ್ಟುಕೊಂಡಿರುವ ಒಂದು ಧೋತರವೋ ಅಥವಾ ಒಂದು ಹಳೆಯ ಪ್ಯಾಂಟೋ ಇವನ್ನುಳಿದರೆ, ಅವನು ಬರಿಮೈಯಲ್ಲಿಯೇ ಇರುತ್ತಾನೆ. ಅವನು ಹೆಜ್ಜೆಗಳನ್ನಿಡುವಾಗ ಕಾಲಲ್ಲಿ ಗೆಜ್ಜೆಗಳು ಘಲಿಘಲಿಸುತ್ತಿರುತ್ತವೆ.

ಛಟಲ್ ! ಛಟಲ್ ! ಛಟಲ್ !!

ಬಾರುಕೋಲು ಬಾರಿಸುವವನು ಆ ಪೂಜಾರಿ; ಓಣಿಯಲ್ಲಿ ಒಂದು ಕಡೆಗೆ ತನ್ನ ತಲೆಯ ಮೇಲಿನ ಗುಡಿಯನ್ನು ಕೆಳಗಿಳಿಸಿ ಬಾರಕೋಲಿನಿಂದ ಬಾರಿಸುತ್ತಿದ್ದಾನೆ. ಒಂದು ಕೈಯಲ್ಲಿ ಬಾರುಕೋಲಾದರೆ ಇನ್ನೊಂದು ಕೈಯಲ್ಲಿ ಗಂಟೆ; ಛಟಲ್ ಎಂಬ ಬಾರುಕೋಲಿನ ಸಪ್ಪಳ; ವಿಚಿತ್ರ ಸಂಗಮ !!

ಬಾರುಕೋಲಿನ ಸಪ್ಪಳವಾದಂತೆ ಕೂಡಿದ ಜನರೆಲ್ಲರೂ ಒಂದು ವರ್ತುಲಾಕಾರದಲ್ಲಿ ಕೂಡುತ್ತಾರೆ. ಹಾಗೆ ಜನರು ಕೂಡುವುದೊಂದೇ ತಡ, ಆ ಪೂಜಾರಿಯು ತನ್ನ ಬಾರುಕೋಲನ್ನು ಗುಡಿಯ ಹತ್ತಿರ ಇಟ್ಟುಬಿಡುತ್ತಾನೆ. ಸುತ್ತಲೂ ವರ್ತುಲಾಕಾರದಲ್ಲಿ ನೀರು ಸುರಿಸುತ್ತಾನೆ;

ಥೈ ! ಥೈ ! ಥೈ !!

ಕೂಡಿದ್ದ ಜನರಿಗೆ ಮನೋರಂಜನ ಮಾಡುವುದೇ ಪೂಜಾರಿಯ ಉದ್ದೇಶ. ಗೆಜ್ಜೆ ಕಟ್ಟಿಕೊಂಡ ಅವನ ಕಾಲುಗಳು ಹೆಜ್ಜೆ ಹಾಕು-

ತ್ತವೆ. ಹೂಂ ! ಬಹಳ ಜೋಕೆಯಿಂದ ಕುಣಿಯುಬೇಕು ! ತಲೆಯ ಮೇಲೆ ತುಂಬಿದ ನೀರಿನ ಬಿಂದಿಗೆಯಿರುತ್ತದೆ ! ಕುಣಿಯುವಾಗ ಅವನಿಗೆ ಉತ್ಸಾಹ ಬರುವಂತೆ ಅವನ ಹೆಂಡತಿ ಹಲಗೆಯನ್ನು ಬಾರಿಸುತ್ತಿರುತ್ತಾಳೆ. ಧೀಂ ! ತೋಂ ! ಧೀಂ ! ತೋಂ !!

ಕಾಲಲ್ಲಿಯ ಸಪ್ಪಳ ಜೋರಾಗಿ ಇರುತ್ತದೆ ! ಚಿಕ್ಕ ಮಕ್ಕಳೆಲ್ಲ ಬಿದ್ದು ಬಿದ್ದು ನಗುತ್ತಿರುತ್ತವೆ. ಓ! ಇದೇನು? ಆ ಪೂಜಾರಿಯ ಮುಖ ಬದಲಾಗಿಬಿಟ್ಟಿದೆ. ಹುಲಿಯ ಒಂದು ಮುಖವಾಡವನ್ನು ಹಾಕಿ ಅವನು ಕುಣಿಯುತ್ತಿದ್ದಾನೆ. ಈ ನೋಟ ಎಲ್ಲರನ್ನೂ ನಗೆಗಡಲಿನಲ್ಲಿ ತೇಲಿಸಿಬಿಡುವುದು.

ಆ ನಗೆ ಬಹಳ ಕಾಲ ಉಳಿಯುವುದಿಲ್ಲ. ಪೂಜಾರಿಯ ನರ್ತನ, ನಟನೆ ಬೇಗ ನಿಲ್ಲುತ್ತದೆ. ಮುಚ್ಚಿ ಇಟ್ಟಿದ್ದ ಬಾರುಕೋಲನ್ನು ಮತ್ತೆ ತೆಗೆಯುತ್ತಾನೆ, ಛಟಲ್! ಛಟಲ್!

ಅಬ್ಬಾ! ಅದೆಂಥ ಸಪ್ಪಳ!! ಆ ಬಾರುಕೋಲನ್ನು ತೆಗೆದುಕೊಂಡು ತನ್ನ ಬರಿ ಮೈಗೆ ಜೋರಾಗಿ ಹೊಡೆದುಕೊಳ್ಳುತ್ತಾನೆ. ಒಂದು ಸಲವಲ್ಲ, ಎರಡು ಸಲವಲ್ಲ, ಐದಾರು ಸಲ ಹೊಡೆದುಕೊಳ್ಳುತ್ತಾನೆ! ಛಟಲ್ ಎಂಬ ಸಪ್ಪಳ ಆಕಾಶವನ್ನೇ ಭೇದಿಸಿ ಹೋಗುವಂತೆ ಉದ್ಭವಿಸಿ ಬರುತ್ತದೆ. ಆದರೂ ಅವನ ದೇಹ ರಕ್ತ ಸುರಿಸುವದಿಲ್ಲ. ಆ ತೀವ್ರ ಪೆಟ್ಟುಗಳನ್ನು ಶಾಂತದಿಂದ ತಾಳಿಕೊಳ್ಳುತ್ತದೆ. ಆವೇಶ! ಆವೇಶ !! ಆವೇಶ !!!

ಅದೆಂಥ ಆವೇಶ ಆ ಪೂಜಾರಿಯದು! ಕೂದಲುಗಳನ್ನು ದಿಗಾಡಿಸುತ್ತಾನೆ. ನಡುನಡುವೆ ಹೂಂಕರಿಸುತ್ತಾನೆ. ಗುಡಿಯ ಸಮೀಪದಲ್ಲಿ ಹೋಗಿ, ಗಣಗಣಗಂಟೆಯ ಬಾರಿಸಿ, "ತೆಗೀ ನಿನ್ನ ಕದಾ ! ತೆಗೀ ನಿನ್ನ ಕದಾ !" ಎಂದು ಒದರುತ್ತಾನೆ.

ಆದರೆ ಆ ಗುಡಿಯ ಬಾಗಿಲ ತೆರೆಯುವುದಿಲ್ಲ. ಇನ್ನೂ ಮುಂದೆ ಏನಿದೆ ? ಆ ಪೂಜಾರಿ ಕುತೂಹಲ ಕೆರಳಿಸುತ್ತಾನೆ. ಆ ಪೂಜಾರಿಯೂ ಒಬ್ಬ ಕಲಾವಿದನೆ! ಗುಡಿಯ ಬಾಗಿಲದ ಹತ್ತಿರ ಕುಳಿತು ಗಣಗಣ ಗಂಟೆಯ ಬಾರಿಸಿ ರಾಗ ತೆಗೆದು ಹಾಡಲು ಆರಂಭಿಸುತ್ತಾನೆ. ಅವನದು ಗಡುಸಾದ ಧ್ವನಿ ! ಗಂಭೀರವಾದ ಧ್ವನಿ ! ಆ ಧ್ವನಿಯಲ್ಲಿಯೇ ತಾಳ ಹಿಡಿದು ಅವನು ಹಾಡಲು ಯತ್ನಿಸುತ್ತಾನೆ. ಅವನು ಹಾಡುವುದೇನು ? ಅದು ದುರ್ಗಿಯ ಮಹಿಮೆ:

"ಬಡವರ ಬಗ್ಗರನ ಅರಿಕೆ ಮಾಡಲಾಕ
ಬಂದೀದಿ ತಾಯಿ
ಹರಿಕೆ ಇದ್ದವರು ಉಡಿಗೆ ಕೊಡಬೇಕು
ತಾಯಿ !"

ಆ ದುರ್ಗಿಯು ಎಲ್ಲರಿಗೂ ಆಶೀರ್ವದಿಸಲಿಕ್ಕೆ ಬಂದಿದ್ದಾಳೆ. ಅವಳು ಯಾವ ರೀತಿಯಾಗಿ ಅಲ್ಲಿಗೆ ಬಂದಿದ್ದಾಳೆ ? ಪೂಜಾರಿಯು ಅದನ್ನು ಹೀಗೆ ವರ್ಣಿಸುವನು:

"ಕುಂತೆಂಥ ಭೂಮಿ ತಾಯಿಗೆ ಸೇರು। ನಿಂತೆಂಥ ಆಕಾಶ ತಾಯಿಗೆ ಸೇರು ॥ ಆಕಾಶವೆಂಬೋ ನೆರಳ ಮಾಡಿಕೊಂಡು। ಭೂಮಿ ತಾಯಿಯನ್ನೆ ಗದ್ದುಗೆ ಮಾಡಿಕೊಂಡು– "

ಪೂಜಾರಿಯು ಹೇಳುವ ಕೊನೆಯ ಎರಡು ಸಾಲುಗಳು, ಕಾವ್ಯಸ್ಫೂರ್ತಿಯಿಂದ ಹೊರಹೊಮ್ಮಿ ಬಂದಿವೆ. ಜೀವನದ ವಿಶಾಲವಾದ ಕಲ್ಪನೆಯನ್ನು ಆ ಪೂಜಾರಿಯು ಮಾಡಿಕೊಡುತ್ತಾನೆ.

ದುರ್ಗಿಯು ಅಲ್ಲಿಗೆ ಬಂದುದ್ದು ಅನೇಕ ಬೇನೆಗಳನ್ನು ದೂರಮಾಡಲು. ಆ ಪೂಜಾರಿಯು ಅನೇಕ ಮೈಲಿ ಬೇನೆಗಳ ಹೆಸರುಗಳನ್ನು ಹೇಳುತ್ತಾನೆ. ಕರಿ ಮೈಲಿ, ತೊಗರಿ ಮೈಲಿ, ರಾಗಿ ಮೈಲಿ, ಸಣ್ಣ ರಾಗಿ ಮೈಲಿ, ಅಸಿ ಮೈಲಿ, ಸಜ್ಜಿ ಮೈಲಿ, ಗುಳ್ಳಿ ಬೇನೆ ಹೀಗೆ ಅದೊಂದು ದೊಡ್ಡ ಸರಪಣಿಯೇ ಬರುತ್ತದೆ. ಕಾಳುಗಳ ಆಕಾರಗಳ ಮೇಲಿಂದ ಬೇರೆ ಬೇರೆ ಬೇನೆಗಳ ಹೆಸರು ಹೇಳುವುದು ಇಲ್ಲಿ ಸೋಜಿಗವಾದ ಸಂಗತಿಯಾಗಿದೆ. ಈ ಬೇನೆಗಳೆಲ್ಲ ಹೋಗಬೇಕಾದರೆ ದೇವಿಗೆ ಉಡಿ ತುಂಬಬೇಕೆಂದು ಆ ಪೂಜಾರಿಯು ನೆರೆದ ಜನರಿಗೆ ಮೇಲಿಂದ ಮೇಲೆ ಹೇಳುತ್ತಾನೆ.

ಪೂಜಾರಿಯು ಈ ರೀತಿಯಾಗಿ ದುರ್ಗಿಯ ಮಹಿಮೆಯನ್ನು ರಾಗ ತೆಗೆದು ಹೇಳುತ್ತಿರುವಾಗ, ಅವನ ಹೆಂಡತಿ ಹಲಗೆಯನ್ನು ಬಾರಿಸುತ್ತ, ದೇವರ ನಾಮದ ಪಲ್ಲವಿಯನ್ನು

ಹೇಳುತ್ತಿರುತ್ತಾಳೆ. 'ರಾಮ ಓಲ್ಲ್ಯರೆ! ರಾಮು ಓಲ್ಲ್ಯರೆ!' ಎಂಬುದು ಆ ಪಲ್ಲವಿ. ಆವಳು ಬಾರಿಸುವುದಕ್ಕೂ, ಈ ಪಲ್ಲವಿಯ ಧ್ವನಿಗೂ ಬಹಳ ಹೋಲಿಕೆ ಇರುತ್ತದೆ.

ಅವಳು ರಾಮನ ಹೆಸರನ್ನು ಸ್ಮರಿಸಿ ಪಲ್ಲವಿಯನ್ನು ಹೇಳುವುದನ್ನು ನೋಡಿದರೆ, ಈ ದುರುಗ–ಮುರಗಿಯರ ಜಾತಿಯ ಬಗ್ಗೆ ನಮಗೆ ಹಲವು ಮಾತುಗಳು ತಿಳಿಯುವವು. ಈ ದುರಗ–ಮುರಗಿಯರು ಶಕ್ತಿಯ ಉಪಾಸಕರು. ಇವರು ಬೇಡ ಜಾತಿಯವರು. ಈ ಬೇಡರು ಬೇಟೆಯಾಡುವುದರಲ್ಲಿ ಬಹಳ ಶೂರರು, ಚಪಲರು. ದೇಶರಕ್ಷಣೆಗಾಗಿ ಉತ್ತಮ ಕಾರ್ಯವನ್ನು ಮಾಡಬಲ್ಲವರು. ಹಿಂದಕ್ಕೆ ಎಷ್ಟೋ ಬೇಡರು ರಾಜರಾಗಿ ರಾಜ್ಯವನ್ನು ಆಳಿದ್ದಾರೆ. ಇಷ್ಟು ಕ್ಷಾತ್ರಬಲ ಅವರಲ್ಲಿದ್ದರೂ, ಅವರೀಗ ಅಧೋಗತಿಯಲ್ಲಿರುವರು. ತಮ್ಮ ಹೊಟ್ಟೆಗಾಗಿ ಅಂಡಲೆಯುವ ಕೆಲವು ಬೇಡರ ಗುಂಪುಗಳು ಈ ದುರಗ–ಮುರಿಗೆಯರು. ದಕ್ಷಿಣ ಹಿಂದುಸ್ಥಾನದಲ್ಲಿ ಅನೇಕ ಕಡೆಗೆ ಇವರು ಕಾಣುವರು. ಇವರು ತಾವು ವಾಲ್ಮೀಕಿ ಕುಲದವರೆಂದು ಅಭಿಮಾನದಿಂದ ಹೇಳಿಕೊಳ್ಳುವರು. ರಾಮಾಯಣ ಬರೆದವ ವಾಲ್ಮೀಕಿ. ಪ್ರತಿಯೊಂದರ ಮೂಲವನ್ನು ರಾಮನಿಗೆ ಒಯ್ದು ಹಚ್ಚುವುದು ಬೇಡರಲ್ಲಿ ಬಹಳ ರೂಢಿಯಾದುದು ಎಂದು ಮೈಸೂರು ಗೆಜೆಟಿಯರಿನಲ್ಲಿ ಹೇಳಲಾಗಿದೆ. ಅಂತೆಯೆ ದುರ್ಗಿಯ ಮಹಿಮೆಯನ್ನು ಪೂಜಾರಿಯು ಹೇಳುವಾಗ, ಅವನ ಹೆಂಡತಿ ರಾಮ ನಾಮ ಜಪಿಸುತ್ತಿರುತ್ತಾಳೆ.

ದೇವಿಯ ವರ್ಣನೆಯನ್ನು ಮಾಡಿದ ಮೇಲೂ ಆ ಪೂಜಾರಿಯು ಗುಡಿಯ ಬಾಗಿಲ ತೆರೆಯುವುದಿಲ್ಲ. ಬಾಗಿಲವೆಂದರೆ ಅದೊಂದು ಮಹಾದ್ವಾರವಲ್ಲ; ಅದೊಂದು ಬಟ್ಟೆಯ ಪರದೆ! ಆ ಪರದೆಯ ಒಳಗೆ ಅವನು ಸಾವಕಾಶವಾಗಿ ಕೈ ಹಾಕಿ ಒಂದೊಂದೇ ಸಾಮಾನುಗಳನ್ನು ಹೊರಗೆ ತೆಗೆಯುತ್ತಾನೆ. ಅಲ್ಲಿ ಬೆಳ್ಳಿಯ ಕಾಲ್ಗಡಲಗಳು ಇವೆ; ಬೆಳ್ಳಿಯ ತೊಟ್ಟಿಲುಗಳು ಇವೆ; ಮತ್ತೆ ತರತರದ ಸಾಮಾನುಗಳು ತುಂಬಿಕೊಂಡಿವೆ. ಮುಸಲ್ಮಾನರು, ಒಕ್ಕಲಿಗರು, ಲಮಾಣಿಯರು ಬಿಕ್ಕೆ ಬೇಡುವವರು ಎಲ್ಲರೂ ಅವನಿಗೆ ಸಾಮಾನುಗಳನ್ನು ಕೊಟ್ಟಿರುವರಂತೆ. ಯಾವ ಊರಲ್ಲಿ, ಯಾರು, ಮತ್ತು ಏತಕ್ಕಾಗಿ ಕೊಟ್ಟಿದ್ದಾರೆ ಎಲ್ಲವನ್ನು ಅವನು ಬಹಳ ಸ್ವಾರಸ್ಯವಾಗಿ ಬಣ್ಣಿಸಿ ಹೇಳುತ್ತಾನೆ. ಪ್ರತಿಯೊಂದು ಸಾಮಾನು ಕೈಯಲ್ಲಿ ಹಿಡಿದುಕೊಂಡು,



ಆದನ್ನು ನೆರೆದ ಜನರಿಗೆ ತೋರಿಸಿ, ಆ 'ಉಡಿ'ಯ ಮಹತ್ವವನ್ನು ಆ ಪೂಜಾರಿ ಹೇಳುತ್ತಾನೆ.

"ಮುಸಲ್ಮಾನ ಮಹಮ್ಮದ! ಮೋಳಪ್ಪದ್ದ
ಗಡ್ಡಾ ಬಿಟ್ಟಾವಾ!
ಬೇಡಿಕೊಡುವರೇ ಸಾಮಾನ"

ಹೀಗೆ ಒಬ್ಬ ಮುಸಲ್ಮಾನನನ್ನು ಕುರಿತು ಹೇಳುವನು.

ಯಾವನೋ ಒಬ್ಬನು ಬಹಳ ಬೇನೆ ಬಂದು ಸೊರಗಿದ್ದನಂತೆ! ಅವನ ವರ್ಣನೆ ಪೂಜಾರಿ ಈ ಈ ರೀತಿ ಮಾಡುತ್ತಾನೆ.

"ಕಣ್ಣ ಹೋಗ್ಯಾವ ಕಪಾಳಕ್ಕ! ಹೊಟ್ಟಿ
ಹೋಗ್ಯೈತಿ ಬೆನ್ನಿಗೆ!"

ಇಂಥವನು ಹೆದರಿ, ದೇವಿಗೆ ಉಡಿ ಕೊಟ್ಟನಂತೆ! ಅಂದಿನಿಂದ ಅವನ ಬೇನೆ ದೂರವಾಯಿತಂತೆ!

ಪೂಜಾರಿಯು ತೋರಿಸುವ ಸಾಮಾನುಗಳು ಅನೇಕ! ಅವನು ಹೇಳುವ ಊರುಗಳು ಅನೇಕ! ಅವನು ಹೇಳುವ ಜನರ ಹೆಸರುಗಳೂ ಅನೇಕ!!

ಇಷ್ಟೆಲ್ಲ ಹೇಳಿದ ಮೇಲೆ, ಅವನು ಗುಡಿಯ ಬಾಗಿಲ ತೆಗೆಯುವ ವೇಳೆ ಬರುತ್ತದೆ. ಅವನ ಜೀವನದಲ್ಲಿಯೆ ಆ ಗುಡಿಯು ಅತ್ಯಂತ ಮಹತ್ವದ್ದು. ಅವನು ಅದನ್ನೇ ನಂಬಿಕೊಂಡು, ಅದರಲ್ಲಿಯೆ ನಿಸ್ಸೀಮ ವಿಶ್ವಾಸವಿಟ್ಟು ತನ್ನ ಜೀವನ ಸಾಗಿಸುತ್ತಾನೆ. ಬಾಗಿಲೊಂದನ್ನು ಬಿಟ್ಟು ಉಳಿದ ಮೂರು ಬದಿಗಳಲ್ಲಿ ಬೇರೆ ಬೇರೆ ಚಿತ್ರಗಳು ಆ ಗುಡಿಗೆ ಇರುತ್ತವೆ. ಹಿಂದಿನ ಭಾಗದಲ್ಲಿ ದ್ಯಾಮಪ್ಪನ ಗುಡಿ ಮತ್ತು ಆ ಗುಡಿಯ ಮುಂದೆ ಇರುವ ಸಿಡಿ ಇವುಗಳ ಚಿತ್ರ; ಬಲಗಡೆಗೆ ಕಾಶಿ ವಿಶ್ವೇಶ್ವರನ ಚಿತ್ರ, ಅದರ ಕೆಳಗೇ ಲಡಾಯಿಯ ಮತ್ತು ಶಿಕಾರಿಯ ಚಿತ್ರಗಳು. ಎಡಗಡೆಗೆ ರಾಮಾಯಣ ಮತ್ತು ಹಳೆಯ ಪುರಾಣದ ಚಿತ್ರಗಳು. ಹುಲಿ ಮತ್ತಿನ್ನಿತರ ಪ್ರಾಣಿಗಳೂ ಅಲ್ಲಲ್ಲಿ ಕಂಡುಬರುತ್ತವೆ. ಯುದ್ಧ ಮಾಡುವ ಚಿತ್ರವನ್ನೊಂದುಬಿಟ್ಟರೆ ಉಳಿದ ಚಿತ್ರಗಳೆಲ್ಲವೂ ಪುರಾಣದ ಕಾಲದವೇ. ಈ ಗುಡಿಗಳು ತಯಾರಿಸಿ, ಚಿತ್ರಿಸಿ ಕೊಡುವ ಜನರಿಗೆ ಜನಗಾರರು ಎಂದು ಕರೆಯುವರು.

ಉತ್ತರ ಕರ್ನಾಟಕದಲ್ಲಿನ ಬೆಳಗಾವಿ ಜಿಲ್ಲೆಯ ಖಾನಾಪುರವು ಇಂಥ ಗುಡಿಗಳನ್ನು ಸಿದ್ಧಪಡಿಸುವ ಜನಗಾರರಿಗಾಗಿ ಪ್ರಸಿದ್ಧವಿದೆ, ದುರಗ-ಮುರಗೆಯರು ಸುಮಾರು ೧೦ ವರ್ಷಕ್ಕೊಮ್ಮೆ, ೧೨ ವರ್ಷಕ್ಕೊಮ್ಮೆ ಈ ಗುಡಿಗಳನ್ನು ಜನಗಾರರಿಂದ ಮಾಡಿಸುತ್ತಾರೆ. ಆ ಗುಡಿಯನ್ನು ಸ್ವೀಕರಿಸಿ ತನ್ನ ಜೊತೆಗೆ ತರಬೇಕಾದರೆ, ದುರಗ-ಮುರಿಗೆಯವನು ಒಂದು ಜಾತ್ರೆಯನ್ನೇ ಮಾಡಬೇಕಾಗುವುದು. ಈ ಹಬ್ಬಕ್ಕಾಗಿ ಸುಮಾರು ೨೦೦ ರೂಪಾಯಿಗಳನ್ನಾದರೂ ವ್ಯಯ ಮಾಡಬೇಕಾಗುವುದೆಂದು ಅವರ ಹೇಳಿಕೆ. ಗುಡಿ ಮಾಡಿಸಿದವನೇ ಈ ಜಾತ್ರೆಯನ್ನು ನೆರವೇರಿಸುವನು. ಗುಡಿಯನ್ನು ತಯಾರಿಸಿದ ಸೀಮೆಯನ್ನು ಹಿಡಿದು, ದೇವಿಯ ಆರಾಧನೆಯನ್ನು ಮಾಡುತ್ತ ದುರಗ-ಮುರಗೆಯವನು ಊರಲ್ಲಿ ಬರಬೇಕಾಗುವುದು. ಹತ್ತು ಹೆಜ್ಜೆಗೊಮ್ಮೆ ತೆಂಗಿನಕಾಯಿ ಒಡೆಯುವನು. ಸಾಧಾರಣ ಆ ದಿನ ಅವನು ನೂರು ತೆಂಗಿನಕಾಯಿಗಳನ್ನಾದರೂ ಒಡೆಯುವನು. ಗುಡಿ ಇರುವ ಸ್ಥಳದಲ್ಲಿ ಮೂರು ದಿನ ಜಾತ್ರೆ ನಡೆಯುವದು. ಸಿರಸಿಯಲ್ಲಿ ನಡೆಯುವ ಮಾರೆಮ್ಮನ ಜಾತ್ರೆಯಂತೆಯೇ ಇದೂ ಸಣ್ಣ ಪ್ರಮಾಣದಲ್ಲಿ ಆಗುವುದು. ಜೋಳದ ಕಿಚಡಿಯಿಂದ ಗದ್ದುಗೆ ಮಾಡುತ್ತಾರೆ. ಅವರ ಮೇಲೆ ಕುಂಕುಮ ತೂರುತ್ತಾರೆ. ಕುರಿಯ ಆಹುತಿ ಕೊಡುತ್ತಾರೆ. ಗದ್ದುಗೆಯ ಮೇಲೆ ಗುಡಿಯನ್ನು ಇಡುತ್ತಾರೆ. ಮೂರು ದಿನ ಸಮೀಚೀನ ಊಟವಾಗುತ್ತದೆ. ಈ ಸಮಯದಲ್ಲಿ ಇವರು ಎರಡು ಪ್ರಾಣಿಗಳ ಬೇಟೆ ಹೊಡೆದುಕೊಂಡು ತರಬೇಕು. ಒಂದು ಬೇಟೆ ದೇವಿಗಾಗಿ ನೈವೇದ್ಯ; ಇನ್ನೊಂದು ಹಿರಿಯರಿಗಾಗಿ. ಈ ನೈವೇದ್ಯ ಕೊಡುವಲ್ಲಿ ದೇವಿಗಾಗಿ ಇರುವ ಭಕ್ತಿ ಮತ್ತು ಹಿರಿಯರಲ್ಲಿರುವ ವಿಶ್ವಾಸ ಇವೆರಡೂ ಸ್ಫುಟವಾಗಿ ಕಂಡುಬರುತ್ತವೆ. ಮೂರು ದಿನದ ಜಾತ್ರೆ ಮುಗಿದ ಮೇಲೆ ಆ ಗುಡಿಯನ್ನು ಸ್ವೀಕರಿಸಿ, ದುರಗ-ಮುರಿಗೆಯವರು ತಮ್ಮ ವ್ಯವಸಾಯಕ್ಕೆ ಹೊರಡುತ್ತಾರೆ.

ಈ ಗುಡಿಯೊಳಗೆ ದುರ್ಗಾದೇವಿ ಇರುತ್ತಾಳೆ.

ಎದೆಯಿಂದ ಮೇಲ್ಭಾಗವೆಲ್ಲ ಅಲ್ಲಿ ರೂಪಿಸಿರುತ್ತದೆ. ಮೂಗಿನಲ್ಲಿ ಮೂಗುತಿಯಿದ್ದು ಕೈಯಲ್ಲಿ ಖಡ್ಗವಿರುತ್ತದೆ. ಅವಳ ಹೊಕ್ಕುಳದ ಮೇಲೆ ಒಂದು ನಾಗರ ಹಾವಿನ ಹೆಡೆ ಇರುವುದು. ಇದು ದ್ರಾವಿಡ ಸಂಸ್ಕೃತಿಯ ಕುರುಹು ಇರಬಹುದೆಂದು ತೋರುತ್ತದೆ,

ನೆರೆದ ಜನರಿಗೆ ಪೂಜಾರಿ ಎಲ್ಲವನ್ನೂ ಹೇಳಿದ ಮೇಲೆ ಅವನು ಬಾಗಿಲವನ್ನು ತೆರೆಯುತ್ತಾನೆ. ಇದೊಂದು ವಿಚಿತ್ರ ನಾಟಕ! ಪೂಜಾರಿಯ ಕೃತಿಗಳ ನಾಟಕವೆಲ್ಲ ಮುಗಿದ ಮೇಲೆ, ಪರದೆ ಮೇಲಕ್ಕೇರುತ್ತದೆ!! ದೇವಿಯ ದರ್ಶನವಾದ ಕೂಡಲೇ, "ದೇವಿಗೆ ಉಡಿ ತುಂಬಿರಿ" ಎಂದು ಪೂಜಾರಿಯು ಎಲ್ಲರನ್ನೂ ಅಂಗಲಾಚಿ ಬೇಡಿಕೊಳ್ಳುತ್ತಾನೆ.

ಹಳ್ಳಿ ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಹೀಗೆ ಅಂಗಲಾಚಿ ಬೇಡುತ್ತ ತಿರುಗುವುದೇ ಈ ದುರಗ-ಮುರಗೆಯರ ವ್ಯವಸಾಯ. ಅವರು ಒಂದೇ ಊರಲ್ಲಿ ಇರುವವರಲ್ಲ. ಹಳ್ಳಿಯಾದರೂ ಒಂದು ಕೋಪೆಯಲ್ಲಿ ಗುಡಿಸಲು ಹಾಕಿಕೊಂಡಿರುವರು. ಗುಡಿಸಲಿನ ಮುಂದೆ ನಾಯಿ ಮತ್ತು ಎತ್ತುಗಳು ಇರುವವು. ಇವರು ಎತ್ತ ಕಡಗೆ ಹೋಗುವರೋ ಅತ್ತ ಕಡೆಗೆ ಎತ್ತು ಸಾಮಾನುಗಳನ್ನು ಹೊತ್ತುಕೊಂಡು ಹೋಗುವುದು. ಹೋದಕಡೆಗೆಲ್ಲ ಇವರು ದಾನ ಮಾಡಿದವರ ಹೆಸರುಗಳನ್ನು ಅವರ ಕೀರ್ತಿಯನ್ನೂ ಹೊಗಳುತ್ತ ಹೋಗುವರು. ಆಯಾ ಭಾಷೆ ಪ್ರಚಲಿತವಿದೆಯೋ ಆ ಭಾಷೆಯಲ್ಲಿ ಅವರು ಮಾತನಾಡುವರು. ಅವರು ಸಂಪೂರ್ಣವಾಗಿ ದೇವಿಯ ಮೇಲೆ, ಅವಳು ಕೊಡಿಸುವ ಭಿಕ್ಷೆಯ ಮೇಲೆ ಅವಲಂಬಿಸಿಕೊಂಡು ನಿಂತವರು. ದೇವಿಗೆ ಕೊಡುವ 'ಉಡಿ' ಮರದಲ್ಲಿಯೇ ಕೊಡುವರು. ಜನರ ಕೊಟ್ಟ ಬೆಳ್ಳಿಯ 'ಆಹೇರು' ಅಮ್ಮನ ಗುಡಿಯಲ್ಲಿಯೇ ಉಳಿಯುವವು.

ದುರಗ-ಮುರಗೆಯರು ನರ್ತನಕಾರರು, ನಟರು, ಮಾತುಗಾರರು, ವೈದ್ಯರು, ಶಕ್ತಿಯ ಉಪಾಸಕರು, ತತ್ತ್ವಜ್ಞಾನಿಗಳು– ಇವೆಲ್ಲವುಗಳ ಸ್ವಲ್ಪ ಅಂಶ ಅವರ ರೀತಿ ನೀತಿಗಳಲ್ಲಿ ಕೂಡಿಕೊಂಡಿದೆ. ತಮ್ಮ ಜೀವನದಲ್ಲಿಯೇ ಯಾವುದೋ ಒಂದು ಸುಖ ಅವರು ಹಚ್ಚಿಗೊಂಡಿದ್ದಾರೆ. ಪೂಜಾರಿಯೇ ಹೇಳುತ್ತಾನೆ– "ಬಂದ ಕಾಲ ತಿರುಗಿ ಬರೋದಿಲ್ಲ. ಬರುತನ ಏನ ಕಟಗೊಂಡು ಬಂದಿತ"— ಹೌದು! ಹೀಗೆ ದಿಕ್ಕಿಲ್ಲದವರಂತೆ ಇದ್ದು, ಸುಖ ಪಟ್ಟುಕೊಂಡು ತಿರುಗಾಡುವವರು ಇವರು! ✡

ಕೃಪೆ: 'ಯುಗಪುರುಷ'



ಹಾಸನದಲ್ಲಿ ಮೊಳೆ

ನಮ್ಮ ಅಕ್ಕನ ಮಿತ್ರರೊಬ್ಬರು ಡಾಕ್ಟರು. ಒಂದು ಸಲ ರೋಗಿಯೊಬ್ಬ ಅವರ ಹತ್ತಿರ ಬಂದ. "ಏನಪ್ಪ ಏನಾಗಿದೆ?" ಅಂದಾಗ "ಡಾಕ್ಟ್ರೇ ಹಾಸನದಲ್ಲಿ ಮೊಳೆ" ಅಂದ. "ಹಾಸನದಲ್ಲಿ ಮೊಳೆಯಾದರೆ ನನ್ನೇರಿಗೆ ಏಕೆ ಬಂದೆ? ಹಾಸನದಲ್ಲೇ ಮೊಳೆ. ಬೇಕಾದರೆ ಅಂತ ಹಾಸನದಿಂದಲ್ಲೇ ಬೀಜ ಬಿತ್ತೀರೀಯೇನು!" ಅಂದರು ಡಾಕ್ಟರು. "ಬರೀ ಡಾಕ್ಟ್ರೆ, ನಿಮ್ದೂ ಚೆನ್ನಾಗೈತೆ. ನಂಗೆ ನೋವು ಅಂತ ನಿಮ್ಮ ಹತ್ರ ತೋರಿಸಾಕ ಬಂದೆ. ನೀವು ಇಂಗೆ ತಮಾಷೆ ಮಾಡತೀರ?" ಎಂದ ರೋಗಿ. ಹಾಗೋ, "ಹಾಗಾದರೆ ಎಲ್ಲಿ ನೋವು? ಎಷ್ಟು ದಿವಸದಿಂದ ನೋವು ಆಗುತ್ತೆ ಏನು, ಅನ್ನೋದನ್ನ ಸರಿಯಾಗಿ ವಿವರಿಸಿ ಹೇಳು," ಎಂದು ಡಾಕ್ಟರೆಂದಾಗ ರೋಗಿ ನಾಚುತ್ತ ಸಂಚಿ ಎತ್ತಿ ತೋರಿಸುವುದರಲ್ಲಿದ್ದ; ಡಾಕ್ಟರಿಗೆ ಅರ್ಥವಾಯಿತು- "ಹಾಸನದಲ್ಲಿ ಮೊಳೆ" (Piles) ಅಂತ.

—ಸೌ. ವಿಜಯಾ ಜಿ. ಬಿ.



ಮೈಸೂರು
ಸ್ಯಾಂಡಲ್
ಸೋಪ್
ತಯಾರಕರಿಂದ

ಬೆಲೆಯನ್ನು ಹೋಲಿಸಿ.
ಗುಣವನ್ನು ಪರೀಕ್ಷಿಸಿ.
ನೀವೇ ಕಂಡುಕೊಳ್ಳಿರಿ.



ಪಾಯಿಂಟ್

ಡಿಟರ್ಜೆಂಟ್ ಒಗೆಯುವ ಬಿಲ್ಲೆ

ದೈಹಿಕ ರೋಗ ಲಕ್ಷಣಗಳ ಮೂಲ ಮಾನಸಿಕವಾಗಿರಲೂಬಹುದು

ಹೃದಯರೋಗವೋ ಮನೋವೇದನೆಯೋ?

ಡಾ. ಜೆ. ಎಂ. ಧ್ರುವಕುಮಾರ
ಎಂ. ಬಿ. ಬಿ. ಎಸ್., ಎಂ. ಡಿ., ಡಿ. ಎ. ಬಿ. ಪಿ. (U.S.A)

ರೋಗಿಯ ಹೆಸರನ್ನು ರಹಸ್ಯವಾಗಿಡಬೇಕಾದುದು ವೈದ್ಯನ ಕರ್ತವ್ಯ. ಆದ್ದರಿಂದ ಇಲ್ಲಿ ವಿವರಿಸಿರುವ ಘಟನೆ ನಿಜವಾದರೂ ಹೆಸರುಗಳು ಮಾತ್ರ ಕಾಲ್ಪನಿಕ.

ನನ್ನ ಮಾಮೂಲು ದಿನಚರಿಯಂತೆ ಆ ದಿನವೂ ಕೂಡ ಬೆಳಿಗ್ಗೆ ಹತ್ತು ಘಂಟೆಗೆ ನನ್ನ ಕ್ಲಿನಿಕ್ಕಿಗೆ ಬಂದೆ. ನಾನು ಬಂದ ಕೂಡಲೆ ನನ್ನ ರಿಸೆಪ್ಷನಿಸ್ಟ್ ನನಗಾಗಿ ಕಾಯುತ್ತಿರುವ ರೋಗಿಗಳ ಪಟ್ಟಿಯನ್ನು ತಂದುಕೊಡುವುದು ವಾಡಿಕೆ. ಆ ದಿನ ನಮ್ಮ ಕ್ಲಿನಿಕ್ಕಿನಲ್ಲಿ ಬಹಳ ಗಲಿಬಲಿ. ರಿಸೆಪ್ಷನಿಸ್ಟ್ ಮುಖದಲ್ಲಿ ಏನೋ ಹೆದರಿಕೆ ಮತ್ತು ಕಳವಳ. ನನ್ನನ್ನು ನೋಡಿದ ಕೂಡಲೆ, "ಡಾಕ್ಟರ್, ಒಬ್ಬ ರೋಗಿ ಬಹಳ ಎದೆನೋವಿನಿಂದ ಬಹಳ ನರಳುತ್ತಿದ್ದಾರೆ. ನಿಮಗೋಸ್ಕರವೇ ಕಾಯುತ್ತಿದ್ದಾರೆ. ನೀವು ಅವರನ್ನು ತಕ್ಷಣವೇ ನೋಡಬೇಕು," ಎಂದು ಉದ್ವೇಗದಿಂದ ಹೇಳಿದಳು. ಆ ರೋಗಿಯನ್ನು ಕೂಡಲೆ ಪರೀಕ್ಷಾ ಕೊಠಡಿಗೆ ಕರೆದುಕೊಂಡು ಹೋದೆವು. ಅವರು ತಮ್ಮ ಹೆಸರು ಫರ್ನಾಂಡೀಸ್ ಎಂದು ಹೇಳಿ ಒಂದು ಪತ್ರವನ್ನು ನನ್ನ ಮುಂದಿರಿಸಿದರು. ಆ ಪತ್ರವು ನನ್ನ ಮಿತ್ರ, ಹೃದಯರೋಗತಜ್ಞರಾದ ಡಾ. ಮೈಕೇಲ್ ಬೆಂಜಮಿನ್‌ರವರಿಂದ ಬರೆಯಲ್ಪಟ್ಟಿತ್ತು. ಆ ಪತ್ರದ ಒಕ್ಕಣೆ ಈ ರೀತಿಯಿತ್ತು:

"ಮಿ. ಫರ್ನಾಂಡೀಸ್‌ರವರನ್ನು ನಿಮ್ಮ ಸಲಹೆಗೋಸ್ಕರ ಕಳುಹಿಸಿರುತ್ತೇನೆ. ಅವರಿಗೆ ಎಂಟು ತಿಂಗಳ ಹಿಂದೆ ಹೃದಯಾಘಾತವಾಯಿತು. ಇದರಲ್ಲೇನೂ ಸಂಶಯವೇ ಇಲ್ಲ. ನಾನು ಮಾಡಬೇಕಾದುದನ್ನೆಲ್ಲಾ ಮಾಡಿಯಾಯಿತು. ಎಲ್ಲಾ ರೀತಿಯ ಔಷಧ ಪಥ್ಯಗಳೂ ಆಯಿತು. ಅವರ ಎದೆನೋವು ಇನ್ನೂ ತಹಬಂದಿಗೆ ಬಂದಿಲ್ಲ. ನಾನು ಮಾಡುವಂತಹ ಪ್ರಯತ್ನಗಳು ಇನ್ಯಾವುದೂ ಇಲ್ಲ. ಅವರ ಎದೆನೋವು ವಾಸಿಯಾಗದಿರುವುದಕ್ಕೆ ಕಾರಣ ಮನೋವೇದನೆಯಿರಬಹುದೆಂಬ ಶಂಕೆಯುಂಟಾಗಿದೆ. ನೀವು ಅವರನ್ನು ಪರೀಕ್ಷಿಸಿ ಏನಾದರೂ ಮಾಡಲು ಸಾಧ್ಯವೇ, ನೋಡಿ."

ನಾನು ಪತ್ರವನ್ನೋದಿ ಫರ್ನಾಂಡೀಸ್‌ರವರ ಕಡೆ ತಿರುಗಿದೆ. ಅವರು ತಮಗೆ ಮಾನಸಿಕ ಕಾಯಿಲೆ ಇಲ್ಲವೆಂದೂ, ಬರೀ ಎದೆನೋವೇ ತಮಗಿರುವ ತೊಂದರೆಯೆಂದೂ ಹೇಳಿದರು. ನಾನೆಲ್ಲಿ ಅವರಿಗೆ ಹುಚ್ಚು ಎಂದು ಹೇಳುವೆನೋ

ಎಂಬ ಭಯ. (ಸಾಮಾನ್ಯವಾಗಿ ಮನೋರೋಗ ತಜ್ಞರ ಬಳಿ ಹೋದವರು ಹುಚ್ಚರಾಗಿರಬೇಕೆಂಬ ಭಾವನೆ. ಈ ಭಾವನೆಗೆ ಫರ್ನಾಂಡೀಸ್‌ರವರು ಹೊರತಾಗಿರಲಿಲ್ಲ!) ಮಾನಸಿಕ ತೊಂದರೆಯೆಂದಾಕ್ಷಣ ಹುಚ್ಚು ಎನ್ನುವುದು ತಪ್ಪು. ಮಾನಸಿಕ ತೊಂದರೆಗಳು ಬೇರೆ ಬೇರೆ ರೀತಿಯಲ್ಲಿಯೂ ಕಾಣಿಸಿಕೊಳ್ಳುತ್ತವೆ. ಇದನ್ನು ವಿವರಿಸಿದ ಮೇಲೆ ಫರ್ನಾಂಡೀಸ್‌ರವರಿಗೆ ಸ್ವಲ್ಪ ಸಮಾಧಾನವಾಯಿತು.

ತಮ್ಮ ಜೀವನಕ್ಕೆ ಸಂಬಂಧಿಸಿದ ಕೆಲವು ವಿವರಗಳನ್ನು ಅವರು ನನ್ನ ಮುಂದಿರಿಸಿದರು. ಅವರ ತೊಂದರೆ ಆರಂಭವಾಗಿದ್ದು ಎಂಟು ತಿಂಗಳ ಹಿಂದೆ ಗಂಡ ಹೆಂಡತಿಯರಲ್ಲಿ ಜಗಳ ಸರ್ವೇಸಾಮಾನ್ಯ. 'ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ' ಎಂಬ ನಾಣ್ಣುಡಿಯೇ ಇದೆ. ಆದರೆ ಫರ್ನಾಂಡೀಸ್ ಮತ್ತು ಅವರ ಪತ್ನಿಯ ಜಗಳ ಈ ರೀತಿಯದಾಗಿರಲಿಲ್ಲ. ಪರಿಸ್ಥಿತಿ ಪತ್ನಿ ವಿವಾಹವಿಚ್ಛೇದನ ಪಡೆಯುವಷ್ಟು ಮುಂದುವರಿಯಿತು. ಇದಲ್ಲದೆ ಹೋಗುವಾಗ ಅವರ ಪತ್ನಿ ಗಂಡನಿಗಿದ್ದ ಆಸ್ತಿಯನ್ನೆಲ್ಲ ದೋಚಿಕೊಂಡು ಹೋದರು. ಈ ಘಟನೆ ನಡೆದ ತಕ್ಷಣವೇ ಫರ್ನಾಂಡೀಸ್‌ರವರಿಗೆ ಹೃದಯಾಘಾತವಾಯಿತು. ಅವರನ್ನು ಹದಿನೈದು ದಿನಗಳ ಕಾಲ ನರ್ಸಿಂಗ್ ಹೋಮಿನಲ್ಲಿಟ್ಟು ಡಾ. ಬೆಂಜಮಿನ್‌ರವರಿಂದ ಚಿಕಿತ್ಸೆ ಕೊಡಿಸಲಾಯಿತು. ಇದಾದ ನಂತರ ಮನೆಯಲ್ಲೇ ಕಾಲ ಕಾಲಕ್ಕೆ ಚಿಕಿತ್ಸೆ ನಡೆಯಿತು. ಮೂರು ತಿಂಗಳಲ್ಲಿ ಅವರ ನೋವು ಸ್ವಲ್ಪ [illegible]. ವೈದ್ಯರ ಸಲಹೆಯ ಮೇರೆಗೆ ಕೆಲಸಕ್ಕೆ ಹಿಂದಿರುಗಿದರು. [illegible] ಕೆಲಸಕ್ಕೆ ಹೋಗುವುದೇ [illegible] ತ್ತು. [illegible] ಕೆಲಸಕ್ಕೆ [illegible] [illegible] ಬೇಕಾಗುತ್ತಿತ್ತು. ಐದು ತಿಂಗಳಲ್ಲಿ ಅವರಿಗೆ [illegible] ಸಾಧ್ಯವಾಗಿರಲಿಲ್ಲ. ಇಂತಹ ಸ್ಥಿತಿಯಲ್ಲಿ ನನ್ನ ಹತ್ತಿರ ಬಂದಿದ್ದರು.

ಫರ್ನಾಂಡೀಸ್‌ರವರು ನೋಡಲು ದೃಢಕಾಯದ ವ್ಯಕ್ತಿ [illegible]ದನ್ನೂ ಸೂಚಿಸುತ್ತಿತ್ತು. ಅವರ ಮುಖವನ್ನು ನೋಡಿದರೆ ಅವರ ಹೆಗಲ ಮೇಲೆ ಬೆಟ್ಟವನ್ನೇ ಹೊತ್ತಿರುವರೋ ಎಂಬಂತೆ ಕಾಣುತ್ತಿತ್ತು. ಆಗಿಂದಾಗ್ಗೆ ಕೈಗಳನ್ನು ಹಿಸುಕಿಕೊಳ್ಳುತ್ತಿದ್ದರು. ತಲೆ ತಗ್ಗಿಸಿ ನೆಲವನ್ನು ನೋಡುತ್ತಾ ಚಿಂತಾಮಗ್ನರಾಗಿ ಕುಳಿತುಬಿಡುತ್ತಿದ್ದರು. ಅವರ ಮನಸ್ಸು ಬೇರೆ ಯಾವುದೋ ಪ್ರಪಂಚದಲ್ಲಿರುವಂತೆ ಕಾಣುತ್ತಿತ್ತು. ನಾನು ಮಾತನಾಡಿಸದೇ ಹೋದಲ್ಲಿ ಮಾತುಗಳೂ ಇಲ್ಲದೆ ಚಿಂತಾಪರವಶರಾಗಿ ಕುಳಿತುಬಿಡುತ್ತಿದ್ದರು. ಅವರು ಮಾತನಾಡುವುದೇ ನಿಧಾನ; ಮಾತು ಕೇಳಿಸುವುದೇ ಕಷ್ಟವೆನ್ನುವಷ್ಟು ಮೆಲುಧ್ವನಿಯಲ್ಲಿ. ಪ್ರಪಂಚದಲ್ಲಿ ಅವರಿಗೆ ಯಾವುದರ ಬಗ್ಗೆಯೂ ಆಸಕ್ತಿಯಿರುವಂತೆ ತೋರಲಿಲ್ಲ. ಅವರ ಕೂದಲು ಕೆದರಿತ್ತು, ತಮ್ಮ ಉಡುಪಿನ ಬಗ್ಗೆ ಅವರು ಅಷ್ಟಾಗಿ ಗಮನ ಕೊಟ್ಟಂತಿರಲಿಲ್ಲ, ಕೆಲವು ಮಾನಸಿಕ ಪರೀಕ್ಷೆಗಳನ್ನೂ (Psychological tests) ಕೂಡ ನಡೆಸಲಾಯಿತು. ಅದರ ಪ್ರಕಾರ ಅವರಲ್ಲಿ ಸಾವು, ಕ್ರೋಧ, ದುಃಖ ಮತ್ತು ಜನರಲ್ಲಿ ಅಪನಂಬಿಕೆಯಿದೆಯೆಂದು ನನಗೆ ತಿಳಿಯಿತು.

ಇವೆಲ್ಲದರ ಆಧಾರದ ಮೇಲೆ ಫರ್ನಾಂಡೀಸ್‌ರವರನ್ನು ಮಾನಸಿಕ ಚಿಕಿತ್ಸೆಗಳಲ್ಲಿ ಒಂದಾದ ಸೈಕೋಥೆರಪಿ ಚಿಕಿತ್ಸೆಗೆ ಒಳಪಡಿಸಿದೆನು. ಈ ಚಿಕಿತ್ಸೆಯಲ್ಲಿ ಮಾತನಾಡುವುದೇ ಮುಖ್ಯ. ರೋಗಿಯು ಮನೋರೋಗ ತಜ್ಞರ ಬಳಿ ನಿಸ್ಸಂಕೋಚವಾಗಿ ಮನಸ್ಸಿಗೆ ಬಂದದ್ದನ್ನೆಲ್ಲ ಮುಚ್ಚುಮರೆಯಿಲ್ಲದೆ ಹೇಳಿಕೊಳ್ಳಬೇಕು. ನಮ್ಮಲ್ಲಿ ಹೊರ ಮನಸ್ಸು (ಪ್ರಜ್ಞೆ) ಮತ್ತು ಒಳ ಮನಸ್ಸು (ಅಪಪ್ರಜ್ಞೆ) ಗಳಿರುತ್ತವೆ. ನಮಗೆ ನಿಜವಾಗಿಯೂ ತಿಳಿದಿರುವುದು ನಮ್ಮ ಹೊರಮನಸ್ಸು ಮಾತ್ರ. ಒಳ ಮನಸ್ಸನ್ನು ಅಂತರಾತ್ಮ ಮತ್ತು ಅಂತರಂಗ ಎಂದು ಕರೆಯುವುದುಂಟು. ಒಳ ಮನಸ್ಸಿಗೂ ಹೊರ ಮನಸ್ಸಿಗೂ ತಿಕ್ಕಾಟವಾಗುವುದು ಸಾಮಾನ್ಯ. ಈ ರೀತಿಯಾದಾಗ ಮನಸ್ಸಿನಲ್ಲಿ ಆಂದೋಲನವುಂಟಾಗುತ್ತದೆ. ಈ ತಿಕ್ಕಾಟ ಅತಿಯಾದರೆ ಇವರಿಂದ ವ್ಯಥೆ, ಕೊರಗು,

ಭಿನ್ನತೆ ಉಂಟಾಗಿ ಮನೋವ್ಯಾಧಿಗೆಡೆಯಾಗುತ್ತದೆ. ನಾವೆಲ್ಲರೂ ಈ ಎರಡು ಮನಸ್ಸುಗಳ ತಿಕ್ಕಾಟಕ್ಕೆ ಆಗಿಂದಾಗ್ಗೆ ಗುರಿಯಾಗುತ್ತೇವೆ. ನಾವೆಲ್ಲರೂ ಹಲವು ಬಾರಿ ಏನೋ ಒಂದು ಕೆಲಸ ಮಾಡಿ ನಂತರ ಅದರ ಬಗ್ಗೆ ಬೇಸರಪಡುವುದುಂಟು. ನಮ್ಮ ಅಂತರಾತ್ಮಕ್ಕೆ ಒಪ್ಪದಿದ್ದ ಕೆಲಸವನ್ನು ನಾವೇ ಹೇಗೆ ಮಾಡಿದೆವೆಂಬುದರ ಬಗ್ಗೆ ಆಶ್ಚರ್ಯಪಡುವುದೂ ಉಂಟು. ಇದರ ಹಿಂದೆ ನಮ್ಮ ಅರಿವಿಲ್ಲದ, ಹತೋಟಿಯಲ್ಲಿಲ್ಲದ ಮತ್ತು ನಮ್ಮಲ್ಲಿಯೇ ಅಡಗಿದ ಯಾವುದೋ ಶಕ್ತಿಯಿದೆಯೆನ್ನುವುದೂ ಉಂಟು. ಈ ಶಕ್ತಿ ಬೇರೆ ಯಾವುದೂ ಅಲ್ಲ, ನಮ್ಮ ಒಳ ಮನಸ್ಸು. ಮಾನಸಿಕ ಪರೀಕ್ಷೆಯಲ್ಲಿ ಮುಚ್ಚುಮರೆಯಿಲ್ಲದೇ ಮಾತನಾಡಿದಾಗ ಮನೋರೋಗತಜ್ಞರ ಸಹಾಯದಿಂದ ತಮ್ಮ ಒಳ ಮನಸ್ಸನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ, ಇದರಿಂದ ಮನಸ್ಸಿನ ಆಂದೋಲನ ಕಡಿಮೆಯಾಗಿ ಮನಸ್ಸಿನಲ್ಲಿ ಉಲ್ಲಾಸ ಮೂಡುವುದು. ಆಗ ನಮ್ಮ ಚೇತಚ್ಛಕ್ತಿಯು (Psychic energy) ಕೇವಲ ಆಂದೋಲನದಲ್ಲೇ ವ್ಯರ್ಥವಾಗದೇ ರಚನಾತ್ಮಕ ಕ್ರಿಯೆಗಳಿಗೆ ಸಹಾಯವಾಗುವುದು.

ಫರ್ನಾಂಡೀಸ್‌ರವರು ವಾರಕ್ಕೊಂದು ಬಾರಿ ನನ್ನ ಬಳಿ ಚಿಕಿತ್ಸೆಗೆ ಬರಲಾರಂಭಿಸಿದರು. ಪ್ರತಿ ಸಾರಿಯೂ ೪೫ ನಿಮಿಷಗಳ ಭೇಟಿ. ಮೊದಲಿನ ನಾಲ್ಕು ಭೇಟಿಗಳಲ್ಲಿ ಫರ್ನಾಂಡೀಸ್‌ರವರು ಪದೆ ಪದೆ ಹೆಂಡತಿ ಮತ್ತು ಸಂಸಾರದ ವಿಷಯಗಳ ಬಗ್ಗೆ ದುಃಖವನ್ನು ತೋಡಿಕೊಂಡರು.

ಅವರ ವಯಸ್ಸು ಸುಮಾರು ೪೫. ಅವರು ಬೆಳೆದುಬಂದಿದ್ದು ಒಂದು ಸಣ್ಣ ಹಳ್ಳಿಯಲ್ಲಿ. ಹೈಸ್ಕೂಲು ಮುಗಿಸುವ ವೇಳೆಗೆ ತಂದೆ-ತಾಯಿಗಳಿಬ್ಬರೂ ದೈವಾಧೀನರಾದರು. ತಂದೆ-ತಾಯಿಗಳಿಗೆ ಒಬ್ಬನೇ ಮಗನಾಗಿದ್ದ ಫರ್ನಾಂಡೀಸ್‌ರವರಿಗೆ ಕೆಲಸಕ್ಕೆ ಸೇರಿ ತಮ್ಮ ಕಾಲ ಮೇಲೆ ತಾವು ನಿಂತುಕೊಳ್ಳಬೇಕಾಯಿತು. ಕೆಲವು ಸಾರಿ ತಮಗೆ ಸಹೋದರ-ಸಹೋದರಿಯರು ಇದ್ದಿದ್ದರೆ ಚೆನ್ನಾಗಿರುತ್ತಿತ್ತು ಎಂದುಕೊಳ್ಳುತ್ತಿದ್ದರು. ಅವರ ಮದುವೆಯಾಗಿ ಸುಮಾರು ೨೫ ವರ್ಷಗಳಾಗಿದ್ದವು. ಮದುವೆಯಾದ ಎರಡು ವರ್ಷಗಳಿಗೆ ಒಬ್ಬ ಮಗ ಹುಟ್ಟಿದ, ನಂತರ ಅವರಿಗೆ ಮಕ್ಕಳಾಗಿರಲಿಲ್ಲ. ಕಾರಖಾನೆಯಲ್ಲಿ ಇವರನ್ನು ಕಂಡರೆ ಎಲ್ಲರಿಗೂ ಗೌರವ, ಒಳ್ಳೆಯ ಕೆಲಸಗಾರನೆಂದು ಹೆಸರು ಗಳಿಸಿದ್ದರು. ಅವರಿಗೆ ಅಚ್ಚುಮೆಚ್ಚಿನ ಸ್ನೇಹಿತರಾರೂ ಇರಲಿಲ್ಲ. ಅವರ ಸರ್ವಸ್ವವೂ ಹೆಂಡತಿ ಮತ್ತು ಮಗ. ಅವರ ಸುಖಕ್ಕೋಸ್ಕರ ಅವಕಾಶ ಸಿಕ್ಕಿದಾಗಲೆಲ್ಲಾ ಓವರ್‌ಟೈಂ ಕೆಲಸ ಮಾಡಿ ಹೆಚ್ಚಿಗೆ ಹಣ ಗಳಿಸುತ್ತಿದ್ದರು. ತಮ್ಮ ಸುಖಕ್ಕಿಂತ ಪತ್ನಿ ಮತ್ತು ಪುತ್ರರ ಸುಖವೇ ಹೆಚ್ಚು ಎಂದು ತಿಳಿದುಕೊಂಡು ಜೀವಿಸುತ್ತಿದ್ದ ಸಮಯದಲ್ಲಿ ಅವರ ಸಂತೋಷಕ್ಕೆ ಸಿಡಿಲು ಬಡಿಯಿತು. ಮದುವೆಯಾದ ಎಂಟು ವರ್ಷಕ್ಕೆ ಅವರ ಪತ್ನಿಯು ಮೊದಲ ಬಾರಿ ವಿವಾಹ ವಿಚ್ಛೇದನ ಪಡೆದು ಬೇರೆಯವನ ಜತೆ ಜತೆ-ಓಡಿಹೋದರು. ಇಷ್ಟಲ್ಲದೇ ಅವರು ಕಷ್ಟಪಟ್ಟು ಸಂಪಾದಿಸಿದ ಆಸ್ತಿಯನ್ನು ದೋಚಿಕೊಂಡು ಹೋದರು. ಆಗ ಫರ್ನಾಂಡೀಸ್‌ರವರಿಗಾದ ಮನೋವೇದನೆ ಹೇಳಲಸಾಧ್ಯ. ಹೀಗೆ ನಾಲ್ಕು ವರ್ಷಗಳು ಕಳೆದವು. ತಮ್ಮ ಪತ್ನಿಯನ್ನು ಭೇಟಿ ಮಾಡಿ, ಕಾಡಿ, ಬೇಡಿ ಇನ್ನೂ ಹೆಚ್ಚಿನ ಸುಖವನ್ನು ಕೊಡುತ್ತೇನೆಂದು ಭರವಸೆ ನೀಡಿ ಅವರನ್ನೇ ಮರು ಮದುವೆಯಾದರು. ಅದೇ ಪತ್ನಿ ಎಂಟು ತಿಂಗಳ ಹಿಂದೆ ಪುನಃ ವಿವಾಹವಿಚ್ಛೇದನ ಪಡೆದರು. ಇದಲ್ಲದೆ ಇರುವ ಒಬ್ಬನೇ ಮಗ ಜೂಜು, ಕುಡಿತ ಮತ್ತು ಮಾದಕ ಪದಾರ್ಥಗಳ ಸೇವನೆಗೆ ಒಳಗಾಗಿಬಿಟ್ಟಿದ್ದನು. ಅವನು ತಂದೆಯಿಂದ ವ್ಯಾಪಾರ ಮಾಡುವೆನೆಂದು ಹಣ ಪಡೆಯುವುದು, ಅದನ್ನು ಜೂಜಿನಲ್ಲಿ, ಕುಡಿತದಲ್ಲಿ ಕಳೆಯುವುದು, ಮತ್ತೆ ಹಣಕ್ಕೋಸ್ಕರ ಬರುವುದು ಸಾಮಾನ್ಯವಾಗಿಹೋಯಿತು. ಅಕಸ್ಮಾತ್ ಹಣವಿಲ್ಲದಿದ್ದರೆ ರೇಗಿಸಿದ ಬೈಗುಳನ್ನು ಕೇಳಬೇಕಾಗುವ ಸಂದರ್ಭಗಳೂ ಇಲ್ಲದಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಾದ ವಿವಾಹ ವಿಚ್ಛೇದನೆಯಿಂದ ಫರ್ನಾಂಡೀಸ್‌ರವರಿಗೆ ಹೃದಯಾಘಾತವಾಯಿತು.

ಇದಾದ ನಂತರ ಐದನೆಯ ಭೇಟಿಯಲ್ಲಿ ಇವರ

ಬಗ್ಗೆ ಮಾತನಾಡುತ್ತಾ ಇದ್ದಾಗ ಫರ್ನಾಂಡೀಸ್‌ರವರಿಗೆ ದುಃಖವನ್ನು ತಡೆಯಲಾಗಲಿಲ್ಲ. ಆ ದಿನ ಅವರ ಅಳುವಿಗೆ ಕೊನೆಯಿರುವಂತೆಯೇ ಕಾಣಲಿಲ್ಲ. ಬಹಳ ಹೊತ್ತು ಅತ್ತ ನಂತರ ಅವರಿಗೆ ಸ್ವಲ್ಪ ಸಮಾಧಾನವಾಯಿತು. ಆಗ "ನನಗೆ ಜೀವನದಲ್ಲಿ ಇನ್ನೇನೂ ಉಳಿದಿಲ್ಲ. ನಾನು ಯಾರಿಗೋಸ್ಕರ ಇಷ್ಟೆಲ್ಲಾ ಕಷ್ಟಪಡುತ್ತಿದ್ದೆನೋ ಅವರೇ ನನ್ನ ಭಾಗಕ್ಕೆ ಇಲ್ಲವಾದ ಮೇಲೆ ನಾನು ಬದುಕಿದ್ದು ಏನು ಪ್ರಯೋಜನ?" ಎಂದು ಪೇಚಾಡಿದರು. ಈ ಭಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಫರ್ನಾಂಡೀಸ್‌ರವರು ತಮಗೆ ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಬೇಸರವಾಗಿದೆಯೆಂದೂ ಮತ್ತು ಆ ರೀತಿ ಮಾಡುವುದು ಮಹಾ ಪಾಪವೆಂದು ಹಿಂದೇಟು ಹಾಕಿದುದಾಗಿಯೂ ಒಪ್ಪಿಕೊಂಡರು. ಈ ರೀತಿಯ ಆಂದೋಲನಕ್ಕೂ (ಒಂದು ಕಡೆ ಜೀವನದಲ್ಲಿ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದೂ, ಮತ್ತೊಂದು ಕಡೆ ಅದು ಮಹಾ ಪಾಪವಾದುದರಿಂದ ಆತ್ಮಹತ್ಯೆ ಮಾಡಿಕೊಳ್ಳಕೂಡದೆಂದೂ) ಅವರ ಎದೆ ನೋವು ವಾಸಿಯಾಗದೇ ಇರುವುದಕ್ಕೂ ಸಂಬಂಧವಿರಬಹುದೆಂಬ ತರ್ಕವನ್ನು ಅವರ ಮುಂದಿಟ್ಟೆ. ಆಗ ಫರ್ನಾಂಡೀಸ್‌ರವರು, "ಅದು ಹೇಗೆ ಸಾಧ್ಯ? ಮನಸ್ಸೇ ಬೇರೆ, ಶರೀರವೇ ಬೇರೆ," ಎಂದು ವಾದಿಸಿದರು.

ಅವರು ಆ ರೀತಿ ಹೇಳಿದರೂ ಮುಂದಿನ ಎರಡು ಭೇಟಿಗಳಲ್ಲಿ ತಮಗೆ ಎದೆ ನೋವು ಕಡಿಮೆಯಾಗಿರುವುದೆಂದೂ, ಎಂಟು ತಿಂಗಳಲ್ಲಿ ತಮಗೆ ಮೊದಲ ಬಾರಿ ಇಷ್ಟರ ಮಟ್ಟಿಗೆ ಪರಿಹಾರ ದೊರಕಿದೆಯೆಂದೂ ತಿಳಿಸಿದರು. ಇನ್ನೂ ಒಂದೆರಡು ವಾರಗಳು ಕಳೆದವು. ಅವರ ಎದೆ ನೋವು ಕ್ರಮೇಣ ಕಡಿಮೆಯಾಗುತ್ತಲೇ ಬಂದಿತು. ಇದರಿಂದ ಅವರಲ್ಲೇ ಮನಸ್ಸಿಗೂ ದೇಹಕ್ಕೂ ಸಂಬಂಧವಿದೆಯೆಂಬ ಕಲ್ಪನೆ ಮೂಡಲಾರಂಭಿಸಿತು. ಈ ಎರಡು ಭೇಟಿಗಳಲ್ಲಿ ನನ್ನ ಅಭಿಪ್ರಾಯವನ್ನು ಮುಂದಿಟ್ಟೆ. ಅವರ ಪ್ರಕಾರ ಫರ್ನಾಂಡೀಸ್‌ರವರಿಗೆ ಆತ್ಮಹತ್ಯೆಯ ಬಗ್ಗೆ ಮನಸ್ಸಿನಲ್ಲಿ ಆಂದೋಲನವಿದೆಯೆಂದೂ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಿರುವ ಅವರ ಒಳ ಮನಸ್ಸು ಹೊರಗಿನ ಮನಸ್ಸಿಗೆ ಅರಿವಿಲ್ಲದಂತೆಯೇ ತನ್ನದೇ ಆದ ರೀತಿಯಲ್ಲಿ ಅವರನ್ನು ಆತ್ಮಹತ್ಯೆಗೆ ಗುರಿಪಡಿಸಲು ಯತ್ನಿಸುತ್ತಿದೆಯೆಂದೂ ಸೂಚಿಸಿದೆ. ಆ ಕಾರಣದಿಂದಲೇ ಅವರ ಹೃದಯರೋಗವು ವಾಸಿಯಾಗದಿರುವುದೆಂದೂ ತಿಳಿಸಿದೆ. ಆಗ ಫರ್ನಾಂಡೀಸ್‌ರವರು ತಮ್ಮ ಹೃದಯರೋಗ ವಾಸಿಯಾಗದೇ ಇದ್ದು, ಅದರಿಂದ ತಾವು ಸಾಯಬಹುದೆಂಬ ಆಲೋಚನೆಗಳು ತಮಗೆ ಹಲವಾರು ಬಾರಿ ಬಂದಿತ್ತೆಂದೂ ಹೇಳಿದರು. ಅವರಿಗೆ ಜೀವನದಲ್ಲಿ ಇದ್ದುದೇ ಇಬ್ಬರು ಆತ್ಮೀಯರು. ಅವರೂ ಕೈ ಬಿಟ್ಟ ಮೇಲೆ ಅವರಿಗೆ ಜನರಲ್ಲಿ ನಂಬಿಕೆಯೇ ಹೊರಟು ಹೋಯಿತು, ಕೆಲವು ಸಾರಿ ಬಹಳ ಬೇಸರವಾಗಿ ಪತ್ನಿಯನ್ನು ಕೊಲ್ಲಬೇಕೆನ್ನುವಷ್ಟು ಕೋಪ ಬರುವುದೆಂದೂ ವ್ಯಕ್ತಪಡಿಸಿದರು. ಯಾರಿಗೂ ಯಾವ ಕಾರಣಕ್ಕೂ ನೋವನ್ನುಂಟುಮಾಡಕೂಡದು ಎಂದು ನಂಬಿದ ಫರ್ನಾಂಡೀಸ್‌ರವರಿಗೆ ಈ ರೀತಿಯ ಯೋಜನೆಗಳಿಂದ ಬಹಳ ಬೇಸರವಾಗುತ್ತಿತ್ತು. ಇನ್ನೊಬ್ಬರನ್ನು ಕೊಲ್ಲಬೇಕೆನ್ನುವಷ್ಟು ಕೋಪವಿರುವವರು ಆ ಕೋಪವನ್ನು ತಮ್ಮ ಮೇಲೆಯೇ ತಿರುಗಿಸಿಕೊಂಡು ಆತ್ಮಹತ್ಯೆಯನ್ನು ಕೂಡ ಮಾಡಿಕೊಳ್ಳುತ್ತಾರೆ ಎನ್ನುವುದಕ್ಕೆ ಮನಶ್ಶಾಸ್ತ್ರದಲ್ಲಿ ಸಾಕಷ್ಟು ಆಧಾರವಿದೆಯೆಂದು ತಿಳಿಸಲಾಯಿತು. ಆತ್ಮಹತ್ಯೆ ಮಾಡಿಕೊಳ್ಳಬೇಕೆನ್ನುವಷ್ಟು ಬೇಸರವಾಗಿರುವವರು ಹೃದಯರೋಗದಂತಹ ಗುರುತರವಾದ ಕಾಯಿಲೆಗಳನ್ನು ತಮಗೇ ಅರಿವಿಲ್ಲದೆ ಆಯ್ಕೆ ಮಾಡಿಕೊಳ್ಳುವುದು ಸಾಮಾನ್ಯ. ಅವರು ಆಯ್ಕೆ ಮಾಡುವ ಕಾಯಿಲೆಗಳು ಸಾವನ್ನುಂಟು ಮಾಡುವಂತಹವಾಗಿರಬೇಕಲ್ಲವೇ? ಹೃದಯಾಘಾತವೆಂದರೆ ಬಹು ದೊಡ್ಡ ರೋಗ, ಅದರಿಂದ ಸಾವುಂಟಾಗಬಹುದೆಂಬುದು ಸಾಮಾನ್ಯವಾಗಿ ಜನರಲ್ಲಿ ನಂಬಿಕೆ.

ಇದೆಲ್ಲವನ್ನು ಗಂಭೀರವಾಗಿ ಕೇಳುತ್ತಿದ್ದ ಫರ್ನಾಂಡೀಸ್‌ರವರು ಒಂದು ದೊಡ್ಡ ನಿಟ್ಟುಸಿರು ಬಿಟ್ಟರು. ಇದಾದ ನಂತರ ಕೆಲವು ವಾರಗಳ

ವರೆಗೆ ಸೈಕೋಥೆರಪಿ ಮುಂದುವರಿಯಿತು. ಈ ವೇಳೆಯಲ್ಲಿ ಅವರ ಎದೆನೋವು ಪೂರ್ತಿ ಹತೋಟಿಗೆ ಬಂದಿತು. ಅವರ ಏಕಾಗ್ರತೆ ಮೇಲಾಯಿತು. ಹಗಲುಗನಸುಗಳು ಮಾಯ-ವಾದವು. ಇದರ ನಂತರ ಫರ್ನಾಂಡೀಸ್‌ರವ-ರನ್ನು ನೋಡುವ ಅವಶ್ಯಕತೆ ಕಾಣದ್ದರಿಂದ ಅವರಿಗೆ ಅದೇ ರೀತಿ ಹೇಳಿ ಕಳುಹಿಸಿಕೊಟ್ಟೆ.

ಸುಮಾರು ಆರು ತಿಂಗಳು ಕಳೆದಿರಬಹುದು. ಒಂದು ದಿನ ಆಗ ತಾನೇ ಅಂಚೆಯಲ್ಲಿ ಬಂದ ಮನಃಶಾಸ್ತ್ರದ ಸಂಚಿಕೆಯೊಂದನ್ನು ಓದುವುದರಲ್ಲಿ ಮಗ್ನನಾಗಿದ್ದಾಗ, "ನಮಸ್ಕಾರ ಡಾಕ್ಟರ್," ಎನ್ನುವ ಧ್ವನಿ ಕೇಳಿ ತಲೆಯೆತ್ತಿ ನೋಡಿದೆ. ಬಂದಿದ್ದವರು ಫರ್ನಾಂಡೀಸ್ ಎಂದು ನಂಬಲು ಕೆಲವು ಕ್ಷಣಗಳೇ ಬೇಕಾಯಿತು. ಗುರುತು ಹಿಡಿಯಲು ಕಷ್ಟವೆನ್ನುವಷ್ಟರ ಮಟ್ಟಿಗೆ ಅವರ ಮುಖದಲ್ಲಿ ಬದಲಾವಣೆ ಆಗಿತ್ತು. ಹಿಂದಿನ ವ್ಯಾಕುಲತೆಯಿಂದ ಕಳೆ-ಗುಂದಿದ್ದ ಮುಖಕ್ಕೂ ಈಗಿನ ಉಲ್ಲಾಸದಿಂದ ಕೂಡಿದ್ದ ಮುಖಕ್ಕೂ ಆಶ್ಚರ್ಯವೆನಿಸುವಷ್ಟು ವ್ಯತ್ಯಾಸವಿತ್ತು. ಆರು ತಿಂಗಳಲ್ಲಿ ಅವರಿಗೆ ಎದೆ ನೋವು ಮರುಕಳಿಸಿಲ್ಲವೆಂದೂ, ಏನೂ ತೊಂದರೆಗಳಿಲ್ಲದೆ ಅವರ ಕಾರ್ಖಾನೆಯ ಕೆಲಸಗಳನ್ನು ನಿಭಾಯಿಸುತ್ತಿರುವುದಾಗಿಯೂ ಹೇಳಿ ನನಗೆ ಕೃತಜ್ಞತೆಗಳನ್ನರ್ಪಿಸಿದರು. ಅವರಿಗೆ 'ಗುಡ್ ಬೈ' ಹೇಳಿ ಕಳುಹಿಸಿಕೊಟ್ಟೆ. ಆ ದಿನ-ವೆಲ್ಲಾ ನನ್ನ ಮನಸ್ಸಿಗೆ ಒಂದು ರೀತಿಯ ನೆಮ್ಮದಿ ಮತ್ತು ಉಲ್ಲಾಸ.

ಪರಿಶೀಲನೆ

ಲಾಟರಿಯಲ್ಲಿ ಒಂದು ಲಕ್ಷ ರೂಪಾಯಿಯ ಬಹುಮಾನ ಬಂದಿರುವುದೆಂದು ತಿಳಿದ ತಕ್ಷಣ ಮನುಷ್ಯನಿಗೆ ಹೃದಯಾಘಾತವಾಗಿ ಮರಣ ಸಂಭವಿಸಿರುವ ಘಟನೆ ಎಲ್ಲಿಯೋ ಓದಿ ಅಥವಾ ಕೇಳಿದಾಗ ಆಶ್ಚರ್ಯವಾಗಬಹುದು, ಇದರಲ್ಲಿ ಅತಿಶಯವೇನಿಲ್ಲ. ಮನಸ್ಸಿಗೆ ಆಕಸ್ಮಿಕವಾಗಿ ಆಗುವ ವಿಪರೀತ ಉಲ್ಲಾಸ, ದುಃಖ ಅಥವಾ ಉದ್ವೇಗದಿಂದ ಹೃದಯಾಘಾತವಾಗುವುದು ಸ್ವಾಭಾವಿಕ. ನಮ್ಮ ಮನಸ್ಸು ಸ್ವಾಯತ್ತ ನರ ಜಾಲಸಂಸ್ಥೆಯ ಮೂಲಕ ಶರೀರದ ಅನೇಕ ಭಾಗಗಳ ಮೇಲೆ ತನ್ನ ಪ್ರಭಾವ ಬೀರುತ್ತದೆ. ಹೃದಯಾಘಾತಕ್ಕೆ ಮುಖ್ಯ ಕಾರಣ ರಕ್ತದ ಕೊಲೆಸ್ಟರಾಲ್ ಎಂಬುದು ಮೊದಲಿಂದಲೂ ತಿಳಿದ ವಿಷಯ. ಇತ್ತೀಚಿನ ಸಂಶೋಧನೆಗಳನ್ನು ಪರಿ-ಶೀಲಿಸಿದರೆ ಕೆಲವು ಕುತೂಹಲಕಾರಿಯಾದ ಅಂಶ-ಗಳು ತಿಳಿದುಬರುತ್ತವೆ. ರಕ್ತದ ಕೊಲೆಸ್ಟರಾಲ್ ನಮ್ಮ ಭಾವೋದ್ವೇಗಗಳು ಹೆಚ್ಚಿದಾಗ ಹೆಚ್ಚು-ತ್ತದೆ. ಮತ್ತು ಭಾವೋದ್ವೇಗಗಳು ಕಡಿಮೆ-ಯಾದಾಗ ಕುಗ್ಗುತ್ತದೆ ಎಂದು ಖಚಿತವಾಗಿ ತಿಳಿದುಬಂದಿದೆ. ಡ್ರೈಫಸ್ ಮತ್ತು ಜಾಕೇಸ್ ರವರು ನಡೆಸಿದ ಸಂಶೋಧನೆಯ ಪ್ರಕಾರ ವೈದ್ಯಕೀಯ ವಿದ್ಯಾರ್ಥಿಗಳಲ್ಲಿ ರಕ್ತದ ಕೊಲೆಸ್ಟ-ರಾಲ್ ಪರೀಕ್ಷೆಯ ಸಮಯದಲ್ಲಿ ಉಳಿದ ಸಮಯಕ್ಕಿಂತ ಹೆಚ್ಚಿರುತ್ತದೆಯೆಂದು ತಿಳಿದು ಬಂದಿದೆ.

ಡೌನ್ ಸ್ಟೇಟ್ ಮೆಡಿಕಲ್ ಸೆಂಟರ್ ನಡೆಸಿದ ಸಂಶೋಧನೆ ಹೃದಯಾಘಾತಗಳ ಬಗ್ಗೆ ಇನ್ನಷ್ಟು ಬೆಳಕನ್ನು ಚೆಲ್ಲಿದೆ. ಕೆಲವರಿಗೆ ಸುಮ್ಮನೆ ಕುಳಿತುಕೊಳ್ಳಲಾಗುವುದಿಲ್ಲ. ಯಾವಾ-ಗಲೂ ಏನಾದರೂ ಮಾಡುತ್ತಿರಬೇಕು. ಅಂತಹವರು ತಮ್ಮ ಕೆಲಸದಲ್ಲಿ ವಿಪರೀತವಾಗಿ ಮಗ್ನರಾಗಿರುತ್ತಾರೆ. ಇವರು ಮಹತ್ವಾಕಾಂಕ್ಷೆ-ಯುಳ್ಳವರು. ಜೀವನದಲ್ಲಿ ಯಾವಾಗಲೂ ಮುಂದುವರೆಯುತ್ತಲೇ ಇರಬೇಕೆಂಬ ಅಭಿ-ಪ್ರಾಯವುಳ್ಳವರು. ಇವರಿಗೆ ವೇಳೆ ಎನ್ನುವುದು ಅತಿ ಮುಖ್ಯ. ಕಾಲವ್ಯಯ ಮಾಡಕೂಡದು ಎಂಬ ಅಭಿಪ್ರಾಯವುಳ್ಳವರು. ಇಂತಹವರಲ್ಲಿ ಹೃದಯಾಘಾತ ಹೆಚ್ಚು ಎಂದು ತಿಳಿದುಬಂದಿದೆ. ಇಂತಹವರಿಗೆ ಸ್ವಲ್ಪ ಹೆಚ್ಚು ಕಡಿಮೆಯಾದರೂ ಆಶಾಭಂಗ ಮತ್ತು ಕೊರಗು ಸಂಭವಿಸುವುದು ಮತ್ತು ಈ ಮಾನಸಿಕ ಒತ್ತಡದಿಂದ ರಕ್ತದ ಕೊಲೆಸ್ಟರಾಲ್ ಹೆಚ್ಚಿ ಹೃದಯಾಘಾತ ಸಂಭವಿಸ ಬಹುದು.

ಮನಸ್ಸು ಮತ್ತು ಶರೀರ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಮನೋವೇದನೆಯಿಂದ ಶಾರೀರಿಕ ಕಾಯಿಲೆಗಳು ಉಂಟಾಗಬಹುದು ಮತ್ತು ಕೆಲವು ಶಾರೀರಿಕ ರೋಗಗಳು ವಾಸಿ-

ವಾಗಲು ಅಡಚಣೆಯುಂಟಾಗಬಹುದು. ಇದೇ ರೀತಿ ಶಾರೀರಕ ರೋಗಗಳಿಂದ ಮನೋವೇದನೆಗಳು ಉಂಟಾಗಬಹುದು ಎಂದು ಕೂಡ ತಿಳಿದು ಬಂದಿದೆ.

ಡಾ. ಹಾರ್‌ಗ್ರೋವ್ ಎನ್ನುವವರು ಅಮೇರಿಕದ ಒರ್ವ ವೈದ್ಯ ಹಾಗೂ ಸಂಶೋಧಕ. ಅವರಿಗೆ ಒಬ್ಬ ಸಾಮಾನ್ಯ ವೈದ್ಯನ ಬಳಿ ಬರುವ ರೋಗಿಗಳ ಪೈಕಿ ಎಷ್ಟು ಜನರಿಗೆ ಈ ಮನೋವೇದನೆಗಳಿಂದ ರೋಗ ಉಂಟಾಗಿರಬಹುದು ಎಂದು ಕುತೂಹಲವಾಗಿ ಒಂದು ಜನರಲ್ ಆಸ್ಪತ್ರೆಗೆ ಬಂದು ಎಲ್ಲಾ ಹೊರ ರೋಗಿಗಳನ್ನು ಪರೀಕ್ಷೆಗೆ ಒಳಪಡಿಸಿದರು. ಇದರ ಫಲಿತಾಂಶದ ಪ್ರಕಾರ ಶೇಕಡಾ ಐವತ್ತಕ್ಕೂ ಹೆಚ್ಚಿನ ಜನರಲ್ಲಿ ಅವರ ಶಾರೀರಿಕ ಬೇನೆಗಳಿಗೆ ಮಾನಸಿಕ ವೇದನೆಗಳೇ ಕಾರಣ ಎಂದು ತಿಳಿದುಬಂದಿತು. ನಮಗೆ ಶಾರೀರಕ ಬೇನೆ ಆದಾಗ ವೈದ್ಯರ ಬಳಿ ಹೋಗುವುದು ಸಾಮಾನ್ಯ. ಆಗ ನಾವು ಶಾರೀರಿಕ ದೃಷ್ಟಿಯಿಂದ ನೋಡುತ್ತೇವೆಯೇ ಹೊರತು ಮಾನಸಿಕ ದೃಷ್ಟಿಯಿಂದ ನೋಡುವುದಿಲ್ಲ, ಅದೇ ರೋಗಿ ಮತ್ತೆ ಅದೇ ಬೇನೆಯಿಂದಲೋ ಅಥವಾ ಬೇರೆ ಯಾವುದೋ ಶಾರೀರಿಕ ಬೇನೆಯಿಂದಲೋ ಮತ್ತೆ ವೈದ್ಯರಲ್ಲಿಗೆ ಬರುವುದುಂಟು. ಏನೇನು ಮಾಡಿದರೂ ರೋಗವು ಗುಣವಾಗುವುದಿಲ್ಲ, ವೈದ್ಯರ ಪರೀಕ್ಷೆ ಮತ್ತು ಪ್ರಾಯೋಗಿಕ ಶಾಲೆಗಳಲ್ಲಿ ನಡೆಸಿದ ಪರೀಕ್ಷೆಗಳಲ್ಲಿ ಯಾವ ರೀತಿಯಾದ ಶಾರೀರಿಕ ರೋಗಗಳಿಲ್ಲವೆಂದು ತಿಳಿದುಬರುತ್ತದೆ. ರೋಗಿಯು ವೈದ್ಯರಲ್ಲಿ ಬೇಸತ್ತು ಮತ್ತೊಬ್ಬ ವೈದ್ಯರಲ್ಲಿಗೆ ಹೋಗುವುದು ಇಂತಹ ಸಮಯದಲ್ಲಿ ಸಾಮಾನ್ಯ. ಹೀಗೆಯೇ ಹಲವಾರು ವೈದ್ಯರ ಬಳಿ ಹೋದರೂ ಕೂಡ ತಮ್ಮ ತೊಂದರೆಗೆ ಪರಿಹಾರ ದೊರಕುವುದಿಲ್ಲ. ಇಂತಹ ಸಮಯದಲ್ಲಿ ಮನೋರೋಗತಜ್ಞರಿಂದ ರೋಗಿಗೆ ಸಹಾಯವಾಗಬಹುದು. ಶಾರೀರಿಕ ಕಾಯಿಲೆ ಇದೆ ಎಂದು ಖಚಿತವಾಗಿ ತಿಳಿದು, ಸರಿಯಾದ ಚಿಕಿತ್ಸೆ ತೆಗೆದುಕೊಂಡ ನಂತರವೂ ರೋಗಿಗೆ ಗುಣ ಕಂಡುಬರದಿದ್ದಲ್ಲಿ ಮನೋರೋಗತಜ್ಞರನ್ನು ನೋಡುವುದರಿಂದ ಸಹಾಯವಾಗಬಹುದು. ✿



"ಡಾಕ್ಟರರೇ, ನನ್ನ ಮಗನಿಗೆ ವಿಷಮಜ್ವರವಾಗಿದೆ."

"ಹೌದು ನನಗೆ ಗೊತ್ತಿದೆ."

"ಆದರೆ ವಿಷಮ ಜ್ವರ ನೈಸರ್ಗಿಕ ರೋಗವಲ್ಲವೆ.?"

"ಹೌದು ಯಾಕೆ?"

"ನನ್ನ ಮಗ ನಮ್ಮ ಮನೆಯ ಕೆಲಸದಾಕೆಯನ್ನು ಚುಂಬಿಸಿದ್ದಾನೆ."

"ಹುಡುಗನಿಗೇನು ತಿಳಿಯುತ್ತದೆ ಬಿಡಿ. ಕೆಲಸದಾಕೆಗೆ ವಿಷಮಜ್ವರ ಪ್ರತಿಬಂಧಕ ಮದ್ದು ಚುಚ್ಚಿದರಾಯಿತು."

"ಆದರೆ, ನಿಜ ಹೇಳಬೇಕೆಂದರೆ ನಾನು ಕೆಲಸದಾಕೆಯನ್ನು ಚುಂಬಿಸಿದ್ದೇನೆ."

"ಬಹಾದ್ದೂರರಪ್ಪಾ ನೀವು! ಇರಲಿ. ನಿಮಗೂ ಒಂದು ಇಂಜಕ್ಷನ್ ಕೊಡೋಣ."

"ಆದರೆ ಡಾಕ್ಟರರೇ, ನಾನು ನನ್ನ ಹೆಂಡತಿಯನ್ನೂ ಚುಂಬಿಸಿದ್ದೇನೆ."

"ಹೌದೇ ಒಳ್ಳೆ ಪೀಕಲಾಟಕ್ಕೆ ಬಂತು ನೋಡಿ. ಇನ್ನು ನಾನು ಕೂಡ ಒಂದು ಇಂಜಕ್ಷನ್ ಮಾಡಿಕೊಳ್ಳದೆ ಗತಿಯಿಲ್ಲ."

ಬೇಟೆಗಾರನೀತ ಪಾಕ್ಷಾಂಶ

ಶಶಿಧರ ವಿಶ್ವಾಮಿತ್ರ

"ಏನು! ಆನೆಗಳನ್ನು ಬರಿ ಬಾಣಗಳಿಂದ ಹೊಡೆದು ಕೆಡವಲು ಸಾಧ್ಯವೇ?" ಪ್ರಶ್ನೆಯನ್ನು ಕೇಳಿದ್ದವರು ೧೯೪೪ರಲ್ಲಿ ಕೆನ್ಯಾ ಸರಕಾರ ಘೋಷಿಸಿದ್ದ ಟ್ಸಾವೋ ಅಭಯಾರಣ್ಯಕ್ಕೆ ಹೊಸದಾಗಿ ನೇಮಕಗೊಂಡಿದ್ದ ಅಧಿಕಾರಿಯೊಬ್ಬರು. ಬಿಳಿಯರಾಗಿದ್ದರೂ ಆಫ್ರಿಕದಲ್ಲಿಯೇ ಹುಟ್ಟಿ, ಕಾಡಿನ ಮಧ್ಯೆ ಬೆಳೆದು ಕಾಡಿನಲ್ಲಿ ಅಲೆದು ನೂರು ತೆರನಾದ ಬೇಟೆಯಾಡಿದ್ದವರು. ಅವರ ಪ್ರಶ್ನೆಗೆ ಬಹು ವರ್ಷಗಳ ಬೇಟೆಯ ಪರಿಶ್ರಮವಿದ್ದ ಹೆಸರಾಂತ ಬಿಳಿಯ ಬೇಟೆಗಾರರು ಹೀಗೆ ಉತ್ತರಿಸಿದ್ದರು:

"ಏಕಿಲ್ಲ? ಖಂಡಿತ ಸಾಧ್ಯ. ನಾನು ಕಳೆದ ಇಪ್ಪತ್ತು ವರ್ಷಗಳಿಂದ ಬೇಟೆಯಾಡುತ್ತಿದ್ದೇನೆ. ವಿಷಬಾಣಗಳು ದೇಹದಲ್ಲಿ ನಾಟಿಕೊಂಡರೂ ಸಾಯದ ಅನೇಕ ಆನೆಗಳನ್ನು ಕಂಡಿದ್ದೇನೆ. ಅವು ಸಾಯದೆ ಬದುಕುಳಿದುದೇಕೆಂದರೆ ಬಾಣದ ವಿಷ ರಕ್ತದಲ್ಲಿ ಸರಿಯಾಗಿ ಮಿಶ್ರವಾಗದ್ದರಿಂದ. ಹಾಗೆ ರಕ್ತದೊಳಗೆ ಮಿಶ್ರವಾಗಬೇಕಾದರೆ ಸರಿಯಾದ ಜಾಗಗಳಿಗೆ- ಎಂದರೆ ಗಂಡ ಸ್ಥಳಕ್ಕೆ- ಬಾಣವನ್ನು ಹೊಡೆಯಬೇಕು. ಇದೇನು ಸಾಧಾರಣ ಸಂಗತಿಯಲ್ಲ. ಇದು ಎಂಥ ಗಂಡೆದೆಯ ಸಂಗತಿಯೆಂದು ಕಾಡಿನ ಪರಿಸರದಲ್ಲಿ ಹತ್ತಿರದಿಂದ ಆನೆಯನ್ನು ನೋಡಿದವನಿಗೇ ತಿಳಿದೀತು. ನಿಜಕ್ಕೂ ಯಾವನು ಕೇವಲ ಬಾಣದಿಂದ ಆನೆಯನ್ನು ಕೊಲ್ಲಲು ಸಮರ್ಥನೋ ಅದರ ದಂತಗಳಿಗೆ ಅವನೇ ಉತ್ತರಾಧಿಕಾರಿ."

*

ಒಮ್ಮೆ ಲಿಯಾಂಗುಲು ಬುಡಕಟ್ಟಿನ ಬೇಟೆಗಾರರಲ್ಲೊಬ್ಬನಾದ ದೆಂಜೆಲೋ ದಾರ ಆನೆಯೊಂದಕ್ಕೆ ಬಾಣ ಹೊಡೆದು ಕಾಡಿನಲ್ಲಿ ಹೂಡಿದ್ದ ತನ್ನ ಪೊದೆ ತಾಣಕ್ಕೆ ಹಿಂದಿರುಗಿ ಮರದ ಅಡಿಯಿಂದ ಬೆಂಕಿಯನ್ನು ಮಾಡಲು ಉಪಕ್ರಮಿಸಿ ತನ್ನ ಹೆಂಡರಿಗೆ ಈಗ ತಾನು ಹೊಡೆದ ಆನೆಯ ಕಳೇಬರದಿಂದ ಅಡುಗೆಗೆ ಮಾಂಸ ತರಲು ಆದೇಶವಿತ್ತ. ಆದರೆ ಆನೆ ಸತ್ತಿದೆಯೋ ಇಲ್ಲವೋ ಎಂಬ ಅನುಮಾನ ಪ್ರೇರಿತವಾದ ಭಯದಿಂದ ಹೆಂಗಸರು ನುಡಿದಿದ್ದರು:

"ಆನೆ ಸತ್ತಿಲ್ಲದಿದ್ದರೆ?"

ದಿಟ್ಟ ಆತ್ಮವಿಶ್ವಾಸದ ಧ್ವನಿಯಲ್ಲಿ ದೆಂಜಲೊ ದಾರ ಉತ್ತರಿಸಿದ್ದ:

"ಹೆಂಡಿರಾ, ಆನೆಯನ್ನು ಹೊಡೆದವ ದಾರನ ಮಗನಾದ ದೆಂಜಲೋ, ಆನೆ ಸತ್ತಿರಲೇ

ಬೇಕು, "

*

ತಂದೆಯು ಕಣ್ಣಂಗಿತ ದಿವಾನಿಯನ್ನು ಹೊಸೆದು ಹಿಂದೆ ಅವನಿಗೆ ನಿಶ್ಚಿಂತ ಮಾಡಿದ್ದಿತು. ನಿಂತ ಹದಿನೈದು ವರ್ಷದ ದಿವಾನಿ ಈಗ ನಿಶ್ಶಬ್ದ ಬಾಳುವ ತನ್ನ ನೆರಳಿಗೇ ನೆರಳಿನಂತೆ ನಿಶ್ಶಬ್ದವಾಗಿ ನಿಂತು ಅವಲೋಕಿಸುತ್ತಾ ಈಗ ಪೊದೆಗೆ ಪೊದೆಯಾಗಿ ಹಾವಿನಂತೆ ನುಸುಳುತ್ತಾ ಸಾಗಿದ್ದ ತಂದೆಯು ಬೇಟೆಯ ಪುರುಷನನ್ನು ಬಿಟ್ಟಗಣ್ಣಿನಿಂದ ನೋಡತೊಡಗಿದ್ದ. ಬೇಟೆಯ ಹುಲಿಯಾಳು-ಗಳಲ್ಲೇ ಅತೀವ ಪೂರ್ವನೆನ್ನಿಸಿಕೊಂಡಿದ್ದರೂ ಮೃತ್ಯುಪಂಜರವೆನ್ನಿಸುತ್ತಿದ್ದ ಗಜಗಣದತ್ತ ನಡೆಯುತ್ತಿದ್ದ ತಂದೆಯ ಅಸಾಧಾರಣವಾದ ದಿಟ್ಟತನ, ಆ ದಿಟ್ಟತನ ಊಹಿಸಿದ್ದ ಆನೆಯ ಬೇಟೆಯೂ ಒಂದು ಆಟವೆಂಬಂತೆನ್ನುವ ನಿಸೂರು ಕಾಡಿನಲ್ಲೇ ಜನಿಸಿ ಕಾಡಿನಲ್ಲೇ ಬೆಳೆದು ಬೇಟೆಯೆಂದರೆ ಎನೆದನೆಯ ಆಟವೆನ್ನಿಸಿ ಈಗ ಆನೆ ಬೇಟೆಯ ತರಬೇತಿಗಾಗಿ ಬಂದಿದ್ದ ದಿವಾನಿಯ ಎದೆಯನ್ನೂ ಹಾರಿಸುತ್ತಿದ್ದಿತು. ಅಗೋ, ಪೊದೆಗಳ ಜಾಡಿನಲ್ಲಿ ನುಸುಳಿ ಸಾಗಿದ್ದ ತಂದೆ, ಈಗ ನಿಂತು ಸುತ್ತಮುತ್ತಲೂ ಸೂಕ್ಷ್ಮವಾಗಿ ನೋಡುತ್ತಿದ್ದಾನೆ. ತಂದೆಗೆ ಕೇವಲ ಹದಿನೈದು ಗಜಗಳ ದೂರದಲ್ಲೇ ಮೇಯುತ್ತಿದೆ ತಂದೆ ಕೊಲ್ಲಲೆಣಿಸಿರುವ ಭಾರಿ ಹೆಣ್ಣಾನೆ; ಕನಿಷ್ಠ ಪಕ್ಷ ಐದು ಮೊಳದುದ್ದದ ದಂತಗಳನ್ನು ಮೆರೆ-ಸುತ್ತಾ ಮೇವುಣ್ಣುತ್ತಿದೆ. ತಂದೆಯ ಎಡ ಭಾಗದಲ್ಲಿ ಕೇವಲ ಹತ್ತು ಗಜ ದೂರ-ದಲ್ಲಿಯೇ ಎರಡು ಪಡ್ಡೆ ಆನೆಗಳು ನಿರ್ಭಯ-ವಾಗಿ ಮೇವುಣ್ಣುತ್ತಿವೆ. ಹೆಣ್ಣಾನೆಗೆ ಅತ್ತ ತುಸು ದೂರದಲ್ಲಿ ಭಾರಿ ಸಲಗವೊಂದು ಮೇಯುತ್ತಿದೆ. ಆ ಸಲಗದ ದಂತಗಳು ಹೆಣ್ಣಾನೆಯದಕ್ಕಿಂತ ಭಾರಿಯದಾಗಿದ್ದರೂ ತಂದೆಯ ದೃಷ್ಟಿ ಹೆಣ್ಣಾನೆಯ ಮೇಲೆಯೇ ಇರುವುದು ದಿವಾನಿಗೆ ತಿಳಿದಿದೆ. ಏಕೆಂದರೆ ಗಂಡಾನೆಯ ಕೊಂಬುಗಳು ಬಾಗಿರುತ್ತವೆ; ಒಳಗೆ ಟೊಳ್ಳು ಹೌದು. ಹೆಣ್ಣಿನ ನೇರಾದ ಕೊಂಬುಗಳಿಗೇ ಬೆಲೆ ಜಾಸ್ತಿ. ಅವುಗಳು ಟೊಳ್ಳು ಅಲ್ಲ. ಇಷ್ಟಕ್ಕೂ ಹೆಣ್ಣಾನೆಯನ್ನು ಹಾರಿಸುವ ವೇಳೆ ಆ ಸಲಗನನ್ನು ತಂದೆ ಕೊಲ್ಲದೆ ಬಿಡ.

ಆಕಸ್ಮಿಕವಾಗಿ ಒದಗಿಬಹುದಾದ ಗಂಡಾಂತರದೆಡೆಯಿಂದ ಮಗನನ್ನು ದೂರ ನಿಲ್ಲಿಸಿ ಐದು ಮೊಳಕ್ಕೂ ದೊಡ್ಡದೆನ್ನಿಸುವ ದಂತದ ಜೋಡಿಯನ್ನು ಮೆರೆಯುತ್ತಾ ಮೇಯುತ್ತಿದ್ದ ಹೆಣ್ಣಾನೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಸಾಗಿದ್ದ ಬೇಟೆಗಾರ ವೀರ ಗೆಲೋ ಗಲೋ ಕಾಫಂಡೆ ಪೊದೆಯೊಂದರ ಪಕ್ಕದ ನೆರಳೊಂದಿಗೆ ಕಲೆತಂತೆ ನಿಂತು ಸುತ್ತಲೂ ದಿಟ್ಟಿಸಿದ್ದ. ಬಿಸಿಲು ರಣ ರಣ ಸುಡುತ್ತಿದ್ದು ಗಾಳಿಯ ಅಲೆಯೂ ಇಲ್ಲವಾದದ್ದು ಅವನಿಗೆ ಅನುಕೂಲವಾಗಿತ್ತು. ಮನುಷ್ಯ ಗಂಧವನ್ನು ಕೊಂಡು ಹೋಗುವ ಗಾಳಿ ತನ್ನ ವಾಸನೆಯನ್ನು ಸಲಗಗಳಿಗೆ ತೀಡಿದರೆ ಆಪತ್ತೇ. ಕೇವಲ ಹದಿನೈದು ಗಜಗಳ ಸಮೀಪದಲ್ಲಿ ತಾನು ನಿಂತಿ-ದ್ದರೂ ಹಿಂಡಿನ ಯಾವ ಆನೆಗೂ ತನ್ನ ಸುಳಿವು ಹತ್ತಿಲ್ಲವೆಂಬ ಅಂಶ ಮೃಗಜೀವನಸೂಕ್ಷ್ಮ ಬಲ್ಲ ಕಾಫಂಡೆಗೆ ಸ್ಪಷ್ಟವಾಗಿತ್ತು. ಹೆಜ್ಜೆ ಇಟ್ಟ ಕೊಬ್ಬು ಒಂದಿನಿತೂ ಕಾಣದ ಕಟ್ಟುಮಸ್ತಾದ ಕರಿಯ ಕಾಯದಿಂದ ಹೊಮ್ಮುವ ಬೆವರ ಹನಿ-ಯ ಲೇಪನ ಕಾಫಂಡೆ ಮುಂದುವರೆದಂತೆ ಬಿಸಿಲಿನಲ್ಲಿ ಮಿರುಗುತ್ತಿದ್ದಿತು. ಎಡ ಭಾಗದಲ್ಲಿ ತನಗೆ ಕೇವಲ ಹತ್ತು ಗಜದಲ್ಲಿ ಮೇಯುತ್ತಿದ್ದ ಎರಡು ಪಡ್ಡೆಗಳನ್ನು, ತನ್ನ ಬೇಟೆಯಾಗಿದ್ದ ಹೆಣ್ಣಾನೆಯನ್ನು, ಆ ಹೆಣ್ಣಾನೆಗೆ ತುಸು ಅತ್ತ ಮೇವುಣ್ಣುತ್ತಿದ್ದ ಸಲಗನನ್ನೂ ದೃಷ್ಟಿಯಲ್ಲಿ-ರಿಸಿಕೊಂಡು ಮುಂದುವರೆದ ಕಾಫಂಡೆ ಎರಡು ಪಡ್ಡೆಗಳು ಹಾಗೂ ಹೆಣ್ಣಾನೆಯ ನಡುವಿದ್ದ ಹತ್ತು ಗಜದ ಅಂತರದಲ್ಲಿ ನಿಶ್ಶಬ್ದವಾಗಿ ನಿಂತ.

ಅಕ್ಕ ಪಕ್ಕ ಕೇವಲ ಹದಿನೈದು ಗಜಗಳ ಅಂತರದಲ್ಲಿ ಆನೆಗಳು, ಅದೂ ಅಂಥಿಂಥ ಆನೆ-ಗಳಲ್ಲ, ಕಾಡಿನಲ್ಲೇ ಬೆಳೆದು ಕೊಬ್ಬಿದ ಆನೆಗಳು, ಅಪಾಯದ ಸುಳಿವು ಸಿಕ್ಕರೆ ರೆಪ್ಪೆ ಮಿಟುಕು-ವಷ್ಟರಲ್ಲಿ ಶತ್ರುವಿನ ದೇಹದ ಹುಡಿಯನ್ನು ನೊಣೆದುಬಿಡುವಂಥ ಕುಂಜರಘನಗಳು.

ಯಾವ ಕ್ಷಣದಲ್ಲಿ ಯಾವ ರೀತಿಯಾಗಿ ಗಂಡಾಂ-ತರ ಒದಗಿಬರಬಹುದೋ ಎಂಬುದನ್ನು [illegible] ಗಟ್ಟಲೆ ಆನೆಗಳನ್ನು ಕೆಡಹಿ ಗಜಗಣದ

ಂಥ ಸೂಕ್ಷ್ಮ ಗ್ರಹಣಶಕ್ತಿಯಲ್ಲಿ ಹಾಗೂ ಪರಿಸರದ ಮೇಲ್ಮೈ ಸೂಕ್ಷ್ಮಗಳಲ್ಲಿ ನಿಕಟ ಪರಿಶ್ರಮವಿದ್ದ ತಂದೆಗೂ ಅರಿಯಲಾಗದು ಎಂಬುದನ್ನು ಬಿಟ್ಟಗಣ್ಣಿನಿಂದ ತಂದೆಯ ಚಲನವಲನಗಳನ್ನು ನೋಡುತ್ತಿದ್ದ ದಿವಾನಿ ಬಲ್ಲ. ಬೇಟೆಗಾರನ ಜೀವನ ಗಂಡಾಂತರದ ಜೀವನ. ಬೇಟೆಗೆ ಹೋದ, ಅದರಲ್ಲೂ ಆನೆ ಬೇಟೆಗೆ ಹೋದ, ಎಲ್ಲರೂ ಹಟ್ಟಿಗಳಿಗೆ ಹಿಂದಿರುಗುತ್ತಿರಲಿಲ್ಲ. ಆನೆಗಳ ಭೀಮಶಕ್ತಿಯ ಮುಂದೆ ಎಷ್ಟೇ ದಿಟ್ಟನಾದರೂ ಬೇಟೆಗಾರ ಎಷ್ಟರವನು? ಸುಳಿವು ಸಿಕ್ಕ ಕೂಡಲೆ ಮಿಂಚಿನಂತೆ ಮೇಲ್ವಾಯುವ ಆನೆಯನ್ನು ಯಾರು ಹೇಗೆ ತಡೆಯಲು ಸಾಧ್ಯ? ಬೇಟೆಗಾರನ ಬಳಿ ವಿಷದ ಅಂಬುಗಳಿದ್ದರೂ ಅವನು ಧೈರ್ಯದಿಂದ ನಾಟಿಸಿದ ಅಂಬಿನ ಜೀವಹಾರಿ ವಿಷ ರಕ್ತದೊಡನೆ ಮಾರಕವಾಗುವಂತೆ ಬೆರೆಯುವವರೆಗೂ ಓಡಬಲ್ಲ ಆನೆಯನ್ನು ಯಾವ ಶಕ್ತಿ ನಿಲ್ಲಿಸೀತು? ಇಂಥ ವಿಪರೀತದ ಸನ್ನಿವೇಶಗಳಲ್ಲಿ ಬೇಟೆಗಾರನಿಗಿರುವ ದಾರಿ ಪಲಾಯನವೊಂದೇ, ಅದೂ ಎಂಥ ಓಟ; ರೋಷದಿಂದ ಕಾಲಯಮನಂತೆ ನುಗ್ಗೋಡಿ ಬರುತ್ತಿರುವ ಆನೆಯಿಂದ ಪಾರಾಗಲೆಣಿಸಿ ಘೇಂಡಾಮೃಗಗಳೂ ತೂರಲು ಅನುಮಾನಿಸುವ ಮುಳ್ಳು ಪೊದೆಗಳನ್ನು ತೂರಿ ನುಗ್ಗಿ ಓಡುವ ಅಳಿವು ಉಳಿವಿನ ಓಟ. ಇಂಥ ಸಮಯಗಳಲ್ಲಿ ಎಷ್ಟೋ ಬೇಟೆಗಾರರು ಸತ್ತಿದ್ದೂ ಉಂಟು.

ಒಮ್ಮೆ ಬೇಟೆಯ ಚಳಕ ಹಾಗೂ ಜನಪ್ರಿಯತೆಯಲ್ಲಿ ಹತ್ತಿರ ಹತ್ತಿರ ತಂದೆಯ ಸಮಕ್ಕೇ ಬರುತ್ತಿದ್ದ ಗರೀಸೆ ಬೋಜೆ ಪೊದೆಯ ಮರೆಯಿಂದ ಮೂರೇ ಗಜದಷ್ಟು ದೂರದಲ್ಲಿದ್ದ ಹೆಣ್ಣಾನೆಯೊಂದಕ್ಕೆ ವಿಷಾಂಬನ್ನು ನಾಟಿಸಲೆಣಿಸಿದ್ದ. ಅವನ ದುರದೃಷ್ಟಕ್ಕೆ ವಿಷಾಂಬು ಪೊದೆಯ ರೆಂಬೆಗೆ ತಾಕಿ ಗುರಿ ನಾಟದೆ ಆನೆಯನ್ನು ಸವರಿಕೊಂಡು ಹೋಯಿತು. ಬೆದರಿದ ಆನೆ ಹಠಾತ್ತಾಗಿ ತಿರುಗಿ ಹಾಗೆ ತಿರುಗಿದ್ದಾಗ ತನಗರಿವಿಲ್ಲದೆಯೇ ಪಕ್ಕದಲ್ಲಿ ನಿಂತಿದ್ದ ಬೋಜೆಯನ್ನು ಮುಖಾಚೆ ಕೆಡವಿತ್ತು. ಸೊಂಡಿಲೆತ್ತಿ ಕಿವಿ ಕೊಡಹಿ ತಲೆ ರಭಾಡಿಸಿ ತಡಕಿತ್ತು. ಅದೃಷ್ಟ ಬೋಜೆಯನ್ನು ಕಾಪಾಡಿತ್ತು. ಏಕೆಂದರೆ ಅವನು ಆನೆಯ ಹಿಂಭಾಗದಲ್ಲಿ ಬಿದ್ದಿದ್ದ. ಬಿದ್ದಿದ್ದರಿಂದ ಮುಂದಿನ ಹಲ್ಲುಗಳು ಉದುರಿ ಹೋಗಿದ್ದರೂ ಬಿದ್ದ ಮರುಕ್ಷಣವೇ ಹೊರಳಿ



ಬೆನ್ನ ಮೇಲೆ ಮಲಗಿ ತನ್ನ ಕೈಯಲ್ಲಿದ್ದ ಇನ್ನೊಂದು ವಿಷಾಂಬುವನ್ನು ತನ್ನ ಸುಳಿವನ್ನು ಇನ್ನೇನು ಕಂಡುಕೊಳ್ಳುವುದರಲ್ಲಿದ್ದ ಆನೆಗೆ ನಾಟಿಸಿದ್ದ. ಈ ಸಲ ಅವನ ಗುರಿ ತಪ್ಪಿರಲಿಲ್ಲ.

ಈ ಬೇಟೆಗ ತಂದೆಯ ಜೊತೆಗೆ ಬೇಟೆಗೆ ಬಂದು ತಂದೆಯ ಅನಿತರ ಸಾಧಾರಣವಾದ ಬೇಟೆಯ ವೈಖರಿಯ ಪರಿಚಯವಿದ್ದ ದಿವಾನಿಗೂ ಮುಂದಿನ ಕ್ಷಣಗಳು ಝಲ್ಲೆನಿಸುವಂತಿದ್ದವು. ಅಷ್ಟು ಸಮೀಪಕ್ಕೆ ಹೋಗಿ ನಿಂತ ತಂದೆ ಥಕ್ಕನೆ ಹೆಣ್ಣಾನೆಯ ಮರ್ಮಸ್ಥಾನಕ್ಕೆ ಅಂಬು ನಾಟಿಸಿ ಹಿಮ್ಮೆಟ್ಟಿರಲಿಲ್ಲ. ಬದಲಿಗೆ ಶಾಂತವಾಗಿ ಕತ್ತು ತಿರುಗಿಸಿ ಬೇಟೆಯ ಆಗುಹೋಗುಗಳನ್ನು ನೋಡುತ್ತಿರುವೆನೆಂದು ಖಾತರಿಪಡಿಸಿಕೊಳ್ಳ-ಬೇಕೆಂಬಂತೆ ತಾನು ಅವಗೆ ನಿಂತಿದ್ದ ಪೊದೆಯತ್ತ ನೋಡಿ ಬಲಗೈಯಲ್ಲಿ ಹಿಡಿದಿದ್ದ ಎರಡು ಅಂಬು-ಗಳಲ್ಲೊಂದರ ಕೂರಲುಗಿನಿಂದ ಬಿಲ್ಲು ಹಿಡಿದಿದ್ದ ಎಡ ಮುಂಗೈಯ ಮೇಲೆ ಗೀರುಕೊಂಡಿದ್ದ. ಗೀರುಗಾಯದಿಂದ ಹನಿಗಟ್ಟಿ ಹರಿದು ಸೋರ-ತೊಡಗಿದ್ದ ರಕ್ತಕ್ಕೆ ಕೂರಲುಗಿನ ಹಿಂಭಾಗದಲ್ಲಿ ಮೆತ್ತಿದ್ದ ವಿಷವನ್ನು ತಾಕಿಸಿದ್ದ. ಆನೆಗೆ ಹಾಲಾ-ಹಲವೆನ್ನಿಸುವಂತಿದ್ದ ಆ ಮುರಿಜು ಗಿಡದ ವಿಷ* ಕೆಲ ಕ್ಷಣಗಳಲ್ಲಿ ರಕ್ತವನ್ನು ಹೆಪ್ಪುಗಟ್ಟಿಸಿ ಮನುಷ್ಯನನ್ನು ಕೊಲ್ಲುತ್ತದೆ. ತನ್ನ ಗೀರುಗಾಯ-ದಿಂದ ಸೋರಿಳಿಯುತ್ತಿದ್ದ ರಕ್ತದ ತೊಟಕಿಗೆ ವಿಷ ತಾಕಿದ ಕ್ಷಣವೇ ರಕ್ತ ಹೆಪ್ಪುಗಟ್ಟಿದುದನ್ನು ಹಾಗೂ ಗಾಯದಿಂದ ಸೋರುತ್ತಿದ್ದ ರಕ್ತದ ವ್ಯೂಹದಲ್ಲಿ ವಿಷ ಮೇಲೇರಿದಂತೆ ಹೆಪ್ಪು-ಗಟ್ಟುತ್ತಾ ನಡೆದುದನ್ನು ಕಂಡುಕೊಂಡ ತಂದೆ ವಿಷದ ತೀಕ್ಷ್ಣತೆಯ ಬಗೆಗೆ ಸಮಾಧಾನ ಪಟ್ಟು-ಕೊಂಡು ವಿಷದ ಬಿಂದು ಇನ್ನೇನು ಗೀರು-ಗಾಯದ ಮೇಲೆ ಬೇಕು ಎನ್ನುವಷ್ಟರಲ್ಲಿ [illegible] ಬಲಗೈಲ್ಲಿ ಮೃತ್ಯುಸ್ವರೂಪಿಯಾದ ಆನೆಗಳ ನಡುವೆಯೇ! ಈ ವಿಷಪರೀಕ್ಷೆ! ಚರಿತ್ರ ಬೇಟೆಗಾರರ ಎದೆಯನ್ನೇ ಹಾರಿಸುವ ತಂದೆಯ ಈ ದಿಟ್ಟತನ-ವನ್ನು ಕಂಡು [illegible] ಸುತ್ತಲಿನ ಜನವೆಲ್ಲ ತಂದೆಗೆ ಬೇಟೆಗಾರವೀರರ ವೀರನೆಂದು ಹೆಸರಿಟ್ಟು ಕೂಗಿದೆ. ತಂದೆಯ ಸಾಹಸದ ವಿಷಯಕ್ಕೆ ನೂರೆಂಟು ಕಥೆ ಕಟ್ಟಿದೆ. [illegible] ತಂದೆಯ ಬೇಟೆಯ ಚಳಕವನ್ನು ಅನುಕರಿಸಲು ಯತ್ನಿಸುತ್ತಾರೆ. ಈಗ ತನ್ನೆದುರಿಗೇ ಜರುಗಿ ಅಸಾಧಾರಣವಾದ ಚಳಕವನ್ನು ಕಂಡಿದ್ದ ದಿವಾನಿಗೆ ತಂದೆಯ ಬಗೆಗೆ ಜನ ಕಟ್ಟಿದ ಯಾವ ಕಥೆಯೂ ಉತ್ಪ್ರೇಕ್ಷೆಯೆನ್ನಿಸಿರಲಿಲ್ಲ.

ಮೇಯುತ್ತಿದ್ದ ಹೆಣ್ಣಾನೆ ಏಕೋ ಕತ್ತೆತ್ತಿದ್ದಾಗ, ಕಿವಿಯೆಂಬ ಬೀಸಣಿಗೆ-ಯನ್ನು ಓರೆಮಾಡಿ ಕತ್ತನ್ನು ಕೊಂಕಿಸಿದಾಗ ಅದರ ಮಾರು ದಂತಗಳು ಮಿರುಗಿದ್ದವು. ಇನ್ನೇನು ಬೇಟೆಗೆ ತನ್ನ ಸುಳಿವು ಸಿಕ್ಕಲಿದೆ ಎಂದರಿತ ಕ್ಷಣವೇ, ವಿಷಪರೀಕ್ಷೆ ಮಾಡಿ ಮುಗಿಸಿದ್ದ ಕಾಘಂದೆ ಕಾಲಗಲಿಸಿ ದೃಢವಾಗಿ ನಿಂತು ಮೈಯನ್ನು ಹುರಿಮಾಡಿ ಬಲಗೈಯಲ್ಲಿ ಹಿಡಿದಿದ್ದ ಎರಡು ಅಂಬುಗಳಲ್ಲೊಂದನ್ನು ಹೆದೆಗೇರಿಸಿದ್ದ. ಬಲಗೈಯ ಮಧ್ಯದ ಮೂರು ಬೆರಳುಗಳು ಬಾಣಾಗ್ರವನ್ನೂ ಹೆದೆಯನ್ನೂ ಬಳಸಿ ಹಿಡಿದಿರಲು ಹೆಬ್ಬೆರಳು ಹಾಗೂ ಅಂಗೈ-ಗಳು ಇನ್ನೊಂದು ಬಾಣವನ್ನು ಹಿಡಿದಿದ್ದವು. ಆರಡಿಗಿಂತಲೂ ಎತ್ತರವಿದ್ದು ಜಿರಾಫೆಯ ಕಾಲಿನ ಸ್ನಾಯುಗಳನ್ನು [illegible] ಹೆದೆಯನ್ನು [illegible], ಏಳಡಿ ಆನೆ-ಯಂಥ ದಪ್ಪ ತೊಗಲಿನ ಪ್ರಾಣಿಯ ಮರ್ಮ-ಗಳನ್ನೂ ಭೇದಿಸುವಷ್ಟು [illegible] [illegible]-ವಾಗಿತ್ತು. ಏಕೆಂದರೆ ಕಾಘಂದೆ ಹಿಡಿದಿದ್ದ ಬಿಲ್ಲು ಹಾಗೂ ವಿಷಾಂಬುಗಳು ಲಿಯಾಂಗುಲು ಬುಡ-ಕಟ್ಟಿನ ವಿಶೇಷ, ಹುರಿಮಾಡಿದಾಗ [illegible] ಬಾಗಬಲ್ಲ ಬಹು ಬಿಗುವಾದ ರಟ್ಟೆ ಗಾತ್ರದ ವಿಶೇಷ ಜಾತಿಯ ಮರದ ರೆಂಬೆಗೆ ಜಿರಾಫೆಯ ಕಾಲಿನ ಸ್ನಾಯುಗಳನ್ನು ಹೆಣೆದ, ಹುರಿ [illegible]

* ಮುರಿಜ : (Acokanthera longiflora) ಗಿಡದ ರೊಂಬೆಗಳನ್ನು ಕಡಿದು ಚುರುಕಾಗಿ ಕತ್ತ-ರಿಸಬಹುಹೊತ್ತು ಬೇಯಿಸಿ, ಬರುವ ಪಾಕವನ್ನು ಮತ್ತೂ ಕುದಿಸಿದರೆ ಕಾಕಂಬಿಯಂತೆ ಸ್ನಿಗ್ಧ ಸಾಂದ್ರವಾದ ವಿಷ ದೊರೆಯುತ್ತದೆ.

ಹೆದೆಹುರಿಯನ್ನು ಕಟ್ಟಬೇಕು. ಬಿಲ್ಲಕೊಂಪೆಯನ್ನು ಬಾಗಿಸಿ ಹೆದೆಯನ್ನು ಸೆಳೆದು ಕಟ್ಟುವದೆ ಯಮಸಾಹಸದ ಕೆಲಸ. ಹಾಗೆ ಹೆದೆಯೇರಿಸಿದ ಬಿಲ್ಲಿನ ಎತ್ತರ ಸುಮಾರು ಆರು ಅಡಿಗಳು ಇದಕ್ಕೆ ತಕ್ಕ ಮೂರು ಅಂಶಿಯ ಮೂರು ಘಟಕದ ವಿಷಬಾಣ. ಮೊದಲನೆಯ ಘಟಕ ಲೋಹದ ಕೂರಲಗಿನ ಬಾಣಾಗ್ರ. ಎರಡನೆಯ ಘಟಕ ಆ ಬಾಣಾಗ್ರದ ಹಿಂಭಾಗದ ನಟ್ಟನಡುವೆ ಹೂಳಿದ್ದ ಹೊಕ್ಕಳತೂತಿಗೆ ಲಗತ್ತಿಸಿದ್ದ ಸುಮಾರು ಆರಂಗುಲಗಳ ವಿಷಘಟಕ. ಮೂರನೆಯದು ಈ ವಿಷ ಘಟಕದ ಹೊಕ್ಕಳತೂತಿಗೆ ಲಗತ್ತಿಸಿದ ಹಿಂತುದಿಯಲ್ಲಿ ಗುರಿ ಸಾಧನೆಯ ಓಘಕ್ಕೆ ಪಕ್ಕಾಗುವಂತೆ ಅಂಟಿಸಿದ್ದ ಗರಿಗಳ ಸುಮಾರು ಮೂರು ಅಡಿಗಳ ಕಾವು. ಈ ರಚನಾವೈಖರಿಯಿಂದ ನಾಟಿದ ಬಾಣದ ನೋವಿನಿಂದ ದಿಕ್ಕೆಟ್ಟು ನುಗ್ಗೋಡಿ ಬಿದ್ದು ಹೊರಳುವ ಆನೆಯಿಂದ ಮುಖ್ಯ ಕಾವು ಕಿತ್ತು ಬೀಳುವುದೇ ಹೊರತು ಮೈಯೊಳಗೆ ನಾಟಿಕೊಂಡಿದ್ದ ಬಾಣಾಗ್ರ ಹಾಗೂ ವಿಷಘಟಕಗಳಲ್ಲ. ಗಾಂಡೀವದಂತಹ ಈ ಧನುಸ್ಸು, ಮಾರಕವಾದ ಈ ವಿಷಬಾಣಗಳು ಎಲ್ಲ ಬೇಟೆಗಾರರಲ್ಲೂ ಒಂದೇ ತೆರನಾಗಿರಬೇಕಾಗಿಲ್ಲ. ತನ್ನ ವೈಯಕ್ತಿಕ ಶಕ್ತಿ ಘನತೆಗೆ ತಕ್ಕಂತೆ ಬೇಟೆಗಾರ ಬಿಲ್ಲನ್ನೂ ಅಂಬನ್ನೂ ರಚಿಸಿಕೊಳ್ಳುತ್ತಾನೆ.

ಕಾಪುಂಡೆ ಪಳಗಿದ್ದ ಬೇಟೆಗಾರನಷ್ಟೇ ಅಲ್ಲದೆ ಬುದ್ಧಿವಂತ ಬೇಟೆಗಾರನೂ ಆಗಿದ್ದ. ತನ್ನ ಅಂಬಿನ ವಿಷ ಆನೆಯ ರಕ್ತನಾಳಕ್ಕೆ ತಾಕಬೇಕು; ಹಾಗೆ ತಾಕಿದರೆ ಮಾತ್ರ ಆನೆಯ ಸಾವು ಕ್ಷಿಪ್ರ ನಿಶ್ಚಿತ; ಹಾಗೆ ಅಂಬನ್ನು ಆನೆಯ ರಕ್ತಪ್ರವಾಹಕ್ಕೆ ತಾಕಿಸಬೇಕಾದರೆ ಪಿತ್ತಕೋಶಕ್ಕೆ ಮೇದೋಜೀರಕಾಂಗಕ್ಕೆ ಇಲ್ಲವೇ ಮೂತ್ರಪಿಂಡಗಳಿಗೆ ಗುರಿಯಿಡಬೇಕು; ಆನೆಯ ಎದೆಯ ಎಲುಬುಗಳು ತುಂಬಾ ಒತ್ತಾಗಿರುವದರಿಂದ ಹೃದಯಕ್ಕೆ ಬಾಣವನ್ನು ನಾಟಿಸುವುದು ಅಸಾಧ್ಯ ಎಂದು ಅವನು ಬಲ್ಲ. ಈಗ ತಾನಿದ್ದ ಸ್ಥಳ ಆನೆಯ ಮೈ ತನ್ನೆಡೆಗೆ ಚಾಚಿದ್ದ ರೀತಿಯಿಂದ ಮೇದೋಜೀರಕಾಂಗಕ್ಕೆ ತನ್ನ ಅಂಬು ನಾಟಬೇಕು. ಹೀಗೆ ನಿರ್ಧರಿಸಿ ಹೆದೆಯನ್ನು ಎಳೆದವನೇ ಅಂಬನ್ನು ಬಿಟ್ಟಿದ್ದ. ಥಂಗ್ ಎಂಬ ಧನುಷ್ಟಂಕಾರದಿಂದ ಹೊರಬಿದ್ದ ಅಂಬು ಕಾಪುಂಡೆ ನಿರ್ದೇಶಿಸಿದ್ದೆಡೆಗೆ ಮಿಂಚಿನಂತೆ ಹೋಗಿ ನಾಟಿತ್ತು.

ಮೇಯುತ್ತಿದ್ದ ಆ ಹೆಣ್ಣಾನೆ ಅಂಬು ಮೈಗೆ ನಾಟಿದ ಕ್ಷಣವೇ ಹಠಾತ್ತನೆ ಸೊಂಡಿಲು ಎತ್ತಿ ಮೈ ಕೊಡವಿ ದಿಗ್ಭ್ರಮೆಯಿಂದ ದುಸ್ಸಹವಾದ ಯಾತನೆಯಿಂದ ಕಿರ್ರೋ ಎಂದು ಘೀಳಿಟ್ಟಿತು. ಘಾತದ ಮೊದಲ ನೋವಿನ ತೀಕ್ಷ್ಣತೆಯನ್ನು ತಾಳಲಾರದೆ ಮೈ ನಡುಗುತ್ತಿರಲು ಸೊಂಡಿಲು, ಕಿವಿಗಳು ದಿಕ್ಕೆಟ್ಟಂತೆ ಆಡುತ್ತಿರಲು ಆ ಕಾಡೇ ನಡುಗಿಹೋಗುವಂತೆ ಕಿರಿಚುತ್ತಾ ಮುಂಗಾಣದೆ ಕಂಡಾಬಟ್ಟೆ ಓಡಿತು. ನೋವಿನ ಘಾತದಿಂದ ಹಾಗೂ ರಕ್ತದಲ್ಲಿ ವಿಷ ಬೆರೆತಂತೆ ಬೆರೆತಂತೆ ಆಗಿದ್ದ ಪರಿಣಾಮಗಳಿಂದ ಓಡುತ್ತಿದ್ದ ಆನೆಯ ಮೈ ಹತೋಟಿ ತಪ್ಪಿದ್ದಿತು. ಮೈಗೆ ಬೆಂಕಿ ಹತ್ತಿದಂತೆ ಗುಡುಗಾಡುತ್ತಾ ಉಚ್ಚುತ್ತಾ, ಉಚ್ಚೆ ಹೊಯ್ಯುತ್ತಾ ಮೊಯ್ಯುತ್ತಾ ನಿಲ್ಲಲಾಗದೆ, ನಿಂತಿರಲಾಗದೆ ಆನೆ ಓಡಿದ್ದಿತು. ಕೊನೆಗೆ ಓಡಲೂ ಆಗದೆ ಕುಸಿದು ಹೊರಳಾಡತೊಡಗಿದ್ದಿತು. ರಕ್ತನಾಳಗಳಲ್ಲಿ ವಿಷವೇರಿದಂತೆ ಆನೆ ಅತೀವ ನೋವಿನಿಂದ ಹೊರಳಿ ಹೊರಳಿ ಕೊನೆಗೆ ಎದೆಯುಡುಗಿ ಸತ್ತಿದ್ದಿತು.

ಬಾಣದ ಆಘಾತದಿಂದ ತನ್ನ ಬೇಟೆ ಎತ್ತ ಓಡೀತು; ಹಾಗೆ ಕಿರುಚುತ್ತಾ ಓಡುವ ಬೇಟೆ ಉಳಿದ ಆನೆಗಳ ಮೇಲೆ ಯಾವ ಪರಿಣಾಮವನ್ನು ಬೀರೀತು ಎಂದು ಬಲ್ಲ ಕಾಪುಂಡೆ ತಾನು ಅಂಬು ಹೂಡಿದ ಜಾಗದಲ್ಲೇ ತುಸು ಹೊತ್ತು ನಿಶ್ಚಲನಾಗಿ ನಿಂತಿದ್ದ. ಅವನೆಣಿಕೆಯಂತೆಯೇ ಎಡದಲ್ಲಿದ್ದ ಎರಡು ಪಡ್ಡೆಗಳು ಹುಯಿಲೇರಾಗಿ ಚಾಳನುಗ್ಗಿ ಓಡಿದ್ದರೆ, ಸಲಗನ ಸಚೇತನವಾಗಿ ಮಿಕ್ಕ ಆನೆಗಳೆಲ್ಲವೂ ಕೆಟ್ಟೆನೋ ಎಂದು ದಿಕ್ಕಾಪಾಲಾಗಿದ್ದುವು. ತುಸುವೇ ಹೊತ್ತಿನಲ್ಲಿ ಎದೆ ನಡುಗಿಸುವ ಆನೆಗಳ ಪಾದಾಘಾತಗಳೂ ಕೇಳದಾದುವು. ಆ ಹೈರಾಣ ಮೈದಾನದಲ್ಲೂ ಏನೂ ಆಗದು ಎಂಬಂತೆ ನಿಂತಿದ್ದ ಕಾಪುಂಡೆ ತಾನೊಂದು ಸಾಧಾರಣ ಕೃತ್ಯವನ್ನು ಎಸಗಿದನಷ್ಟೆ ಎನ್ನುವ ನಿರ್ಲಕ್ಷ್ಯಭಾವದಿಂದ

ಕಾಯುತ್ತಿದ್ದ ದಿವಾಸಿಯನ್ನು ಕೂಡಿಕೊಂಡು ಹಿಂದಿನ ದಿನ ತಾವು ತಾಣ ಹೂಡಿದ್ದ ಪೊದೆಯ ಮರಸಿಗೆ ನಡೆದಿದ್ದ. ಪೊದೆಮರಸು ತಲುಪಿದ್ದ. ಕೊಂದ ಆನೆಯ ಮಾಂಸವನ್ನು ತರಲು ತನ್ನ ಅನುಚರರಿಗೆ ಆದೇಶವಿತ್ತು ಮರದ ಅರಣಿಗಳಿಂದ ಕಟಿಗೋಲು ಮಥಿಸಿ ಬೆಂಕಿಯನ್ನು ಮಾಡಲು ಉಪಕ್ರಮಿಸಿದ್ದ.

*

ಗೆಲೋ ಗೆಲೋ ಕಾಫುಂಡೆ ಪೂರ್ವ ಕೆನ್ಯಾ ಭೂಭಾಗದ ವ್ಯವಸಾಯ ಪಶುಸಂಗೋಪನ ಅಥವಾ ಕುಶಲ ಕೆಲಸಗಳು ಇವು ಯಾವುದನ್ನೂ ಕೈಗೊಳ್ಳದೆ ಬೇಟೆಯನ್ನೇ ಜೀವನವಿಧಾನವನ್ನಾಗಿ ಆಧರಿಸಿದ್ದ ಲಿಯಾಂಗುಲು ಬುಡಕಟ್ಟಿನವನಾಗಿದ್ದ. ಲಿಯಾಂಗುಲು ಎಂದರೆ ಮಾಂಸ ಭಕ್ಷಕ ಎಂದೇ ಅರ್ಥ. ಕಾಡ ಗರ್ಭದಲ್ಲಿ ಜನಿಸಿ, ಕಾಡು ಪ್ರಾಣಿಗಳೊಡನೆ ಸದಾ ಸೆಣಸುತ್ತಾ ಬಾಳುತ್ತಿದ್ದ ಲಿಯಾಂಗುಲುಗಳು ಎಲ್ಲಾ ಮೃಗಗಳನ್ನೂ ಕೊಲ್ಲುತ್ತಿದ್ದರೂ ಆನೆಯನ್ನೇ ತಮ್ಮ ಬುಡಕಟ್ಟಿನ ಪ್ರತಿಷ್ಠಿತ ಬೇಟೆಯನ್ನಾಗಿ ಮಾಡಿಕೊಂಡಿದ್ದರು. ಬೇಸಿಗೆಯಲ್ಲಿ ನೀರ ತಾಣಗಳ ಬಳಿ, ಮಳೆಗಾಲದಲ್ಲಿ ಅನಂತವೆಂಬಷ್ಟು ವಿಶಾಲವಾದ ಕಾಡಿನಲ್ಲಿ ಸ್ವಾದಿಷ್ಟವಾದ ಮೇವಿಗಾಗಿ, ಹಣ್ಣಿಗಾಗಿ ಎಲ್ಲೆಂದರೆ ಅಲ್ಲಿ ಚಲಿಸುವ ಆನೆಯೇ ಮುಂತಾದ ಪ್ರಾಣಿಗಳ ಚಲನಕ್ರಮ ಹಾಗೂ ಜೀವನಕ್ರಮಗಳನ್ನು ಅಭ್ಯಸಿಸಿ, ಅವುಗಳ ಹಿಂದೆಯೇ ಚಲಿಸುತ್ತಾ, ಪ್ರಾಣಿಯೊಂದನ್ನು ಅದರಲ್ಲೂ ಹೆಚ್ಚಾಗಿ



"ಈ ಚಪ್ಪಡಿ ಎತ್ತುತ್ತಿದ್ದ ಹಾಗೇ ಕೋರ್ಟಿನಿಂದ ಸ್ಟೇ ಬಂತು. ಅದಕ್ಕೇ ಕೆಲಸ ಅಲ್ಲಿಗೇ ನಿಂತು ಹೋಯಿತು."

ಆನೆಯೊಂದನ್ನು ಕೊಂದು ಅದರ ಮಾಂಸವನ್ನು ಉಂಡು ಮುಗಿಸುವವರೆಗೆ ಸಣಿಕದ ಪೊದೆಯೊಂದರಲ್ಲಿ ಸಂಸಾರ ಸಮೇತ ಠಾಣ ಹೂಡಿ ಜೀವಿಸುತ್ತಿದ್ದ ಲಿಯಾಂಗುಲುಗಳ ಜೀವನಕ್ರಮ ಸುಲಭದ್ದಾಗಿರಲಿಲ್ಲ.

ಕಾಡು ಪ್ರಾಣಿಗಳಷ್ಟೇ ಅಲ್ಲದೆ ಅರಣ್ಯವೂ ತನ್ನ ಬಲಿಯನ್ನು ತೆಗೆದುಕೊಳ್ಳುತ್ತಿದ್ದಿತು. ಲಿಯಾಂಗುಲುಗಳು ವಾಸಿಸುವ ಈಗ ಪೂರ್ವ ಟ್ಸಾವೋ ಎಂದು ಕರೆಯಿಸಿಕೊಳ್ಳುವ ಕಾಡು ಭೂಭಾಗ ಪಶ್ಚಿಮ ಟ್ಸಾವೋದಂತೆ ಮೇಲ್ಮೈ ವೈವಿಧ್ಯವಿದ್ದು ಜಲಸಮೃದ್ಧವಾಗಿ ನೋಟಕರ ಕಣ್ತಣಿಸುವ ಒಂದೇ ಭಾಗವಾಗಿರಲಿಲ್ಲ. ಪೂರ್ವ ಟ್ಸಾವೋ ಬಹು ಮಟ್ಟಸವಾದ ನಾಡು. ಮಾರ್ಗದರ್ಶಿಯಂತೆ ಅಲ್ಲೊಂದು ಇಲ್ಲೊಂದು ಭೂತದಂತೆ ಬೆಳೆದು ನಿಲ್ಲುವ ಕೆಲವೇ ಭಾರಿ ಜಾತಿಯ ಮರಗಳನ್ನು ಬಿಟ್ಟರೆ ಬರಿಯ ಪೊದೆ, ಗಿಡ, ಬಳ್ಳಿಗಳ ಗೋಂಡಾರಣ್ಯ. ಅನಂತವೆನಿಸುವಂತೆ ಹರಡಿರುವ ಆ ಗೋಂಡಾರಣ್ಯದಲ್ಲಿ ಪ್ರಾದೇಶಿಕ ಸೂಕ್ಷ್ಮವರಿತು ನಡೆಯುವ ನಿಶಿತಮತಿಯುಳ್ಳವ ಎಂಥ ನುರಿತ ಬೇಟೆಗಾರರೂ ಹಾದಿ ತಪ್ಪಿ ನೀರಿಗಾಗಿ ಅಲೆದಲೆದು ದಿಕ್ಕೆಟ್ಟು ಸಾವನ್ನಪ್ಪಿದ ಅನೇಕ ನಿದರ್ಶನಗಳಿವೆ. ಬೇಸಿಗೆಯಲ್ಲಂತೂ ಎತ್ತ ನೋಡಿದರೂ ಬಿಸಿಲಿನಲ್ಲಿ ಒಣಗೊಣಗಿ ಬಿರಿದು ನಿಂತ ಕೆಂಭೂಮಿ; ಬಿಕೋ ಎನ್ನುವ ಪುತ್ತಗಳು. ಮೈಯೆಲ್ಲಾ ಕೆಂಧೂಳಿನ ಲೇಪವನ್ನು ಹಚ್ಚಿಕೊಂಡು ಮಳೆಗಾಗಿ ಬಾಯಿ ಬಿಟ್ಟು ನಿಂತ ಬಡಕಲ ಮರ, ಗಿಡ, ಪೊದೆಗಳು. ಬತ್ತಹೋದ ತೊರೆಗಳ ಜಾರು. ಆ ಜಾರಿನಲ್ಲಿ ಅಲ್ಲೇ ಸಾದಾ ನೀರು ಹರಿಯುವ ಪಶ್ಚಿಮಕ್ಕಿದ್ದ ಅಥಿ ಇಲ್ಲ ದಕ್ಷಿಣಕ್ಕಿದ್ದ ಗಲಾನೋ ನದಿಗಳತ್ತ ವಲಸೆ ಹೋಗುವ ಮುನ್ನ ನೀರಿಗಾಗಿ ಆನೆಗಳು ತೋಡಿದ್ದ ಸೊಂಟ ಮಟ್ಟದ ಹಳ್ಳಗಳು; ಅಲ್ಲೋ ಇಲ್ಲೋ ಇರುವ ನೀರ ತಾಣಗಳೆಡೆಗೆ ದಿನಗಟ್ಟಲೆಯೂ ಅಂಡಲೆತ. ಅಪರೂಪದ ಬೇಸಿಗೆಗಳಲ್ಲಿ ಈ ನೀರತಾಣಗಳೂ ಇಂಗಿಹೋದಾಗ ಆ ವನ್ಯಹೃದಯವನ್ನು ಎಲ್ಲ ಜಂತು ಜಾನುವಾರಾದಿಯಾಗಿ ಮನುಷ್ಯರಿಗೂ ನೀರಿಗಾಗಿ ಹಾತೊರೆದು ಅಲೆಯುತ್ತಾ ಒಣಗೊಣಗಿ ಅಸು ನೀಗುವಂತಹ ಘೋರ ಸಾವು. ಹಾಗೆ ನೀರೆಣಿಕೆಯಲ್ಲಿ ತಪ್ಪು ಮಾಡಿ ನದೀತೀರಕ್ಕೆ ಸಾಗದೆ ನಿಂತ ಮೃಗಗಳು ಸಿಗದ ನೀರಿಗಾಗಿ ಅಲೆದಲೆದು ಇಂಗಿಹೋದ ತಾಣಗಳೆಡೆ ನೂರರ ಸಂಖ್ಯೆಯಲ್ಲಿ ಸತ್ತಿದ್ದ ಅನೇಕ ನಿದರ್ಶನಗಳಿವೆ. ಒಮ್ಮೆ ಗುಂಪುಬೇಟೆಯ ಅವಧಿಯಲ್ಲಿ ಮೂವತ್ತೆರಡು ಜನ ಬೇಟೆಗಾರರು ದಿನದಿನಕ್ಕೆ ಉಗ್ರವಾಗುತ್ತಾ ನಡೆದ ಬೇಸಿಗೆಯಲ್ಲಿ ತಮಗೆ ಪರಿಚಯವಿದ್ದ ನೀರ ತಾಣದಲ್ಲಿ ಇನ್ನೂ ನೀರು ದೊರಕಲಿದೆಯೆಂಬ ತಪ್ಪೆಣಿಕೆಯಿಂದ ಬೇಟೆಯಾಡುತ್ತಾ ಮುಂದೆ ಮುಂದೆ ನಡೆದರು. ಪರಿಚಿತ ತಾಣದಲ್ಲಿ ನೀರು ಸಿಗದ ಅವರು ನೀರಿಗಾಗಿ ತಡಕಿ ಕಂಗಾಲಾಗಿ ಅಲ್ಲಿಗೆ ಮೂರು ದಿನದ ನಡೆ ದೂರದಲ್ಲಿದ್ದ ನೀರ ತಾಣದತ್ತ ಹೋಗಿ ಹೋಗಿ ಸಾಗದೆ ದಾಹ ಬಳಲಿಕೆಗಳಿಂದ ವಿವೇಕ ನೀಗಿಕೊಂಡು ಹುಚ್ಚೆದ್ದು ಒಬ್ಬನ ಹೊರತು ಮಿಕ್ಕೆಲ್ಲರೂ ಸತ್ತಿದ್ದ ಘೋರ ನಿದರ್ಶನವಿದೆ.

ಬೇಸಿಗೆಯಲ್ಲಿ ಬೆಂಗಾಡಾಗಿ ಬಿಡುವ ಈ ಕಾಡು; ಮಳೆ ಬಂತೋ ಎತ್ತ ನೋಡಿದರೂ ಕೆಸರಾಗಿ ಜವುಗಾಗಿ ಹಸಿರನ್ನು, ಪ್ರಾಣಿ ವೈವಿಧ್ಯವನ್ನು ಮೆರೆಸುವ ಬೆಡಗಿನ ಬೀಡಾಗಿ ಬಿಡುತ್ತದೆ. ಪ್ರತಿ ಪೊದೆಗೂ ವಸಂತನ ಆಗಮನವಾಗಿ ಅರಳುವ ಸಾವಿರ ಬಗೆಯ ಹೂಗಳಿಗೆ ಬಿಡುವ ನೂರು ಬಗೆಯ ಸೊಪ್ಪಿಗೆ ಹಣ್ಣಿಗೆ ಭೃಂಗಗಳಿಂದ ಆನೆಗಳವರೆವಿಗೂ ಪ್ರಾಣಿಗಳ ಹಿಂಡು ಹಿಂಡೇ ವಲಸೆ ಬಂದುಬಿಡುತ್ತದೆ; ನಾನಾ ಬಗೆಯ ಫಲ- ಪುಷ್ಪಗಳಿಂದ, ನಾನಾ ಬಗೆಯ ಪ್ರಾಣಿಗಳಿಂದ ಕಾಡು ಜೀವಂತವಾಗಿ ಬಿಡುತ್ತದೆ.

ಇಂತಹ ಕಾಡಿನ ಅಂಚಿನ ಐದಾರು ನೆಲೆಗಳಲ್ಲಿ ಸುಮಾರು ಸಾವಿರ ಜನಬಲವಿರುವ ಲಿಯಾಂಗುಲುಗಳು ಮತ್ತು ಬೋಪಾನವೀರರಂತೆ ದೂರದಾಶ್ರಯದಿಂದ ಗುಂಡು ಹೊಡೆದು, ಇಲ್ಲ ಮರುಕೊಲು ಅಥವಾ ಕಂದಕದ ಬೇಟೆಯಾಡದೆ ಪ್ರಾಣಿಗಳ ಬೆನ್ನಟ್ಟಿ ಹೋಗಿ ಬರಿದೆ ಬಿಲ್ಲು ಬಾಣಗಳಿಂದ ಬೇಟೆಯಾಡುವ ಅವರ ನೂರು ಬಲದ ಬೇಟೆಗಾರರು, ಅವರಿಗೇ ಅಸಾಧ್ಯರೆನಿಸಿಕೊಂಡ ಸುಮಾರು ಹತ್ತೊಂಭತ್ತು ಜನ ಬೇಟೆಗಾರ ವೀರರು ದುಂಡು ಗುಡಿಸಲುಗಳಲ್ಲಿ ವಾಸಿ-

ಸುತ್ತಾ ಬಾಳುತ್ತಿದ್ದರು.

*

ಈ ಸಲದ ಬೇಟೆಯ ಯಾತ್ರೆ ಆರಂಭವಾದ ವಾರದೊಳಗೇ ಇಪ್ಪತ್ತೊಂದು ಆನೆ, ಒಂದು ಘೇಂಡಾಮೃಗ ಒಂದು ಜಿರಾಫೆಯನ್ನು ಕೆಡವು ಉರುಳಿಸಿದ್ದ ಸಮಾಧಾನ ಕಾಫುಂಡೆಗಿದ್ದರೂ, ಆನೆಯ ಮಾಂಸವನ್ನು ತರ ಹೇಳಿ ಅರಣಿಯ ಕಡೆಗೋಲಿನಿಂದ ಬೆಂಕಿ ಮಾಡುತ್ತಿದ್ದ ಅವನ ಚಿತ್ತ ಕ್ಷೋಭೆಗೊಂಡಿದ್ದಿತು. ಅನಾದಿಕಾಲದಿಂದಲೂ ಬುಡಕಟ್ಟಿನ ಜೀವನವಿಧಾನವಾಗಿದ್ದ ಕಾಡಿನ ಅಂಡಲೆತ ಹಾಗೂ ಬೃಹತ್ ಬೇಟೆಯಾದ ಆನೆಯನ್ನೇ ರೈಫಲ್ಲುಗಳನ್ನು ಹಿಡಿದು ಹಿಂಬಾಲಕ ತಂಡದವರೊಡಗೂಡಿ ಬರುವ ಬಿಳಿಯ ಬೇಟೆಗಾರ ವೀರರೂ ಅಚ್ಚರಿಪಡುವಂತೆ ಕೇವಲ ಬಿಲ್ಲು ಬಾಣಗಳಿಂದ ಸುಲಭದಲ್ಲಿ ಸುಲಭವೆನ್ನುವಂತೆ ಎದುರಿಸಿ, ಹೊಡೆದು ಕೆಡಹುವ ಬೇಟೆಗಳು ಎಲ್ಲಿಯೋ ಇದ್ದ ಸ್ಕೈರೋಬಿಯ ಸರಕಾರದ ಒಂದು ಆಜ್ಞೆಯಿಂದ ಕಾನೂನುಬಾಹಿರವಾಗಿದೆ. ತನ್ನ ಜನ ಬೇಟೆಯಾಡುತ್ತಿದ್ದ ಬಹುಭಾಗವನ್ನು ಸರಕಾರ ೧-೪-೪೮ ರಿಂದ ಅಭಯಾರಣ್ಯವೆಂದು ಘೋಷಿಸಿ, ಯಾವುದು ಅನಾದಿಕಾಲದಿಂದ ತಮ್ಮ ಬುಡಕಟ್ಟಿನ ಆಧಾರವಾಗಿತ್ತೋ, ಯಾವುದರಲ್ಲಿ ಶ್ರೇಷ್ಠತೆಯನ್ನು ಪಡೆದರೆ ಬುಡಕಟ್ಟಿನ ಕಲಿಯೆಂದು ಒಟ್ಟು ಜನವೇ ಹೆಮ್ಮೆಯಿಂದ ಘೋಷಿಸಿಕೊಳ್ಳುತ್ತಿತ್ತೋ ಅಂತಹ ಬೇಟೆಯನ್ನು ಕಾನೂನುಬಾಹಿರವೆಂದು ಕರೆದು, ತಮ್ಮಂತಹ ಬೇಟೆಗಾರರಿಗೆ ಬೇಟೆಗಳ್ಳರೆಂದು ಹೆಸರಿರಿಸಿ ಕಳ್ಳರಂತೆ ಜೈಲಿಗೆ ಕಳುಹಿಸಲು ಸರಕಾರದ ತರದೂದು ನಡೆಯುಸುತ್ತಿದೆ. ಕಾಡ ಬಾಳ ಹೊರತು ಅನ್ಯ ಬಾಳೂ ಕಾಣದ ತನ್ನ ಜನರ ರೀತಿನೀತಿಗಳನ್ನು ಅರಿಯದ ಬಿಳಿಯ ಅಧಿಕಾರಿಗಳನ್ನು ಸರಕಾರ ದೊಡ್ಡ ಪಟ್ಟಣಗಳಲ್ಲಿ ಕೂರಿಸಿ ತನ್ನ ಜನನನ್ನೇ ಪುಸಲಾಯಿಸಿ ತನ್ನಂತಹ ಆನೇಕ ಬೇಟೆಗಾರರನ್ನು ಬಂಧಿಸಿದೆ. ತಾನು ತಿರುಗುವ ದಾರಿಯನ್ನು ಹೇಗೋ ಪತ್ತೆ ಹಿಡಿದು ದೊರಕಿಸಿದಾಕ್ಷಣ ತನ್ನನ್ನು ಜೈಲಿಗೆ ಕಳುಹಿಸುವ ಸನ್ನಾಹದಲ್ಲಿದೆ. ಹಾಗೆ ಮಾಡಿ ಎಂದೂ ಯಾರಿಗೂ ತಲೆಬಾಗಿಸದ ತನ್ನನ್ನು ತಲೆ ತಪ್ಪಿಸಿ ತಿರುಗುವಂತೆ ಮಾಡಿದೆ. ಹಾಗೆ ಮಾಡಿ ಮೂರು ಹೆಂಡಿರು ಅನೇಕ ಮಕ್ಕಳು ನಾಲ್ಕೆಂಟು ಸ್ವಂತ ಗುಡ್ಡಗಳಿದ್ದು ಆಗಾಗ ಬರುವ ಪಶುಮನ್ನರಿಗೆ ತಾನು ಕೆಡವಿ ಉರುಳಿಸಿ ಆನೆ ದಂತಗಳನ್ನು ಮಾರಿ ಸಂಪಾದಿಸುವ ದುಡ್ಡಿದ್ದು ಬುಡಕಟ್ಟಿಗೇ ಬೇಟೆಗಾರ ಕಲಿಯೆಂಬ ಹೆಸರು ಹೊತ್ತಿದ್ದರೂ, ಯಾವಾಗ ಏನೋ ಎಂದು ಅರಿಯದ ತನ್ನ ಜನ ಬಿಳಿಯ ಅಧಿಕಾರಿ ಬಂದು ದಬಾಯಿಸಿದರೆ ತಾನು ಗೋಪ್ಯವಾಗಿ ಮಲಗುವ ತಾಣವನ್ನು ಹೇಳಿಬಿಟ್ಟಾರು ಎಂಬ ಭಯದಿಂದ ತನ್ನ ಯಾವ ಗುಡಿಸಲಿನಲ್ಲೂ ಮಲಗದೆ ಕಾಡ ಪೊದೆಯೊಂದನ್ನು ಹೊಕ್ಕು ಕಾಡ ಪ್ರಾಣಿಯಂತೆ ಮುದುರಿ ಮಲಗುವಂತೆ ಮಾಡಿದೆ. ಬೇಟೆಗಾರ ವೀರನೆನಿಸಿಕೊಂಡ ತನ್ನದು ಎಂಥ ದುರ್ಭರ ಜೀವನ!

ಒಂದು ಸಲ ಗುಡಿಸಿಲಿನಲ್ಲೇ ಅಕಸ್ಮಾತ್ ಸಿಕ್ಕಿಕೊಂಡಿದ್ದ ಕಾಫುಂಡೆ ದಂತಚೋರರ ಮೂಲವನ್ನು ತೋರಿಸುವ ನೆಪದಲ್ಲಿ ಅರಣ್ಯಾಧಿಕಾರಿಗಳನ್ನು ಕತ್ತಲಾಗುವವರೆಗೂ ಕಾಡಿನಲ್ಲಿ ಸುತ್ತಿಸಿ ಕತ್ತಲ ನೆರಳಿನಲ್ಲಿ ಕೈಕೋಳಗಳಿಂದ ಮುಕ್ತನಾಗಿ ಜಾರಿಕೊಂಡಿದ್ದ. ಮಗುದೊಂದು ಸಲ ಅರಣ್ಯಾಧಿಕಾರಿಗಳು ಮಧ್ಯರಾತ್ರಿಯೇ ಬಂದು ತನ್ನ ಗುಡಿಸಲುಗಳ ಸುತ್ತಾ ಅಡಗಿ ಕುಳಿತು ತನ್ನ ಬರುವಿಗಾಗಿ ಕಾಯುತ್ತಿದ್ದಾರೆ ಎಂಬುದನ್ನರಿಯದೆ ಪೊದೆಯೊಂದರಲ್ಲಿ ಮಲಗಿದ್ದವ ಎದ್ದು ಗುಡಿಸಲೆಡೆಗೆ ಬರುತ್ತಿದ್ದಾಗ ತನ್ನ ನಾಯಿಯ ವಿಚಿತ್ರ ವರ್ತನೆಯನ್ನು ಅಕಸ್ಮಾತ್ ಗಮನಿಸಿ ಪೊದೆ ಸೇರಿ ಬಚಾವಾಗಿದ್ದ. ಆದರೆ ದಿನ ಕಳೆದಂತೆ ಸರಕಾರದ ತರದೂದು ಹೆಚ್ಚುತ್ತಿದೆ. ಸರಕಾರ ಎಲ್ಲೆಲ್ಲೂ ಬೇಟೆಗಾರರನ್ನು ಹಿಡಿದು ಜೈಲಿಗೆ ಕಳುಹಿಸುತ್ತಿರುವ ಸರಕಾರದ ತರದೂದಿನಿಂದ ತಪ್ಪಿಸಿಕೊಳ್ಳಲಾಗದೆ ತಾವೇ ಶರಣಾದ ಬೇಟೆಗಾರ ಸುದ್ದಿಗಳೇ ಕಾಫುಂಡೆಯ ಕಿವಿಗೆ ಬಂದು ಅವನನ್ನು ಅಧೀರನನ್ನಾಗಿ ಮಾಡುತ್ತಿದೆ. ಆನೆಯೊಡನೆ ಸೆಣಸಬಹುದು; ನೀರು ಸಿಕ್ಕದ ಬೆಂಗಾಡಿನಲ್ಲೂ ಬದುಕಬಹುದು; ಆದರೆ ತನ್ನ ಚಲನವಲನಗಳನ್ನು ತನ್ನವರಿಂದಲೇ ತಿಳಿದು

ಕಟ್ಟಿಟ್ಟಿರುವ ಸರಕಾರದ ದೀರ್ಘ ಹಸ್ತ-ದಿಂದ ಬಚಾವಾಗಲು ಸಾಧ್ಯವೇ? ಎಂಬ ಚಿಂತೆ ಅವನನ್ನು ಕಾಡುತ್ತಿದೆ. ಈ ಸಲದ ಬೇಟೆಗೆ ಹೊರಟುನಿಂತಾಗ ತನ್ನ ಜನರೇ, ಶರಣಾಗುವುದೇ ಲೇಸು ಹಾಗೆ ಶರಣಾದರೆ ಸರಕಾರೀ ಅಧಿಕಾರಿಗಳು ಕನಿಕರ ತೋರಿಸುತ್ತಾ-ರೆಂದೂ ಹಾಗೆಂದು ಅರಣ್ಯಾಧಿಕಾರಿಗಳೇ ಹೇಳಿ ಕಳುಹಿಸಿದ್ದಾರೆಂದೂ ತಿಳಿಸಿದ್ದುದು ಕಾಫುಂಡೆಯ ಚಿತ್ತವನ್ನು ಬಹಳವಾಗಿ ಕಲಕಿತ್ತು.

ಹೊಟ್ಟೆಗಾಗಿ ಬೇಟೆಯಾಡುತ್ತಿದ್ದ ತನ್ನ ಜನ ಆನೆಯ ದಂತಕ್ಕೂ ಬೆಲೆಯಿದೆ ಎಂದು ಅರಿತ ದಿನದಿಂದ ಆನೆಗಳನ್ನು ಸಹಸ್ರ ಸಂಖ್ಯೆಯಲ್ಲಿ ಕೊಲ್ಲುತ್ತಿದೆ. ಕೊಂದು ದಂತವನ್ನು ಕಡಿದು ತೆಗೆದುಕೊಂಡು ಆನೆಯ ಕಳೇಬರವನ್ನು ಕಾಡು-ಪಾಲು ಮಾಡುತ್ತಿದೆ. ಹೀಗೆ ಕಾಡುಪಾಲಾದ ಆನೆಯ ಕಳೇಬರಗಳಿಗೆ ದಾಳಿಯಿಕ್ಕುವ ರಣ-ಹದ್ದುಗಳ ಸಂಖ್ಯೆ ಆಕಾಶವೇ ಕಪ್ಪಾಗುವಷ್ಟು ಬೆಳೆದಿದೆ. ಆನೆಗಳು ಹೆಚ್ಚು ಸಂಖ್ಯೆಯಲ್ಲಿರುವ ಕೆಲವು ಬೀಡುಗಳಲ್ಲಂತೂ ಆನೆಗಳ ಸಮಾಧಿ ನಾಡು ಎಂದು ಕರೆಯುವಷ್ಟು ಮಟ್ಟಕ್ಕೆ ಆನೆಗಳ ಹತ್ಯೆ ನಡೆದಿದೆ. ದಂತದ ಬೆಲೆಯಾಸೆ-ಯಿಂದ ತನ್ನವರೇ ಅನೇಕರು ಪಟ್ಟಣಗಳಲ್ಲಿ ವಾಸಿಸುವ ಏಷಿಯನ್ ವರ್ತಕರ ಮಧ್ಯವರ್ತಿ ಕೆಲಸ ಮಾಡಿ ಆ ಕೈ ಈ ಕೈ ಬದಲಾಯಿಸುವ ಕಾರ್ಯದಲ್ಲಿ ತೊಡಗಿ, ಬೇಟೆಗಾರ ತಂದ ದಂತವನ್ನು ಸಾಗಿಸುತ್ತಾರೆ. ಮೊಂಬಾಸಾ, ಕಲೀಫಾ, ಮಾಲಿಂದಿಗಳಲ್ಲಿ ವಾಸಿಸುವ ಈ ಏಷಿಯನ್ನರೋ ತಮ್ಮಿಂದ ಕೊಂಡ ದಂತವನ್ನು ಕತ್ತರಿಸಿ ನಾಜೂಕು ಮಾಡಿ ತಾವು ಕೊಡುವ ಬೆಲೆಯ ಬಹು ಪಟ್ಟು ಬೆಲೆಗೆ ಮಾರಿ ಪ್ರಪಂಚದ ನಾಗರಿಕರ ದಂತಪಿಪಾಸೆಯನ್ನು ತಣಿಸುತ್ತಾರೆ. ವರ್ಷ ವರ್ಷವೂ ಬೆಳೆಯುತ್ತಾ ನಡೆಯುತ್ತಿ-ರುವ ಈ ಉದ್ಯಮದಿಂದ ಕುಲವೇ ನಾಶ-ವಾಗುವ ಕಾಲ ಬಂದಿದೆ. ಇದು ಸಲ್ಲದು. ಈ ವಾದವನ್ನು ಕಾಫುಂಡೆ ಕೇಳಿ ಬಲ್ಲ. ಆದರೆ ಸರಳಜೀವಿಯಾದ ಅವನಿಗೆ ತನ್ನ ಉಗ್ರಾಣ-ದಲ್ಲಿದ್ದ ದಂತವನ್ನು ಸರಕಾರವು ಮಾರುವಾಗ, ಸರಕಾರದ ರಹದಾರಿ ಹೊತ್ತ ಬಿಳಿಯ ಬೇಟೆಗಾರ ಆನೆಗಳನ್ನು ಹೊಡೆಯುವ ಅನುಮತಿಯನ್ನು ಪಡೆದುಕೊಳ್ಳುವಾಗ, ಅಲ್ಲೇ ಇದ್ದ ತಾನೇಕೆ ಬೇಟೆಯಾಡಕೂಡದು ಎಂಬುದು ಸ್ಪಷ್ಟ-ವಾಗಿರಲಿಲ್ಲ. ದೇವರ ಸೃಷ್ಟಿಯಾದ ಕಾಡಿಗೂ ಎಲ್ಲೆಯುಂಟೆ? ಎಲ್ಲೆಂದರೆ ಅಲ್ಲಿ ಅಲೆಯುವ ಪ್ರಾಣಿಗಳನ್ನು ಬೇಟೆಯಾಡುವ ತಾವು ಚೋರರೇ? ಸರಕಾರದ ಅನುಮತಿ ದೊರೆತರೆ ಮಾತ್ರ ತಾವು ಚೋರರಲ್ಲವೇ? ಇದೆಂಥ ವಿಚಿತ್ರ ನೀತಿ?

ಈಗ, ಮರದ ಅರಣಿಯ ಕಡೆಗೋಲಿನಲ್ಲಿ ಬೆಂಕಿ ಮಾಡುತ್ತಾ ಚಿಂತಿಸುತ್ತಿದ್ದ ಕಾಫುಂಡೆ ಹಠಾತ್ತನೆ ಸರಕಾರಕ್ಕೆ ಶರಣಾಗುವುದೆಂದು ನಿರ್ಧರಿಸಿ,ಅಟ್ಟಿಟ್ಟ ಮಾಂಸವುಂಡು, ಮಾಲಿಂದಿಗೆ ನಡೆದು ತನ್ನನ್ನು ಬೆರಗಿನಿಂದ ನೋಡುತ್ತಿದ್ದ ಬಿಳಿಯ ಅರಣ್ಯಾಧಿಕಾರಿಗೆ ಶರಣಾಗಿದ್ದ. ಹಾಗೆ ಶರಣಾದ ಕಾಫುಂಡೆ ಅಧಿಕಾರಿಗಳೇ ಸೋಜಿಗ ಪಟ್ಟುಕೊಳ್ಳುವಷ್ಟು ದಿಟ್ಟತನದಿಂದ ತನ್ನ ಬೇಟೆಯ ಚರಿತ್ರೆಯನ್ನು ಹೇಳಿಕೊಂಡಿದ್ದ. ತನ್ನ ಬೇಟೆಯ ಸಮಸ್ತ ವಿವರವನ್ನು ಹೇಳಿ-ಕೊಳ್ಳುವುದು ಅವನಿಗೆ ಹೆಮ್ಮೆಯ ವಿಷಯ-ವಾಗಿತ್ತು. ಏಕೆಂದರೆ ಸರಳನಾದ ಅವನು ಸರಕಾರ ಬಗೆದಂತೆ ತಾನು ಬೇಟೆಗಳ್ಳನೆಂದು ಕನಸಿನಲ್ಲಿಯೂ ಭಾವಿಸಿರಲಿಲ್ಲ. ಅದಕ್ಕೂ ಮಿಗಿಲಾಗಿ ಶರಣಾದ ಮೇಲೆ ತನ್ನ ಸಕಲ ನೆರವನ್ನೂ ಸರಕಾರಕ್ಕೆ ಕೊಡುವುದು ತನ್ನ ಕರ್ತವ್ಯವೆಂದೇ ಅವನ ಭಾವನೆಯಾಗಿತ್ತು.

ಹೌದು, ತಾನು ಸುಮಾರು ಹದಿನೈದು ವರ್ಷದ ಹುಡುಗನಾಗಿದ್ದಾಗಿನಿಂದ ಆನೆ ಬೇಟೆ ಯಾಡುತ್ತಾ ಬಂದಿದ್ದೇನೆ. ಬೇಟೆಗಾರ ವೀರನ ಪಟ್ಟಕ್ಕೆ ಬರಲು ಹತ್ತು ವರ್ಷ ಬೇಕಾಯಿತು. ನಂತರ ವರ್ಷಕ್ಕೆ ಐವತ್ತರಿಂದ ನೂರು ಆನೆ-ಗಳನ್ನು ಕೊಲ್ಲುತ್ತಾ ಬಂದಿದ್ದೇನೆ. ಈಗ ತನ್ನ ವಯಸ್ಸು ಸಲಪತ್ತೈದು. ಎಂದರೆ ನಿಮ್ಮ ಲೆಕ್ಕದ ಪ್ರಕಾರ ಸಾವಿರದ ಐನೂರಕ್ಕೆ ಕಡಿಮೆ ಯಿಲ್ಲದಷ್ಟು ಆನೆಗಳನ್ನು ಕೊಂದಿದ್ದೇನೆ. ಮಿಕ್ಕ ಮೃಗಗಳನ್ನಂತೂ ಲೆಕ್ಕವಿಲ್ಲದಷ್ಟು ಬೇಟೆಯಾಡಿ ದ್ದೇನೆ. ಇದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ, ಅಂಥ ಉತ್ಪ್ರೇಕ್ಷೆ ಬೇಟೆಗಾರ ವೀರನಾದ

ತನ್ನಂಥವನಿಗೆ ಸಲ್ಲದು.

ಅಧಿಕಾರಿಗಳ ಬೇಡಿಕೆಯಂತೆ ತಾನು ಜೈಲಿಗೆ ಹೋಗಲಿದ್ದೇನೆಂದು ಅರಿವಿದ್ದೂ ಮೊಕದ್ದಮೆಯೊಂದರಲ್ಲಿ ಸರಕಾರದ ಪರವಾಗಿ ಸಾಕ್ಷಿ ನುಡಿಯುತ್ತಾ, ಲಾಯರು, "ದಂತಗಳು ನೀನು ಕೊಂದ ಆನೆಯದೇ ಎಂದು ಹೇಗೆ ಹೇಳುವೆ?" ಎಂದು ಪ್ರಶ್ನಿಸಿದ್ದಕ್ಕೆ ಉತ್ತರಿಸಿದ್ದ: "ಅಯ್ಯೋ ದೇವರೇ ನನಗೆ ಗೊತ್ತಿರಲೇಬೇಕು."

"ಹೇಗೆ ಗೊತ್ತಿರಲೇಬೇಕು ?"

"ಹೇಗೆಂದರೆ ನನ್ನವು ಹೆಣ್ಣಾನೆಯ ದಂತಗಳು. ಅವು ಸಲಗದ ದಂತಗಳು. ಆ ಹೆಣ್ಣಾನೆಯನ್ನು ನಾನು ಕೊಂದೆ. ಕೊಂದು ದಂತಗಳನ್ನು ನನ್ನ ಕೈಯಾರೆ ಕೊಯ್ದು ತುದಿ ಬುಡಗಳನ್ನು ಕತ್ತರಿಸಿದೆ. ನನಗೆ ಗೊತ್ತಾಗದೆ ಉಂಟೆ ?"

ಕಾಪುಂಡೆಯ ಪರಿಶ್ರಮವನ್ನು ಅರಿತಿದ್ದೂ ಅವನ ಒಳ್ಳೆಯನ್ನು ಕೆಣಕಿ ಅವನ ಸಮತೋಲವನ್ನು ತಪ್ಪಿಸಲು ಲಾಯರು ಈ ಪ್ರಶ್ನೆಯನ್ನು ಕೇಳಿದ್ದರು.

"ನೀನು ದೊಡ್ಡ ಹೆಸರುಳ್ಳ ಬಹು ಪ್ರತಿಷ್ಠಿತ ಬೇಟೆಗಾರ. ನಿಜವಾಗಿ ನೀನು ಬೇಟೆಗಾರ ವೀರರ ವೀರ ಅಲ್ಲವೇ ?" ಈ ರೀತಿಯ ಅಣಕಾಟಗಳು ಸಭ್ಯ ಸರಳನಾದ ಕಾಪುಂಡೆಯ ಬುದ್ಧಿತೋಲನವನ್ನು ತಪ್ಪಿಸಿರಲಿಲ್ಲ. ಗೆಲೋ ಗೆಲೋ: ಕಾಪುಂಡೆ ತನ್ನನ್ನು ಪ್ರಶ್ನಿಸಿದ್ದ ಲಾಯರನ್ನು ಅರ್ಧಕ್ಷಣ ನಿರ್ಲಕ್ಷ್ಯದಿಂದ ನೋಡಿ, ನಂತರ ಮೇಲ್ಛಾವಣಿಯತ್ತ ಆಲೋಚನಾಮಗ್ನನಾಗಿ ದಿಟ್ಟಿಸಿದ್ದ. ತುಸು ಹೊತ್ತು ಚಿಂತಿಸಿ ಆತ್ಮವಿಶ್ವಾಸದಿಂದ ಉತ್ತರಿಸಿದ್ದ: "ಹೌದು. ನೀವು ಹೇಳುವುದು ನಿಜ. ನಾನು ಬೆಟೆಗಾರ ವೀರರ ವೀರ."

ವನ್ಯಜೀವನ ರಕ್ಷಣೆ ಮಾಡುವ ಮಹಾ ಕಾರ್ಯಭಾರದ ರಭಸದಲ್ಲಿ ಪಲ ಕೆಲವು ಭೂಭಾಗಗಳನ್ನು ಅಭಯಾರಣ್ಯವೆಂದು ಘೋಷಿಸಿತಕ್ಕ ಕಾನೂನು ಮಾಡಿ, ಕಾಪುಂಡೆಯನ್ನೂ ಅವನ ಅನುಚರರನ್ನೂ ಜೈಲಿಗೆ ಕಳುಹಿಸಿ ಅವರನ್ನು ಬೇಟೆಯಾಡದಂತೆ ಮಾಡಿದ್ದ ಸರಕಾರ ಮುಂದೆ ವಿಚಿತ್ರ ಪರಿಸ್ಥಿತಿಯನ್ನು ಎದುರಿಸಿತು. ನಿಜ, ದಂತ ತರುವ ದುಡ್ಡಿನಾಸೆಯಿಂದ ಲಿಯಾಂಗುಲುಗಳು ಬೇಟೆಯನ್ನು ಅತಿಯಾಗಿ ಆಡಿರಬಹುದು. ಆದರೆ ಜಿಂಕೆಗೆ ಕಾಡನಾಯಿಯಂತೆ ಕಾಡನಾಯಿಗೆ ಚಿರತೆಯಂತೆ ಆನೆಯ ಸಂಖ್ಯೆಯನ್ನು ಅಂಕೆಯಲ್ಲಿಡಲು ಸಮರ್ಥರಾಗಿದ್ದ ಲಿಯಾಂಗುಲುಗಳಿಲ್ಲದೆ ಒಟ್ಟು ಕಾಡಿನಲ್ಲೇ ಶತ್ರುಗಳನ್ನು ಕಾಣದೆ ಆನೆಗಳ ಸಂಖ್ಯೆ ತಮ್ಮನ್ನು ಪೋಷಿಸುವ ಕಾಡನ್ನೂ ಹಾಳು ಮಾಡುವಷ್ಟು ಬೆಳೆಯಿತು. ಹೀಗೆ ಸಹಸ್ರ ಸಂಖ್ಯೆಯಲ್ಲಿ ಬೆಳೆದ ಆನೆಗಳನ್ನು ಅಂಕೆಯಲ್ಲಿಡಲು ಸರಕಾರ ಬೇಟೆಯ ರಹದಾರಿಯನ್ನು ಕೊಟ್ಟಿತು. ಇಂಥ ರಹದಾರಿಗೆ ಬೇಕಾಗುವ ದುಡ್ಡನ್ನು ಬಡ ಲಿಯಾಂಗುಲುಗಳು ಎಲ್ಲಿಂದ ತಂದಾರು ? ಹೀಗಾಗಿ ಬೇಟೆ ಬಿಳಿಯರ ಇಲ್ಲವೆ ಸಿರಿವಂತ ಯಾತ್ರಿಕರ ಸ್ವತ್ತಾಯಿತು. ಬೇಟೆಯನ್ನೇ ಜೀವನ ವಿಧಾನವನ್ನಾಗಿ ಅವಲಂಬಿಸಿ ಸುಲಭವಾಗಿ ಬಾಳುತ್ತಿದ್ದ ಲಿಯಾಂಗುಲುಗಳ ಬಾಳನ್ನು ಹದಗೆಡಿಸಿತು. ಬಿಲ್ಲಿನ ಬದಲು ಬಂದೂಕು ಬಂದು, ವರ್ಷಗಟ್ಟಲೆಯ ತರಬೇತಿ ಬೇಕಾದ ಆನೆಬಿಲ್ಲು ಬಿಲ್ಲುಗಾರರಿಲ್ಲದೆ ಮೂಲೆಗುಂಪಾಯಿತು. ಬರಿಯ ಬಿಲ್ಲಿನಿಂದಲೇ ಆನೆಯನ್ನು ಎದುರಿಸುವ ಗಂಡೆದೆಯ ಬೇಟೆ ಹೇಳಹೆಸರಿಲ್ಲವಾಗಿ ಹೋಯಿತು. ✡

ರೋಮ್ ನಗರದಲ್ಲಿ ಒಲಿಂಪಿಕ್ಸ್ ಮುಗಿದಾಗ ಆ ಬಗ್ಗೆ ಎಲ್ಲೆಲ್ಲೂ ಉತ್ಸಾಹ ಉಕ್ಕುತ್ತಲೇಯಿತ್ತು. ಒಂದು ದಿನ ಫಲಾಹಾರದಂಗಡಿಯಲ್ಲಿ ಹಸಿವು ಹಿಂಗುವವರೆಗೂ ತಿಂದ ಐವರು ಯುವಕರಲ್ಲಿ ಹಣ ಯಾರು ಕೊಡಬೇಕೆಂಬ ಚರ್ಚೆ ನಡೆದು ಒಂದು ಕಿಲೋಮೀಟರ್ ಓಡಿ ಅದರಲ್ಲಿ ಗೆದ್ದವನು ಕೊಡುವುದೆಂದು ನಿರ್ಧರಿಸಿದರು. ಸ್ಪರ್ಧೆಯಲ್ಲಿ ತೀರ್ಪುಗಾರನಾಗುವಂತೆ ಆ ಅಂಗಡಿಯ ಮಾಲಕನನ್ನೇ ಕೇಳಿಕೊಂಡು ಒಪ್ಪಿಸಿದರು. ಐವರೂ ಓಡಲು ಸಿದ್ಧರಾಗಿರುವಂತೆಯೇ ಅವನು ಸೀಟಿ ಊದಿದ. ಅವರು ಓಡಿದರು. ಮತ್ತೆಂದೂ ಅವನು ಅವರಲ್ಲೊಬ್ಬನ ಮುಖವನ್ನೂ ನೋಡಲಿಲ್ಲ.

ಜಾತಿಪದ್ಧತಿಯನ್ನು ಕಿತ್ತೊಗೆಯುವುದು ಸಾಧ್ಯವೆ?

ಚಿದಂಬರಾನಂದ

ನಮ್ಮ ದೇಶದಲ್ಲಿ ಜಾತಿಪದ್ಧತಿಯ ಇಷ್ಟಾನಿಷ್ಟಗಳ ಬಗ್ಗೆ ನಡೆದಿರುವ ಚರ್ಚೆ ಇಂದು ನಿನ್ನೆಯದಲ್ಲ. ಹಲವು ಶತಮಾನಗಳಿಂದಲೂ ಇದು ನಡೆದೇ ಇದೆ. ಇದನ್ನು ಕಿತ್ತೊಗೆಯಲು ಹಲವು ಪ್ರಯತ್ನಗಳೂ ಹೊಸ ಪ್ರಯೋಗಗಳೂ ನಡೆದುಹೋಗಿವೆ. ಆದರೂ ಜಾತಿಪದ್ಧತಿಯೂ ಅವರ ಪರಿಣಾಮವಾದ ಜಾತೀಯತೆಯೂ ನಮ್ಮ ದೇಶದಲ್ಲಿ ಇನ್ನೂ ಸಾಕಷ್ಟು ಊರ್ಜಿತದಲ್ಲಿದೆ. ಈ ಜಾತಿಪದ್ಧತಿಯನ್ನು ನಾವು ಈಗ ಕಿತ್ತೊಗೆಯಲು ಸಾಧ್ಯವೇ ಎಂಬುದನ್ನು ವಿಚಾರಿಸುವುದು ಅಗತ್ಯವಾಗಿದೆ.

ಜಾತಿಪದ್ಧತಿಯ ಮೂಲ

ಈ ಪ್ರಶ್ನೆಗೆ ಉತ್ತರ ಕೊಡುವ ಮೊದಲು ಜಾತಿಪದ್ಧತಿಯ ಮೂಲವನ್ನರಿಯುವುದು ಅವಶ್ಯವಾಗಿದೆ.

ಜಾತಿಪದ್ಧತಿಯ ಮೂಲವು ವರ್ಣಪದ್ಧತಿಯಲ್ಲಿದೆ. ವರ್ಣವು ಸಮಾಜದ ರಚನೆಯ (Structure) ಭಾಗವಾಗಿದೆ. ಜಾತಿಯು ಅದರ ಕ್ರಿಯೆ(Function)ಯ ಭಾಗವಾಗಿದೆ.

ಒಂದು ಸುವ್ಯವಸ್ಥಿತವಾದ ಸಮಾಜದ ಅಸ್ತಿತ್ವಕ್ಕೆ ಮುಖ್ಯವಾಗಿ ನಾಲ್ಕು ಅಂಗಗಳು ಬೇಕೇಬೇಕಾಗುತ್ತವೆ. ೧. ಬೌದ್ಧಿಕವರ್ಗ (Intellegentia), ೨, ಆಡಳಿತ ವರ್ಗ (Civil and Military Administration) ೩. ಉತ್ಪಾದನೆ ಮತ್ತು ವ್ಯಾಪಾರ ಮಾಡುವ ವರ್ಗ (Agriculture, Industry and Commerce), ೪, ಶ್ರಮಜೀವಿಗಳ ವರ್ಗ (Labour).

ಇಂದಿನ ವರ್ಗರಹಿತವೆನಿಸಿಕೊಳ್ಳುವ ರಶಿಯಾ, ಚೀನಗಳಲ್ಲಿಯೂ ನಾವು ಈ ಎಲ್ಲ ವರ್ಗಗಳನ್ನು ಕಾಣಬಹುದು.

ಈ ನಾಲ್ಕು ವರ್ಗಗಳನ್ನೇ ನಮ್ಮ ಪೂರ್ವಜರು ಚತುರ್ವರ್ಣಗಳೆಂದು ಕರೆದರು. ಇದೇ ನಮ್ಮ ಚಾತುರ್ವರ್ಣ್ಯ ಪದ್ಧತಿ. ಈ ವರ್ಣಗಳು ಪ್ರತ್ಯಕ್ಷವಾಗಿ ಕಾರ್ಯ ಮಾಡುವಾಗ ದೇಶ, ಕಾಲ, ಪರಿಸ್ಥಿತಿಗಳಿಗೆ ಅನುಸಾರವಾಗಿ ಅನೇಕ ಉಪವರ್ಣಗಳು ಉಂಟಾದವು. ಇವುಗಳು ಜಾತಿಗಳೆನಿಸಿದವು. ಏಕೆಂದರೆ ಇವು ಕಸಬುಗಳನ್ನು ಅವಲಂಬಿಸಿರುತ್ತವೆ. ಕಸಬುಗಳಿಂದ (Profession, craft) ಜಾತಿಗಳುಂಟಾಗಲು ಒಂದು ಮುಖ್ಯವಾದ ಕಾರಣವೆಂದರೆ ಜನ ಪರಿ-

ಕತೆ (Heredity).

ಜಾತಿಪದ್ಧತಿಯು ಸ್ಥಿರವಾಗಲು ಕಾರಣ

ಯಂತ್ರಯುಗವು ಬರುವ ಮೊದಲು ಎಲ್ಲ ಕಸುಬುಗಳಲ್ಲಿಯೂ ಮನುಷ್ಯಶಕ್ತಿಯೇ ಕಾರ್ಯಗತವಾಗಿರುತ್ತಿತ್ತು. ಮನುಷ್ಯರು ಒಂದು ಕಸಬಿನಲ್ಲಿ ಅಥವಾ ಉದ್ಯೋಗದಲ್ಲಿ ಪರಿಣಿತರೂ ತಜ್ಞರೂ ಆಗಬೇಕಾದರೆ ಅವರು ಅದನ್ನು ವಂಶಪರಂಪರಾಗತವಾಗಿ ಅನುಸರಿಸಬೇಕಾಗುತ್ತದೆ. ಆದುದರಿಂದ ಇಲ್ಲಿ ಆನುವಂಶಿಕತೆ ಬಹಳ ಸಹಾಯಕಾರಿಯಾಗುತ್ತದೆ. ಆನುವಂಶಿಕವಾಗಿ ಬಂದಿರುವ ಕಸಬುದಾರನಷ್ಟು ಆಗಂತುಕನಾದ ಕಸಬುದಾರನು ಅದರಲ್ಲಿ ತಜ್ಞನಾಗಿರುವದಿಲ್ಲವೆಂಬುದು ಇಂದಿಗೂ ಸತ್ಯವಾದ ಸಿದ್ಧಾಂತವಾಗಿದೆ. ಹೀಗೆ ಆನುವಂಶಿಕತೆಯು ವರ್ಣಪದ್ಧತಿಯನ್ನು ಜಾತಿಪದ್ಧತಿಯಲ್ಲಿ ಮಾರ್ಪಡಿಸಿದೆ. ಇದೇ ಜಾತಿ ಪದ್ಧತಿಯು ಸ್ಥಿರವಾಗಲು ಕಾರಣವಾಗಿದೆ.

ಜಾತಿಪದ್ಧತಿಯ ಇಷ್ಟಾನಿಷ್ಟಗಳು

ಈ ಜಗತ್ತಿನಲ್ಲಿರುವ ಯಾವುದೇ ವಸ್ತುವಾಗಲಿ ಸಂಸ್ಥೆಯಾಗಲಿ ಇಷ್ಟಾನಿಷ್ಟಗಳಿಂದ ಕೂಡಿಕೊಂಡೇ ಇರುತ್ತದೆ. ಈ ನಿಯಮಕ್ಕೆ ಜಾತಿಪದ್ಧತಿಯೂ ಅಪವಾದವಾಗಿಲ್ಲ. ಈ ಜಾತಿ ಪದ್ಧತಿಯಿಂದ ಅನೇಕ ಲಾಭಗಳುಂಟಾಗಿವೆ. ಅವುಗಳಲ್ಲಿ ಮುಖ್ಯವಾದಂಥವೆಂದರೆ ೧) ಸಾಮಾಜಿಕ ವರ್ಗೀಕರಣ, ೨) ಸಾಮಾಜಿಕ ಸ್ಥಿರತೆ, ೩) ಅನಿಷ್ಟವಾದ ಸ್ಪರ್ಧೆಯ ನಿವಾರಣೆ. ೪) ಪ್ರತಿಯೊಬ್ಬರಿಗೂ ಒಂದು ನಿರ್ದಿಷ್ಟವಾದ ಉದ್ಯೋಗಾವಕಾಶವನ್ನೂ ಜೀವನ ಪದ್ಧತಿಯನ್ನೂ ಒದಗಿಸುವುದು, ೫) ಧರ್ಮ, ಸಂಸ್ಕೃತಿ ಹಾಗೂ ಪರಂಪರೆಗಳ ಸಂರಕ್ಷಣೆ,

ಈ ಲಾಭಗಳ ಜೊತೆಗೆ ಅನೇಕ ಅನಿಷ್ಟಗಳೂ ಈ ಜಾತಿಪದ್ಧತಿಯಿಂದ ಉಂಟಾಗಿವೆ. ಅವು ಎಂದರೆ ೧) ಮೇಲು-ಕೀಳು ಎಂಬ ಭಾವನೆಯ ಬೆಳವಣಿಗೆ. ೨) ಕೆಳ ವರ್ಗದವರಿಗೆ ಮೇಲು ವರ್ಗದವರಿಗಿರುವ ಸೌಕರ್ಯಗಳ ನಿರಾಕರಣೆ ೩) ಮೇಲು ವರ್ಗದವರು ಕೆಳ ವರ್ಗದವರನ್ನು ಶೋಷಿಸಲು ಅವಕಾಶ. ೪) ಅಸ್ಪೃಶ್ಯತೆಯ ಉದಯ ಮುಂತಾದವುಗಳು.

ಇಂದಿನ ಪರಿಸ್ಥಿತಿ

ಇಂದು ವರ್ಣ-ಜಾತಿಪದ್ಧತಿಯು ಒಂದು ದೊಡ್ಡ ಆಘಾತಕ್ಕೆ ಒಳಗಾಗಿ ಜೀವನ್ಮರಣ ಸ್ಥಿತಿಯಲ್ಲಿದೆ. ಇದಕ್ಕೆ ಮುಖ್ಯವಾದ ಕಾರಣವೆಂದರೆ ಔದ್ಯೋಗಿಕ ಕ್ರಾಂತಿ. ಈ ಔದ್ಯೋಗಿಕ ಕ್ರಾಂತಿಯು ಯಾಂತ್ರೀಕರಣದಿಂದ ಉಂಟಾಗಿದೆ. ಬ್ರಿಟಿಶರು ನಮ್ಮನ್ನು ಆಳುತ್ತಿರುವಾಗ ನಮ್ಮಲ್ಲಿ ಔದ್ಯೋಗೀಕರಣವು ಭರದಿಂದ ನಡೆಯುಲಿಲ್ಲ. ಭಾರತವು ಸ್ವತಂತ್ರವಾದ ಮೇಲೆ ಔದ್ಯೋಗೀಕರಣವು ಭರದಿಂದ ನಡೆದಿದೆ. ಇದರಿಂದ ನಮ್ಮ ಉತ್ಪಾದನಾ ಪದ್ಧತಿಗಳು ಬದಲಾವಣೆ ಹೊಂದಹತ್ತಿವೆ. ಇದು ನಮ್ಮ ಕಸಬುಗಳನ್ನೂ ಅವುಗಳನ್ನವಲಂಬಿಸಿದ ಜಾತಿ ಪದ್ಧತಿಯನ್ನೂ ಉಚ್ಚಾಟನಗೊಳಿಸಹತ್ತಿದೆ. ಇದಕ್ಕೆ ಸಹಕಾರಿಯಾಗಿ ಧರ್ಮ ಹಾಗೂ ಸಂಪ್ರದಾಯಗಳನ್ನು ಇಂದಿನ ವಿದ್ಯಾವಂತರು ಪ್ರಶ್ನಿಸತೊಡಗಿದ್ದಾರೆ. ವಿಜ್ಞಾನದ ಭೌತಿಕ ಜೀವನಾನುಕೂಲತೆಗಳೇ ಇದಕ್ಕೆ ಕಾರಣವಾಗಿವೆ. ಅರ್ಥ-ಕಾಮಗಳೇ ಪರಮ ಪುರುಷಾರ್ಥಗಳೆಂದೂ ಇಹ ಜೀವನವೇ । ನಿಜವಾದ ಜೀವನವೆಂದೂ ಇಂದು ಬಹು ಜನರು ನಂಬುತ್ತಲಿದ್ದಾರೆ. ಈ ನಂಬುಗೆಗೆ ಅಡ್ಡಬರುವ ಹಾಗೂ ಹೊಸ ಉತ್ಪಾದನಾ ವ್ಯವಸ್ಥೆಗೆ ಕಾಲ್ತೊಡಕಾಗಿರುವ ವರ್ಣ-ಜಾತಿಪದ್ಧತಿಗಳನ್ನು ನಿರ್ಮೂಲ ಮಾಡಬೇಕೆಂಬ ಕೂಗು ಕೇಳಬರಹತ್ತಿದೆ. ಜಾತಿ, ವರ್ಗ, ವರ್ಣರಹಿತವಾದ ಸಮಾಜವನ್ನು ನಿರ್ಮಿಸುವ ಹಂಬಲವು ಉಂಟಾಗಿದೆ,

ವರ್ಗರಹಿತ ಸಮಾಜ ನಿರ್ಮಾಣವು ಅಸಾಧ್ಯವಾಗಿದೆ

ಆದರೆ ವರ್ಗರಹಿತ ಸಮಾಜವನ್ನು ನಿರ್ಮಿಸುವದು ಅಸಾಧ್ಯವಾದ ಸಂಗತಿಯಾಗಿದೆ. ವರ್ಗರಹಿತ ಸಮಾಜ ನಿರ್ಮಾಣವು ಕೆಳಗಿನ ಕಾರಣಗಳಿಗಾಗಿ ಶಕ್ಯವಾಗುವುದಿಲ್ಲ.

೧. ವರ್ಗರಹಿತ ಸಮಾಜ

(Classless society) ಎಂಬ ಸಿದ್ಧಾಂತವು ವಿದತೋವ್ಯಾಘಾತವಾದ (Self-contradictory) ಸಿದ್ಧಾಂತವಾಗಿದೆ.

ಹೇಗೆಂದರೆ ಸಮಾಜ ವ್ಯವಸ್ಥೆಯು ಅದು ಎಲ್ಲಿಯೇ ಇರಲಿ, ಎಂಥದೇ ಇರಲಿ, ನಿಜವಾದ ಸಮಾಜ ವ್ಯವಸ್ಥೆಯೆಂದೆನಿಸಿಕೊಳ್ಳಬೇಕಾದರೆ ಅದು ಅವಶ್ಯವಾಗಿ ಶ್ರಮವಿಭಾಗ(Division of labour)ವನ್ನು ಅವಲಂಬಿಸಲೇಬೇಕಾಗುತ್ತದೆ. ವರ್ಗರಚನೆಗೆ ಶ್ರಮವಿಭಾಗವೇ ಆಧಾರವಾಗಿದೆ. ಶ್ರಮವಿಭಾಗವಿಲ್ಲದ ಸಮಾಜವೇ ಇರುವದಿಲ್ಲ. ಆದುದರಿಂದ ವರ್ಗರಹಿತ ಸಮಾಜವು ಅಸ್ತಿತ್ವದಲ್ಲಿ ಬರುವುದೇ ಶಕ್ಯವಿಲ್ಲ.

೨. ಮನುಷ್ಯರೆಲ್ಲರೂ ತಮ್ಮ ಬುದ್ಧಿ ಹಾಗೂ ದೇಹಶಕ್ತಿಗಳಲ್ಲಿ ಸಮಾನರಾಗಿರುವುದಿಲ್ಲ.

ಈ ಕಾರಣದಿಂದ ಮನುಷ್ಯರು ತಮ್ಮ ಬುದ್ಧಿ ಹಾಗೂ ದೇಹಶಕ್ತಿಗಳಿಗೆ ಅನುಗುಣವಾಗಿ ಬೇರೆ ಬೇರೆ ಉದ್ಯೋಗಗಳನ್ನು ಕೈಕೊಳ್ಳಬೇಕಾಗುತ್ತದೆ. ಇದರಿಂದ ಸಾಮಾಜಿಕ ಜೀವನದಲ್ಲಿ ವರ್ಗೀಕರಣವು ತಲೆದೋರುತ್ತದೆ.


೩. ಭೇದವು ನಮ್ಮ ಎಲ್ಲ ವ್ಯವಹಾರಗಳ ಮೂಲವಾಗಿರುವುದರಿಂದ ಭೇದರಹಿತವಾದ ಸಮಾಜ ನಿರ್ಮಾಣವು ಸಾಧ್ಯವಿಲ್ಲ.

ಇದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಸಮಾಜದಲ್ಲಿ ಭೇದಭಾವವನ್ನು ಅಳಿಸಿಹಾಕುವ ಉದ್ದೇಶದಿಂದಲೇ ಬೌದ್ಧ, ಕ್ರಿಶ್ಚಿಯನ್ ಮತ್ತು ಮುಸಲ್ಮಾನ ಧರ್ಮಗಳು ತಲೆಯೆತ್ತಿದವು. ಆದರೆ ಈ ಧರ್ಮಗಳಲ್ಲಿ ಹೀನಯಾನ, ಮಹಾಯಾನ; ರೋಮನ್ ಕ್ಯಾಥೋಲಿಕ್, ಪ್ರೊಟೆಸ್ಟಂಟ್; ಶೀಯಾ, ಸುನ್ನಿ ಎಂಬ ಭೇದಗಳು ತಲೆದೋರಿದವು. ಈ ಭೇದಗಳು ನಮ್ಮ ಜಾತಿಗಳಂತೆಯೇ ಇದ್ದು ಇವುಗಳ ನಡುವೆ ನಡೆಯುವವು ಕಲಹ ನಮ್ಮ ಜಾತೀಯ ಕಲಹಗಳಿಗೆ ಯಾವ ರೀತಿಯಿಂದಲೂ ಕಡಿಮೆಯಾಗಿರುವುದಿಲ್ಲ. ಇದೇ ರೀತಿಯಾಗಿ ವರ್ಗರಹಿತ ಸಮಾಜ ನಿರ್ಮಾಣ ಮಾಡಲು ಹೊರಟಿರುವ ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿಯೂ ಕ್ರಾಂತಿಕಾರಿ (Revolutionist) ಮತ್ತು ಕ್ರಾಂತಿವಿರೋಧಿ (Reactionary or Revisionist) ಎಂಬ ವರ್ಗಗಳು ತಲೆದೋರಿವೆ. ಇವುಗಳಲ್ಲಿರುವ ಪರಸ್ಪರ ದ್ವೇಷವು ನಮ್ಮಲ್ಲಿ ಕಂಡುಬರುವ ಜಾತೀಯ ದ್ವೇಷವನ್ನು ಮೀರಿಸುತ್ತದೆ.

೪. ಅರ್ಥ ಕಾಮಗಳೆರಡೇ ಮಾನವನಿಗೆ ಸಾಲವು.

ಇಂದಿನ ವಿಜ್ಞಾನದ ಫಲವಾಗಿ ಬಂದಿರುವ ಜ್ಞಾನ ಹಾಗೂ ಸಮೃದ್ಧಿಯಿಂದ ಅರ್ಥ ಕಾಮಗಳೇ ಪರಮ ಪುರುಷಾರ್ಥಗಳೆನಿಸಿದರೂ ಮಾನವನ ವ್ಯಕ್ತಿತ್ವದ ಪರಿಪೂರ್ಣತೆಗೆ ಅರ್ಥ-ಕಾಮಗಳೆರಡೇ ಸಾಲವು. ಅರ್ಥ-ಕಾಮಗಳ ತೃಷೆಯು ಸಂಪೂರ್ಣವಾಗಿ ತೃಪ್ತಿಯನ್ನು ಹೊಂದಿದಾಗ ಧರ್ಮ ಹಾಗೂ ದೇವರ ಚಿಂತೆ ಪ್ರಾರಂಭವಾಗುತ್ತದೆ. ಈ ಕಾರಣದಿಂದಲೇ ವಿಜ್ಞಾನವು ಎಷ್ಟೇ ಮುಂದುವರಿದರೂ ನಾಸ್ತಿಕವಾದವು ಎಷ್ಟೇ ಪ್ರಬಲವಾದರೂ ಧರ್ಮ ಹಾಗೂ ದೇವರನ್ನು ಸಾಮಾಜಿಕ ಜೀವನದಿಂದ, ಮಾನವನ ಮನಸ್ಸಿನಿಂದ ಗಡೀಪಾರು ಮಾಡಲು ಇನ್ನೂ ಸಾಧ್ಯವಾಗಿಲ್ಲ. ರಶಿಯದಲ್ಲಿ ಇತ್ತೀಚೆಗೆ ಚರ್ಚುಗಳಲ್ಲಿ ಪ್ರಾರ್ಥನೆ ಮಾಡಲು ಅವಕಾಶ ದೊರೆತಿದೆ ಎಂಬ ಮಾತು ಇದಕ್ಕೆ ಸಾಕ್ಷಿಯಾಗಿದೆ. ಇನ್ನೂ ಹೆಚ್ಚಿನ ಸಾಕ್ಷಿ ಬೇಕೆಂದರೆ, ಇಂದು ಅಮೇರಿಕದ ಜನರಲ್ಲಿ ಭಾರತದ ವೇದಾಂತ, ಯೋಗ ಹಾಗೂ ಭಕ್ತಿಪಂಥಗಳ ಪ್ರಚಾರವು ಭರದಿಂದ ನಡೆದಿರುವುದು, ಹರೇಕೃಷ್ಣ ಪಂಥದವರಂತೂ ನವ್ಯ ಬ್ರಾಹ್ಮಣರೇ (Neo-Brahmins) ಆಗಿಬಿಟ್ಟಿದ್ದಾರೆ. ಧರ್ಮ ಪಂಥಗಳಿರುವಲ್ಲಿ, ಸಧರ್ಮೀಯರು, ವಿಧರ್ಮೀಯರು ಎಂಬ ಭೇದವು ಹುಟ್ಟಿಕೊಳ್ಳುತ್ತದೆ. ಮತ್ತು ವರ್ಗರಹಿತ ಸಮಾಜ ರಚನೆ ಅಸಾಧ್ಯವಾಗುತ್ತದೆ.

ಒಟ್ಟಿನಲ್ಲಿ ಹೇಳಬೇಕೆಂದರೆ ವರ್ಗರಹಿತ ಸಮಾಜ ಎಂಬುದು ಒಂದು ಕೈಗೂಡದ ಆದರ್ಶ-(Utopia)ವಾಗಿದೆ. ಇದರ ಬೆನ್ನು ಹತ್ತಿ ವರ್ಣ-ಜಾತಿ ಪದ್ಧತಿಯನ್ನು ಕಿತ್ತೊಗೆಯು



ನಾವು ಪ್ರಾರಂಭಿಸಿದ್ದು ಶಕ್ತಿಯುತವಾದ ಒಂದು ಮೋಟಾರಿನಿಂದ. ಈ ಗಡಸು 'ಗುಂಡಿಗೆ'ಗೆ ತಕ್ಕ ಮಿಕ್ಕೆಲ್ಲ ಭಾಗಗಳನ್ನು ಅನಂತರ ಜೋಡಿಸಿದೆವು.

ಹೀಗೆ ಉದ್ಭವಿಸಿತು

JOHNSON®

ಮಿಕ್ಸರ್-ಗ್ರೈಂಡರ್

ಕಾರ್ಯಾಚರಣೆಯಲ್ಲಿ ಇದಕ್ಕಿಂತ ಉತ್ತಮವಾದುದು ಬೇರೊಂದಿಲ್ಲ

ಡ್ರೈ ಗ್ರೈಂಡಿಂಗ್ • ವೆಟ್ ಗ್ರೈಂಡಿಗ್ • ಕಲೆಸುವುದು • ದ್ರವೀಕರಣ • ಕಡೆಯುವುದು ಮುಂತಾದ ಕೆಲಸಗಳನ್ನು ಮಾಡಬಹುದು.

ನೀವು ಅತ್ಯುತ್ತಮ ಎಲೆಕ್ಟ್ರಿಕ್ ಮಿಕ್ಸರ್‌ಗಾಗಿ ಇಷ್ಟು ದಿನವೂ ಕಾದು ಕುಳಿತದ್ದು ಸಾರ್ಥಕವೇ ಆಯಿತು. ಹೊಸ ಜಾನ್ಸನ್ ಮಿಕ್ಸರ್-ಗ್ರೈಂಡರ್ ನಿಮಗೆ ಎಲ್ಲ ವಿಷಯಗಳಲ್ಲಿಯೂ ತೃಪ್ತಿಕರವಾಗಿರುವುದು. ಇದರ ಗುಣಶ್ರೇಷ್ಠತೆಗಳನ್ನೊಮ್ಮೆ ಪರಿಶೀಲಿಸಿ ನೋಡಿ :

- 450 ವಾಟ್‌ಗಳ ಮೋಟಾರು (ಇತರ ಮೋಟಾರುಗಳಿಗಿಂತ 50 ವಾಟ್ ಹೆಚ್ಚು). ಈ ಭರ್ಜರಿ ಯಂತ್ರವು ಹೆಚ್ಚು 'ಹೊರೆ'ಯನ್ನು ತಡೆದುಕೊಳ್ಳಬಲ್ಲುದು. ಇದರಿಂದ ಯಂತ್ರವೂ ಸುರಕ್ಷಿತ.
- 12 ತಿಂಗಳ ಗ್ಯಾರಂಟಿ.
- ಮೋಟಾರನ್ನು ತಂಪಾಗಿಡಲು ಗವಾಕ್ಷಗಳ ವ್ಯವಸ್ಥೆ. ಇದರಿಂದ ಯಂತ್ರ ಬಿಸಿಯೇರದೆ ಹೆಚ್ಚು ಕಾಲ ನಡೆಯಬಲ್ಲುದು.
- ಕಲೆಸುವುದನ್ನೂ ಅರೆಯುವುದನ್ನೂ ಹೆಚ್ಚು ದಕ್ಷತೆಯಿಂದ ನಿರ್ವಹಿಸಲು ಸುಧಾರಿತ ಬ್ಲೇಡ್ ಡಿಸೈನ್
- ಮೋಟಾರನ್ನು ವಿವಿಧ ವೇಗಗಳಿಗೆ [illegible] ರೋಟರ್ ಸ್ವಿಚ್. ವೇಗ ನಿರ್ಧಾರಕ [illegible] ಹಾನಿ ತಪ್ಪುವುದು.
- ಮಿಕ್ಸರ್ [illegible] ಒಡೆಯಲಾಗದಂತಹವು, ಪಾರದರ್ಶಕ, [illegible] ಮಾಡಲಾಗಿರುವುದು. [illegible]
- ನಿಮ್ಮ ಅಡಿಗೆ ಮನೆಗೆ ಒಪ್ಪುವ ಬಣ್ಣಗಳು — ಕಿತ್ತಳೆ ಬಣ್ಣ, ಕೆನೆ ಬಣ್ಣ.
- [illegible] ಡ್ರೈಗ್ರೈಂಡಿಂಗ್ ಸಾಧನ (ಬೇಕಾಗಿದ್ದಲ್ಲಿ ಇದಕ್ಕೆ ಪ್ರತ್ಯೇಕ ಬೆಲೆ)
- [illegible] (ಬೇಕಾಗಿದ್ದಲ್ಲಿ ಇದಕ್ಕೆ ಪ್ರತ್ಯೇಕ ಬೆಲೆ)


ASP-BE-7718

JOHNSON

MIXER-GRINDER



ಉಚಿತ ಸಾಧನ:
ವಿಶೇಷ ಬ್ಲೇಡ್ ಉಳ್ಳ
ಸ್ಟೇನ್‌ಲೆಸ್ ಸ್ಟೀಲ್ ಬಟ್ಟಲು.
ಡ್ರೈ ಗ್ರೈಂಡಿಂಗ್ ಅನ್ನು
ಸೊಗಸಾಗಿ ಮಾಡುವುದು.



ವಿಶೇಷ ನಾದುವ ಸಾಧನ

½ ಕೆ.ಜಿ. ಹಿಟ್ಟನ್ನು ಮೂರೇ
ನಿಮಿಷಗಳಲ್ಲಿ ನಾದಲು ವಿಶೇಷ
ನಾದುವ ಸಾಧನ —
ಚಪಾತಿ, ಪರಾಠ, ಪೂರಿ ಮಾಡಲು.
ಕೇಕ್ ಹಿಟ್ಟನ್ನು ನಾಲ್ಕೇ
ನಿಮಿಷಗಳಲ್ಲಿ ಕಡೆಯುವುದು
ಇದರಿಂದ ಎಷ್ಟೋ ಶ್ರಮ
ತಪ್ಪುವುದು.

ನಿಮ್ಮ ಸಮೀಪದ
JOHNSON ಡೀಲರನ್ನು ವಿಚಾರಿಸಿ



Electricals India
ಬೆಂಗಳೂರು-560002

ತ್ರೀನೆನ್ನುವುದು ಅವ್ಯವಹಾರ್ಯವೂ ಅವಿವೇಕವೂ ಎನಿಸುತ್ತದೆ.

ಹಾಗಾದರೆ ಜಾತಿಪದ್ಧತಿಯ ಅನಿಷ್ಟವನ್ನೂ ಅದರಲ್ಲಿ ಕೆಳ ವರ್ಗದವರ ದುರ್ಬಲ ಜಾತಿಗಳವರ ಮೇಲೆ ನಡೆಯುವ ಅನ್ಯಾಯ ಅತ್ಯಾಚಾರಗಳನ್ನಾಗಲಿ ಶೋಷಣೆಯನ್ನಾಗಲೀ ಸುಮ್ಮನೇ ಸಹಿಸುತ್ತ ಹೋಗಬೇಕೆ? ಎಂಬ ಪ್ರಶ್ನೆ ಇಲ್ಲಿ ತಲೆದೋರುತ್ತದೆ.

ಇದಕ್ಕೆ ಉತ್ತರವೆಂದರೆ ಈ ಎಲ್ಲದಕ್ಕೂ ಜಾತಿಯತೆಯೇ ಕಾರಣವಾಗಿರುವದರಿಂದ ನಾವು ಜಾತೀಯತೆಯನ್ನು ಕಿತ್ತೊಗೆಯಲು ಪ್ರಯತ್ನಿಸಬೇಕೇ ಹೊರತಾಗಿ ಜಾತಿ–ವರ್ಣ ಪದ್ಧತಿಯನ್ನೇ ಕಿತ್ತೊಗೆಯಲು ಪ್ರಯತ್ನಿಸಬಾರದು, ಏಕೆಂದರೆ ಧರ್ಮ, ಭಾಷೆ ಹಾಗೂ ವರ್ಣ-ಜಾತಿ ಇವುಗಳು ಮನುಷ್ಯನ ವಿಶಿಷ್ಟ ಸ್ವಭಾವದ ಪರಿಣಾಮವಾಗಿ ಅಸ್ತಿತ್ವದಲ್ಲಿ ಬಂದಿವೆ. ಆದುದರಿಂದ ಮನುಷ್ಯ ಸ್ವಭಾವವನ್ನೇ ಬದಲು ಮಾಡದೆ ಇವುಗಳನ್ನು ಕಿತ್ತೊಗೆಯುವದು ಸಾಧ್ಯವಿಲ್ಲ. ಮನುಷ್ಯನಿಗೆ ವೈವಿಧ್ಯವೂ ಬೇಕು, ಏಕತೆಯೂ ಬೇಕು. ಆದುದರಿಂದ ನಾವು ಅನೇಕತೆಯನ್ನು ಕಿತ್ತೊಗೆಯದೇ ಅದರ ಹಿಂದಿರುವ ಏಕತೆಯನ್ನು ಗುರುತಿಸಲು ಕಲಿಯಬೇಕು.

ಪರಿಹಾರ

ಇಂದು ಜಾತಿ-ಪದ್ಧತಿಯನ್ನು ವಿರೋಧಿಸುವವರು ಹೆಚ್ಚಾಗಿ ಭಾವನಾಪ್ರಧಾನರಾಗಿ ಮಾತನಾಡುತ್ತಿದ್ದಾರೆ. ವರ್ಣ–ಜಾತಿ ಪದ್ಧತಿಯ ಅನಿಷ್ಟಗಳಿಗೆಲ್ಲ ಬ್ರಾಹ್ಮಣರೇ ಕಾರಣರೆಂದು ಅವರನ್ನು ತೆಗಳುತ್ತಲಿದ್ದಾರೆ. ಆದರೆ ಇದು ತಪ್ಪು. ಭಾರತದಲ್ಲಿ ಬ್ರಾಹ್ಮಣರಷ್ಟೇ ಇಲ್ಲ. ಇತರ ಜಾತಿ ಜನಾಂಗಗಳವರೂ ಧರ್ಮದವರೂ ಇದ್ದಾರೆ. ಅವರಲ್ಲಿಯೂ ಸಾಕಷ್ಟು ಒಳಭೇದಗಳು ಇವೆ, ಅವುಗಳಿಂದಲೂ ನಮ್ಮ ಜಾತಿಪದ್ಧತಿಯಿಂದಾಗುವ ಅನಿಷ್ಟಗಳೇ ಸಂಭವಿಸುತ್ತವೆ. ಆದರೆ ಅವರ ಬಗ್ಗೆ ನಮ್ಮ ಪ್ರಗತಿಪರರು ಬಾಯಿ ಮುಚ್ಚಿಕೊಂಡು ಸುಮ್ಮನಿದ್ದಾರೆ. ಇದು ಸರಿಯಾದ ಮಾರ್ಗವಲ್ಲ. ನಮ್ಮಲ್ಲಿರುವ ಧರ್ಮ–ಜಾತಿ-ವರ್ಣಗಳ ವಿರೋಧಿಗಳು ಬ್ರಾಹ್ಮಣರನ್ನು ದೂಷಿಸುವದರ ಬದಲಾಗಿ ಭಾರತೀಯರಿಗೆಲ್ಲ ಏಕರೂಪವಾಗಿರುವ ನಾಗರಿಕ ಕಾಯದೆ (Uniform civil code for all Indians) ಜಾರಿಗೆ ಬರುವಂತೆ ಪ್ರಯತ್ನಿಸಲಿ. ಇದು ಜಾತೀಯತೆಯನ್ನು ಕಡಿಮೆಮಾಡುವುದರಲ್ಲಿ ಮೊದಲ ಹೆಜ್ಜೆಯಾಗುವುದು. ಎರಡನೆಯದೆಂದರೆ ನಮ್ಮಲ್ಲಿರುವ ಎಲ್ಲ ಜಾತಿ ಜನಾಂಗಗಳವರಿಗೂ ವಿದ್ಯೆಯನ್ನು ಕಲಿಸಲಿ. ಅದರ ಪರಿಣಾಮವಾಗಿ ತಮ್ಮ ಮೇಲೆ ನಡೆದಿರುವ ಅನ್ಯಾಯ-ಅತ್ಯಾಚಾರಗಳನ್ನು ಪ್ರತಿಭಟಿಸುವ ಪ್ರಜ್ಞೆ ಅವರಲ್ಲಿ ಉಂಟಾಗುತ್ತದೆ. ಶೋಷಣೆಯನ್ನು ತಡೆಗಟ್ಟುವ ಅತ್ಯಂತ ಪ್ರಭಾವಶಾಲಿಯಾದ ಉಪಾಯವೆಂದರೆ ಶೋಷಣೆಗೆ ಒಳಗಾದವರಲ್ಲಿ ಅದರ ಬಗ್ಗೆ ಪ್ರಜ್ಞೆಯನ್ನು ಜಾಗ್ರತಗೊಳಿಸುವುದೇ ಆಗಿದೆ. ಮೂರನೆಯದೆಂದರೆ ವರ್ಣ–ಜಾತಿಗಳನ್ನು ನಾವು ನಿರ್ಮೂಲಮಾಡುವುದು ಹೇಗೆ ಸಾಧ್ಯವಿಲ್ಲವೋ ಹಾಗೆಯೆ ಅವುಗಳನ್ನು ಮೊದಲಿನರೀತಿಯಲ್ಲಿಯೇ ಉಳಿಸಿಕೊಳ್ಳುವುದೂ ಶಕ್ಯವಿಲ್ಲ. ಆದುದರಿಂದ ಆಧುನಿಕ ಕಾಲದ ಅವಶ್ಯಕತೆಗಳನ್ನು ಅನುಲಕ್ಷಿಸಿ ಈಗಿರುವ ವರ್ಣ–ಜಾತಿ ಪದ್ಧತಿಯಲ್ಲಿ ಸೂಕ್ತ-ಬದಲಾವಣೆಗಳನ್ನು ಮಾಡಿಕೊಳ್ಳಬೇಕು. ಅದಕ್ಕಾಗಿ ಇಂದು ಒಂದು ಹೊಸ ಸ್ಮೃತಿಯು ರಚನೆಯಾಗಬೇಕು. ಇದಕ್ಕಾಗಿ ಮಠಾಧಿಪತಿಗಳ, ಧರ್ಮಾಭಿಮಾನಿಗಳ, ಸಮಾಜಸುಧಾರಕರ, ಸಮಾಜಶಾಸ್ತ್ರಜ್ಞರ ಹಾಗೂ ರಾಷ್ಟ್ರನಾಯಕರ ಒಂದು ಸಮನ್ವಯಸಮಿತಿಯು ನಿರ್ಮಾಣವಾಗಿ ಕಾರ್ಯಗತವಾಗಬೇಕು. ಈ ಸಮಿತಿಯು ಸ್ವತಂತ್ರಭಾರತಕ್ಕೆ ಬೇಕಾಗಿರುವ ಸುಯೋಗ್ಯವಾದ ಸಮಾಜರಚನೆಯ ರೂಪರೇಷೆಗಳನ್ನು ಸಿದ್ಧಪಡಿಸಬೇಕು. ಅದನ್ನು ಆಧಾರವಾಗಿಟ್ಟುಕೊಂಡು ಕಾಯದೆ ಕಾನೂನುಗಳು ರಚಿಸಲ್ಪಡಬೇಕು. ಅಂದರೆ ಮಾತ್ರ ನಮಗೆ ಜಾತೀಯತೆಯ ಅನಿಷ್ಟವನ್ನು ನಿವಾರಣೆಮಾಡಲು ಸಾಧ್ಯವಾಗುತ್ತದೆ. ✲





←[೩೨ನೇ ಪುಟದಿಂದ ಬಂದದ್ದು]

ಅಧ್ಯಕ್ಷ) ಬರೆದ ಪತ್ರದಲ್ಲಿ ಉಲ್ಲೇಖಿಸಿದ ದಿಟ್ಟ ಕ್ರಮದ ಮೊದಲ ರೂಪರೇಷೆಗಳನ್ನು ಚಿಂತಿಸತೊಡಗಿದೆ. ನನ್ನ ಮೊದಲ ವಿಚಾರ ಹೀಗಿತ್ತು. ಭದ್ರತಾಮಂಡಳಿಯ ಪಂಚಮಹಾರಾಷ್ಟ್ರಗಳನ್ನು ಜೆರೂಸಲೇಮಿಗೆ ಆಮಂತ್ರಿಸಬೇಕು. ಈ ತಂಟೆಗೆ ಸಂಬಂಧಿಸಿದ ಸಿರಿಯಾ, ಜೋರ್ಡಾನ್, ಪೆಲೆಸ್ಟೈನ್ ಮತ್ತು ಲೆಬನಾನ್ ಪ್ರತಿನಿಧಿಗಳನ್ನೂ ಕರೆಸಬೇಕು. ಇವರೆಲ್ಲರ ಸಾಕ್ಷಿಯಾಗಿ ಇಸ್ರೇಲಿಗೆ ಭರವಸೆ ನಿಡಬೇಕು. ಸಂಪತ್ತು, ಅಧಿಕಾರ, ವಿಶೇಷ ಅಧಿಕಾರ (ವಿಟೋ) ಎಲ್ಲವುಗಳಿಂದ ಕೂಡಿದ ಈ ಪಂಚಮಹಾರಾಷ್ಟ್ರಗಳೇ ಇಲ್ಲಿ ಸೇರಿರುತ್ತವೆ ಆದರೆ ಇವರೆಲ್ಲ ಆಯಾ ರಾಷ್ಟ್ರಗಳ ಅಧಿಪತಿಗಳಿರುವದರಿಂದ ಈ ಸಮಸ್ಯೆಯನ್ನು ಸಂಪೂರ್ಣ ಚರ್ಚಿಸಿರೆಂದು ನಾನು ಹೇಳಲಿಕ್ಕಾಗದು. ಇದು ವ್ಯವಹಾರಿಕವಲ್ಲ. ನಾನು ಕೈಕೊಳ್ಳುವ ಕ್ರಮದ ಫಲಿತಾಂಶದ ಬಗ್ಗೆ ಇವರು ಇಸ್ರೇಲಿಗೆ ಭರವಸೆಯನ್ನು ಮಾತ್ರ ಕೊಡಬಹುದು. ಮತ್ತು ಜಿನೇವಾ ಸಮ್ಮೇಳನ ಮತ್ತೆ ಪ್ರಾರಂಭವಾಗುವಂತೆ ಮಾಡುವ ಸೂತ್ರಗಳನ್ನೊಳಗೊಂಡ ಒಪ್ಪಂದವೊಂದು ಇಪ್ಪತ್ನಾಲ್ಕು ಗಂಟೆಗಳಲ್ಲಿ ಸಿದ್ಧವಾಗಬೇಕೆಂದು ನಿರ್ದೇಶಿಸಬಹುದು. ಇಷ್ಟೇ ನನ್ನ ಎಣಿಕೆಯಿತ್ತು.

ಈ ಬಗ್ಗೆ ಇನ್ನಷ್ಟು ದೀರ್ಘವಾಗಿ ವಿಚಾರಿಸಿದ ನಂತರ ಇದರಿಂದ ಸಮಸ್ಯೆ ಬಗೆಹರಿಯಲಾರದೆಂದು ನನಗನಿಸಿತು. ನಮ್ಮ ಮತ್ತು ಇಸ್ರೇಲಿಗಳ ನಡುವೆ ನಿಂತಿರುವ ಮಾನಸಿಕ ಗೋಡೆಯನ್ನು ಇದು ಭೇದಿಸಲಾರದು. ನಾನು ಪಂಚಮಹಾರಾಷ್ಟ್ರಗಳನ್ನು ಆಮಂತ್ರಿಸುವದರಿಂದ ನಾನು ಅವುಗಳ ಹಿಂದೆ ರಕ್ಷಣೆ ಪಡೆಯಬಯಸುವೆನೆಂಬ ಭಾವನೆ ಇಸ್ರೇಲಿಗಳಲ್ಲಿ ಮೂಡಬಹುದು. ಬ್ರೆಜ್ನೇವ್ ಅಲ್ಲಿಗೆ ಬರುವದಾದರೆ ಇಸ್ರೇಲಿಗಳಿಗೆ ಅವರ ಮೇಲೆ ವಿಶ್ವಾಸವಿರುವದಿಲ್ಲ. ಚೀನದ ಅಧ್ಯಕ್ಷ ಹುವಾಕುವೊ ಫೆಂಗ್ ಅರಬರನ್ನು ಬೆಂಬಲಿಸುವದರಿಂದ ಇಸ್ರೇಲಿಗಳು ಅವರನ್ನು ಇಷ್ಟಪಡಲಾರರು. ಅಲ್ಲದೆ ಬೈರಾಮ್ ಹಬ್ಬದಂದು ನಾನು ಜೆರೂಸಲೇಮಿನಲ್ಲಿಯ ಅಲ್ ಅಕ್ಸಾ ಮಸೀದೆಯಲ್ಲಿ ವನ್ನೂ ಹಮ್ಮಿಕೊಂಡಿದ್ದೆ. ಮುಸಲ್ಮಾನರಿಗೆ ಪ್ರಪಂಚದ ಮೂರು ಪವಿತ್ರ ಕ್ಷೇತ್ರಗಳಲ್ಲಿ ಇದೊಂದು. ಆದ್ದರಿಂದ ನಾನೊಂದು ನಿರ್ಣಯಕ್ಕೆ ಬಂದೆ. ಈ ಸಲದ ಬೈರಾಮ್ ಹಬ್ಬದ ಪ್ರಾರ್ಥನೆಯನ್ನು ಸಿನಾಯಿಗೆ ಬದಲಾಗಿ ಅಲ್ ಅಕ್ಸಾದಲ್ಲೇ ನೆರವೇರಿಸಬೇಕು.

ನನ್ನ ಈ ಪ್ರವಾಸವನ್ನು ಮುಗಿಸಿಕೊಂಡು ಬಂದಾಗ ಬೈರಾಮ್ ಹಬ್ಬಕ್ಕೆ ಇನ್ನು ಎಂಟು ಹತ್ತು ದಿನಗಳು ಮಾತ್ರ ಉಳಿದಿದ್ದವು. ಈ ವಿಷಯವನ್ನು ನಾನು ಯಾರಿಗೂ ಹೇಳಲಿಲ್ಲ. ಕ್ಯೂಸೆಸ್ಕ್ಯೂರಿಗಾಗಲಿ ಇರಾಣದ ಶಹಾರಿಗಾಗಲೀ ಸೌದೀ ಅರೇಬಿಯಾದ ಅರಸ ಖಲೀದರಿಗಾಗಲಿ ತಿಳಿದಿರಲಿಲ್ಲ. ಎಲ್ಲರನ್ನೂ ಚಕಿತಗೊಳಿಸಬೇಕೆಂದು ನಾನು ಅಂದುಕೊಂಡೆ. ಅದು ಹಾಗೇ ಆಯಿತು.

ನನಗೆ ಕಾಲಾವಕಾಶ ಬಹಳ ಕಡಿಮೆ ಇತ್ತು. ಒಂದು ವಾರದಲ್ಲೇ ಪಂಚಮಹಾರಾಷ್ಟ್ರಗಳ ಅಧಿಪತಿಗಳನ್ನು ಜೇರುಸಲೇಮಿನಲ್ಲಿ ಸೇರುವಂತೆ ಮಾಡುವುದು ಸಾಧ್ಯವಿರಲಿಲ್ಲ. ಈ ಸೂಚನೆಯ ಬಗ್ಗೆ ಇಸ್ರೇಲಿನ ಪ್ರತಿಕ್ರಿಯೆ ಏನೆಂಬುದು ನನಗೆ ತಿಳಿದಿರಲಿಲ್ಲ. ಪಂಚಮಹಾರಾಷ್ಟ್ರಗಳಲ್ಲಿ ಯಾವುದೊಂದು ರಾಷ್ಟ್ರವು ಯಾವದೇ ಕಾರಣದಿಂದ ಬರದಿದ್ದರೂ ಅವರಿಗೆ ಇದು ಸಮ್ಮತವಿಲ್ಲವೆಂದೇ ಅರ್ಥ ಮಾಡಲಾಗುತ್ತದೆ, ಇದರಿಂದ ನಮ್ಮ ನಮ್ಮಲ್ಲಿಯ ಅವಿಶ್ವಾಸದ ಪರದೆ ಹರಿಯಲಾರದು.

ಸರಿ, ನನಗೆ ಇನ್ನೊಂದು ವಿಚಾರ ಹೊಳೆಯಿತು. ನಾನೇ ಸ್ವತಃ ಅಲ್ಲಿಗೆ ಹೋಗಿ ಅಲ್ಲಿಯ ಸಂಸತ್ತನ್ನೇಕೆ ಎದುರಿಸಬಾರದು? ವಿಚಾರ ಬಂದದ್ದೇ ತಡ. ಸಿದ್ಧತೆಗಳನ್ನು ಮಾಡಿಕೊಂಡೆ. ನಮ್ಮ ಸಂಸತ್ತಿನ ಅಧಿವೇಶನಾರಂಭದ ಭಾಷಣದಲ್ಲಿ ಈ ಅಂಶವನ್ನೂ ಪ್ರಕಟಿಸಿದೆ. ಪ್ರಪಂಚದ ಯಾವುದೇ ತುದಿಗೆ ಹೋಗಲೂ ನಾನು ಸಿದ್ಧ ಎಂದು ಘೋಷಿಸಿದೆ. ಸಂಸತ್ತಿನೆದುರು ಈ ಮಾತನ್ನು ಹೇಳುವ ಮೊದಲು ನಾನು ವಿದೇಶಮಂತ್ರಿ ಇಸ್ಮಾಯಿಲ್ ಫಾಹಮಿಯವರೊಡನೆ ಮಾತ್ರ ಚರ್ಚಿಸಿದೆ. ಅವರು ಆಮೇಲೆ ತಮ್ಮ ಪದವಿಗೆ ರಾಜೀನಾಮೆ ಕೊಟ್ಟರು. ಅವರಿಗೆ ನನ್ನ ವಿಚಾರ

ವಿಚಾರಿಸುತ್ತಿರುವೆನೇ ಎಂದವರು ನನ್ನನ್ನು ಕೇಳಿದರು. ನಾನು ಹೌದೆಂದೆ. ನನಗೆ ಉಚಿತವಾದ ಆಮಂತ್ರಣ ಬರುವದಾದರೆ ನಾನು ಖಂಡಿತ ಅಲ್ಲಿಗೆ ಹೋಗಿ ಆ ಸಂಸತ್ತಿನೆದುರು ನಿಲ್ಲುತ್ತೇನೆ ಎಂದೆ. ಇದರ ಪರಿಣಾಮ ಪ್ರಪಂಚದಾದ್ಯಂತ ಇಷ್ಟೊಂದು ಪ್ರಭಾವಪೂರ್ಣವಾಗುವುದೆಂದು ನಾನೆಣಿಸಿರಲಿಲ್ಲ. ನಮ್ಮ ಜನತೆಯ ಮೇಲೆ ಸಹ ಅಷ್ಟೇ ಅದ್ಭುತ ಪ್ರಭಾವ ಉಂಟಾಗಿದೆ. ತತ್ತ್ವಶಃ ನನ್ನ ಜನತೆ ನನಗೆ ಬೆಂಬಲ ಕೊಡುವರೆಂಬ ಭರವಸೆ ಮಾತ್ರ ನನಗಿತ್ತು.

ಇಸ್ರೇಲಿ ಸಂಸತ್ತಿನಲ್ಲಿಯು ನನ್ನ ಭಾಷಣ ಕೇಳಿ ಅಲ್ಲಿಯ ಜನತೆಗೆ ಸಂತೋಷ ಆಗುವದಿಲ್ಲವೆಂದು ನಾನು ಅಂದುಕೊಂಡಿದ್ದೆ. ಯಾಕೆಂದರೆ ನಾನು ಎಲ್ಲ ವಿಷಯಗಳನ್ನೂ ಅಷ್ಟೊಂದು ಬಿಚ್ಚು ಮಾತಿನಲ್ಲಿ ಹೇಳಿದ್ದೆ. ಆದರೆ ಇಸ್ರೇಲಿನ ಮಕ್ಕಳು, ಹೆಂಗಸರು, ಪ್ರತಿಯೊಬ್ಬರೂ ನನಗೆ ಜಯ ಜಯಕಾರ ಹೇಳಿದ್ದನ್ನು ನೋಡಿ ನಾನು ಚಕಿತನಾದೆ, ಮೂವತ್ತು ವರ್ಷಗಳಿಂದ ನಮ್ಮ ನಡುವೆ ಬೆಳೆದು ಬಂದಿದ್ದ ಅವಿಶ್ವಾಸ, ದ್ವೇಷ, ವೈರ ಮೊದಲಾದ ಭಾವನೆಗಳ ಗೋಡೆ ೩೬ ಗಂಟೆಗಳಲ್ಲಿ ಈ ರೀತಿ ಒಡೆದು ಬೀಳುವದೆಂದು ನಾನು ಖಂಡಿತ ಎಣಿಸಿರಲಿಲ್ಲ. ನಿಜವಾಗಿಯೂ ಅದ್ಭುತ.

ನಾನು ಸ್ವದೇಶಕ್ಕೆ ಹಿಂದಿರುಗಿದಾಗ ಇನ್ನೂ ಹೆಚ್ಚಿನ ಅಚ್ಚರಿ ನನಗಾಗಿ ಕಾದಿತ್ತು. ಉಪಾಧ್ಯಕ್ಷರು ನನ್ನ ಜೊತೆಗೇ ಕಾರಿನಲ್ಲಿದ್ದರು. ನಮ್ಮ ಜನಕ್ಕೇನೋ ಆಗಿದೆ ಎಂದು ನಾನವರಿಗೆ ಹೇಳಿದೆ. ನಮ್ಮ ಕ್ರಾಂತಿ ಆರಂಭವಾದಂದಿನಿಂದಲೂ ಇಷ್ಟೊಂದು ಉತ್ಸಾಹದನ್ನು ನಾನು ಕಂಡಿರಲಿಲ್ಲ. ಮಹಾ ವಿಜಯದ ಗಳಿಗೆಗಳಲ್ಲಿ, ಸುಯೇಜ್ ಕಾಲುವೆಯು ರಾಷ್ಟ್ರೀಕರಣವಾದಾಗ ಸಹ, ಇಂಥ ಜನೋತ್ಸಾಹವನ್ನು ನಾನು ಕಂಡಿರಲಿಲ್ಲ.

ನಾವು ಅದ್ಭುತಗಳ ಯುಗದಲ್ಲಿದ್ದೇವೆ. ನಾನು ಜರೂಸಲೇಮಿನಲ್ಲಿದ್ದಾಗ, "ನೀವು ಬೇಗಿನ್ನರನ್ನು ಇಜಿಪ್ತಿಗೆ ಆಮಂತ್ರಿಸುತ್ತೀರಾ?" ಎಂದು ಕೇಳಿದರು. ನಾನು ಹೌದು ಎಂದೆ. ನಮ್ಮಲ್ಲಿಗೆ ಬಂದು ನಮ್ಮ ಸಂಸತ್ತಿನ ಸದಸ್ಯರನ್ನುದ್ದೇಶಿಸಿ ಮಾತನಾಡುವ ಹಕ್ಕು ಬೇಗಿನ್ನರಿಗಿದೆ. ಆದರೆ ಕೆಲ ವಿಶಿಷ್ಟ ಕಾರಣಗಳಿಗಾಗಿ ನಾನು ಅವರಿಗೆ ಆಮಂತ್ರಣ ನೀಡಲಿಲ್ಲ. ಇದು ಬೇಗಿನ್ನರಿಗೆ ಗೊತ್ತು. ನಾವಿಬ್ಬರೂ ಇದನ್ನು ಚರ್ಚಿಸಿದ್ದೇವೆ. 'ನಮ್ಮ ಸೈನಿಕರು ಸಿನಾಯಿಯಲ್ಲಿ ಇರುವವರೆಗೆ ನಾನು ನಿಮ್ಮನ್ನು ಇಜಿಪ್ತಿನಲ್ಲಿ ಹೇಗೆ ಸ್ವಾಗತಿಸಲಿ? ನಮ್ಮ ಜನತೆಯನ್ನು ಈ ವಿಷಯದಲ್ಲಿ ಮನಗಾಣಿಸುವದು ಕಷ್ಟ. ಆದ್ದರಿಂದ ಈ ಅಂಶವನ್ನು ನಾವು ಕೈಬಿಡೋಣ' ಎಂದೆ. ಅವರೂ ಅದನ್ನು ಸರಿಯಾಗಿ ಅರ್ಥಮಾಡಿಕೊಂಡರು, ಒಪ್ಪಿದರು, ಈ ವಿಷಯವನ್ನು ಆಮೇಲೆ ನಿರ್ಧರಿಸಬೇಕೆಂದು ಒಪ್ಪಲಾಯಿತು, ನಾನು ಕೈರೋಕ್ಕೆ ಬಂದಾಗ ನಮ್ಮ ಜನರ ಪ್ರತಿಕ್ರಿಯೆ ಕಂಡು ಬೆರಗಾದೆ. ಕೆಲವೇ ದಿನಗಳ ಮೊದಲು ತರ್ಕಬದ್ಧವೆನಿಸಿದ್ದ ಅನೇಕ ಅಂಶಗಳು ಇಂದು ಅಸಂಬದ್ಧವೆನಿಸಿದ್ದವು. ಆದ್ದರಿಂದ ಇಲ್ಲಿ ಬೇಗಿನ್ನರ ಸಂದರ್ಶನದ ಬಗ್ಗೆ ಕೇಳಿದಾಗ, "ಹೌದು ನಾನು ಅವರನ್ನು ಆಮಂತ್ರಿಸುತ್ತೇನೆ," ಎಂದು ಹೇಳಿದೆ. "ಎಲ್ಲಿ? ತೃತೀಯ ರಾಷ್ಟ್ರದಲ್ಲೆ?" ಎಂದು ಅವರು ಕೇಳಿದರು. "ಅದೇಕೆ? ಅವರು ಅಮೇರಿಕದ ಪ್ರವಾಸದಿಂದ ಹಿಂದಿರುಗಲಿ. ಇಜಿಪ್ತಿಗೇ ಅವರನ್ನು ಆಮಂತ್ರಿಸೋಣ," ಎಂದು ನಾನು ಉತ್ತರಿಸಿದೆ. ನಾನು ಇಟ್ಟ ದಿಟ್ಟ ಹೆಜ್ಜೆ ಈ ರೀತಿ ಪ್ರತಿಯೊಂದು ಅಂಶದಲ್ಲಿ ಬದಲಾವಣೆ ಉಂಟುಮಾಡಿದೆ. ನಾನು ಬೆನ್‌ಗುರಿಯನ್ ವಿಮಾನ ನಿಲ್ದಾಣದಲ್ಲಿ ಇಳಿದಲ್ಲಿನಿಂದ ನಾಸಿಲ್ಲಿಗೆ ಹಿಂದಿರುಗುವವರೆಗೆ ಎಲ್ಲವೂ ಒಂದು ಅದ್ಭುತ ಕನಸಿನಂತಾಗಿದೆ. ನಾನಲ್ಲಿ ಭಾಷಣ ಮಾಡಿದ ನಂತರ ನನಗೆ ಎಂಥ ಅದ್ಭುತ ತೃಪ್ತಿ ಮತ್ತು ಮನಶ್ಶಾಂತಿ ಉಂಟಾಯಿತೆಂಬದನ್ನು ನೀವಾರೂ ಊಹಿಸಲಾರಿರಿ. ನಾನು ಎಲ್ಲವನ್ನೂ ಪ್ರಾಮಾಣಿಕವಾಗಿ ಶುದ್ಧ ಮನಸ್ಸಿನಿಂದ ಬಿಚ್ಚಿ ಇಟ್ಟೆನೆಂಬ ನೆಮ್ಮದಿ ನನಗಿತ್ತು. ಮುಂದಿನ ನಿರ್ಣಯ ಅವರದು. ಅದರ ಹೊಣೆಯೂ ಅವರದೇ. ✡

('ಟೈಮ್' ಸಾಪ್ತಾಹಿಕಕ್ಕೆ ಸಾದಾತರಿತ್ತ ಸಂದರ್ಶನವನ್ನಾಧರಿಸಿ)



ಸಮರದಲ್ಲಿ ಸಂಚಾರಿ

ವಿಷ್ಣುಭಟ್ಟ ಗೋಡಸೆ

ಸಂಗ್ರಹ: ನಾರಾಯಣ ಫಳಗಿ

ಸಮರದಲ್ಲಿ ಸಂಚಾರಿ

ಪೇಶವೆಯ ಆಶ್ರಯ ಪಡೆದಿದ್ದ ಒಂದು ಮನೆತನ ಬ್ರಹ್ಮಾವರ್ತದಿಂದ ಬಂದು ವಸಯಿಯಲ್ಲಿ ನೆಲಸಿತ್ತು. ಆ ಮನೆತನದ ವಿಷ್ಣುಭಟ್ಟ ಗೋಡಸೆ ಮನೆತನದ ಸಾಲದ ಭಾರದಿಂದ ಮುಕ್ತವಾಗಲು ಉತ್ತರ ಹಿಂದುಸ್ತಾನದಲ್ಲಿ ಒಂದು ಯಜ್ಞಕ್ಕೆ ಹೋಗಿ ಹಣ ಗಳಿಸಬೇಕೆಂದು ನಿರ್ಧರಿಸಿದನು. ವಿಷ್ಣುಭಟ್ಟ ಮತ್ತು ಅವನ ಕಕ್ಕ ಜೊತೆಯಾಗಿ ಈ ಪ್ರವಾಸ ಮಾಡಿದರು. ೩೦-೩-೧೮೫೭ ರಂದು ಪ್ರವಾಸ ಆರಂಭಿಸಿದ ಅವರಿಗೆ ೧-೭-೧೮೫೭ ರಂದು ಮಹೂ ಪ್ರವೇಶಿಸುವ ಹೊತ್ತಿಗೆ ಸಿಪಾಯಿ ಬಂಡಾಯದ ಸುರುವಾದದ್ದು ತಿಳಿಯಿತು. ಅಂದಿನಿಂದ ಅವರು ಬಂಡಾಯದ ಪ್ರದೇಶಗಳಲ್ಲೇ ತಿರುಗಾಡಿದರು; ಝಾಂಸಿ ರಾಣಿಯ ಆಶ್ರಯದಲ್ಲೂ ಕೆಲ ಕಾಲ ಇದ್ದರು.

ಮೂರು ವರ್ಷಗಳಾದ ಮೇಲೆ ಅವರು ಮರಳಿದರೂ ಮುಂದೆ ಸುಮಾರು ೨೨ ವರ್ಷಗಳ ನಂತರ ಚಿಂತಾಮಣರಾವ ವೈದ್ಯ ಎಂಬವರು ಅವರಿಗೆ ಪ್ರವಾಸದ ಅನುಭವ ಬರೆದುಕೊಡಬೇಕೆಂದು ವಿನಂತಿಸಿದರು. ಬರೆದು ಮುಗಿಸಿದ ನಂತರ ಸಹ ಅವರು ಜೀವಂತವಿರುವ ವರೆಗೆ ಪ್ರಕಟಿಸುವುದು ಬೇಡವೆಂದು ವಕೀಲರು ಸಲಹೆ ನೀಡಿದ್ದರಿಂದ ಇದು ಬೇಗನೆ ಪ್ರಕಟವಾಗಲಿಲ್ಲ. ಮುಂದೆ ೧೯೦೭ ರಲ್ಲಿ ೧೮೫೭ ರ ಬಂಡಾಯದ ೫೦ ನೇ ವರ್ಷದ ಆಚರಣೆಯಾಗುತ್ತಿದ್ದ ಸಂದರ್ಭದಲ್ಲಿ ಪ್ರಕಟವಾಯಿತು. ಗೋಡಸೆಯವರ ಮೂಲ ಮರಾಠಿ ಕೈಬರಹದ ಪ್ರತಿಯು ಪುಣೆಯ ಭಾರತ ಇತಿಹಾಸ ಸಂಶೋಧಕ ಮಂಡಳದ ಸಂಗ್ರಹದಲ್ಲಿದೆ.

ಇದು ವಿಷ್ಣುಭಟ್ಟರ ಪ್ರವಾಸಾನುಭವದ ಸಂಗ್ರಹಾನುವಾದ.

ಸಿಂಧೆಯ ಬಾಯಜಾಬಾಯೀ ರಾಣೀಸಾಹೇಬ ಅವರು ಮಥುರೆಯಲ್ಲಿ ಬಹಳ ದೊಡ್ಡ ಯಜ್ಞವನ್ನೊಂದನ್ನು ಮಾಡಲಿದ್ದು ಆ ಸಂದರ್ಭದಲ್ಲಿ ಸುಮಾರು ಏಳೆಂಟು ಲಕ್ಷ ರೂಪಾಯಿಗಳ ದಾನ ಧರ್ಮ ಮಾಡುವರೆಂಬ ಸಂಗತಿ ಯಜಮಾನ ಕೃತ್ಯವೊಂದರ ಸಲುವಾಗಿ ಪುಣೆಗೆ ಹೋದಾಗ ನನಗೆ ತಿಳಿಯಿತು. ನಮ್ಮ ಮನೆತನದ ಮೇಲೆ ಇದ್ದ ಭಾರೀ ಸಾಲದ ಹೊರೆಯನ್ನು ನೀಗಲು ನಾನೂ ಆ ಯಜ್ಞಕ್ಕೆ ಹೋಗಬೇಕೆಂದು ಆ ಕೂಡಲೇ ಮನಸ್ಸಿನಲ್ಲಿ ನಿಶ್ಚಯಿಸಿದೆ.

ನಾನೇನೂ ಅಂಥ ದೊಡ್ಡ ಪಂಡಿತನಾಗಿರಲಿಲ್ಲವಾದರೂ ಶ್ರೇಷ್ಠ ಗುರುಗಳ ಬಳಿ ಯಾಜ್ಞಿಕ ಹಾಗೂ ಧರ್ಮಶಾಸ್ತ್ರ ಅಧ್ಯಯನ ಮಾಡಿದ್ದರ ಬಗೆಗಿನ ನನ್ನಲ್ಲಿಯ ಅಭಿಮಾನದ ಭಾವನೆ ಹಾಗೂ ನಮ್ಮ ತಂದೆಯ ಆತ್ಮೀಯ ಮಿತ್ರ, ಆಪ್ತರಾಗಿದ್ದ ಬಾಳಕೃಷ್ಣಭಟ್ಟ ವೈಶಂಪಾಯನರೇ ಆ ಮಹಾಯಜ್ಞದ ದಾನಾಧ್ಯಕ್ಷರಾಗಿದ್ದಾರೆಂಬುದು ನನ್ನಲ್ಲಿ ಮೇಲಿನ ನಿರ್ಧಾರ ಕೈಕೊಳ್ಳಲು ಧೈರ್ಯ ನೀಡಿದ್ದವು.

ಉತ್ತರ ಹಿಂದುಸ್ತಾನದ ಈ ಪ್ರಯಾಣ ಕೈಕೊಳ್ಳುವ ಸಲುವಾಗಿ ತಂದೆ-ತಾಯಿ, ಸಹೋದರರು ಹಾಗೂ ಪತ್ನಿಯಿಂದ ಅನುಮತಿ

ಕೇಳುವ ಹೊತ್ತಿಗೆ ನಾನು ಆ ಮೊದಲೇ ತಂದೆಯ ಅಕಿಂತದಲ್ಲಿ ಬರೆದ ಪತ್ರಕ್ಕೆ ವೈಶಂಪಾಯನರ ಉತ್ತರ ಬಂದಿತ್ತು. ವೈಶಂಪಾಯನರ ಉತ್ತರವು ನೇರವಾಗಿ ನನ್ನ ತಂದೆಯ ಕೈಸೇರಿ ಅವರನ್ನು ಸಿಟ್ಟಿಗೆಬ್ಬಿಸಿ ನನ್ನ ಪ್ರಯಾಣಕ್ಕೆ ಅನುಮತಿ ಸಿಗುವ ಸಾಧ್ಯತೆ ಇನ್ನೂ ಬಿಗಿಗೊಂಡಿತ್ತು; ಆದರೂ ನನ್ನ ಕಕ್ಕ ರಾಮಭಟ್ಟ ಗೋಡಸೆ ಹಾಗೂ ನಾನು ಇಬ್ಬರೂ ಈ ಪ್ರಯಾಣಕ್ಕೆ ಹೊರಡುವುದೆಂದು ಯೋಜನೆ ಹಾಕಿದಾಗ ನನಗೆ ಅಂತೂ ಅನುಮತಿ ದೊರೆಯಿತು. ಹಾಗೆಯೇ ನಮ್ಮಿಬ್ಬರ ಪ್ರಯಾಣ ೧೮೫೭ರ ಮಾರ್ಚ್ ೩೦ ರಂದು ಆರಂಭವಾಯಿತು.

ನಾವು ಪ್ರಯಾಣ ಆರಂಭಿಸಿ ಮೂರು ತಿಂಗಳು ಸವೆದಿತ್ತು. ಸಾತಪುಡಾ ಪರ್ವತದ ನಯನ ಮನೋಹರ ಸೃಷ್ಟಿಸೌಂದರ್ಯವನ್ನು ವೀಕ್ಷಿಸುತ್ತ ಮಹೂದ ಕಡೆಗೆ ಹೊರಟಿರುವಂತೆಯೇ ರಸ್ತೆ ಬಳಿಯ ಒಂದು ಬಂಗ್ಲೆಗೆ ಮುಂಜ್ಜೇಜೆಯ ಸುಮಾರಿಗೆ ತಲುಪಿದೆವು. ನಾವು ಅಡಿಗೆ ತಯಾರಿಸಿ ಊಟ ಮುಗಿಸಿ ಕುಳಿತಿರುವಂತೆಯೇ ಕೆಲವು ಸಿಪಾಯಿ ಜನರು ನಮ್ಮ ಬಂಗ್ಲೆಗೆ ಇಳಿದುಕೊಳ್ಳಬೇಕೆಂದು ಬಂದರು. ಪ್ರವಾಸದಲ್ಲಿ ಪರಿಚಯ ಸ್ನೇಹ ಬಹಳ ಬೇಗನೇ ಕುದುರುವುದುಂಟು. ಮೇಲಾಗಿ ಆ ಸಿಪಾಯಿಗಳು ಗೋವೆಯವರಾದುದರಿಂದ ನಮ್ಮ ಹಾಗೂ ಅವರ ದೇಶ, ಭಾಷೆ ಒಂದೇ ಆಗಿರುವುದರಿಂದ ಹಾಗೆಯೇ ಆತ್ಮೀಯವಾಗಿ ಹರಟೆ ಹೊಡೆಯ ಹತ್ತಿದೆವು. "ಇಂದಿನಿಂದ ಮೂರನೇ ದಿನ ರಾಜ್ಯಕ್ರಾಂತಿ ನಡೆದು ಲೂಟಿ, ಮಾರಾಮಾರಿಯಾಗಲಿದೆ. ನೀವು ದಕ್ಷಿಣ ಭಾರತದವರು. ನಿಮ್ಮ ಬಗ್ಗೆ ನಮಗೆ ತುಂಬಾ ಭಯವಾಗುತ್ತದೆ. ನೀವು ಮರಳಿ ಮನೆಯ ಹಾದಿ ಹಿಡಿಯುವುದೇ ಲೇಸು", ಎಂದು ನಮಗೆ ಎಚ್ಚರಿಕೆ ನೀಡಿದರು. ಈಗ ಅವರ ಮಾತುಗಳಲ್ಲೇ ಕೇಳಿ :

ಇಂಗ್ರೇಜೀ ಸರಕಾರ ಇಲ್ಲಿಯವರೆಗೆ ಒಳ್ಳೇ ರೀತಿಯಿಂದ ಆಡಳಿತ ನಡೆಸುತ್ತ ಬಂದಿದೆ. ಆದರೆ

ರಂಭದಿಂದ ವಿಲಾಯತಿಯಿಂದ ಹೊಸ ತೊಗಲಿನ ಆವರಣದ ಕಾಡತೂಸುಗಳನ್ನು ತರಿಸಿದ್ದಾರೆ. ಅದನ್ನು ಹಲ್ಲಿನಿಂದ ಜಗ್ಗಿ ಹಾರಿಸುವದಿದೆ. ಸೈನ್ಯ ಠಾಣೆಯೊಂದರಲ್ಲಿ ಹೀಗೆಯೇ ಇತ್ತೀಚೆ ಒಂದು ಘಟನೆ ನಡೆಯಿತು. ಒಬ್ಬ ಬ್ರಾಹ್ಮಣ ಸಿಪಾಯಿಯು ಸ್ನಾನಕ್ಕೆಂದು ಹೋದಾಗ ಒಬ್ಬ ಮೋಚಿಯು ಅವನಿಗೆ ಒಂದು ಲೋಟ ನೀರು ಬೇಡಿದ. "ನಿನಗೆ ಈ ಲೋಟದಲ್ಲಿ ನಾನು ನೀರು ಕುಡಿಯಲು ಕೊಟ್ಟರೆ ಮೈಲಿಗೆಯಾಗುತ್ತೆ" ಎಂಬ ಬ್ರಾಹ್ಮಣ ಸಿಪಾಯಿಯ ಉತ್ತರ ಆತನನ್ನು ಕೆರಳಿಸಿತು. "ನಿಮ್ಮದೇ ಶ್ರೇಷ್ಠ ಜಾತಿ ಎಂದು ಧಿಮಾಕ ಬಡಿಬ್ಯಾಡ್ರಿ. ಈಗ ಸೈನ್ಯದಲ್ಲಿ ಬರುತ್ತಿರುವ ಕಾಡತೂಸುಗಳಲ್ಲಿ ಆಕಳು ಹಾಗೂ ಹಂದಿ ಮಾಂಸದ ನೆಣವನ್ನು ಹಚ್ಚಲಾಗಿದ್ದು ಅದನ್ನೇ ನೀವು ಹಲ್ಲಿನಿಂದ ಕಚ್ಚಿ ಜಗ್ಗಬೇಕಾಗಿದೆ. ಆಗ ಆಕಳು ಹಾಗೂ ಹಂದಿಯ ಮಾಂಸದ ನೆಣ ನಿಮ್ಮ ಬಾಯಿಯಲ್ಲಿ ಹೋಗುತ್ತದೆ. ಸುಮ್ಮಸುಮ್ಮನೇ ಮೇಲು ಜಾತಿಯವರೆಂಬ ಒಣ ಧಿಮಾಕು ಯಾಕೆ?" ಎಂದು ಆ ಮೋಚಿಯು ಬ್ರಾಹ್ಮಣ ಸಿಪಾಯಿಯನ್ನು ಮೂದಲಿಸಿದ. ಈ ಘಟನೆ ನಡೆದಿರುವ ಹಾಗೆಯೇ ಬರಲಿರುವ ಹೊಸ ಕಾಡತೂಸಿನ ಸಮಾಚಾರ ಕಾಳ್ಗಿಚ್ಚಿನಂತೆ ಎಲ್ಲೆಡೆ ಹರಡಿತು.

ಗೋಮಾತೆಯ ಬಗ್ಗೆ ಪೂಜ್ಯಭಾವನೆಯಿರುವ ಹಿಂದೂಗಳು ಹಾಗೂ ಹಂದಿಯ ಬಗ್ಗೆ ತಿರಸ್ಕಾರವುಳ್ಳ ಮುಸ್ಲಿಮರು ಇಬ್ಬರಿಗೂ ತಮ್ಮ ತಮ್ಮ ಧರ್ಮನಿಷ್ಠೆಯ ಮೇಲೇ ದಾಳಿ ನಡೆದಂತೆ ಭಾಸವಾಗಿ ಉಭಯತರೂ ವಿವಂಚನೆಗೀಡಾದರು. ಸರಕಾರವು ಯುಕ್ತಿ ಪ್ರಯುಕ್ತಿಗಳಿಂದ ಹೇಗಾದರೂ ಮಾಡಿ ತಮ್ಮನ್ನು ಕ್ರೈಸ್ತಮತಕ್ಕೆ ಮತಾಂತರಗೊಳಿಸುತ್ತಿದೆಂಬ ಭಯ ಅವರಲ್ಲಿ ಮೂಡಿ ಸ್ವಧರ್ಮ ರಕ್ಷಣೆಯ ಬಗ್ಗೆ ಎಲ್ಲರೂ ವಿಚಾರ ವಿನಿಮಯ ಮಾಡತೊಡಗಿದರು. ಸಿಪಾಯಿಗಳೆಲ್ಲರೂ ತಾವು ಕಾಡತೂಸುಗಳನ್ನು ಮುಟ್ಟಲಾರೆವೆಂದು ತಮ್ಮ ತಮ್ಮ ಅಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಸಿದರು. ಕಲಕತ್ತೆಯಲ್ಲಿ ಗವರ್ನರರ ಕಿವಿಗೂ ಈ ವಿಷಯ ತಲುಪಿತು.

ಕಲ್ಪನೆಗೆ ಮೀರಿ ಪ್ರಸಾರಗೊಂಡಿತು. ಹಿಂದು, ಮುಸ್ಲಿಮ್ ಸೈನಿಕರು ಅಸಮಾಧಾನಗೊಂಡಿದ್ದಾರೆಂಬುದನ್ನು ಅನೇಕ ನಿಷ್ಠ ಸರಕಾರಿ ಅಧಿಕಾರಿಗಳು ಸರಕಾರಕ್ಕೆ ತಿಳಿಸಿ ಇದರಿಂದ ದಂಗೆಯೇಳುವ ಗಂಡಾಂತರವುಂಟೆಂದೂ ಎಚ್ಚರಿಸಿದರು. ಕಲಕತ್ತೆಯ ಕಾಡತೂಸಿನ ಪ್ರಕರಣ ವಿಚಾರಣೆಗಾಗಿ ವಿಲಾಯಿತಿಯಿಂದಲೇ ಒಬ್ಬ ಮೇಲಧಿಕಾರಿ ಬಂದರು. ಅವರು ಹಾಗೂ ಗವ್ಹರ್ನರರು ಇಬ್ಬರೂ ಸೇರಿ "ಕಾಡತೂಸನ್ನು ಪ್ರತಿಯೊಬ್ಬ ಸಿಪಾಯಿಯು ತಾನೇ ಸ್ವತಃ ಮುಂದಾಗಿ ತೆಗೆದುಕೊಂಡು ಉಪಯೋಗಿಸಬೇಕು. ಯಾರಾದರೂ ಹೀಗೆ ಮಾಡಲು ತಪ್ಪಿದಲ್ಲಿ ಅವರನ್ನು ಒತ್ತಾಯದಿಂದ ಹೀಗೆ ಮಾಡಲು ಹಚ್ಚಬೇಕು" ಎಂದು ಆಜ್ಞೆ ಹೊರಡಿಸಿದರು. "ಈ ವಿಷಯದಲ್ಲಿ ಧರ್ಮದ ಮತ್ತಿತರ ವಿಚಾರವನ್ನು ಕೇಳಕೂಡದು. ಜೂನ್ ಹತ್ತನೇ ತಾರೀಖಿನ ದಿವಸ ಪ್ರತಿಯೊಬ್ಬ ಸೈನ್ಯಾಧಿಕಾರಿಯೂ ಬೆಳಿಗ್ಗೆ ಹತ್ತು ಗಂಟೆಗೆ ಎಲ್ಲ ಸಿಪಾಯಿಗಳನ್ನೂ ಶಸ್ತ್ರರಹಿತರಾಗಿ ಕೂಟಿಗೆ ಕರೆಸಿ ಅದೇ ಸಂದರ್ಭದಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಕಾಡತೂಸನ್ನು ಸ್ವತಃ ತೆಗೆದುಕೊಂಡು ಹೋಗುವಂತೆ ಆಜ್ಞೆ ಮಾಡತಕ್ಕದ್ದು. ಹೀಗೆ ಕಾಡತೂಸನ್ನು ಸ್ವತಃ ತೆಗೆದುಕೊಂಡು ಹೋಗಲು ತಪ್ಪುವ ಸೈನಿಕನ ಮೇಲೆ ಏನು ಕ್ರಮ ಎಂಬುದನ್ನು ನಂತರ ವಿಚಾರಿಸಲಾಗುವುದು" ಎಂದು ಅವರು ಆಜ್ಞೆ ಮಾಡಿದರು.

ಹಿಂದು ಮತ್ತು ಮುಸಲ್ಮಾನ ಧರ್ಮಗಳ ಬಗ್ಗೆ ಯಾವುದೇ ರೀತಿಯ ಗೌರವಭಾವನೆ ಇಟ್ಟುಕೊಳ್ಳದೇ ಸಾಧ್ಯವಾದ ಮಟ್ಟಿಗೆ ಕ್ರೈಸ್ತ ಧರ್ಮಕ್ಕೆ ಸಹಾಯ ಮಾಡುವ ಉದ್ದೇಶ ಇಂಗ್ರೇಜಿ ಸರಕಾರದ್ದು. ಇಂಗ್ರೇಜಿ ಸರಕಾರವು ಈ ದಿಶೆಯಲ್ಲಿ ಕಾಡತೂಸುಗಳನಷ್ಟೇ ಜಾರಿಗೆ ತಂದಿಲ್ಲ. ಹಿಂದೂ ಧರ್ಮಶಾಸ್ತ್ರದಲ್ಲಿ ಹೇಳಲಾದ ನಿಯಮಗಳನ್ನು ನಡೆಯಗೊಡದಿರಲು ೮೪ ಅಂಶಗಳ ಕಾರ್ಯಕ್ರಮವನ್ನು ಸರಕಾರ ಸಿದ್ಧಪಡಿಸಿ ಕಲಕತ್ತೆಯಲ್ಲಿ ಸೇರಿಸಲಾದ ಹಿಂದೀ ಸಂಸ್ಥಾನಿಕರ ರಾಜ–ಮಹಾರಾಜರ ಸಭೆಯ ಕೆಂದು ಸಂಸ್ಥಾನಿಕರಿಗೆ ತಿಳಿಸಲಾಯಿತು; ಶಿಂಧೆ, ಹೋಳಕರ, ಗಾಯಕವಾಡ, ಧುಳಪುರಕರ, ಬಿಲೇಶಿಯಾ ಮೊದಲಾದ ಸಂಸ್ಥಾನಿಕರನ್ನು ಈ ಸಭೆಗೆ ಆಮಂತ್ರಿಸಲಾಗಿತ್ತು. ನಾನಾಸಾಹೇಬ ಪೇಶವೆ, ಲಖನೌನ ಬೇಗಂ, ಝಾಂಸಿ ರಾಣಿ ಲಕ್ಷ್ಮೀಬಾಯಿ, ದಿಲ್ಲಿಯ ಫಿರೋಜಶಹಾ ಅವರನ್ನು ಮಾತ್ರ ಈ ಸಭೆಗೆ ಆಮಂತ್ರಿಸಿರಲಿಲ್ಲ.

ಸಹೋದರರ ಪೈಕಿ ಯಾರಾದರೂ ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿ ಅವನು ಹಿಂದು ಧರ್ಮಶಾಸ್ತ್ರದ ಪ್ರಕಾರ ಪತಿತನೆನಿಸಿದರೂ ಪಿತ್ರಾರ್ಜಿತ ಆಸ್ತಿಪಾಸ್ತಿಯಲ್ಲಿ ಪಾಲುಗಾರಿಕೆಯಲ್ಲಿ ಒಡೆತನದ ಹಕ್ಕು ಕಳೆದುಕೊಳ್ಳುವುದಿಲ್ಲ. ಪುನರ್ವಿವಾಹವಾದ ವಿಧವೆ ಹಾಗೂ ಆಕೆಯ ಮಕ್ಕಳು ಪತಿತರಾಗರು. ಇವೆರಡು ೮೪ ಅಂಶಗಳ ಕಾರ್ಯಕ್ರಮದ ಮುಖ್ಯ ಅಂಶಗಳು. ಹಿಂದು ಹಾಗೂ ಮುಸಲ್ಮಾನ ಧರ್ಮಕ್ಕೆ ಅಪಮಾನವೆಸಗುವ ರೀತಿಯ ಇಂಥ ಅನೇಕ ಅಂಶಗಳನ್ನು ಒಳಗೊಂಡ ೮೪ ಅಂಶಗಳ ಕಾರ್ಯಕ್ರಮವನ್ನು ಅಂದಿನ ರಾಜರ ಸಭೆಯಲ್ಲಿ ಓದಿ ತೋರಿಸಿ ಈ ಅಂಶಗಳೇ ಮುಂದೆ ಕಾಯಿದೆಗಳಾಗಿ ಜಾರಿಗೆ ಬರುವವವು ಎಂದು ಸಾರಲಾಯಿತು.

ಸರಕಾರದ ಈ ಸಲಹೆಗಳನ್ನು ವಿರೋಧಿಸಿದ ಬಾಣಪುರ ಸಂಸ್ಥಾನದ ರಾಜರು, "ನಮ್ಮ ಈ ಹಿಂದುಸ್ಥಾನ, ಭರತಖಂಡ, ಜಂಬೂದ್ವೀಪ- ಇದು ಹಿಂದುಗಳ ಕರ್ಮಭೂಮಿ, ಪುಣ್ಯಭೂಮಿ. ಸರಕಾರ ಹೇಳುವ ಈ ಸಲಹೆಗಳನ್ನು ಜಾರಿಗೊಳಿಸಿದರೆ ಹಿಂದೂ ದೇವದೇವತೆಗಳ ಕ್ಷೋಭೆಗೀಡಾಗಬೇಕಾಗುತ್ತದೆ. ಪ್ರಜೆಗಳಿಗೆ ಅಧರ್ಮದ ಉಪದೇಶ ಮಾಡುವುದು ನಮಗೆ ಸಾಧ್ಯವಿಲ್ಲ," ಎಂದರು. ಪ್ರಜೆಗಳಾದರೂ ಇಂಥ ವಿಷಯಗಳಿಗೆ ಒಪ್ಪಲಾರರು ಎಂದು ಸ್ಪಷ್ಟಪಡಿಸಿದರು.

ಆನಂತರ ಒಬ್ಬ ನವಾಬನು ಎದ್ದುನಿಂತು, "ಈ ಹಿಂದುಸ್ಥಾನದಲ್ಲಿ ಹಿಂದು ಹಾಗೂ ಮುಸಲ್ಮಾನರಿಬ್ಬರೂ ಒಂದೇ ಕಡೆ ಇರುತ್ತಾರೆ. ಒಬ್ಬರು ಮತ್ತೊಬ್ಬರ ಧರ್ಮಕ್ಕೆ ಉಪದ್ರವ ಮಾಡುವದು ಈ ಇಬ್ಬರಿಗೂ ಗೊತ್ತಿಲ್ಲ. ಈ ಉಭಯ ಧರ್ಮಗಳಿಗೆ ಹಾನಿ ಮಾಡುವ ರಾಜರಿಗೆ

ಧರ್ಮವನ್ನು ನಾಶಗೊಳಿಸಿ ದೇಶವನ್ನು ಮುಸಲ್ಮಾನಮಯವಾಗಿಸಲು ನಿರ್ಧರಿಸಿ ಕ್ರಮಕೈಕೊಂಡಾಗಲೇ ಅವನ ಬಾದಶಾಹಿ ನಷ್ಟವಾಯಿತು," ಎಂದು ಹೇಳಿದನು. ಹೀಗೆ ಸಂಸ್ಥಾನಿಕರೆಲ್ಲರೂ ಈ ಸಭೆಯಲ್ಲಿ, ಸರಕಾರದ ಸಲಹೆಗಳಿಗೆ ವಿರೋಧ ಸೂಚಿಸಿದರಾದರೂ ಪ್ರಯೋಜನವಾಗದೇ ಅವರೆಲ್ಲ ನಿರಾಶರಾಗಿ ಮರಳಿದರು.

"ಇನ್ನು ಮೇಲೆ ಜಗತ್ತಿನಲ್ಲಿ ನರಮೇಧ ನಡೆಯಲಿದೆ" ಎಂದು ಜನರು ಆಗಲೇ ತಮ್ಮ ತಮ್ಮಲ್ಲಿ ಮಾತಾಡಿಕೊಳ್ಳಹತ್ತಿ, "ಧರ್ಮಕ್ಕಾಗಿ ಪ್ರಾಣಾರ್ಪಣೆ ಮಾಡೋಣ; ಆದರೆ ಅಧರ್ಮಿಗಳಾಗುವುದು ಬೇಡ. ಇದೇ ಹಿಂದು–ಮುಸಲ್ಮಾನರ ದೃಢ ನಿರ್ಧಾರ" ಎಂದು ಹೇಳಹತ್ತಿದರು.

ಆ ಸಿಪಾಯಿಗಳು ಹೀಗೆ ದೇಶದ ವಿದ್ಯಮಾನಗಳನ್ನು ವಿವರಿಸಿ, "ಬಂಡೇಳಲು ಗೊತ್ತುಪಡಿಸಿದ ದಿನ, ಇಂದಿನಿಂದ ಮೂರನೇ ದಿನಸವೇ. ಕಾಡತೂಸನ್ನು ತೆಗೆದುಕೊಳ್ಳಬೇಕೆಂದು ಕೆಂಪು ಮೋರೆಯವರು ಆಜ್ಞೆ ಮಾಡುತ್ತಲೇ ಸಿಪಾಯಿಗಳು ಇಂಗ್ರೇಜಿಯವರನ್ನು ಕೊಲೆ ಮಾಡಿ ಅವರ ಶಸ್ತ್ರಾಸ್ತ್ರ ಸಂಗ್ರಹ ಲೂಟಿ ಮಾಡುವರು, ಈ ಬಗ್ಗೆ ಈಗಾಗಲೇ ಎಲ್ಲ ಕಡೆ ಗುಪ್ತ ಪತ್ರಗಳು ಹೋಗಿವೆ ಎಂದು ಹೇಳಿ, "ಅದಕ್ಕಿಂತಲೇ ನಾವೀಗ ರಜೆ ಹಾಕಿ ನಮ್ಮ ನಮ್ಮ ಊರುಗಳಿಗೆ ಹೋಗಿ, ನಮ್ಮ ಮನೆಮಂದಿಯನ್ನು ಕೂಡಿಕೊಳ್ಳಲು ನಿರ್ಧರಿಸಿದ್ದೇವೆ," ಎಂದರು.

"ನೀವು ದಕ್ಷಿಣ ಭಾರತದ ಬ್ರಾಹ್ಮಣರು. ಮುಂದೆ ಪ್ರಯಾಣ ಬೆಳೆಸುವ ಯೋಚನೆ ಮಾಡಿದಿರಾದರೆ ನಿಮಗೆ ಸಂಕಟ ತಪ್ಪದು, ನೀವು ನಿಮ್ಮೂರಿಗೆ ಮರಳುವುದೇ ವಾಸಿ," ಎಂದು ಅವರು ನಮಗೆ ಹೇಳಿದಾಗ ಗಾಬರಿಯಾಯಿತು.

ಕ್ರಾಂತಿಕಾರಿಗಳು ಧರ್ಮರಕ್ಷಣೆಯ ಸಲುವಾಗಿ ಹೋರಾಟ ಮಾಡುತ್ತಿದ್ದಾರೆ. ನಾವಂತೂ ಸೈನಿಕರಲ್ಲ, ಯುದ್ಧ ಮಾಡುವವರಲ್ಲ. ನಾವು ದರಿದ್ರ ಬ್ರಾಹ್ಮಣರು. ಆದ್ದರಿಂದ ಹೋರಾಟಗಾರರು ನಮಗೆ ಏನು ಮಾಡಲು ಸಾಧ್ಯವಿದೆ? ಮೇಲಾಗಿ ಇಷ್ಟು ದೂರ ಮಾರ್ಗ ಕ್ರಮಿಸಿ, ಎಳ್ಳಷ್ಟೂ ಆದಾಯವಿಲ್ಲದೇ ಮರಳುವುದಾದರೆ ಹೇಗೆ? ಎಂದು ನಮ್ಮ ನಮ್ಮಲ್ಲೇ ವಿಚಾರಿಸಿ ಮುಂದೆ ಪ್ರಯಾಣ ಸಾಗಿಸುವುದು ಎಂದು ನಿರ್ಧರಿಸಿದೆವು.

"ತೀರ್ಥಯಾತ್ರೆ ಮಾಡುವವರಿಗೆ ತೊಂದರೆಯಾಗದೆಂಬುದೇನೋ ಸರಿ. ಆದರೆ ಕನಿಷ್ಠ ಪಕ್ಷ ಜೂನ್ ೧೦ರ ತನಕ ಇಂದೂರನ್ನು ತಲುಪಿರಿ," ಎಂದು ಸಿಪಾಯಿ ಜನರು ನಮಗೆ ಸೂಚಿಸಿದರು.

ಅವರ ಹೇಳಿಕೆಯಂತೆ ನಾವು ತೀವ್ರ ವೇಗದಿಂದ ಮುಂದೆ ಸಾಗಿದೆವು. ಹತ್ತನೇ ತಾರೀಖು ಬೆಳಗು ಹರಿಯುವಷ್ಟೊತ್ತಿಗೆ ನಾವು ಮಹೂ ಸೈನ್ಯ ಠಾಣೆಯನ್ನು ಸಮೀಪಿಸಿದೆವು. ಬೆಳಿಗ್ಗೆ ದಂಗೆ ಸುರುವಾಗಲಿದ್ದು ಅಷ್ಟರಲ್ಲೇ ಮಹೂ ತಲುಪಿದರಾಯಿತು ಎಂದು ವೇಗ ಹೆಚ್ಚಿಸಿದೆವು. ಬೆಳಗಿನ ಹತ್ತು ಗಂಟೆಯು ಸಹ ಸಮೀಪಿಸಿತು. ಮಹೂ ಸೈನ್ಯ ಠಾಣೆ ಇನ್ನೂ ಒಂದು ಮೈಲು ದೂರವಿತ್ತು. ಆಗ ಒಮ್ಮಿಂದೊಮ್ಮಲೆ ಬಂದೂಕಿನ ಗುಂಡು ಹಾರಿಸುವಿಕೆಯು ಕೇಳಿಬಂದು, ಆ ಸಪ್ಪಳದಿಂದ ವಾತಾವರಣ ತುಂಬಿ ಹೋದಂತಾಯಿತು, ಮುಂದೆ ಏನು ಮಾಡುವುದು ಎಂದು ನಾವು ಪ್ರಾಣಭಯದಿಂದ ಯೋಚನೆಗೊಳಗಾದೆವು. ಆದರೂ ಮೊದಲು ನಿರ್ಧರಿಸಿದಂತೆ ಮುಂದೆ ಸಾಗಿದೆವು. ಈಗ ನಮ್ಮ ನಡಿಗೆಯ ವೇಗವೂ ಕಡಿಮೆಯಾಗಿತ್ತು. ಮಹೂ ಸೈನ್ಯ ಠಾಣೆಯ ಸಮೀಪಕ್ಕೆಯೇ ಬಂದೆವು. ಹಿಂದೀ ಜನರು ಭಯಭೀತರಾಗಿ ಅಲ್ಲಲ್ಲಿ ಕುಳಿತು ತಮ್ಮ ತಮ್ಮೊಳಗೇ ಚರ್ಚಿಸುತ್ತಿರುವದು ಕಂಡುಬಂತು.

ಹೀಗೆಯೇ ನಾವು ಹೊರಟಿರಲಾಗಿ ಸುಮಾರು ಇನ್ನೂರು ಮುನ್ನೂರು ಜನ ಸಿಪಾಯಿಗಳು ಬಂದು ನಮ್ಮನ್ನು ಸುತ್ತುಗಟ್ಟಿ ನಿಂತರು. "ಸಿಪಾಯಿ ಬಂಧುಗಳೇ, ನಾವು ಪುಣೆಯ ಬದಿಯ ಬ್ರಾಹ್ಮಣರು. ಸಿಂಧೆಯ ಬಾಯಜಾಬಾಯಿ ಸಾಹೇಬರು ಯಜ್ಞ ಮಾಡಲಿದ್ದು ಅದರಲ್ಲಿ ಭಾಗವಹಿಸಲು ಆಮಂತ್ರಣ ಬಂದಿರುವುದರಿಂದ ನಾವು ಹೊರಟವರು. ನಮ್ಮ ಬಳಿ ಪೋಥಿ, ಪುಸ್ತಕಗಳಿವೆ, ಬೇಕಾದರೆ ನೋಡಬಹುದು. ನೀವು ಹಿಂದೂಧರ್ಮ ರಕ್ಷಣೆಗಾಗಿಯೇ ಇಂಗ್ರೇಜಿ

ಯುವರ ಜೊತೆ ಹೋರಾಡುತ್ತಿದ್ದು ನಮ್ಮಂಥ ಪೇಟನ್ನ ಸಂಪನ್ನ ದರಿದ್ರ ಬ್ರಾಹ್ಮಣರನ್ನು ದೋಚಿದರೆ ಏನೂ ಪ್ರಯೋಜನವಾಗದು. ನೀವೇ ಈ ದಂಗೆಯಲ್ಲಿ ನಮ್ಮನ್ನು ರಕ್ಷಿಸಿ ಸಮೀಪದ ಒಂದು ಶಹರಕ್ಕೆ ಸುರಕ್ಷಿತವಾಗಿ ತಲುಪಿಸಬೇಕು," ಎಂದು ನಾನೇ ಧೈರ್ಯದಿಂದ ಆ ಸಿಪಾಯಿಗಳಿಗೆ ವಿನಂತಿಸಿದೆ. ಆಗವರು "ನೀವು ನಮ್ಮೊಟ್ಟಿಗೇ ನಿಶ್ಚಿಂತರಾಗಿರಿ. ನಿಮ್ಮ ಅರ್ಜನ ವೆಚ್ಚದ ಬಗ್ಗೆಯೂ ವಿಚಾರಿಸದಿರಿ" ಎಂದು ಭರವಸೆಯ ನುಡಿ ಹೇಳುವಷ್ಟರಲ್ಲೇ ರಸ್ತೆಯಲ್ಲಿ ಕುದುರೆ ಬಂಡಿಯೊಂದರ ಮೇಲೆ ದಾಳಿ ಮಾಡಿ ಅಂಚೆಯವರನ್ನು ಬಡಿದು ಪತ್ರಗಳನ್ನು ವಶಕ್ಕೆ ತೆಗೆದುಕೊಂಡರು ಮತ್ತು ತಾರ ಕಂಬದ ತಂತಿಗಳನ್ನು ಉಧ್ವಸ್ತಗೊಳಿಸಿದರು.

ಹಾಗೆಯೇ ನಾವು ಅವರ ರಕ್ಷಣೆಯಲ್ಲಿ ಇಂದೂರಿನ ಕಡೆ ಮುಂದೆ ಸಾಗಿರುವಾಗ ಈ ಸಿಪಾಯಿ ಬಂಡುಗಾರರ ಜೊತೆಗೆಯೇ ಮುಂದೆ ನಡೆದರೆ ಮತ್ತೆ ಇದೇ ರೀತಿ ಘರ್ಷಣೆ ನಡೆದು. ದಂಗೆಯಲ್ಲಿ ನಮಗೂ ಒಂದು ಗುಂಡು ಬಡಿದರೆ ನಾವು ಕೂಡ ಸ್ವರ್ಗಸ್ಥರಾಗುವ ಸಾಧ್ಯತೆಯಿದೆಯೆನಿಸಿ, ಹೇಗಾದರೂ ಈ ಸಿಪಾಯಿಗಳ ಗುಂಪಿನಿಂದ ಬಿಡುಗಡೆ ಹೊಂದಿ ಬೇರೆಯಾಗಿ ಪ್ರಯಾಣ ಮುಂದುವರಿಸಬೇಕೆಂದು ನಮಗನಿಸತೊಡಗಿತು.

ಅಷ್ಟೊತ್ತಿಗಾಗಲೇ ನನಗೆ ತುಂಬಾ ಪರಿಚಯದವರಾಗಿದ್ದ ಸುಭೇದಾರರನ್ನು ನಾನು ಕಂಡು, "ನಾವು ನಿಮ್ಮ ಜೊತೆ ನಿಮ್ಮ ರಕ್ಷಣೆಯಲ್ಲಿ ಎಂಟು ಹತ್ತು ದಿನ ಪ್ರವಾಸ ಮಾಡಿದ್ದೇವೆ, ನಮಗೆ ಯಾವುದನ್ನೂ ನೀವು ಕಡಿಮೆ ಮಾಡಿಲ್ಲ, ಸಮೀಪದಲ್ಲೇ ಉಜ್ಜಯಿನಿಯಿದೆ. ಅವಂತಿಕಾ ನಗರವೆಂದು ಅದಕ್ಕೆ ಹೆಸರು. ಜ್ಯೋತಿರ್ಲಿಂಗಗಳ ಪೈಕಿ ಒಂದಾದ ಶ್ರೀ ಮಹಾಕಾಳೇಶ್ವರನಿರುವುದು ಉಜ್ಜಯಿನಿಯಲ್ಲೇ. ಉಜ್ಜಯಿನಿಯಲ್ಲಿ ಕ್ಷಿಪ್ರಾ ನದಿಯಿದೆ. ಈ ಕ್ಷೇತ್ರವು ಕಾಶಿಗೆ ಸಮಾನ. ಹಣ ಗಳಿಕೆ ಸಾಧ್ಯವಾಗದೇ ಹೋದರೂ ತೀರ್ಥಯಾತ್ರೆಯಾದರೂ ಘಟಿಸಲಿ. ನಮ್ಮನ್ನು ಉಜ್ಜಯಿನಿಗೆ ತಲುಪಿಸಿರಿ. ಅಲ್ಲಿಯೇ ಮೂರು ದಿನ ಕಳೆದು ಯಾತ್ರಾ ವಿಧಿ ಪೂರೈಸುತ್ತೇವೆ," ಎಂದು ವಿನಂತಿಸಿದೆ. ಬಂಡುಗಾರ ಸಿಪಾಯಿಗಳಲ್ಲಿ ಧರ್ಮದ ಬಗ್ಗೆ ಶ್ರದ್ಧೆಯಿತ್ತು. ಆಗ ಸುಭೇದಾರ ನಮಗಿಬ್ಬರಿಗೂ ತಲಾ ಎರಡೆರಡು ರೂಪಾಯಿ ದಕ್ಷಿಣೆಯನ್ನಿತ್ತು ಸುಮಾರು ೨೫ ಸಿಪಾಯಿಗಳ ರಕ್ಷಣೆಯಲ್ಲಿ ಗಾಡಿಯೊಂದರಲ್ಲಿ ಉಜ್ಜಯಿನಿಗೆ ಕಳುಹಿಸಿದ.

ಉಜ್ಜಯಿನಿಯಿಂದ ನಂತರ ಧಾರಕ್ಕೆ ಹೋದೆವು. ಧಾರದ ಆಗಿನ ರಾಜ ಮರಣ ಹೊಂದಿದ್ದ. ಕಾಶೀ ಯಾತ್ರೆಗೆಂದು ತೆಗೆದಿರಿಸಿದ ಎಂಟು ಲಕ್ಷ ರೂಪಾಯಿಗಳನ್ನು ರಾಣಿಯು ತನ್ನ ಪತಿಯ ಉತ್ತರ ಕ್ರಿಯೆ ಹಾಗೂ ದಾನಧರ್ಮಗಳಿಗೆ ಉಪಯೋಗಿಸಿದಳು. ಧನ ಕನಕವನ್ನಷ್ಟೇ ಅಲ್ಲ, ಆನೆ ಸಹಿತ ಪಶುಸಂಪತ್ತಿಯನ್ನೂ ಸರ್ವಾಲಂಕಾರ ಯುಕ್ತ ದಾಸಿಯರನ್ನೂ ದಾನವಾಗಿ ಕೊಟ್ಟ ಆ ದಾನ ಸಮಾರಂಭ ಪ್ರೇಕ್ಷಣೀಯವಿತ್ತು. ಸರ್ವಾಲಂಕಾರಯುಕ್ತ ದಾಸಿಯನ್ನು ದಾನವಾಗಿ ಪಡೆದ ಬ್ರಾಹ್ಮಣ ತುಂಬಾ ಸಭ್ಯನಾಗಿದ್ದು ಆಕೆಯು ಘಟಂಗಳಾಗಿದ್ದ ಪ್ರಸಂಗವು ಹಾಸ್ಯದ ಹೊನಲನ್ನು ಹರಿಸಿತು. ಬೇರೆ ಬೇರೆ ಶಹರಗಳನ್ನು ವೀಕ್ಷಿಸಿ ಗ್ವಾಲೇರ್ ತಲುಪಿದೆವು. ನಾವು ಅಲ್ಲೇ ಚಾತುರ್ಮಾಸ್ಯ ಕಳೆದೆವು.

ಗ್ವಾಲೇರಿನಲ್ಲಿ ಇರುತ್ತಿದ್ದಾಗ ನಮಗೆ ಬಂಡಾಯದ ಬೇರೆಬೇರೆ ವಾರ್ತೆಗಳು ಬರುತ್ತಿದ್ದವು. ಬಂಡಾಯದಲ್ಲಿ ಸಿಂಧೆ ಹಾಗೂ ಹೋಳಕರರು ಯಾವ ನಿರ್ಧಾರ ತೆಗೆದುಕೊಳ್ಳುವರೆಂದು ಎಲ್ಲರೂ ಆತುರರಾಗಿ ನೋಡುತ್ತಿದ್ದರು ಗ್ವಾಲೇರಿನ ದಿವಾಣ ದಿನಕರರಾವಜೀ ಪೂರ್ತಿ ಇಂಗ್ರೇಜಿಯವರ ಕಡೆಗಿದ್ದರೂ ಅದರ ಪರಿಣಾಮ ಸಿಂಧೆಯವರ ಮೇಲೆ ಎಷ್ಟರ ಮಟ್ಟಿಗೆ ಆದೀತು ಎಂಬುದನ್ನು ಜನ ಕುತೂಹಲದಿಂದ ಚರ್ಚಿಸುತ್ತಿತ್ತು.

ಶ್ರೀಯುತ ನಾನಾಸಾಹೇಬ ಪೇಶವೆಯವರ ಹಿಂಚಣಿ ಅದೇ ತಾನೇ ನಿಲ್ಲಿಸಲ್ಪಟ್ಟಿದ್ದರಿಂದ ಅವರಿಗೆ ಇಂಗ್ರೇಜಿಯರ ಬಗ್ಗೆ ತುಂಬಾ ತಾತ್ಸಾರ ಉಂಟಾಗಿತ್ತು. ಲಖನೌನ ಬೇಗಮ್ ಹಾಗೂ ದಿಲ್ಲಿಯ ಬಾದಶಹರನ್ನೂ ಅದೇ ಸ್ಥಿತಿಯಿತ್ತು, ನಾನಾಸಾಹೇಬ ಪೇಶವೆ ಸ್ವತಃ ನೂರಾರೂ

ಧೀರರೂ ಆದುದರಿಂದ, ಬಂಧು ಬಾಳಾಸಾಹೇಬ, ರಾವಸಾಹೇಬ ಹಾಗೂ ತಾತ್ಯಾ ಟೋಪೆಯಂಥ ಶೂರರೂ ಧೀರರೂ ಅವರ ಬೆನ್ನ ಹಿಂದೆ ಇದ್ದುದರಿಂದ ಅವರ ಮನಸ್ಸಿನಲ್ಲಿ ರಾಜ್ಯಕ್ರಾಂತಿಯ ವಿಚಾರಗಳು ಸಹಜವಾಗಿಯೇ ಸುಳಿಯತೊಡಗಿದ್ದವು. ಲಖನೌನ ಬೇಗಂ ಹಾಗೂ ದಿಲ್ಲಿ ಬಾದಶಹರ ಜೊತೆ ಅವರ ಸಂದೇಶ ವಿನಿಮಯ ನಡೆದೇ ಇತ್ತು. ಧರ್ಮನಾಶದ ಭಯದಿಂದ ಪೀಡಿತರಾದ ಸೈನ್ಯಾಧಿಕಾರಿಗಳ ಜೊತೆ ಭೆಟ್ಟಿ, ಚರ್ಚೆ ಮೇಲಿಂದ ಮೇಲೆ ನಡೆಯುತ್ತಿತ್ತು.

ಒಂದು ದಿನ ಸಂಜೆ, ನದಿಯ ಘಾಟಿನ ಮೇಲೆ ವೇದಮೂರ್ತಿ ರಾಮಚಂದ್ರಶಾಸ್ತ್ರಿ ಬುವಾ ಅವರು ಉಪನ್ಯಾಸ ನಡೆಸಿದ್ದಂತೆಯೇ ಒಬ್ಬ ಸೈನ್ಯಾಧಿಕಾರಿಯು ಅಲ್ಲಿಗೆ ಬಂದು ನಾನಾಸಾಹೇಬ ಪೇಶವೆಯವರಿಗೆ ಮುಜುರೆ ಹೊಡೆದು ಮೀರತ್ ಸೈನ್ಯ ಠಾಣೆಯ ಸೈನಿಕರು ದಂಗೆಯೆಬ್ಬಿಸಿ ಇಂಗ್ರೇಜಿಯರನ್ನು ಕೊಲೆ ಮಾಡಿದರು; ದಿಲ್ಲಿಯಲ್ಲಿ ಇದೇ ರೀತಿ ನಡೆದು ಬಾದಶಹನಿಗೆ ಪಟ್ಟಕಟ್ಟಲಾಯಿತು ಎಂದು ತಿಳಿಸಿದನು. "ಹಿಂದು ಧರ್ಮದ ಮೇಲೆಯೂ ಗಂಡಾಂತರ ಬಂದಿದೆ. ನಾವು ಧರ್ಮರಕ್ಷಣೆಗಾಗಿ ಜೀವವನ್ನಾದರೂ ಕೊಟ್ಟೇವು, ಆದರೆ ಅಧರ್ಮಿಗಳಾಗಿ ಜೀವನ ಸಾಗಿಸಲಾರೆವು. ಹಿಂದು ಧರ್ಮೀಯರಿಗೆ ನೀವೇ ಅಧಿಪತಿಗಳಾಗಿರುವವರು," ಎಂದು ಆತ ಬಿನ್ನವಿಸಿದನು.

ನಾನಾಸಾಹೇಬ ಪೇಶವೆಯವರಲ್ಲಿ ಸೈನ್ಯಾಧಿಕಾರಿ ತಂದ ಈ ವಾರ್ತೆಯು ವೀರಾವೇಶವನ್ನು ಪ್ರಜ್ವಲಿಸಿತು. ಕೋಪದಿಂದ ಆರಕ್ತನೇತ್ರರಾದ ಅವರು, "ಸಹಸ್ರಾವಧಿ ಜನರು ಧರ್ಮರಕ್ಷಣೆಗಾಗಿ ಪ್ರಾಣವನ್ನು ಪಣಕ್ಕೆ ಒಡ್ಡಿ ಹೋರಾಡಲು ತೊಡಗಿರುವಾಗ ನಾವಾದರೂ ಸುಮ್ಮನೆ ಕೂಡಲು ಸಾಧ್ಯವಿಲ್ಲ. ಗಂಗಾಮಾತೆಯ ಸಾಕ್ಷಿಯಾಗಿ ನಾನು ಹೆಂಡತಿ ಮಕ್ಕಳು ರಾಜ್ಯ ಈ ವ್ಯಾಮೋಹ ತೊರೆದು ನಿಮ್ಮ ಜೊತೆಯಲ್ಲಿ ಸೇರಿಕೊಳ್ಳುತ್ತೇನೆ. ಎಲ್ಲರೂ ಸೇರಿ ಹೋರಾಡೋಣ," ಎಂದು ಉದ್ಗರಿಸಿದರು.

ಬ್ರಹ್ಮಾವರ್ತದಲ್ಲಿ ಈ ಸುದ್ದಿ ಮಿಂಚಿನಂತೆ ಸಂಚಾರವಾಗಿ ಎಲ್ಲೆಡೆ ತಲುಪಿತು. ಶ್ರೀಮಂತರು ಸ್ಥಿತಿವಂತರು ತಮ್ಮ ಸಂಪತ್ತಿಯ ರಕ್ಷಣೆಗಾಗಿ ಯೋಜನೆ ಹಾಕುತ್ತಿದ್ದರೆ, ಅನೇಕರು ದಂಗೆಯ ಪ್ರದೇಶಗಳಿಂದ ದೂರ [illegible] ಹೋಗಲು ಸಿದ್ಧತೆಗಳನ್ನು ನಡೆಸಿದ್ದರು. ಸ್ವಾಮಿಭಕ್ತ ಪ್ರಜೆಗಳು ಇತರರಿಗೆ ಧೈರ್ಯ ಹೇಳುತ್ತಾ ಅವರೊಟ್ಟಿಗೆ ತಾವೂ ಇರಲು ಯೋಚಿಸಹತ್ತಿದ್ದರು.

ನಾನಾಸಾಹೇಬ ಪೇಶವೆಯವರು ಬ್ರಹ್ಮಾವರ್ತಕ್ಕೆ ಹೊರಟಾಗ ದಾರಿಯಲ್ಲೇ ಬಂಡಾಯ ಸಿಪಾಯಿಗಳ ಭೆಟ್ಟಿಯಾಯಿತು. ತಾವೆಲ್ಲಾ ಅವರ ಆಜ್ಞೆಯನ್ನೇ ಶಿರಸಾ[illegible] ಭಾವಿಸಿ ಹೋರಾಡುತ್ತೇವೆ ಎಂದವರು ಘೋಷಿಸಿದರು.

ಹೀಗೆಯೇ ಭಾದ್ರಪದ ಮಾಸದ ಒಂದು ದಿನ ಗ್ವಾಲೇರ್ ನಗರದಲ್ಲಿ ದಂಗೆ ಆರಂಭವಾಯಿತು.

ತಾತ್ಯಾ ಟೋಪೆಯನ್ನು ನಾವು ಅಂದು ಪೇಟೆಯಲ್ಲಿ ಕಂಡಿದ್ದೆವು. ನಾನಾಸಾಹೇಬರ ಸಂದೇಶವಾಹಕನಾಗಿ ಬಂದಿದ್ದ ತಾತ್ಯಾ ಟೋಪೆ ಸಿಂಧೆ ಸರಕಾರದ ಬೆಂಬಲ ಕೋರಿದ್ದ. ತಾತ್ಯಾ ಟೋಪೆಯು ಒಬ್ಬೊಬ್ಬರು ಸೈನ್ಯಾಧಿಕಾರಿಗಳನ್ನು ಭೇಟಿ ಮಾಡಿದ್ದ. ಗ್ವಾಲೇರ್ ಶಹರದಿಂದ ಕೊಂಚ ದೂರ ನದಿಯ ದಂಡೆಯ ಮೇಲೆ ಶಿಬಿರ ಹೂಡಿದ ತಾತ್ಯಾ ಟೋಪೆಯನ್ನು ಜಿಯಾಜಿರಾವ ಸಿಂಧೆ ಹಾಗೂ ದಿನಕರರಾವ ಇಬ್ಬರೂ ಭೆಟ್ಟಿಯಾಗಿ, "ನಾವು ಬಂಡಾಯಕ್ಕೆ ಸಕಲ ಸಂಪತ್ತು, ಸಾಧನ ವಾಹನ ಎಲ್ಲವನ್ನೂ ಕೊಡುತ್ತೇವೆ. ಸರಕಾರಿ ಸೈನ್ಯ ಠಾಣೆಯಲ್ಲಿ [illegible] ಗುಂಡುಗಳಿದ್ದು ಅವುಗಳನ್ನು ಕೊಡುತ್ತೇವೆ, ಗ್ವಾಲೇರಿನ ಮೇಲೆ ದಾಳಿ ಬೇಡ, ಎಂದು ಕರಾರು ಮಾಡಿಕೊಂಡರು. ಇದೇ ರೀತಿ [illegible] ಕೇಶವರಾವ ಅವರನ್ನು ಕೇಳಲೆಂದು ಹೋದಾಗ ಅಲ್ಲಿ ಘರ್ಷಣೆ ನಡೆದು ಕೇಶವರಾವ ಬಲಿಯಾಗಿಬಿಟ್ಟನು. ಇದೇ ಪ್ರಕಾರ ಕಾನಪುರವೂ ಕೈವಶವಾಯಿತು.

ಹೀಗೆ ಎಲ್ಲೆಡೆ ಬಂಡಾಯವಾಗಿ ಸಹಸ್ರಾವಧಿ ಜನರು ಪ್ರಾಣಾರ್ಪಣ ಮಾಡುತ್ತಿದ್ದಾಗಲೂ ದೇಶದಲ್ಲಿ ಅಲ್ಲಲ್ಲಿ ಶತ್ರುಕ್ಷಯ, ಶಾಂತಿಯಜ್ಞ, ಬ್ರಾಹ್ಮಣ ಭೋಜನ ಮೊದಲಾದವು ನಡೆಯುತ್ತಿದ್ದವು. ಹೀಗೆಯೇ ಪ್ರಯಾಗದಲ್ಲಿ ಒಂದು ಧಾರ್ಮಿಕ ಸಮಾರಂಭ ನಡೆದಿರುವಾಗ ನಾನಾಸಾಹೇಬ ತಮ್ಮ ಸೈನಿಕರೊಂದಿಗೆ ಬೀಡುಬಿಟ್ಟಿದ್ದ. ನದಿಯಲ್ಲಿಯ ಚಲನವಲನಗಳ ಮೇಲೆ ಸೈನಿಕರು ಲಕ್ಷ್ಯ ಕೇಂದ್ರೀಕರಿಸಿದ್ದರು. ಆಗ ಗಂಗಾ ನದಿಯಲ್ಲಿ ಒಂದು ಚಿಕ್ಕ ಉಗಿಹಡಗ ಹೊರಟಿತ್ತು. ಅದರಲ್ಲಿ ೧೫ ಜನ ಇಂಗ್ರೇಜಿ ಪುರುಷರು, ಮತ್ತು ಕೆಲ ಇಂಗ್ರೇಜಿ ಮಹಿಳೆಯರೂ ಬಾಲಕ-ಬಾಲಕಿಯರೂ ಇದ್ದರು. ಈ ವಿಷಯವನ್ನು ನಾನಾಸಾಹೇಬರಿಗೆ ತಿಳಿಸಿದಾಗ, "ನೌಕೆಯಲ್ಲಿ ಹೆಣ್ಣುಮಕ್ಕಳಿದ್ದಾರೆ, ಹುಡುಗರಿದ್ದಾರೆ. ಅವಕ್ಕೆ ನಾವು ಏನೂ ಧಕ್ಕೆ ಮಾಡುವುದು ಬೇಡ," ಎಂದು ಅವರು ಹೇಳಿದರು.

ಮತ್ತೆ ಭಾಗೀರಥಿಯಲ್ಲಿ ಉಗಿಹಡಗ ನಡೆಯುವದಿಲ್ಲವೆಂಬ ಮೂಢ ನಂಬಿಕೆಗೆ ಪುಟ ಕೊಡುವಂತೆ ಆ ನೌಕೆ ಹೊಯ್ದಾಡಹತ್ತಿದಾಗ ಸೈನಿಕರು ಅದರ ಮೇಲೆ ಗುಂಡಿನ ಮಳೆಗರೆದರು. ಆಗ ನೌಕೆಯಲ್ಲಿಯ ಕೆಲವರು ಸತ್ತರು, ಬದುಕಿ ಉಳಿದ ಹತ್ತು ಇಂಗ್ರೇಜಿ ಮಹಿಳೆಯರು ಹಾಗೂ ನಾಲ್ವರು ಪುರುಷರನ್ನು ಬಂಧಿಸಿ ಅದರಲ್ಲಿಯ ಹತ್ತು ಸಾವಿರ ಚೀಲದಷ್ಟು ಧಾನ್ಯ ಜಪ್ತಿಮಾಡಿ ನಾನಾಸಾಹೇಬ ಪೇಶವೆಯ ಮುಂದೆ ಸಾದರಪಡಿಸಲಾಯಿತು.

ಬ್ರಹ್ಮಾವರ್ತದಲ್ಲಿ ಬಂಧಿಸಿಡಲಾದ ಅವರ ಮೇಲೆ ೨೫ ಜನರ ಪಹರೆಯಿತ್ತು. ಆ ಬಂಧಿತ ಇಂಗ್ರೇಜಿ ಸ್ತ್ರೀಯರ ಪೈಕಿ ಒಬ್ಬ ದಪ್ಪ ಹೆಣ್ಣು ತುಂಬಾ ಚಾಲಾಕ್ ಆಗಿದ್ದಳು; ಅವಳು ಇಂಗ್ರೇಜಿಯಲ್ಲಿ ಒಂದು ಪತ್ರ ಬರೆದು ಅದನ್ನು ಯಾರಿಗೂ ತಿಳಿಯದಂತೆ ರವಾನಿಸಬೇಕೆಂದು ಒಬ್ಬ ಭಂಗೀ ಹೆಣ್ಣು ಮಗಳ ಸಹಾಯ ಪಡೆಯಲೆತ್ನಿಸಿದಳು. ಇಂಗ್ರೇಜಿ ಸ್ತ್ರೀಯು ಸನ್ನೆ ಮಾಡಿದಂತೆ ಭಂಗೀ ಸ್ತ್ರೀಯು ಆ ಪತ್ರ ತೆಗೆದುಕೊಂಡು ಹೋಗುತ್ತಿರುವಾಗ ಕಾವಲುಗಾರನ ಕೈಗೆ ಸಿಕ್ಕಿಬಿದ್ದಳು.

ಭಂಗೀ ಸ್ತ್ರೀ ಹಾಗೂ ಇಂಗ್ರೇಜಿ ಸ್ತ್ರೀ ಇಬ್ಬರನ್ನೂ ಜೊತೆಯಾಗಿ ಕರೆದುಕೊಂಡು ನಾನಾಸಾಹೇಬರ ಮುಂದೆ ಹಾಜರುಪಡಿಸಲಾಯಿತು. ಭಂಗೀ ಸ್ತ್ರೀಯನ್ನು ಚೆನ್ನಾಗಿ ಥಳಿಸಿದ ನಂತರ ಆಕೆ ಬೇಹುಗಾರಿಕೆಯಲ್ಲಿ ಸಹಕರಿಸುತ್ತಿದ್ದುದಾಗಿ ಒಪ್ಪಿಕೊಂಡಳು.

ನಂತರ ಇಂಗ್ರಜಿ ಬಲ್ಲವರನ್ನು ಕರೆಯಿಸಿ, ಆ ಪತ್ರ ಓದಿಸಲಾಯಿತು. "ಕಾನಪುರದಲ್ಲಿ ಜಯದಿಂದ ಶತ್ರುಗಳು ಮೈಮರೆತು ಬ್ರಹ್ಮಾವರ್ತದಲ್ಲಿ ಮೋಜುಮಾಡುವುದರಲ್ಲಿ ತಲ್ಲೀನರಾಗಿದ್ದಾರೆ. ಸೈನಿಕರ ವ್ಯವಸ್ಥೆ ಹಾಗೂ ಭದ್ರತಾ ಕ್ರಮ ಅಷ್ಟೊಂದು ಸುವ್ಯವಸ್ಥಿತವಿಲ್ಲ. ಎಲ್ಲರೂ ಹುಂಬರಿದ್ದಾರೆ. ಈಗ ಶತ್ರುಗಳ ಮೇಲೆ ದಾಳಿಯಿಕ್ಕಲು ಒಳ್ಳೇ ಸೂಕ್ತ ಸಮಯ" ಎಂದು ಇಂಗ್ರೇಜಿ ಸ್ತ್ರೀ ತನ್ನ ಆ ಪತ್ರದಲ್ಲಿ ಬರೆದಿದ್ದಳೆಂದು ಗೊತ್ತಾಯಿತು.

ಶತ್ರುಗಳ ಕಡೆಯ ಸ್ತ್ರೀಯರು ಎಷ್ಟೊಂದು ಕಾರಸ್ಥಾನಿಗಳಾಗಿದ್ದಾರೆಂಬುದನ್ನು ನಾನಾ-

ಸಾಹೇಬ ಕಂಡು ಅಚ್ಚರಿಬಟ್ಟರು. ಬೇಹುಗಾರಿಕೆಯಲ್ಲಿ ನೆರವಾದ ಭಂಗೀ ಸ್ತ್ರೀಯನ್ನು ತೋಫಿನ ಬಾಯಿಗೆ ಕೊಟ್ಟು ಕೊಲ್ಲಿಸಲಾಯಿತು. ಉಳಿದ ಎಲ್ಲ ಇಂಗ್ರೇಜಿ ಸ್ತ್ರೀ-ಪುರುಷರ ರುಂಡಗಳನ್ನು ಶಿಪಾಯಿಗಳು ಚೆಂಡಾಡಿದರು.

ಈ ಘಟನೆ ನಡೆದು ಇನ್ನೂ ಹದಿನೈದು ದಿನಗಳು ಕಳೆದಿರಲಿಲ್ಲ. ಕೆಂಪು ಮೋತಿ (ಇಂಗ್ರೇಜಿಗಳು) ಸೈನಿಕರು ಸುತ್ತೂಕಡೆಯಿಂದ ಕಾನಪುರಕ್ಕೆ ಹೊರಟರು. ಕಾನಪುರದಲ್ಲಿ ಸಮರಸಿದ್ಧತೆ ನಡೆದಿತ್ತು. ಕಾನಪುರದ ಮೇಲೆ ಇಂಗ್ರೇಜಿಯವರು ಒಮ್ಮಿಂದೊಮ್ಮೆಲೆ ದಾಳಿಯಿಕ್ಕಿದರೆಂದು ಬ್ರಹ್ಮಾವರ್ತದಲ್ಲಿದ್ದ ಪೇಶವೆಗೆ ಸುದ್ದಿ ತಲುಪಿದ ತಕ್ಷಣ ತಾತ್ಯಾ ಟೋಪೆ, ಲಾಲಪುರಿ ಬುವಾ ಗೋಸಾವಿ ಹಾಗೂ ಜಳಕಾರಾಮಭಾವು ಅವರನ್ನು ಸೈನ್ಯದೊಂದಿಗೆ ತಕ್ಷಣ ಅಲ್ಲಿಗೆ ಕಳಿಸಲಾಯಿತು. ಅವರ ಹಿಂದೆಯೇ ನಾನಾಸಾಹೇಬ, ಬಾಳಾಸಾಹೇಬ, ರಾವಸಾಹೇಬ ಈ ಮೂವರೂ ದೇವರಿಗೆ ನಮಸ್ಕಾರ ಮಾಡಿ ಹೊರಡುತ್ತಿದ್ದಂತೆಯೇ ಬೆಕ್ಕು ಅಡ್ಡ ಹಾಯ್ದು ಹೋದದ್ದು, ತೇಲಂಗ ಬ್ರಾಹ್ಮಣನೊಬ್ಬನು ಭಸ್ಮ ತೆಗೆದುಕೊಂಡು ಹೊರಟಿರುವುದು, ನಾನಾಸಾಹೇಬರ ಕುದುರೆ ಹಠಾತ್ತಾಗಿ ನಿಂತಿದ್ದು, ರಾವಸಾಹೇಬರ ಕುದುರೆಯ ಕಣ್ಣಲ್ಲಿ ನೀರು ಹೀಗೆ ಅನೇಕ ಅಪಶಕುನಗಳು ಕಂಡುಬಂದವು.

ಆದರೆ ವೀರರಾದವರು ಸಮರದಿಂದ ಹಿಂದೆ ಸರಿಯುವಂತಿಲ್ಲ. ಹೀಗಾಗಿ ಕಾನಪುರದತ್ತ ಹೊರಟರು.

ಕಾನಪುರದಲ್ಲಿ ಉಭಯ ಪಕ್ಷಗಳವರೂ ಸಮಬಲರಿದ್ದು ಎರಡೂ ಕಡೆ ಸಿದ್ಧತೆಯೂ ಚೆನ್ನಾಗಿಯೇ ಇದ್ದುದರಿಂದ ನಿಕರದ ಕಾಳಗ ನಡೆಯಿತು. ಹತ್ತು ದಿವಸ ನಡೆದ ಈ ಕಾಳಗದಲ್ಲಿ ಹಿಂದೀ ವೀರ ಯೋಧರು ಒಂದು ಕ್ಷಣ ಕೂಡ ವಿರಮಿಸದೇ ಹೋರಾಡಿದರು. ಸ್ನಾನ ಭೋಜನವನ್ನೇ ಈ ಅವಧಿಯಲ್ಲಿ ಅವರಿಗೆ ಮಾಡಲು ಸಾಧ್ಯವಾಗಲಿಲ್ಲ. ಸಕ್ಕರೆ ತಿಂದು ನೀರು ಕುಡಿದು ಬಾಯಾರಿಕೆ ನೀಗಿಸಿಕೊಳ್ಳುತ್ತಿದ್ದ ಹಿಂದೀ ವೀರ ಯೋಧರು ಹಾಗೆಯೇ ಎಡಬಿಡದೇ ಕಾದಿದರು.

ಇಂಗ್ರೇಜಿಯವರ ತೋಫುಗಳು ಮುಂದೆ ಬರುತ್ತಿರುವಂತೆಯೇ ಹಿಂದೀಯರು ಹಿಂದೆ ಸರಿಯಬೇಕಾಯಿತು. ಶತ್ರುಗಳು ಗುಂಡಿನ ಮಳೆಗರೆಯುತ್ತಿದ್ದಂತೆಯೇ ಎಲ್ಲೆಡೆ ಹೊಗೆ ತುಂಬಿ ಏನೂ ಕಾಣಿಸದಂತಾಯಿತು. ಹಿಂದೀಯರ ತೋಫುಗಳು ಹಾರಲಿಲ್ಲ. ಆದರೂ ಈ ಯುದ್ಧದಲ್ಲಿ ತೊಡಗಿದ್ದ ಸೇನಾನಾಯಕರ ಬಳಿ ನಾನಾಸಾಹೇಬ ಹಾಗೂ ರಾವಸಾಹೇಬ ಇಬ್ಬರೂ ಬಂದು, "ನಮ್ಮ ಪ್ರಯತ್ನಗಳೆಲ್ಲವೂ ವಿಫಲವಾಗಿದೆ. ದೇವರು ಅದೇಕೋ ಯಶ ನೀಡಿಲ್ಲ. ಇಲ್ಲಿ ಶತ್ರುಗಳ ಕೈಯಲ್ಲಿ ಸಿಕ್ಕು ಸಾಯುವದಕ್ಕಿಂತ ಇನ್ನೊಮ್ಮೆ ವೀರ ಸೈನಿಕರನ್ನು ಕೂಡಿ ಹಾಕಿ ಶತ್ರುಗಳ ಜೊತೆ ಹೋರಾಡೋಣ. ಈ ಸಲ ಯುದ್ಧದಲ್ಲಿ ಗೆಲಯದಿದ್ದರೂ

ನಿಂತು ಸ್ನಾನ ಮಾಡೋಣ", ಎಂದು ಹೇಳಿದರು.

ಹೀಗೆ ಮೂವರೂ ಸೋದರರು ಬ್ರಹ್ಮಾವರ್ತಕ್ಕೆ ಮರಳಿದರು. ಉಳಿದ ಕಾಲ್ದಳ ಹಾಗೂ ಅಶ್ವದಳದವರು ಫತ್ತೇಪುರದ ಕಡೆಗೆ ಹೊರಟರು.

ಕಾನ್ಪುರದಲ್ಲಿ ಪೇಶವೆಯವರ ಹಿನ್ನಡೆಯಾದ ಸುದ್ದಿ ಬ್ರಹ್ಮಾವರ್ತಕ್ಕೆ ತಲಪಿದ ತಕ್ಷಣ ಅಲ್ಲಿ ಭಾರಿ ಗೊಂದಲ ಗಡಿಬಿಡಿ ನಡೆಯಿತು. ಇನ್ನು ಪೇಶವೆಯ ಸೈನ್ಯವೂ ಓಡಿಹೋಗಲಿದ್ದು ಇಂಗ್ರೇಜಿ ಸೈನಿಕರು ಇಲ್ಲಿ ಬರಲಿದ್ದಾರೆ, ನಮ್ಮ ಮಕ್ಕಳನ್ನು ಅವರು ಕೊಲ್ಲಲಿದ್ದಾರೆ ಎಂದೆಲ್ಲ ಗುಸು ಗುಸು ಪ್ರಾರಂಭವಾಯಿತು. ಭೋಜನ ಸಮಾರಂಭವೊಂದರಲ್ಲಿ ತೃಪ್ತರಾದ ಬ್ರಾಹ್ಮಣರು ಆ ಯಜಮಾನನಿಗೆ ಆಶೀರ್ವಾದ ಮಾಡದೇ ಹೆದರಿಕೆಯಿಂದ ಅಲ್ಲಿಂದ ಪಲಾಯನ ಹೇಳುವುದರಲ್ಲಿ ನಿರತರಾಗಿದ್ದರು. ಎಲ್ಲರೂ ತಮ್ಮ ತಮ್ಮ ಹೆಂಡಿರು ಮಕ್ಕಳ ಸುರಕ್ಷಿತತೆಯ ಬಗ್ಗೆ ಯೋಚಿಸುತ್ತಿದ್ದರು. ಅಲ್ಲೋಲಕಲ್ಲೋಲ ವಾತಾವರಣವುಂಟಾಗಿತ್ತು. ಶ್ರೀಮಂತರು ತಮ್ಮ ಧನ ಕನಕ ತೊಡಗಿದ್ದರು. ಇಡೀ ಪ್ರದೇಶವೇ ಶೋಕ ಲಜ್ಜಾ ಗೊಂದಲಮಯವೂ ಆಗಿತ್ತು.

ಪೇಶವೆಯವರು ಮನೆಯಲ್ಲಿ ಹೆಣ್ಣುಮಕ್ಕಳಿಗೆ ಎಲ್ಲ ವಿಷಯ ತಿಳಿಸಿ "ಈಗ ಗಂಗೆಯಲ್ಲಿ ಸಾಕಷ್ಟು ನೀರು ಇದೆ. ನಾವು ಇಲ್ಲಿಂದ ಈಗ ಹೊರಡಬೇಕು. ಲಖನೌಗೆ ಹೋಗಿ ಅಲ್ಲಿಯ ನವಾಬರೊಡನೆ ಚರ್ಚೆ ನಡೆಸಿದ ಬಳಿಕ ಮುಂದೆ ಯೋಜನೆ ಹಾಕುವುದು," ಎಂದು ತಿಳಿಸಿದರು. ಅತ್ಯಮೂಲ್ಯವಾದ ವಸ್ತುಗಳನ್ನು ತೆಗೆದುಕೊಂಡು ಗಂಗಾಪೂಜೆ ನೆರವೇರಿಸಿ ಎಲ್ಲರಿಂದ ಬೀಳ್ಕೊಂಡು ನಾವೆಯನ್ನು ಹತ್ತಿದರು. ತುಂಬಾ ಹೃದಯಸ್ಪರ್ಶಿಯಾದ ಆ ದೃಶ್ಯವು ಎಲ್ಲರ ಹೃದಯ ಬಿರಿಯುವಂತೆ ಮಾಡಿತ್ತು. ಕಣ್ಣೀರು ಕೋಡಿಯಾಗಿ ಹರಿಯುತ್ತಿತ್ತು.

ಗಂಗೆಯ ಆಚೆ ತೀರ ಒಂದು ದಂಡೆಯಲ್ಲಿ ಪೇಶವೆಯವರು ತಮ್ಮ ಪರಿವಾರದೊಂದಿಗೆ ಇಳಿದ ನಂತರ ಲಖನೌನ ಕಡೆಗೆ ಮಾರ್ಗವನ್ನು ನಡೆದೇ ಕ್ರಮಿಸಬೇಕಾಯಿತು. ಅಲ್ಲಿ ನಾನಾಸಾಹೇಬರ ಪತ್ನಿಗೆ ತುಂಬಾ ಬಾಯಾರಿಕೆಯಾದಾಗ ಎಲ್ಲಿಯೂ ನೀರು ಸಿಕ್ಕಲಿಲ್ಲ. ಆಗ ರಾವಸಾಹೇಬರು ರುಮಾಲನ್ನು ಕಟ್ಟಿ ಅದರ ಮುಖಾಂತರ ಬಾವಿಯೊಂದರಲ್ಲಿ ಇಳಿಸಿ ನೀರು ತಂದುಕೊಟ್ಟರು.

ಮುಂದೆ ಪೇಶವೆಯವರು ಲಖನೌವನ್ನು ತಲುಪಿ ಬೇಗಮರನ್ನು ಭೆಟ್ಟಿಯಾದರು. ಲಖನೌ ರಾಜ್ಯ ತುಂಬಾ ಪ್ರಾಚೀನ ಹಾಗೂ ಶ್ರೀಮಂತವಾಗಿತ್ತು. ಇಂಗ್ರೇಜಿಯವರು ಬಾದಶಹನ ಮರಣದ ನಂತರ ಲಖನೌವನ್ನು ಸ್ವಾಧೀನಪಡಿಸಿಕೊಳ್ಳಲು ಪ್ರಯತ್ನಿಸಿ ವಿಫಲವಾಗಿದ್ದರು. ಲಖನೌ ಬೇಗಮ್ ನೇಪಾಳದ ದಿವಾಣ ಜಂಗ್‌ಬಹಾದ್ದೂರ ಅವರ ನೆರವಿನಿಂದ ಇಂಗ್ರೇಜಿಯವರನ್ನು ಹೊರದಬ್ಬಿ ತಮ್ಮ ರಾಜ್ಯದಲ್ಲಿ ತಾವೇ ಆಡಳಿತ ನಡೆಸುತ್ತಿದ್ದರು. ಇಂಗ್ರೇಜಿಯವರು ನೇಪಾಳದ ದಿವಾಣ ಜಂಗ್ ಬಹಾದ್ದೂರನಿಗೆ ವಿಪುಲ ಹಣ ತೆತ್ತು ಒಡೆದುಕೊಂಡು ಅವನ ಸಹಾಯ ಪಡೆದು ಲಖನೌ ಮೇಲೆ ದಾಳಿ ಮಾಡಿದರು. ಹೀಗೆ ಲಖನೌ ಇಂಗ್ರೇಜಿಯವರ ಕೈವಶವಾಯಿತು. ಬೇಗಮ್ ತಮ್ಮ ಸೈನ್ಯ ಹಾಗೂ ಸಂಪತ್ತು ಹೇರಿದ ಒಂಟೆ ಆನೆಗಳ ಸಮೇತ ವಾಯುವ್ಯದ ಕಡೆಗೆ ಫರಾರಿಯಾದರು. ನಗರದ ಅನೇಕ ದೊಡ್ಡ ದೊಡ್ಡ ಸಾಹುಕಾರರು ಅಲ್ಲಿಂದ ಓಡಿದರು. ೧೮೫೭ರ ಬಂಡಾಯದಲ್ಲಿ ಹೀಗೆ ಇಂಗ್ರೇಜಿಯವರ ಕಡೆಗೆ ದೈವಾನುಗ್ರಹವಿದ್ದು ಅವರಿಗೆ ಹಾಸಿಂತ ಲಾಭವೇ ಹೆಚ್ಚಾಯಿತು.

ಕಾನಪುರ ಯುದ್ಧದಲ್ಲಿ ಇಂಗ್ರೇಜಿಯವರಿಗೆ ಜಯ ಲಭಿಸಿದ ನಂತರ ಅಲ್ಲಿಂದ ಫರಾರಿಯಾದ ತಾತ್ಯಾ ಟೋಪೆ ಉಳಿದುಳಿದ ಸೈನ್ಯ ತೆಗೆದುಕೊಂಡು ಕಾಲ್ಪಿಯ ಮೇಲೆ ದಾಳಿ ಮಾಡಿದನು. ಕಾಲ್ಪಿಯ ಕಿಲ್ಲೆಯಲ್ಲಿ ಶತ್ರು ಇಂಗ್ರೇಜಿಗಳನ್ನು ಹುಡುಕಿ ಹುಡುಕಿ ಕೊಲ್ಲಲಾಯಿತು.

ಕಾಲ್ಪಿಯಲ್ಲಿ ತಾತ್ಯಾ ಟೋಪೆಯು ಪೇಶವೆ ಹೆಸರಿನಲ್ಲಿ ಆಡಳಿತ ವಹಿಸಿಕೊಂಡು ಅಧಿಕಾರ ನಡೆಸ ಹತ್ತಿದ. ತಾತ್ಯಾ ಟೋಪೆಯು ೨೫ ಅಶ್ವಾರೋಹಿಗಳನ್ನು ಕಳಿಸಿ ರಾವಸಾಹೇಬ ಪೇಶವೆಯವರನ್ನು ಕಾಲ್ಪಿಗೆ ಕರೆಸಿಕೊಂಡ. ಎಂಟು ಸಾವಿರ ಸೈನಿಕರೊಂದಿಗೆ ರಾವಸಾಹೇಬ ಪೇಶವೆ

ಯಮುನಾ ನದೀತೀರಕ್ಕೆ ಬಂದಾಗ ನದಿಯನ್ನು ದಾಟಲು ನಾವು ಇಲ್ಲದೇ ಕೆಲ ಕಾಲ ಕಾಯಬೇಕಾಯಿತು. ಇಂಗ್ರೇಜಿ ಜನರಿಗೆ ಇದು ಗೊತ್ತಾದರೂ ಸಹ ತಾತ್ಯಾ ಟೋಪೆಯ ಭಯದಿಂದ ಏನೂ ಮಾಡದೇ ಅವರು ಸುಮ್ಮನಿದ್ದರು. ರಾವಸಾಹೇಬ ಸುರಕ್ಷಿತವಾಗಿ ಕಾಲ್ಪಿ ತಲುಪಿದಾಗ ತಾತ್ಯಾ ಟೋಪೆಯ ಆನಂದಕ್ಕೆ ಮೇರೆಯಿರಲಿಲ್ಲ. ಹೀಗೆ ಕಾಲ್ಪಿಯಲ್ಲಿ ಪೇಶವೆ ಆಡಳಿತ ನಡೆಯುತ್ತಿತ್ತು. ಕಾಲ್ಪಿಯ ಪಶ್ಚಿಮ ದಿಕ್ಕಿನಲ್ಲಿ ಸರದಾರ ಲಕ್ಷ್ಮಣ ಸಿಂಧೆ, ದಕ್ಷಿಣ ದಿಕ್ಕಿನಲ್ಲಿ ಜಳಕಾರಾಮಭಾವು ಅವರು ಕಾವಲು ಮಾಡುತ್ತಿದ್ದರು. ತಾತ್ಯಾ ಟೋಪೆಯಂತೂ ಕಾಲ್ಪಿಯ ಪೇಶವೆ ಆಡಳಿತಕ್ಕೆ ಮೈಗಾವಲಾಗಿದ್ದ.

ಪೇಶವೆಯವರ ಹೋರಾಟದ ವಿಷಯವನ್ನು ನಾವು ಗ್ವಾಲೇರಿನಲ್ಲೇ ತಿಳಿದುಕೊಂಡೆವು; ಅಲ್ಲಿ ಬಾಯಜಾಬಾಯಿಯ ಯಜ್ಞ ಸಮಾರಂಭ ಪೂರೈಸಿಕೊಂಡು, ಸಂಭಾವನೆ ಸ್ವೀಕರಿಸಿ ವಿಚಾರಮಾಡುತ್ತ ಕುಳಿತೆವು. ರಾಮಭಟ್ಟಕಾಕಾ ಆಗ ಬ್ರಹ್ಮಾವರ್ತದಲ್ಲಿ ತನ್ನ ಗುರುತಿನ ಒಬ್ಬ ಗೃಹಸ್ಥನಿದ್ದು ಅವರ ಆಪ್ತರ ಪೈಕಿ ಒಬ್ಬನು ಝಾಂಸಿ ರಾಣಿಯ ಕಡೆ ಇದ್ದಾನೆ ಎಂಬುದನ್ನು ಸ್ಮರಣೆಗೆ ತಂದುಕೊಂಡರು. ಝಾಂಸಿಗೆ ಹೋಗಲು ನಿರ್ಧರಿಸಿದೆವು. ಒಬ್ಬ ಮರಾಠಾ ಸರದಾರನು ಗ್ವಾಲೇರಿನಿಂದ ಝಾಂಸಿಗೆ ಹೊರಟಿದ್ದು ನಾವು ಕೂಡಾ ಅವನ ಜೊತೆ ಗಾಡಿಯನ್ನೇರಿ ಝಾಂಸಿ ತಲುಪಿದೆವು.

ಝಾಂಸಿ ಸಂಸ್ಥಾನವು ಕಾರ್ಹಾಡೆ ಬ್ರಾಹ್ಮಣರದು, ಪೇಶವೆಯವರು ಹಿಂದುಸ್ತಾನದ ಬೇರೆ ಬೇರೆ ಪ್ರದೇಶಗಳನ್ನು ಗೆಲ್ಲುತ್ತ ನಡೆದು ದಿಲ್ಲಿ ಬಾದಶಹನ ಬಹಳಷ್ಟು ಪ್ರದೇಶಗಳನ್ನು ಸ್ವಾಧೀನಪಡಿಸಿಕೊಂಡು ಆ ಭಾಗದ ಒಡೆತನವನ್ನು ಮಹಾದಾಜಿ ಸಿಂಧೆಗೆ ಒಪ್ಪಿಸಿದರು. ಮಹಾದಾಜಿ ಸಿಂಧೆ ಗ್ವಾಲೇರದಲ್ಲಿರುತ್ತಿದ್ದರು. ಸಿಂಧೆಯ ಮೇಲೆ ಕಣ್ಣಿಡುವುದರ ಸಲುವಾಗಿ ಒಂದು ಸ್ವತಂತ್ರ ಪ್ರಾಂತವನ್ನು ತಮ್ಮ ನೇರ ನಿಯಂತ್ರಣದಲ್ಲಿಟ್ಟುಕೊಳ್ಳಲು ಯೋಚಿಸಿದ ಪೇಶವೆಯವರು ಅತ್ಯಂತ ಪುರಾತನವಾದ ಹಾಗೂ ಭದ್ರವಾದ ಝಾಂಸಿಯನ್ನು ಆಯ್ಕೆ ಮಾಡಿದರು, ಝಾಂಸಿ ಪ್ರಾಂತದಲ್ಲಿ ಸುಮಾರು ೧೫ ಲಕ್ಷದಷ್ಟು ತಮ್ಮ ಆತ್ಮೀಯ ಜನಸಮುದಾಯವನ್ನು ನೆಲೆಗೊಳಿಸಿ ಮೂಲತಃ ಖಾನದೇಶದ ಪಾರೋಳೆಯವರಾದ ಶಿವರಾಮಭಾವು ಪಾರೋಳೇಕರ ಎಂಬವರನ್ನು ಪುಣೆಯಿಂದ [illegible] ಝಾಂಸಿ ಪ್ರಾಂತದ ಸುಭೇದಾರರೆಂದು ನೇಮಕ ಮಾಡಿದರು. ಅವರ ಮಕ್ಕಳು, ಮೊಮ್ಮಕ್ಕಳು ಪೇಶವಾಯಿ ಆಡಳಿತದ ಪರಿಸಮಾಪ್ತಿಯಾಗುವ

ತನಕ ಅವರ ಸೇವೆಯನ್ನೇ ಮಾಡಿಕೊಂಡಿದ್ದು ಪ್ರಾಂತದ ಉತ್ಪನ್ನವನ್ನು ಅವರಿಗೆ ಕಳಿಸಿಕೊಡುತ್ತಿದ್ದರು. ಪೇಶವಾಯಿ ಆಡಳಿತದ ಸಮಾಪ್ತಿಯ ವೇಳೆಗೆ ಝಾಂಸಿ ಪ್ರಾಂತವು ಸ್ವತಂತ್ರ ಸಂಸ್ಥಾನವಾಯಿತು. ಸಂಸ್ಥಾನದ ಕೊನೆಯ ಮೂರ್‍ನಾಲ್ಕು ಆಳಿಕೆಯವರು ನಿಪುತ್ರಕರಾಗಿ ದತ್ತಕ ಪಡೆಯಬೇಕಾಯಿತು.

ಕೊನೆಯ ಸಂಸ್ಥಾನಿಕ ಗಂಗಾಧರಬಾಬಾ ಅವರ ಪತ್ನಿ ಅನಾರೋಗ್ಯದಿಂದ ಪೀಡಿತರಾಗಿ ಸ್ವರ್ಗಸ್ಥರಾದರು. ಆಗ ಗಂಗಾಧರಬಾಬಾ ಪುನಃ ವಿವಾಹ ಮಾಡಿಕೊಳ್ಳುವ ಇಚ್ಛೆಹೊಂದಿ ಸುರೂಪಳಾದ ಕುಲೀನ ಕನ್ಯೆಯ ಶೋಧ ಮಾಡುತ್ತಿದ್ದರು. ಒಳ್ಳೇ ಸಂಬಂಧ ಕೂಡಿಬಂದು ಮದುವೆಯಾಗುವುದೇ ಕಠಿಣವಾಗಿತ್ತು. ಅದಕ್ಕೊಂದು ಕಾರಣವೂ ಇತ್ತು.

ಗಂಗಾಧರಬಾಬಾ ಷಂಢರಾಗಿದ್ದರು. ಅವರು ಕೆಲವೊಮ್ಮೆ ಸ್ತ್ರೀವೇಷಧಾರಣ ಮಾಡುತ್ತಿದ್ದರು. ಸ್ತ್ರೀಯರಂತೆ ಋತು ನಿಯಮಗಳನ್ನೂ ಪಾಲಿಸಿ ನಾಲ್ಕನೇ ದಿನ ಸ್ನಾನಮಾಡಿ ಪಲ್ಲಂಗಿನ ಮೇಲೆ ಮಲಗಿ ಅಗ್ಗಿಷ್ಟಿಕೆಯಿಂದ ಕಾಯಿಸಿಕೊಳ್ಳುತ್ತಿದ್ದರು. ಅವರು ಹೀಗೆ ಇದ್ದರೂ ಸಹ ಅವರ ಮೊದಲನೇ ಪತ್ನಿ ಪತಿವ್ರತೆಯಾಗಿದ್ದು ಅವಳಿಗೆ ಒಬ್ಬ ಮಗ ಹುಟ್ಟಿದ್ದನೆಂದು ಹೇಳಲಾಗುತ್ತಿತ್ತು. ಅವರು ಪುರುಷತ್ವಪ್ರಾಪ್ತಿಗಾಗಿ ಕೆಲವು ಅತಿ ನಿಂದ್ಯವಾದ ನಿಯಮಗಳನ್ನು ಪಾಲಿಸುತ್ತಿದ್ದರೆಂದೂ ಪ್ರಚಲಿತವಿತ್ತು. ಆದರೆ ಗಂಗಾಧರಬಾಬಾ ಅರವರು ಉಗ್ರ ಶಾಸನ. ಸಂಸ್ಥಾನದಲ್ಲಿ, ಕಳವು ಸುಲಿಗೆಯ ಹೆಸರು ಸಹ ಕೇಳಿಬರುತ್ತಿರಲಿಲ್ಲ. ಕಳವು ಮಾಡುತ್ತಿರುವಾಗ ಸಿಕ್ಕವನನ್ನು ಧರ್ಮಶಾಸ್ತ್ರ ಪ್ರಕಾರ ಅವರ ಕೈಗಳನ್ನು ಕತ್ತರಿಸಿ ಶಾಸನ ಮಾಡಲಾಗುತ್ತಿತ್ತು. ಗಂಗಾಧರಬಾಬಾರವರ ಬಿಗುವಿನ ಆಡಳಿತದ ಬಗ್ಗೆ ಇಂಗ್ಲೀಷ್ ಜನರು ಸಹ ಪ್ರಶಂಸೆ ವ್ಯಕ್ತಪಡಿಸುತ್ತಿದ್ದರು. ಗಂಗಾಧರಬಾಬಾ ಹೀಗೆ ಕನ್ಯಾಶೋಧನೆಗೆ ತೊಡಗಿರುವಾಗ ಬ್ರಹ್ಮಾವರ್ತದಲ್ಲಿ ಪೇಶವೆಯವರ ಹೋಮಶಾಲೆಯಲ್ಲಿ ತಾಂಬೆ ಎಂಬ ವೈದಿಕರ ಮನೆಯೊಳಗೂ ಅವನಿಗೆ ಒಬ್ಬ ಸುಂದರ ಕನ್ಯೆಯಿದ್ದು ವಿವಾಹಕ್ಕೆ ಯೋಗ್ಯಳಿರುವಳೆಂದೂ ಗೊತ್ತಾಯಿತು. ಗಂಗಾಧರಬಾಬಾ ಅವರ ಕಿವಿಗೆ ಈ ಮಾತನ್ನು ಸಂಸ್ಥಾನದ ಕಾರಕೂನನೊಬ್ಬನು ಹಾಕಿ ಕನ್ಯಾ ಶೋಧಕ್ಕಾಗಿ ನಡೆದಿದ್ದನು.

ನಮ್ಮ ಕಕ್ಕಂದಿರ, ಬ್ರಹ್ಮಾವರ್ತದ ಹೋಮಶಾಲೆಯಲ್ಲಿಯೇ ೧೫ ವರ್ಷ ಋತ್ವಿಜರಾಗಿ ಸೇವೆ ಸಲ್ಲಿಸಿದ್ದರು. ಮೋರೋಪಂತ ತಾಂಬೆಯವರು ಅವರ ಶಿಷ್ಯರಲ್ಲಿ ಒಬ್ಬರು. ಮೋರೋಪಂತ ತಾಂಬೆಯವರ ಪತ್ನಿ ನಿಧನಹೊಂದಿದಾಗ ಅವರ ಮಗಳು ನಾಲ್ಕು ವರ್ಷದವಳು. ಮೋರೋಪಂತರು ತಮ್ಮ ಏಕಮಾತ್ರ ಪುತ್ರಿಯನ್ನು ಅತ್ಯಂತ ಪ್ರೇಮದಿಂದ ಬೆಳೆಸಿದ್ದರು. ಶುಕ್ಲಪಕ್ಷದ ಚಂದ್ರಮನಂತೆ ಸುಂದರವಾದ ಗೌರ ವರ್ಣದ ಆ ಬಾಲೆ ದಿನದಿಂದ ದಿನಕ್ಕೆ ಬೆಳೆಯುತ್ತಿದ್ದಳು. ಮೋರೋಪಂತರ ಮನೆಯಲ್ಲಿ ಬೇರೆ ಯಾರೂ ಇಲ್ಲದ್ದರಿಂದ ಪೇಶವೆಯ ಮನೆಯಲ್ಲಿ ಆಕೆ ಉಂಡುಟ್ಟು ಸುಖದಿಂದ ಬೆಳೆಯುತ್ತಿದ್ದಳು. ಪುರುಷರ ಜೊತೆಯೇ ಆಡುತ್ತಿದ್ದುದರಿಂದ ಅವಳಲ್ಲಿ ಪುರುಷರಲ್ಲಿರಬೇಕಾದ ಶೌರ್ಯ, ಧೈರ್ಯ, ಕರ್ತೃತ್ವಶಕ್ತಿ, ಸಾಮರ್ಥ್ಯ ಇವು ಬೆಳೆದುಬಂದಿದ್ದವು. ಕುದುರೆ ಸವಾರಿ, ಆನೆ ಸವಾರಿ, ತಲವಾರ ಹಾಗೂ ಬಂದೂಕುಗಳ ಬಳಕೆ, ಯುದ್ಧಶಾಸ್ತ್ರ, ಮೊದಲಾದವುಗಳನ್ನು ಅವಗತ ಮಾಡಿಕೊಂಡಿದ್ದಳು. ಪ್ರೀತಿಯಿಂದ ಬೆಳೆಸಿದ ಈ ಹುಡಿಗೆ ಧಷ್ಟ-ಪುಷ್ಟ ಳಾಗಿದ್ದರಿಂದ ಕೇವಲ ಹತ್ತು, ಹನ್ನೆರಡು ವರುಷದ ಸುಮಾರಿಗೆಯೇ ತಂದೆಗೆ, ನಾಚಿಕೆ ಹುಟ್ಟಿಸುವಷ್ಟು ಪ್ರೌಢಳಾಗಿ ಕಾಣುತ್ತಿದ್ದಳು. ಆಕೆಗೆ ಮುಂದೆ ರಾಜಯೋಗವಿದ್ದುದರ ಪ್ರಯುಕ್ತವೋ ಏನೋ ಎಷ್ಟೊಂದು ವರ ಶೋಧನೆ ಮಾಡಿದರೂ ಮೋರೋಪಂತರಿಗೆ ಒಬ್ಬ ಅಳಿಯ ಸಿಕ್ಕಿರಲಿಲ್ಲ.

ಝಾಂಸಿಯಿಂದ ಕನ್ಯಾಶೋಧ ಮಾಡುತ್ತಾ ಹೊರಟ ಕಾರಕೂನನು ಬ್ರಹ್ಮಾವರ್ತಕ್ಕೆ ಬಂದು ಮೋರೋಪಂತ ತಾಂಬೆಯ ಮುಂದೆ ವಿಷಯ ಪ್ರಸ್ತಾಪಿಸಿದ. ಗೋತ್ರ, ಗಣ ಎಲ್ಲ ಕೂಡಿಬಂದವೆಂದಾದ ಕೂಡಲೇ ಮೋರೋಪಂತರಿಗೆ ಆನಂದವಾಯಿತು. ಜೋಡಿ ಬಾಬಾ

ಎಂಬ ಬ್ರಾಹ್ಮಣರ ಮಧ್ಯಸ್ಥಿಕೆಯಲ್ಲಿ ಈ ಲಗ್ನದ ನಿಶ್ಚಯವಾಯಿತು. ಕನ್ಯೆಗೆ ಪ್ರತಿ ನಾವೇನೂ ಹಣ ತೆಗೆದುಕೊಳ್ಳುವುದಿಲ್ಲ. ಆದರೆ ಮೋರೋಪಂತ ತಾಂಬೆಯವರಿಗೆ ಗಂಡು ಸಂತತಿಯಿಲ್ಲವಾದುದರಿಂದ ಅವರು ಎರಡನೇ ಮದುವೆ ಮಾಡಿಕೊಳ್ಳುವವರು. ಇದರ ಖರ್ಚನ್ನು ಝಾನ್ಸಿಯವರು ಭರಿಸಬೇಕು, ಹಾಗೂ ಅವರಿಗೆ ಝಾನ್ಸಿಯಲ್ಲೇ ಇರಲು ಅವಕಾಶ ಕಲ್ಪಿಸಬೇಕು ಎಂದು ಮಧ್ಯಸ್ಥಿಕೆ ವಹಿಸಿದ ಜೋಶಿ ಬುವಾ ಅವರು ಕರಾರು ಹಾಕಿದರು. ಕಾರಕೂನನು ಈ ಕರಾರಿಗೆ ಗಂಗಾಧರಬಾಬಾರನ್ನು ಒಪ್ಪಿಸಿದನು. ಮೋರೋಪಂತ ತಾಂಬೆಯವರು ತಮ್ಮ ಮಗಳೊಂದಿಗೆ ಝಾನ್ಸಿಗೆ ಬಂದರು.

ಸುಮುಹೂರ್ತವೊಂದರಲ್ಲಿ ಗಂಗಾಧರಬಾಬಾ ಅವರೊಂದಿಗೆ ಮೋರೋಪಂತ ತಾಂಬೆಯವರ ಮಗಳ ಲಗ್ನವಾಗಿ ಆಕೆಗೆ ಲಕ್ಷ್ಮೀಬಾಯಿ ಎಂದು ಹೆಸರಿಡಲಾಯಿತು. ಲಕ್ಷ್ಮೀಬಾಯಿಯು ಝಾನ್ಸಿಯ ರಾಣಿಯಾದ ಬಳಿಕ ಮೋರೋಪಂತರ ಅದೃಷ್ಟವೂ ತೆರೆದು ಮತ್ತೆ ಅವರ ವಿವಾಹವಾಗಿ ಅವರು ಒಬ್ಬ ಮಗ ಮತ್ತು ಮಗಳಿಗೆ ತಂದೆಯಾದರು.

ಲಗ್ನವಾದಂದಿನಿಂದ ಲಕ್ಷ್ಮೀಬಾಯಿಗೆ ಯಾವುದೇ ರೀತಿಯ ಸುಖವಿರಲಿಲ್ಲ. ಗಂಡನಂತೂ ಷಂಢನೇ ಆಗಿದ್ದ; ಆದರೆ ಅವನ ಆಡಳಿತದ, ದರ್ಪ, ತುಂಬಾ ಕಠಿಣವಾಗಿತ್ತು; ಹೀಗಾಗಿ ಲಕ್ಷ್ಮೀಬಾಯಿಗೆ ಎಳ್ಳಷ್ಟೂ ಸ್ವಾತಂತ್ರ್ಯವಿರಲಿಲ್ಲ. ಸದಾಕಾಲವೂ ಆಕೆಗೆ ಮಹಿಳೆಯರ ಕಾವಲಿರುತ್ತಿತ್ತು. ಗಂಡಸರ ಕಡೆ ಕಣ್ಣೆತ್ತಿ ಸಹ ನೋಡಲು ಅವಕಾಶವಿರಲಿಲ್ಲ. ಈ ರೀತಿಯ ದರ್ಪಯುಕ್ತ ನಿರ್ಬಂಧದಿಂದ ಆಕೆಯಲ್ಲಿಯ ರಾಜಶೀಲ ಗುಣಗಳು ಕಮ್ಮಿಯಾಗಿ ಅನೇಕ ದುರ್ಗುಣಗಳಿಗೂ ಆಕೆ ಬಲಿಯಾಗುವ

ಸಾಧ್ಯತೆಯಿತ್ತು. ಆದರೆ ದುರ್ದೈವವಶಾತ್ ಗಂಗಾಧರಬಾಬಾ ಹೆಚ್ಚು ಕಾಲ ಬದುಕಲಿಲ್ಲ; ನವಜ್ವರದಿಂದ ತೀರಿಕೊಂಡರು.

ಅವರಿಗೆ ಮಕ್ಕಳಿರಲಿಲ್ಲ. ಗಂಗಾಧರಬಾಬಾ ತಮ್ಮ ಮೃತ್ಯು ಸಮೀಪಿಸಿದಾಗ ರೆಸಿಡೆಂಟ್ ಗಾರ್ಡನ್ ಸಾಹೇಬನನ್ನು ಕರೆಸಿಕೊಂಡು ಪಾರೋಳದ ನಮ್ಮ ಆಪ್ತರಲ್ಲಿ ಅನೇಕ ಮಕ್ಕಳಿವೆ, ಅವರ ಪೈಕಿ ಒಬ್ಬ ಚತುರ ಮಗುವನ್ನು ತನ್ನ ಹೆಂಡತಿಗೆ ದತ್ತಕ ತೆಗೆದುಕೊಳ್ಳಲು ಅವಕಾಶ ನೀಡಬೇಕೆಂದು ವಿನಂತಿಸಿದರು.

ಗಾರ್ಡನ್ ಸಾಹೇಬನಿಗೂ ಗಂಗಾಧರಬಾಬಾರ ಮೇಲೆ ಅಪಾರ ಪ್ರೇಮವಿತ್ತು. ಹೀಗಾಗಿ ದತ್ತಕ ನಡೆಯಲೆಂದು ಆತನು ಬಹಳ ಪ್ರಯತ್ನ ಮಾಡಿದ. ಆದರೆ ಆತನಿಗೆ ಯಶಸ್ಸು ಸಿಗಲಿಲ್ಲ. ಗವ್ಹರ್ನರರು ಝಾಂಸಿ ಸಂಸ್ಥಾನವನ್ನು ಖಾಲಸಾ ಮಾಡಿಕೊಂಡದ್ದಾಗಿ ಘೋಷಿಸಿ ಬಿಟ್ಟರು.

ಗಾರ್ಡನ್ ಸಾಹೇಬನು ಇಡೀ ಝಾಂಸಿ ಪ್ರಾಂತದ ಅಧಿಕಾರವನ್ನು ಸ್ವಾಧೀನಪಡಿಸಿಕೊಂಡು ಅರಮನೆ ಹಾಗೂ ಕಿಲ್ಲೆಯನ್ನು ಲಕ್ಷ್ಮೀಬಾಯಿಯ ವಶದಲ್ಲೇ ಇರಲು ಬಿಟ್ಟ. ಲಕ್ಷ್ಮೀಬಾಯಿ ದಕ್ಷ ಹಾಗೂ ಚಾಣಾಕ್ಷ ಮಹಿಳೆ, ಆಕೆ ತನ್ನ ಗಂಡನ ಆಜ್ಞೆಯನ್ವಯ ಪಾರೋಳದ ಒಬ್ಬ ಬಾಲಕನನ್ನು ದತ್ತಕ ಪಡೆದು ತನ್ನ ಮಗನಿಗೆ ಪುನಃ ರಾಜ್ಯ ಕೊಡಬೇಕೆಂದು ಸರಕಾರಕ್ಕೆ ಅರ್ಜಿ ಬರೆಯಿಸಿದಳು. ತನ್ನ ದತ್ತಕ ಪುತ್ರನ ಹೆಸರಿನಲ್ಲಿ ಆಕೆಯು ಝಾಂಸಿ ವಾಡೆ ಹಾಗೂ ನಗರದಲ್ಲಿ ಆಡಳಿತ ಆರಂಭಿಸಿದಳು.

ನಾವು ಝಾಂಸಿಯನ್ನು ತಲುಪಿದ ಬಳಿಕ ಊರ ಹೊರಗಿನ ಒಂದು ದೊಡ್ಡ ತೋಟದಲ್ಲಿ ಇಳಿದು ಭೋಜನ ತೀರಿಸಿ ಕೆಲ ಹೊತ್ತು ವಿರಮಿಸಿದೆವು. ಮೋರೋಪಂತ ತಾಂಬೆಯವರ ಪರಿಚಯವೇನೋ ನಮಗಿದ್ದಿತಾದರೂ ಅವರು ರಾಣಿಯ ತಂದೆಯೇ ಆಗಿರುವುದರಿಂದ ನೇರವಾಗಿ ಅವರಲ್ಲಿಗೆ ಹೋಗಿ ಉಳಿದುಕೊಳ್ಳಬೇಕೆಂದೆನಿಸಲಿಲ್ಲ. ಹಾಗೆಯೇ ಎಲ್ಲಿ ಉಳಿದುಕೊಳ್ಳುವುದೆಂದು ಯೋಚಿಸುತ್ತ ನಡೆದಿರಲಾಗಿ ವೇದಮೂರ್ತಿ ಕೇಶವಭಟ್ಟ ಮಾಂಡವಗಣೆ ಎಂಬವರ ಬಳಿ ಹೋಗಿ ಇರಬಹುದೆಂದು ಅನೇಕರು ಸೂಚಿಸಿದರು. ಅವರಲ್ಲಿ ಆತಿಥ್ಯ ಚೆನ್ನಾಗಿತ್ತು. ಊರಿನ ಹಾಗೂ ಆಸ್ಥಾನದ ನೀತಿನಿಯಮಗಳನ್ನು ತಿಳಿಯದೇ ಮೋರೋಪಂತರನ್ನು ಕಾಣುವುದು ಬೇಡವೆಂದು ನಾವು ಎಳೆಂಟು ದಿನ ಹಾಗೆಯೇ ಕಳೆದೆವು

ಝಾಂಸಿ ನಗರವು ಉತ್ತರ ಹಿಂದುಸ್ತಾನದಲ್ಲೇ ಅತಿ ಸುಂದರ. ಇಲ್ಲಿಯ ಕೋಟೆಯು ವಾಡೆ ತುಂಬಾ ಹಳೆಯದು. ಮೊಗಲರು ಕಟ್ಟಿಸಿದ ಕೋಟೆ ಅದೆಂದು ಪ್ರಸಿದ್ಧವಾಗಿದೆ. ಶಹರದ ಪಶ್ಚಿಮ ದಿಕ್ಕಿಗೆ ಒಂದು ಚಿಕ್ಕ ಗುಡ್ಡ. ಅದರ ಮೇಲೆ ಈ ಕೋಟೆಯಿದೆ. ಕೋಟೆಯ ಸುತ್ತ ಎಡಗಡೆ ರಸ್ತೆಯುಂಟು. ಆ ಗುಡ್ಡದ ಮೇಲೆ ಸುಮಾರು ನಾಲ್ಕು ಸಾವಿರ ಜನರು ಸಮಾವೇಶಗೊಳ್ಳಲು ಸಾಧ್ಯವಿದೆ. ಮುಖ್ಯ ಸರಕಾರೀ ವಾಡೆಯು ನಾಲ್ಕೈದು ಅಂತಸ್ತಿನದಿದ್ದು ಅಲ್ಲಿ ಬೇರೆಬೇರೆ ಕೆಲಸದ ಕಚೇರಿಗಳಿವೆ. ವಾಡೆಯ ಪಶ್ಚಿಮಕ್ಕೆ ಸಿಪಾಯಿಗಳು ಕವಾಯತು ಮಾಡಲು ವಿಶಾಲವಾದ ಮೈದಾನವಿದೆ. ಊರು ಫಲಪುಷ್ಪಗಳಿಂದ ಭರಿತವಾದ ತರುಲತೆಗಳಿಂದ, ವೃಕ್ಷಾದಿಗಳಿಂದ ಸುಂದರವಾಗಿ ಕಂಗೊಳಿಸುತ್ತದೆ. ನಗರದಲ್ಲಿ ಅಚ್ಚುಕಟ್ಟಾದ ರಸ್ತೆಗಳಿವೆ

ಊರ ಸಮೀಪದಲ್ಲಿ ವಿಂಧ್ಯಾದ್ರಿ ಪರ್ವತವಿರುವುದರಿಂದ ಮಳೆ ಚೆನ್ನಾಗಿ ಆಗುತ್ತದೆ. ಭಾವಿಗಳಿದ್ದು ಅವುಗಳಲ್ಲಿ ನೀರು ಮೇಲಕ್ಕಿಯೇ ಇರುತ್ತದೆ. ಶಹರದ ದಕ್ಷಿಣದ್ವಾರದ ಬಳಿ ಒಂದು ದೊಡ್ಡ ಕೆರೆ. ಅದರ ಒಂದು ದಂಡೆಯ ಮೇಲೆ ಮಹಾಲಕ್ಷ್ಮೀ ದೇವಾಲಯವುಂಟು ಮಹಾಲಕ್ಷ್ಮೀ ಝಾಂಸಿ ಸಂಸ್ಥಾನಿಕರ ಕುಲದೇವತೆ. ದೇವಸ್ಥಾನದ ಅರ್ಚನೆ ಮುಂತಾದವುಗಳ ವ್ಯವಸ್ಥೆ ಚೆನ್ನಾಗಿದೆ. ಇದಲ್ಲದೇ ಗಣೇಶ, ವಿಷ್ಣು ಮೊದಲಾದ ದೊಡ್ಡ ದೇವಾಲಯಗಳಿವೆ.

ಶಹರದ ಜನರೂ ಸಭ್ಯರು, ಸುಶಿಕ್ಷಿತರು, ಉದ್ಯೋಗಶೀಲರು. ಗಾಲೀಚಾ, ರೇಶ್ಮೆವಸ್ತ್ರ, ಹಿತ್ತಾಳೆ ಸಾಮಾನುಗಳು ಇಲ್ಲಿ ಹೆಚ್ಚು ಉತ್ತಮ ರೀತಿಯಿಂದ ತಯಾರಾಗುತ್ತವೆ. ಸುಮಾರು ಮುನ್ನೂರು ಬ್ರಾಹ್ಮಣರ ಮನೆಗಳುಂಟು.

ಝಾಂಸಿಯು ಬುಂದೇಲಖಂಡದ ಒಂದು

ಭಾಗ. ಇಲ್ಲಿಯ ಸ್ತ್ರೀಯರು ಸಾದಾಗಪ್ಪು ಸುಂದರಿಯರು. ಬುಂದೇಲಖಂಡದ ನೀರು ಪುರುಷರಿಗೆ ಒಳ್ಳೆಯದಲ್ಲ. ಈ ನೀರಿನಿಂದ ಪುರುಷರಿಗೆ ಷಂಢತ್ವ ಬರುತ್ತದೆ. ಶೇಕಡಾ ೨೫ರಷ್ಟು ಪುರುಷರು ಷಂಢರಾಗಿರುತ್ತಾರೆ. ಯಾವಳೊಬ್ಬ ಸ್ತ್ರೀಗೆ ಒಬ್ಬ ಪುರುಷನ ಮೇಲೆ ಮನಸ್ಸಾದರೆ ಅವಳು ತನ್ನ ಗಂಡನಿಗೆ ಅದನ್ನು ತಿಳಿಸಿಬಿಡುವದುಂಟು. ಆಗ ಗಂಡನೇ ಸ್ವತಃ ತನ್ನ ಹೆಂಡತಿ ಬಯಸುವ ಪುರುಷನನ್ನು ಮನೆಗೆ ಕರೆದುಕೊಂಡು ಬಂದು ಇಬ್ಬರಲ್ಲೂ ಸ್ನೇಹ ಮಾಡಿಕೊಡುವನು. ಆಕೆಯು ಆ ಪುರುಷನಿಂದ ಸುಖ ಪಡೆಯುವುದು ಇಲ್ಲಿಯ ರೂಢಿ. ಗಂಡಂದಿರು ಕೆಲಸದ ನಿಮಿತ್ತ ಹೊರಗೆ ಹೋದಾಗ ಅವರ ಹೆಂಡಂದಿರು ತಮಗೆ ಬೇಕಾದ ಪುರುಷನನ್ನು ಕರೆತಂದು ಸುಖ ಪಡೆಯುವುದು ಇಲ್ಲಿ ಸರ್ವೇಸಾಮಾನ್ಯ. ಇಲ್ಲಿ ಕುಂಟಲಗಿತ್ತೆಯರು ಹೆಚ್ಚು. ಇಲ್ಲಿಯ ಸ್ತ್ರೀಯರು ಸೂರ್ಯಾಸ್ತವಾಗುತ್ತಲೇ ದೇವರ ಗುಡಿಗೆ ಹೋಗುವ ನೆಪದಿಂದ ಮನೆ ಬಿಟ್ಟು ಹೊರಗೆ ಹೋಗಿ ತಮ್ಮ ಇಚ್ಛೆಯನ್ನು ಪೂರ್ತಿ ಮಾಡಿಕೊಂಡು ಬರುತ್ತಿರುವುದು ಎಲ್ಲೆಡೆ ಕಂಡುಬರುತ್ತದೆ. ಇದೇ ಸಂಬಂಧದಲ್ಲಿ ಒಂದು ಚಿಕ್ಕ ಕಥೆಯುಂಟು.

ಕೊನೆಯ ಮಾಧವರಾವ ಪೇಶವೆಯವರ ಕಾಲದಲ್ಲಿ, ಪಾರೋಳೇಕರ ಸುಭೇದಾರರ ಹತ್ತಿರ ನಾರಾಯಣಶಾಸ್ತ್ರಿ ಎಂಬ ಒಬ್ಬ ವಿದ್ವಾಂಸ ಬ್ರಾಹ್ಮಣನಿದ್ದ. ಶೃಂಗಾರಶಾಸ್ತ್ರದಲ್ಲಿ ಆತ ತುಂಬಾ ನಿಪುಣ. ಅವನು ಒಂದು ದಿನ ಪ್ರಾತಃಕಾಲ ಶೌಚಕ್ಕೆ ಹೋದ ಸಂದರ್ಭದಲ್ಲಿ ಒಬ್ಬ ಭಂಗೀ ಜಾತಿಯ ಬಾಲಿಕೆಯನ್ನು ನೋಡಿದ. ಆ ಬಾಲಿಕೆಯ ಸುಂದರವಾದ ನೇತ್ರ, ಚರಣ, ಹಸ್ತ ಮೊದಲಾದ ಲಕ್ಷಣಗಳನ್ನು ನೋಡಿ ಆಕೆಯ ದೇಹದ ಸುವಾಸವನ್ನು ಆಘ್ರಾಣಿಸಿ ಆಕೆಯು ಪದ್ಮಿನಿ ಜಾತಿಯ ಹೆಣ್ಣು ಎಂದು ನಿಶ್ಚಯಿಸಿದ. ಆಕೆಯ ತಾಯಿಯನ್ನು ಪತ್ತೆ ಹಚ್ಚಿ ಚಿಕ್ಕಂದಿನಿಂದಲೇ ಆಕೆಗೆ ಅನ್ನವಸ್ತ್ರಾದಿಗಳನ್ನು ಕೊಟ್ಟು ಬೆಳೆಸಿ ವಯಸ್ಸಿಗೆ ಬಂದ ನಂತರ ಆಕೆಯ ಅಂಗಸುಖದಲ್ಲೇ ತಲ್ಲೀನನಾದ. ಬರಬರುತ್ತಾ ಆಕೆಯನ್ನು ಮನೆಯಲ್ಲೇ ತಂದು

ಸುಖಪಡಹತ್ತಿದ.

ಆ ಶಾಸ್ತ್ರಿಯು ಯುವತಿಗೆ, "ನಿನಗಂತೂ ದ್ರವ್ಯದ ಆಶೆಯಿಲ್ಲ. ನಾನು ನಿನಗೇನೂ ಕಮ್ಮಿ ಮಾಡಿಲ್ಲ. ಆದ್ದರಿಂದ ನೀನು ನಿನ್ನ ಅಂಗಸುಖ ಬಯಸಿದವರಿಂದ ಹಣ ಪಡೆಯದೇ ಪ್ರತಿಯೊಬ್ಬ ವಿಟನಿಂದ ಒಂದೊಂದು ಯಜ್ಞೋಪವೀತವನ್ನು ಬಕ್ಷೀಸು ಪಡೆ," ಎಂದು ಸೂಚಿಸಿದನು.

ಹೀಗೆಯೇ ಶಾಸ್ತ್ರಿ ಹಾಗೂ ಭಂಗಿ ಯುವತಿಯ ಸಲ್ಲಾಪ ಅನೇಕ ವರ್ಷ ನಡೆದಿರಲು ಆ ಪ್ರಕರಣವು ಕರ್ಣೋಪಕರ್ಣವಾಗಿ ಪ್ರಚಾರವಾಯಿತು. ಶಾಸ್ತ್ರಿಯ ಪತ್ನಿಗೆ ಈ ಸುದ್ದಿ ತಿಳಿದಾಗ ಆಕೆ ತುಂಬಾ ಸಿಟ್ಟಿಗೆದ್ದು ಕೂಗಾಡಹತ್ತಿದಳು. ಆದರೂ ಶಾಸ್ತ್ರಿ ಜಪ್ಪೆನ್ನಲಿಲ್ಲ. ಹೆಂಡತಿಗೆಯೇ ಚೆನ್ನಾಗಿ ಥಳಿಸಿ ಬಾಯಿ ಮುಚ್ಚಿಸಿದ. ಪಾರೋಳೇಕರರಿಗೆ ಈ ಸಮಾಚಾರ ತಲುಪಿತು. ಅವರು ಗುಪ್ತಚಾರರನ್ನು ಕಳುಹಿಸಿ ಒಮ್ಮೆ ಶಾಸ್ತ್ರಿ ಹಾಗು ಭಂಗಿ ಯುವತಿ ಇಬ್ಬರೂ ಕೂಡಿಯೇ ಇರುವಾಗ ಪತ್ತೆಮಾಡಿಸಿ ಹಿಡಿತರಿಸಿದರು. ವಿಚಾರಣೆ ನಡೆದಾಗ ಶಾಸ್ತ್ರಿಯು "ನಾನೊಬ್ಬನೇ ಈ ದುಷ್ಟಚಟದವನಲ್ಲ. ನನ್ನಂತೆಯೇ ನೂರಾರು ಬ್ರಾಹ್ಮಣರಿದ್ದಾರೆ," ಎಂದು ಹೇಳಿ ಆ ಯುವತಿಯ ಬಳಿಯಲ್ಲಿ ಸಂಗ್ರಹವಾಗಿದ್ದ ಯಜ್ಞೋಪವೀತಗಳನ್ನು ಹಾಜರಪಡಿಸಿದನು. ಪಾರೋಳೇಕರರಿಗೆ ಆಶ್ಚರ್ಯವಾಯಿತು. ಪುಣೆಗೂ ಈ ಸುದ್ದಿ ತಿಳಿಯಿತು. ಆಗ ಬೇರೆ ಕಡೆಯ ಬ್ರಾಹ್ಮಣರನ್ನು ಈ ಶಹರಕ್ಕೆ ಕರೆಯಿಸಿ ಅವರಿಂದ ಶಹರದ ಹೊರಗಡೆ ದೊಡ್ಡ ಪ್ರಮಾಣದಲ್ಲಿ, ಪಂಚಗವ್ಯ ತಯಾರಿಸಲಾಯಿತು. ಪ್ರತಿಯೊಬ್ಬ ಬ್ರಾಹ್ಮಣನಿಗೂ ಕ್ಷೌರ ಮಾಡಿಸಿ ಜನಿವಾರ, ಪಂಚಗವ್ಯ ಕೊಟ್ಟು ಪ್ರಾಯಶ್ಚಿತ್ತಮಾಡಿಸಿ ಶುದ್ಧಗೊಳಿಸಲಾಯಿತು. ಮನೆ ಹಾಗೂ ರಸ್ತೆಗಳೆಲ್ಲವನ್ನೂ ಗೋಮೂತ್ರದಿಂದ ತೊಳೆಯಲಾಯಿತು. ಆದರೆ ಸ್ವತಃ ಶಾಸ್ತ್ರಿಯು ಪ್ರಾಯಶ್ಚಿತ್ತ ಹೊಂದಲು ನಿರಾಕರಿಸಿದ್ದರಿಂದ ಅವನನ್ನು ಅದೇ ಭಂಗಿ ಯುವತಿಯ ಜೊತೆಗೆ ನಗರದಿಂದ ಹದ್ದುಪಾರು ಮಾಡಲಾಯಿತಂತೆ.

ಝಾಂಸಿ ನಗರದಲ್ಲಿ ಅಲ್ಲಲ್ಲಿ ಸುತ್ತಾಡಿ ರಾಜಕೀಯ ವಿದ್ಯಮಾನಗಳನ್ನು ತಿಳಿದುಕೊಂಡು ರಾಜಕೀಯದ ಬಗ್ಗೆ ಚರ್ಚಿಸಿ ವಿವಿಧ ಪ್ರೇಕ್ಷಣೀಯ ಸ್ಥಳಗಳನ್ನು ನೋಡುತ್ತ ಕೆಲ ದಿನಗಳನ್ನು ಕಳೆದ ಬಳಿಕ ರಾಣಿಯ ತಂದೆ ಮೋರೋಪಂತ ತಾಂಬೆಯವರನ್ನು ಒಂದು ಶುಭ ಮುಹೂರ್ತದಲ್ಲಿ ಭೆಟ್ಟಿಯಾಗಲು ಹೋದೆವು. ಬ್ರಹ್ಮಾವರ್ತದಿಂದ ಬ್ರಾಹ್ಮಣರು ಭೆಟ್ಟಿಯಾಗಲು ಬಂದಿರುವರೆಂದು ಕಾವಲುಗಾರನಿಂದ ಹೇಳಿ ಕಳಿಸಿದ ನಂತರ ಮೋರೋಪಂತರು ನಮಗೆ ಒಳಗೆ ಬರಲು ಅನುಮತಿ ನೀಡಿದರು. ನಮ್ಮ ಕಕ್ಕನನ್ನು ನೋಡಿದ ತಕ್ಷಣ ಅವರೇ ಸ್ವತಃ ಎರಡು ಹೆಜ್ಜೆ ಎದ್ದು ಬಂದು ಕೈ ಹಿಡಿದು ಸ್ವಾಗತಿಸಿ ಕರೆದುಕೊಂಡು ಆಸನದ ಮೇಲೆ ಕುಳ್ಳಿರಿಸಿದರು. ನಾನು ಸಹ ಅವರ ಸನಿಹದಲ್ಲೇ ಕುಳಿತುಕೊಂಡೆ. ಕುಶಲ ಪ್ರಶ್ನೆಗಳ ನಂತರ, "ಈತ ನನ್ನ ಅಣ್ಣನ ಮಗ. ಸಾಲದ ಹೊರೆ ವಿಪರೀತವಾಗಿದೆ. ಗ್ವಾಲೇರಿನ ವೈಶಂಪಾಯನರ ಬಳಿ ಯಜ್ಞಕ್ಕೆಂದು ಹೋಗಿದ್ದೆವು. ಇಲ್ಲಿ ಕೂಡ ರಾಣೀಸಾಹೇಬರು ಕೃಪೆ ಮಾಡಬಹುದೆಂದು ಬಂದಿದ್ದೇವೆ," ಎಂದು ನನ್ನನ್ನು ಪರಿಚಯಿಸಿದರು. ಆಗ ತಾಂಬೆಯವರು, "ನಾನೂ ರಾಣೀಸಾಹೇಬರಿಗೆ ನಿಮ್ಮಿಬ್ಬರ ಬಗ್ಗೆ ಹೇಳುತ್ತೇನೆ. ರಾಜಮನೆತನದ ಕುಲಗುರುಗಳಾದ ಲಾಲೂಭಾವು ಡೋಂಕರೆಯವರನ್ನೂ ನೀವು ಕಾಣರಿ. ನಾನು ಕಳಿಸಿದ್ದೇನೆಂದು ಹೇಳಿ ಭೆಟ್ಟಿಯಾಗಿ. ಮುಂದೆ ಸರಕಾರದಿಂದ ಏನಾದರೂ ತಮಗೆ ಸಿಗುತ್ತದೆ," ಎಂದು ಹೇಳಿದರು.

ಲಾಲೂಭಾವು ಡೋಂಕರೆಯವರಲ್ಲೂ ನಮಗೆ ಉತ್ತಮ ಸ್ವಾಗತ, ಯಥೋಚಿತ ಸತ್ಕಾರ ನಡೆಯಿತು. "ಶತ್ರುಕ್ಷಯ ಹಾಗೂ ರಾಜ್ಯದ ಉತ್ಕರ್ಷದ ಉದ್ದೇಶಕ್ಕಾಗಿ ಅನೇಕ ಧರ್ಮಾನುಷ್ಠಾನಗಳು ನಡೆದಿವೆ. ನಿಮಗೂ ಅದರ ಪ್ರಯೋಜನ ಖಂಡಿತವಾಗಿ ಸಿಕ್ಕೇ ಸಿಗುತ್ತದೆ. ಮಹಾಲಕ್ಷ್ಮೀ ದೇವಸ್ಥಾನದಲ್ಲಿ ನವಚಂಡಿ, ಗ್ರಹ ಶಾಂತಿಯ ಜಪತಪ ದಾನ ನಡೆದಿವೆ. ಗಣಪತಿ ದೇವಸ್ಥಾನದಲ್ಲಿ ಪ್ರತಿದಿನ ಶ್ರೀ ಗಣಪತಿ ಅಥರ್ವಶೀರ್ಷದ ಸಹಸ್ರ ಆವರ್ತನೆ ನಡೆಯುತ್ತಿದೆ. ಯಜ್ಞ ನಡೆಯಲಿದ್ದು ಅದರ ಸಿದ್ಧತ-

ಮುಂದಿನ ಮಗು ಯಾವಾಗ?

ಒಂದು ಆದರ್ಶ ಕುಟುಂಬವನ್ನು ಹೊಂದುವ ಸೂತ್ರವನ್ನು ನೀವು ಬಯಸು- ತ್ತೀರಾ? ಅಥವಾ 'ಮುಂದಿನ ಮಗು ಯಾವಾಗ?' ಎಂಬ ಪ್ರಶ್ನೆಯನ್ನು ನಿಮಗೆ ನೀವೇ ಕೇಳಿಕೊಳ್ಳುತ್ತಿದ್ದೀರಾ?

'ಮಗುವಿನ ಸಮಸ್ಯೆ'ಯನ್ನು ಬಗೆಹರಿಸುವ ಮಾರ್ಗಗಳಿವೆ

ಹೌದು, ಹತ್ತು ವಿವಿಧ ಮಾರ್ಗಗಳಿವೆ

ಕಂಡೋಮ್ (ನಿರೋಧ)	ಜೆಲ್ಲಿ
ಪೆಸ್ಸರಿ	ಡಯಾಫ್ರಂ
ಲೂಪ್	'ರಿದಂ' ವಿಧಾನ
ಕಾಪರ್ 'ಟಿ'	ಪುರುಷರ ಸಂತಾನಹರಣ ಶಸ್ತ್ರಚಿಕಿತ್ಸೆ
ನೊರೆ ಗುಳಿಗೆಗಳು	ಸ್ತ್ರೀಯರ ಸಂತಾನಹರಣ ಶಸ್ತ್ರಚಿಕಿತ್ಸೆ

ಮುಂದಿನ ಮಗು ಈಗಲ್ಲ
ಮೂರರ ನಂತರ ಮತ್ತಿಲ್ಲ

ನಿಮಗೆ ಈ ವಿಷಯ ಈಗಾಗಲೇ ತಿಳಿದಿದೆ. ಆದರೂ, ಯಾರಿಗೆ ಈ ವಿಷಯ ತಿಳಿದಿಲ್ಲವೋ, ಯಾರಿಗೆ ತಿಳಿಯಬೇಕೋ ಅವರಿಗೆ ದಯವಿಟ್ಟು ತಿಳಿಸಿ.

ಧನ್ಯವಾದಗಳು.

ಸುಖಿ ಕುಟುಂಬಕ್ಕಾಗಿ ಯೋಜನೆ ಹಾಕಿ

davp 77/406

ಗಳನ್ನು ಕೈಕೊಳ್ಳಲಾಗಿದೆ. ಕಾಶಿ ಹಾಗೂ ಬ್ರಹ್ಮಾವರ್ತದಿಂದ ದೊಡ್ಡ ದೊಡ್ಡ ವಿದ್ವಾನ್ ಬ್ರಾಹ್ಮಣರನ್ನು ಆಮಂತ್ರಿಸಲಾಗಿದೆ. ಹೋಮ ಹವನಕ್ಕಾಗಿ ನೂರು ಬ್ರಾಹ್ಮಣರ ನೇಮಕ ವಾಗಿದೆ," ಎಂದವರು ವಿವರಿಸಿ ರಾಣೀಸಾಹೇಬ ರಿಂದ ಏನಾದರೂ ಸೂಕ್ತ ದಾನ ಸಿಗುವುದೆಂಬ ಭರವಸೆಯನ್ನು ನೀಡಿದರು.

ರಾಣೀಬಾಯಿಸಾಹೇಬರು ಸ್ವಚ್ಛ ಶುಭ್ರ ವಸ್ತ್ರ ಧರಿಸಿ ತಮ್ಮ ದತ್ತಕ ಪುತ್ರನನ್ನು ಕರೆದುಕೊಂಡು ಸ್ವತಃ ಸಂಕಲ್ಪ ಹೇಳಿಸಿಕೊಂಡು ಧಾರ್ಮಿಕ ಅನುಷ್ಠಾನಗಳೆಲ್ಲವುಗಳ ಯಾಜ-ಮಾನ್ಯ ವಹಿಸಿದ್ದರು. ಕುಲಗುರು ಡೋಂಗರೆ ಹಾಗೂ ಮೋರೋಪಂತ ತಾಂಬೆಯವರು ರಾಣಿಯ ಬಳಿಯಲ್ಲೇ ನಿಂತುಕೊಂಡು ಎಲ್ಲ ವ್ಯವಸ್ಥೆಯನ್ನೂ ಮಾಡುತ್ತಲಿದ್ದರು.

ನಾಂದೀಶ್ರಾದ್ಧ ನಡೆಯುತ್ತಿರುವಾಗ ಆ ದತ್ತಕ ಮಗುವಿನ ನಿಜ ಪಿತೃಗಳ ಹೆಸರುಗಳ ಉಚ್ಚಾರ ಆರಂಭವಾಯಿತು. ಅನುಷ್ಠಾನದ ಸಂಕಲ್ಪ ಮಾಡಿದವರು ರಾಣೀಸಾಹೇಬ, ನಾಂದೀಶ್ರಾದ್ಧವು ಅವರ ದತ್ತುಪುತ್ರನ ಪಿತೃಗಳದು–ಹೀಗೆ ನಡೆವರೆ ಹೇಗೆ ಎಂದು ನಮ್ಮಲ್ಲಿ ಸಂಶಯ ಉದ್ಭವಿ-ಸಿತು. ನಾನು ಇದನ್ನು ಹೇಳದೇ ಬಿಟ್ಟರೆ ಅನು-ಷ್ಠಾನಕ್ಕೆ ದೋಷ ಪ್ರಾಪ್ತವಾಗುವುದೆಂಬ ಭಾವನೆಯಿಂದಲೋ ಅಥವಾ ಏನಾದರೂ ಕುಚೇಷ್ಟೆ ಮಾಡದಿದ್ದಲ್ಲಿ ಪ್ರತಿಷ್ಠೆ ಹೆಚ್ಚಾಗುವು-ದಾದರೂ ಹೇಗೆ ಎಂಬ ವಿಚಾರದಿಂದಲೋ ಈ ವಿಷಯದಲ್ಲಿ ಆಕ್ಷೇಪವನ್ನೆತ್ತಲು ಎದ್ದು ನಿಂತೆ.

ಮನಸ್ಸಿನಲ್ಲಿ ನಾನು ಗುರುಸ್ಮರಣೆ ಮಾಡಿ, "ಅನುಷ್ಠಾನವನ್ನು ಸ್ಥಗಿತಗೊಳಿಸಿರಿ. ನನ-ಗೊಂದು ಸಂದೇಹ ಬರುತ್ತಿದೆ. ಸ್ತ್ರೀಯರಿಗೆ ವೇದಾಧಿಕಾರವಿಲ್ಲವೆಂಬ ಕಾರಣಕ್ಕಾಗಿ ಷಷ್ಠ್ಯ-ಹವಾಚನ ಮೊದಲಾದ ಕಾರ್ಯಕ್ರಮಗಳಲ್ಲಿ ಅವರ ಕುಲಗುರುಗಳ ಪಿತೃಗಳ ನಾಂದೀಶ್ರಾದ್ಧ ನಡೆಸಲು ಸಾಧ್ಯವೇ ?" ಎಂದು ಪ್ರಶ್ನಿಸಿದೆ. ರಾಣೀಸಾಹೇಬರೇ ಮುಖ್ಯ ಸಂಕಲ್ಪ ಮಾಡಿ-ರುವುದರಿಂದ ಅವರ ಪಿತೃಗಳ ನಾಂದೀಶ್ರಾದ್ಧ ನಡೆಸುವುದೇ ಸೂಕ್ತ ಎಂದು ನಾನು ಹೇಳಿ

ದಕ್ಕೆ ಮಯೂಖ, ಹೇಮಾದ್ರಿ ಮೊದಲಾದ ಶಾಸ್ತ್ರ ಗ್ರಂಥಾಧಾರಗಳನ್ನು ನೀಡಿದೆ. ಗ್ರಂಥ-ಗಳನ್ನು ತರಿಸಿ ನೋಡಲಾಗಿ ರಾಣೀಸಾಹೇಬರ ಪಿತೃಗಳ ನಾಂದೀಶ್ರಾದ್ಧವೇ ನಡೆಯುತಕ್ಕ-ದ್ದೆಂದು ಸರ್ವಾನುಮತದಿಂದ ತೀರ್ಮಾನ-ವಾಯಿತು. ನನಗೆ ಅದರಿಂದ ಆನಂದವಾಯಿತು. ಎಲ್ಲ ವಿದ್ವಾಂಸರ ಹಾಗೂ ರಾಣೀಸಾಹೇಬರ ಲಕ್ಷ್ಯ ನನ್ನ ಕಡೆ ಸೆಳೆಯಲ್ಪಟ್ಟಿತು.

ನಂತರ ರಾಣೀಸಾಹೇಬ ಹಾಗೂ ನಮ್ಮ ಕಾಕಾ ಅವರ ಪರಸ್ಪರ ಪರಿಚಯವಾಯಿತು. ಆಗ ನಮ್ಮ ಕಕ್ಕನಿಗೆ ರಾಣೀಸಾಹೇಬರು, "ನಿಮ್ಮ ಹುಡುಗ ತುಂಬಾ ಹುಷಾರ್ ಇದ್ದಾನೆ," ಎಂದು ಹೇಳಿದರು. "ಅದ-ಕ್ಕಂತಲೇ ನಿಮ್ಮ ಕಡೆ ಅವನನ್ನೂ ಕರೆದುಕೊಂಡು ಬಂದಿರುವುದು," ಎಂದು ನನ್ನ ಕಕ್ಕ ಉತ್ತರಿಸಿ-ದರು. ಈ ಸಂದರ್ಭದಲ್ಲಿ ರಾಣೀಸಾಹೇಬರ ನಿಕಟ ಸಂಪರ್ಕ ಬಂದು ಮುಂದೆ ಇನ್ನೂ ಬೆಳೆ-ಯುತ್ತ ಹೋದ ಹಾಗೆ ನನಗೆ ದರಬಾರದ ಬಗ್ಗೆ ಹಾಗೂ ರಾಜ್ಯದ ರಾಜಕೀಯದ ಬಗ್ಗೆ ಅನೇಕ ವಿಷಯಗಳ ಪರಿಜ್ಞಾನವುಂಟಾಯಿತು.

ರಾಣೀಸಾಹೇಬರಿಗೆ ಚಿಕ್ಕಂದಿನಿಂದಲೂ ಉಡಿಗೆ ತೊಡಗೆಯ ಬಗ್ಗೆ ವಿಶೇಷ ಆಸಕ್ತಿಯಿತ್ತು. ಅವರು ತಮಗೆ ಪೂರ್ಣ ಸ್ವಾತಂತ್ರ್ಯ ಲಭಿಸಿ-ದಾಗ ತಮ್ಮ ಈ ಇಚ್ಛೆಯನ್ನು ಪೂರ್ತಿಗೊಳಿಸಿ-ಕೊಂಡರು. ಅವರು ದಿನನಿತ್ಯ ಶಾರೀರಿಕ ವ್ಯಾಯಾಮ, ಕಸರತ್ತು, ಮಲಖಂಬ, ಕುದುರೇ ಸವಾರಿ, ಆನೇ ಸವಾರಿ ಮೊದಲಾದವುಗಳನ್ನು ಮಾಡುತ್ತಿದ್ದರು. ಏಳೆಂಟು ಗಂಟೆ ಹೀಗೆ ಕಸರತ್ತು ಮಾಡಿದ ನಂತರ ಉಪಾಹಾರ ಮಾಡು-ತ್ತಿದ್ದರು. ಸ್ನಾನಕ್ಕೆ ವಿಶೇಷ ಗಮನ ಕೊಡುತ್ತಿ-ದ್ದರು. ಪ್ರತಿ ಎಂಟು ದಿನಗಳಿಗೊಮ್ಮೆ ೧೦-೧೫ ಹಂಡೆಯಷ್ಟು ಸುಡುನೀರಿನಲ್ಲಿ ಸುವಾಸಿಕ ದ್ರವ್ಯ-ಗಳನ್ನು ಬೆರೆಸಿ ಸ್ನಾನ ಮಾಡುತ್ತಿದ್ದರು. ಇವರು ಸ್ನಾನ ಮಾಡಿದ ನೀರಿನಲ್ಲಿ ನಂತರ ಅನೇಕ ಹೆಂಗಳೆಯರ ಸ್ನಾನ ಕೂಡ ನಡೆಯುತ್ತಿತ್ತು. ಪ್ರತಿದಿನ ಸ್ನಾನವಾದ ನಂತರ ಶ್ವೇತವರ್ಣದ ಇಲ್ಲವೇ ಚಂದೇರಿ ಪತ್ತಲವನ್ನುಟ್ಟು ಪದ್ಮಾಸನ-ದಲ್ಲಿ ಕುಳಿತು ಭಸ್ಮಧಾರಣ ಮಾಡುತ್ತಿದ್ದರ

ಪತಿಯು ಮರಣಾನಂತರದಲ್ಲಿ ತಲೆಗೂದಲನ್ನು ಹೊಂದಿರುವ ಬಗ್ಗೆ ಮೊದಲು ಮೂರು ಕೃಚ್ಛ್ರ ಪ್ರಾಯಶ್ಚಿತ್ತ ಮಾಡಿಕೊಂಡು ಅರ್ಘ್ಯ ಸಮರ್ಪಿಸಿ ನಂತರ ಬೆಳ್ಳಿಯ ತುಳಸೀ ವೃಂದಾವನದಲ್ಲಿ ತುಳಸೀ ಪೂಜೆ ಮಾಡುತ್ತಿದ್ದರು. ಆಮೇಲೆ ಶ್ರೀ ಪಾರ್ಥಿವ ಲಿಂಗಪೂಜೆ ನಡೆಯುತ್ತಿತ್ತು. ಹೀಗೆ ಪೂಜೆ ನಡೆದಿರುವಾಗ ಗವಾಯಿಗಳು ಹಾಡುತ್ತಿದ್ದರು. ಪುರಾಣಿಕರು ಪುರಾಣ ಪ್ರವಚನ ನಡೆಸುತ್ತಿದ್ದರು. ಪ್ರತಿದಿನ ಸುಮಾರು ಒಂದೂವರೆ ನೂರು ಜನ ಸರದಾರರು ಬಂದು ರಾಣಿಗೆ ಮುಜುರೆ ಮಾಡಿ ಕುಳಿತುಕೊಳ್ಳುತ್ತಿದ್ದರು. ರಾಣಿಗೆ ಎಲ್ಲ ಕಡೆ ಲಕ್ಷ್ಯವಿರುತ್ತಿತ್ತು. ದಿನಾಲು ಬಂದು ಮುಜುರೆ ಮಾಡುವ ಪೈಕಿ ಯಾರೊಬ್ಬರು ಅಕಸ್ಮಾತ್ ಬಂದಿರದಿದ್ದರೆ ಮರುದಿನ ಅವರನ್ನು ಗುರುತಿಸಿ "ನಿನ್ನೆ ಏಕೆ ಬಂದಿರಲಿಲ್ಲ?" ಎಂದು ಪ್ರಶ್ನಿಸುತ್ತಿದ್ದರು. ಮಧ್ಯಾಹ್ನ ೧೨ಕ್ಕೆ ಪೂಜೆ ಮುಗಿಸಿ ಊಟವಾದ ನಂತರ ಕೆಲ ನಿಮಿಷ ತಿರುಗಾಡಿ ವಾಮಕುಕ್ಷಿ ಹೋಗುತ್ತಿದ್ದರು. ಸಾಯಂಕಾಲ ನಜರಾಣಾ ತಟ್ಟೆಯಲ್ಲಿ ಫಲ-ಉಪಹಾರಗಳನ್ನು ತಂದಿಡಲಾಗುತ್ತಿತ್ತು. ಅದರಲ್ಲಿ ಸ್ವಲ್ಪ ಸೇವಿಸಿ ಉಳಿದದ್ದನ್ನು ತಮ್ಮ ಸೇವಕರಿಗೆ ಕೊಟ್ಟುಬಿಡುತ್ತಿದ್ದರು. ಮಧ್ಯಾಹ್ನ ೩ ಗಂಟೆ ಸುಮಾರಿಗೆ ದರಬಾರಕ್ಕೆ ಹೋಗುತ್ತಿದ್ದರು. ದರಬಾರಕ್ಕೆ ಹೋಗುವಾಗ ಪುರುಷ ವೇಷ ಧಾರಣ ಮಾಡುತ್ತಿದ್ದರು. ಕಾಲಲ್ಲಿ ಪೈಜಾಮಾ, ಜಾಂಬಳಿ ಬಣ್ಣದ ಕವಚ, ತಲೆಯ ಮೇಲೆ ಟೊಪ್ಪಿಗೆ ಅದರ ಮೇಲೆ ಸುಂದರವಾಗಿ ವಾಗೋಟೆಯಂತೆ ಸುತ್ತುವರಿದ ಅಲಂಕಾರ, ಈ ವೇಷದಲ್ಲಿ ಗೌರವರ್ಣದ ಹಾಗೂ ಎತ್ತರದ ರಾಣಿಯ ವೀರಶ್ರೀ ಉಕ್ಕುತ್ತಿತ್ತು.

ಪತಿಯ ಮರಣಾನಂತರ ರಾಣಿ ಕೈಯಲ್ಲೆರಡು ಪಾಟಲಿ, ಕೊರಳಲ್ಲಿ ಮುತ್ತಿನ ಸರ ಇವಿಷ್ಟನ್ನಲ್ಲದೇ ಬೇರೆ ಯಾವ ಅಲಂಕಾರಗಳನ್ನೂ ಧರಿಸುತ್ತಿರಲಿಲ್ಲ. ತಲೆಗೂದಲನ್ನು ಬಿಗಿದು ಕಟ್ಟಿಕೊಳ್ಳುತ್ತಿದ್ದರು. ಮೈಗೆ ಯಾವಾಗಲೂ ಬಿಳೀ ಬಣ್ಣದ ಕುಪ್ಪಸ ಹಾಕಿಕೊಳ್ಳುತ್ತಿದ್ದರು. ರಾಣಿಯ ದರಬಾರಿನಲ್ಲಿ ಲಕ್ಷ್ಮಣರಾವ ದಿವಾಣಜೀ ಎಂಬುವರು ದಿವಾಣರಾಗಿದ್ದರು. ಜಾತಿಯಿಂದ ದೇಶಸ್ಥ ಬ್ರಾಹ್ಮಣರಾಗಿದ್ದ ಅವರು ಅಕ್ಷರಶತ್ರು. ಆದರೂ ಕೂಡಾ ಅವರು ದರ್ಪಯುಕ್ತ ಆಜ್ಞೆ, ಹಾಗೂ ಯುಕ್ತಿಯುಕ್ತ ಮಾತಿನಿಂದ ಸಮರ್ಥನಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಯಾವುದಾದರೂ ಕಾಗದ ಓದುವುದಕ್ಕೆ ಅಥವಾ ಬರೆಯುವುದಕ್ಕೆ ರಾಣಿಯವರು ಆಜ್ಞೆ ಮಾಡಿದ ತಕ್ಷಣ ಅಲ್ಲಿಯೇ ಕುಳಿತ ಕಾರಕೂನನೊಬ್ಬನ ಕಡೆ ದೃಷ್ಟಿ ಹಾಯಿಸಿ ಸೊನ್ನೆ ಮಾಡುತ್ತಿದ್ದರು. ಕೂಡಲೇ ಕಾರಕೂನನು ಆ ಕೆಲಸ ಮಾಡಿಬಿಡುತ್ತಿದ್ದ.

ರಾಣೀಸಾಹೇಬರು ನ್ಯಾಯನಿರ್ಣಯದಲ್ಲಿ ತುಂಬಾ ನಿಪುಣರಾಗಿದ್ದರು. ತಪ್ಪಿತಸ್ಥರಿಗೆ ತಾವೇ ಸ್ವತಃ ಛಡಿಯಿಂದ ಹೊಡೆದು ಸಹ ಶಿಕ್ಷೆ ವಿಧಿಸುತ್ತಿದ್ದರು. ಝಾಂಸಿ ಸಂಸ್ಥಾನಕ್ಕೆ ಸೇರಿದ ಬಲಸಾಗರ ಎಂಬಲ್ಲಿ ಒಮ್ಮೆ ಕಳ್ಳರ ಕಾಟ ವಿಪರೀತವಾಗಿತ್ತು. ರಾಣಿ ಆ ಪ್ರದೇಶದಲ್ಲಿ ಸುಮಾರು ೧೫ ದಿನ ಸ್ವತಃ ವಸತಿ ಮಾಡಿ ಕಳ್ಳರನ್ನು ಪತ್ತೆ ಮಾಡಿ ಕೆಲವರಿಗೆ ಗಲ್ಲಿನ ಶಿಕ್ಷೆ ಹಾಗೂ ಕೆಲವರಿಗೆ ಕಾರಾಗೃಹವಾಸ ವಿಧಿಸಿದರು.

ರಾಣಿಯ ಮಾನವೀಯ ಅನುಕಂಪ ಮೆಚ್ಚತಕ್ಕದ್ದು. ಯಾವುದೇ ಭಿಕ್ಷುಕನು ರಾಣಿಯ ನಿವಾಸದಿಂದ ಭಿಕ್ಷೆಯಿಲ್ಲದೇ ಹೋಗುತ್ತಿರಲಿಲ್ಲ. ಒಮ್ಮೆ ಚಳಿಯಲ್ಲಿ ಭಿಕ್ಷುಕರು ನಡುಗುತ್ತಿದ್ದುದನ್ನು ಕಂಡ ರಾಣಿ ಅವರಿಗೆ ಬೆಚ್ಚಗಿನ ವಸ್ತ್ರಗಳನ್ನು ಹೊಲಿಸಿಕೊಟ್ಟರು. ಕುಲಗುರು ಡೋಂಕರೆಯವರು ಒಮ್ಮೆ ಒಬ್ಬ ವಿದ್ವಾಂಸ ಬ್ರಾಹ್ಮಣನನ್ನು ಭೇಟಿ ಮಾಡಿಸಿದರು. ಆ ಬ್ರಾಹ್ಮಣನ ಪ್ರಥಮ ಪತ್ನಿ ಮರಣ ಹೊಂದಿ ಆತ ಎರಡನೆಯವಳನ್ನು ಮದುವೆ ಮಾಡಿಕೊಳ್ಳಬಯಸುತ್ತಿದ್ದ. ಆತನಿಗೆ ಬೇಕಾದ ಧನ ಸಹಾಯ ರಾಣಿಯಿಂದ ದೊರೆಯಿತು.

ಈ ರೀತಿ ಆದರ್ಶ ಆಡಳಿತಗಾರಳಾಗಿದ್ದು ಅಪಾರ ಜನಮೆಚ್ಚುಗೆ ಗಳಿಸಿದ ಹಾಗೂ ಇಂಗ್ಲೀಜಿಯವರೊಡನೆಯೂ ಒಳ್ಳೆಯ ಸಂಬಂಧ ಹೊಂದಿದ್ದ ರಾಣಿಯ ಬಗ್ಗೆ ಇಂಗ್ಲೀಷ ಸರಕಾರ ನಡೆದುಕೊಂಡ ರೀತಿ ತುಂಬಾ ಅನ್ಯಾಯವಾಗಿತ್ತು. "ನಮ್ಮ ರಾಜ್ಯ ತುಂಬಾ [illegible]



ಸಂಬಳದ ದಿನ–
ಪ್ರೀಮಿಯಮ್ ಸಲ್ಲಿಸುವ ದಿನ

ನೀವು ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದು ಪ್ರತಿ ತಿಂಗಳು ಸಂಬಳ ಪಡೆಯುತ್ತಿರಬಹುದು ಅಥವಾ ನಿಶ್ಚಿತ ಅವಧಿಗಳಲ್ಲಿ ಹಣ ವಸೂಲಾಗುವ ವ್ಯಾಪಾರ ಮಾಡುತ್ತಿರಬಹುದು. ನಿಮ್ಮ ವರಮಾನ ಹೇಗೆಯೇ ಇರಲಿ ಯಾವುದೇ ಅವಧಿಯಲ್ಲಿ ಸಿಗುತ್ತಿರಲಿ ಆದರೆ, ನಿಮ್ಮ ಎಲ್.ಐ.ಸಿ. ಪ್ರೀಮಿಯಮ್ ಕೊಡಲು ಮರೆಯಬೇಡಿರಿ. ಅದು ನಿಮ್ಮ ಆಹಾರ, ಬಾಡಿಗೆ ಮತ್ತು ಇತರ ಅವಶ್ಯಕತೆಗಳಷ್ಟೇ ಮುಖ್ಯವಾಗಿದೆ. ಹೇಗಿದ್ದರೂ ನಿಮ್ಮ ಮತ್ತು ನಿಮ್ಮ ಕುಟುಂಬದ ರಕ್ಷಣೆ ಅವಶ್ಯವಲ್ಲವೇ!



ಲೈಫ್ ಇನ್‌ಶೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ


RADEUS/LIC/AS

ಇಂಗ್ರೇಜಿಯವರ ಜೊತೆ ಹಾರ್ದಿಕ ಸಂಬಂಧ ಹೊಂದಿರುವುದು. ಆದ್ದರಿಂದ ದತ್ತಕವನ್ನು ಮಾನ್ಯಮಾಡಿ ದತ್ತಕ ಪುತ್ರನಿಗೆ ರಾಜ್ಯ ವಹಿಸಿ ಕೊಡಬೇಕೆಂದು ರಾಣಿ ಆಂಗ್ಲ ಸರಕಾರಕ್ಕೆ ಬರೆದಿದ್ದರು. ರಾಜ್ಯವನ್ನು ಖಾಲಸಾ ಮಾಡಕೂಡದೆಂದು ಪರಿಪರಿಯಾಗಿ ವಿನಂತಿಸಿದ್ದರು. ಸರಕಾರ ಅದನ್ನು ಮಾನ್ಯ ಮಾಡಲಿಲ್ಲ. ರಾಣಿ ಕೆಲ ಕಾಲ ಸರಕಾರದಿಂದ ಬರುವ ಅತ್ಯಲ್ಪ ಪಿಂಚಣಿಯಲ್ಲೇ ಹಳೆ ನೌಕರರನ್ನು ಮಾತ್ರ ಕಡಿಮೆ ವೇತನಕ್ಕೆ ಇಟ್ಟುಕೊಂಡು ಹಾಗೂ ಹೀಗೂ ಮನೆ ಸಾಗಿಸುತ್ತಿದ್ದರು.

ಮುಂದೆ ಅವರ ಗಂಡನ ಸಾಲದ ಮೊತ್ತದ ಮರುಪಾವತಿ ಕಾರಣ ತೋರಿಸಿ ಪಿಂಚಣಿಯನ್ನು ನಿಲ್ಲಿಸಿಬಿಡಲಾಯಿತು. ಕಾಶಿಗೆ ಹೋಗಿ ಕೇಶವಪನ ಮಾಡಿಸಿಕೊಂಡು ಬರಲು ಸರಕಾರವು ರಾಣಿಗೆ ಅನುಮತಿ ನೀಡಲಿಲ್ಲ. ಝಾನ್ಸಿ ನಗರದಲ್ಲಿ ಗೋಹತ್ಯೆ ನಡೆಯಹತ್ತಿತ್ತು. ರಾಜಮನೆತನದ ಕುಲದೇವತೆ ಮಹಾಲಕ್ಷ್ಮೀದೇವಾಲಯಕ್ಕೆ ಅರ್ಚನೆಗೆಂದು ನೀಡಲಾಗಿದ್ದ ಎರಡು ಊರುಗಳನ್ನು ಸಹ ಸರಕಾರ ಖಾಲಸಾ ಮಾಡಿತು. ಇವೆಲ್ಲ ಕಾರಣಗಳಿಂದಾಗಿ ಝಾನ್ಸೀ ರಾಣಿ ಲಕ್ಷ್ಮೀಬಾಯಿಯ ಹೃದಯದಲ್ಲಿ ಇಂಗ್ರೇಜಿಯವರ ಪ್ರತಿ ದ್ವೇಷಾಗ್ನಿ ಪ್ರಜ್ವಲಿಸಹತ್ತಿತು. ತನ್ನ ಬಾಲ್ಯ ಸ್ನೇಹಿತ ಹಾಗೂ ಸೋದರನಂತಿದ್ದ ನಾನಾಸಾಹೇಬ ಪೇಶವೆಯ ಜೊತೆ ಪತ್ರವ್ಯವಹಾರ ನಡೆಸಹತ್ತಿದಳು.


ಬಂಡಾಯ ಪ್ರಾರಂಭವಾಗುವುದಕ್ಕೆ ಒಂದು ದಿನ ಮೊದಲು 'ರೆಸಿಡೆಂಟ್ ಗಾರ್ಡನ್ ಸಾಹೇಬ ಸಹಿತ ಇಂಗ್ರೇಜಿಯವರು ಗಾಬರಿಯಾಗಿ ರಾಣಿಯ ಕಡೆಗೆ ಬಂದರು. "ಬಂಡಾಯವೇಳುವ ಸಾಧ್ಯತೆಯಿದೆ, ನೀವು ನಿಮ್ಮ ರಾಜ್ಯದ ಭದ್ರತಾ ವ್ಯವಸ್ಥೆಯನ್ನು ನೋಡಿಕೊಳ್ಳಿ" ಎಂದು ಆಗ್ರಹಪೂರ್ವಕ ವಿನಂತಿಸಿದರು ಹಾಗೂ ಸಂಬಂಧಿಸಿದ ಕಾಗದ ಪತ್ರಗಳೆಲ್ಲವನ್ನೂ ಅವರಿಗೆ ಒಪ್ಪಿಸಿದರು. ಅದಕ್ಕೆ ರಾಣಿಯವರು, "ಹಿಂದಕ್ಕೆ ನಾನು ನಿಮಗೆ ವಿನಂತಿಸಿದಾಗ ನನ್ನ ವಿಷಯವನ್ನು ಸರಕಾರವು ಮಾನ್ಯ ಮಾಡಲಿಲ್ಲ. ಈಗ ದಂಗೆಯೇಳುವ ಸಾಧ್ಯತೆಯಿರುವುದರಿಂದ, ನಿಮಗೆ ಕುತ್ತು ಬಂದಿರುವುದರಿಂದ ನನ್ನ ಬಳಿಗೆ ಬಂದಿರುವಿರಲ್ಲವೇ?" ಎಂದು ರಾಣಿ ಅವರನ್ನು ತರಾಟೆಗೆ ತೆಗೆದುಕೊಂಡಳು; ಹಾಗೂ ಕಲಕತ್ತೆಯಲ್ಲಿ ನಡೆದ ರಾಜರ ಸಭೆಗೆ ತಮ್ಮನ್ನು ಆಮಂತ್ರಿಸದಿದ್ದುದನ್ನು ಪ್ರಸ್ತಾಪಿಸಿದರು.

ಹತ್ತು ಗಂಟೆ ಸುಮಾರಿಗೆ ಬಂಡಾಯ ಆರಂಭವಾಯಿತು. ಗುಂಡು ಹಾರಿಸುವುದರ ಅರ್ಭಟ ಕಿವಿ ಗಡಚಿಕ್ಕುವಂತಿತ್ತು. ಬಂಡಾಯಗಾರರು, "ಖಲ್ಕ್ ಖುದಾಕಾ, ಮುಲ್ಕ್ ಬಾದಶಾಹಕಾ, ಅಮಲ್ ಲಕ್ಷ್ಮೀಬಾಯಿಕಾ" ಎಂಬ ಘೋಷಣೆಯೊಂದಿಗೆ ಝಾನ್ಸಿಯನ್ನು ಪೂರ್ತಿ ತಮ್ಮ ವಶಕ್ಕೆ ತೆಗೆದುಕೊಂಡು ರಾಣಿಯ ಕೈಗೆ ಒಪ್ಪಿಸಿದರು. ಸುಮಾರು ಹನ್ನೊಂದು ತಿಂಗಳ ಕಾಲ ರಾಣಿಯ ಆಡಳಿತ ತುಂಬಾ ವ್ಯವಸ್ಥಿತವಾಗಿ ಸುರಳೀತವಾಗಿ ನಡೆಯಿತು. ಜನರು ಸಂತಸದಿಂದ ಇದ್ದರು. ಅತ್ತ ಕಾಲ್ಪಿಯ ತಾತ್ಯಾ



"ಇಲ್ಲಿ ಕರ್ನಾಟಕದ ಕುರಿಗಳನ್ನು ಮಾತ್ರ ಕತ್ತರಿಸುತ್ತೀರಾ?"





IODEX
Methyl Salicylate

ಟೋಪೆಯು ಆಡಳಿತಕ್ಕೊಳಪಟ್ಟಿತ್ತು.


ರಾಣಿ ಲಕ್ಷ್ಮೀಬಾಯಿಯು ತನ್ನ ಸೋದರನೆಂದು ಭಾವಿಸಿದ ಬಾಣಪುರ ಸಂಸ್ಥಾನದ ರಾಜನು ಬಂಡಾಯಗಾರರಿಗೆ ಆಶ್ರಯದಾತನೆನಿಸಿದ್ದ. ಹೀಗಾಗಿ ಅವನ ರಾಜ್ಯದ ಮೇಲೆ ಇಂಗ್ರೇಜಿಯವರ ದಾಳಿ ಯಾವ ಕಾಲದಲ್ಲೂ ಸಂಭವವಿತ್ತು. ಬಾಣಪುರದ ರಾಜನು ಇದನ್ನು ಊಹಿಸಿ ತನ್ನ ಪರಿವಾರವನ್ನು ಝಾಂಸಿಗೆ ಕಳಿಸಿದ. ಮುಂದೆ ಬಾಣಪುರದಲ್ಲಿ ಇಂಗ್ರೇಜಿಯವರು ದಾಳಿ ಮಾಡಿದಾಗ ಏಳು ದಿನ ಯುದ್ಧ ನಡೆದು ಬಾಣಪುರ ಇಂಗ್ರೇಜಿಯವರ ಕೈವಶವಾಗಿ ರಾಜನು ಫರಾರಿಯಾದನು.

ವಿಲಾಯತಿಯಿಂದ ಇಂಗ್ರೇಜಿಯವರು ಹೆಚ್ಚಿನ ಸೈನ್ಯ ತರಿಸಿ, ಹೈದರಾಬಾದ ನಿಜಾಮನ ಕಡೆಯಿಂದ ಐದು ಸಾವಿರ ಸೈನಿಕರು, ಸಿಂಧೆ, ಹೋಳಕರ, ಗಾಯಕವಾಡ ಹಾಗೂ ಘೋರ್ಪಡೆ ಈ ಸರದಾರರ ಸಹಾಯ ಪಡೆದು ಅನೇಕ ಪಟ್ಟು ಸೈನ್ಯಬಲದೊಂದಿಗೆ ಸಜ್ಜಾಗಿ ಕ್ಯಾಪ್ಟನ್ ಸರ್ ಹ್ಯೂ ರೋಜ್, ಝಾಂಸಿಯ ಮೇಲೆ ದಾಳಿ ಮಾಡಲು ಮುಂದಾದ. ಈ ಸುದ್ದಿ ಹಾಗೂ ಬಾಣಪುರದ ರಾಜ ಸೋತು ಫರಾರಿಯಾದ ಸುದ್ದಿಯಿಂದ ಝಾಂಸಿಯಲ್ಲಿ ತುಂಬಾ ಗಡಿಬಿಡಿಯುಂಟಾಯಿತು. ಹನ್ನೊಂದು ದಿನ ಝಾಂಸಿಯ ಸಮರ ನಡೆಯಿತು. ಹನ್ನೊಂದನೆ ದಿನ ನಿಕರದ ಕಾಳಗ ನಡೆದು ಝಾಂಸಿಯು ಇಂಗ್ರೇಜಿಯರ ಕೈಸೇರಿತು.

ಮುಂದೆ ನಾವು ಝಾಂಸಿಯನ್ನು ಬಿಟ್ಟು ಕಾಲ್ಪಿಗೆ ಹೋದೆವು. ಕಾಲ್ಪಿಯಲ್ಲಿ ತಾತ್ಯಾ ಟೋಪೆಯ ಆಡಳಿತವಿತ್ತು. ಅಲ್ಲಿ ಒಂದೆರಡು ದಿನ ಇರುವಷ್ಟರಲ್ಲೇ ಇಂಗ್ರೇಜಿಯವರ ದಾಳಿ ನಡೆದು ಮೂರು ದಿನಗಳ ಯುದ್ಧದ ನಂತರ ಅವರ ಕೈವಶವಾಯಿತು.

ಹಣ ಸಂಗ್ರಹಕ್ಕೆಂದೇ ಪ್ರವಾಸ ಹೊರಟಿದ್ದ ನಮಗೆ ಹಣವು ಸಾಕಷ್ಟು ಸಿಗಲಿಲ್ಲ. ನಮ್ಮ ಬಡತನ ನೀಗಲಿಲ್ಲ. ಅವರೆ ತೀರ್ಥಯಾತ್ರೆಯನ್ನಾದರೂ ಮಾಡೋಣ ಎಂದುಕೊಂಡು ಉಭಯತರೂ ಕಾಶಿ, ಪ್ರಯಾಗ, ನೈಮಿಷಾರಣ್ಯ ಮೊದಲಾದವುಗಳನ್ನು ಸುತ್ತಿದೆವು.

ಪ್ರಯಾಗದಲ್ಲಿದ್ದಾಗ ಗಂಗೆಯನ್ನು ಕಾವಡಿಯಲ್ಲಿ ಹೊತ್ತುಕೊಂಡು ತಂದೆ-ತಾಯಿಗಳಿಗೆ ಗಂಗಾಸ್ನಾನ ಮಾಡಿಸಬೇಕೆಂದು ನಿಶ್ಚಯಿಸಿ ಸಂಕಲ್ಪ ಮಾಡಿದೆ. ಸಾವಿರಾರು ಮೈಲು ದೂರ ಗಂಗೆಯ ಕಾವಡಿ ಹೊತ್ತುಕೊಂಡು ಹೋಗುವುದು ತುಂಬಾ ಕಠಿಣ ಎಂದು ನನ್ನ ಕಕ್ಕ ಎಚ್ಚರಿಸಿದರೂ ನಾನು ದೃಢನಿರ್ಧಾರದಿಂದ ಸಂಕಲ್ಪ ಮಾಡಿ ಕಾವಡಿಗಳಿಗೆ ನೀರು ತುಂಬಿ ಬೆಸುಗೆ ಹಾಕಿಸಿದೆ. ದಾರಿಯಲ್ಲಿ ಅನೇಕ ಕಷ್ಟಗಳನ್ನು ಎದುರಿಸಬೇಕಾಯಿತು. ಒಮ್ಮೆ ತುಂಬ ನಿತ್ರಾಣನಾಗಿ ಮುಂದೆ ನಡೆಯಲಾಗದಂಥ ಸ್ಥಿತಿಯಲ್ಲಿದ್ದಾಗ ಗಂಗಾಮಾತೆಯನ್ನೇ ಸ್ಮರಿಸಿ ಶರಣು ಹೊಕ್ಕೆ. ಅಂದೇ ರಾತ್ರಿ ಕನಸಿನಲ್ಲಿ, "ಮಗುವೇ ನೀನು ಅಂಜಬೇಡ. ನಾನು ನಿನ್ನ ಜೊತೆ ಬರುತ್ತೇನೆ," ಎಂದು ಒಬ್ಬ ಹೆಣ್ಣು ಮಗಳು ಹೇಳಿದಂತಾಯಿತು. ಅವಳು ಗಂಗಾಮಾತೆಯೇ ಎಂದು ನಮ್ಮ ಭಾವನೆ. ಅಂದಿನಿಂದ ಗಂಗಾ ತುಂಬಿದ ಕಾವಡಿ ಭಾರವೆನಿಸಲಿಲ್ಲ. ನಾಸಿಕದ, ತ್ರಿಯಂಬಕೇಶ್ವರದಲ್ಲಿ ಗಂಗಾ ಕಾವಡಿಗೆ ಗೋದಾವರಿ ಸ್ಪರ್ಶ ಮಾಡಿಸಿಕೊಂಡು ಮುಂದೆ ಅನೇಕ ಸ್ಥಳಗಳನ್ನು ಸುತ್ತಿ ೧೮೬೦ ರ ಜನವರಿ ಮಧ್ಯದಲ್ಲಿ ವಸಯಿಯನ್ನು ಸೇರಿದೆವು. ✿



Printed & published by P. S. Bhat for the Jayakarnataka News Printers Private Ltd. at the Samyukta Karnataka Press, Koppikar Road, Hubli 580020
Rep: Bombay: V. Satyamurthy Phone: 522412: Calcutta: H. Muzamdar, 46-4238: Madras: K. A. Subramaniam Phone: 611326, New Delhi: P. R. Chopra Phone: 224130.

'ಕಸ್ತೂರಿ'ಯ ಅರ್ಧವಾರ್ಷಿಕ ಪರಿವಿಡಿ

ಸೆಪ್ಟೆಂಬರ್ ೧೯೭೭ರಿಂದ ಫೆಬ್ರುವರಿ ೧೯೭೮ರ ವರೆಗೆ

ಕ್ರಮ: ಲೇಖನದ ಹೆಸರು, ತಿಂಗಳು, ಪುಟ ಸಂಖ್ಯೆ

ಸ. = ಸೆಪ್ಟೆಂಬರ್, ಅ. = ಅಕ್ಟೋಬರ್, ನ. = ನವಂಬರ್, ಡಿ. = ಡಿಸೆಂಬರ್

ಜ. = ಜನವರಿ, ಫೆ. = ಫೆಬ್ರುವರಿ

ಕಥೆ

ಕಲೆ

ಚರ್ಚೆ-ಚಿಂತನ

ಜೀವನ ಚರಿತ್ರೆ

ನಗೆಮಲ್ಲಿಗೆ

ದೇಶ, ನಗರ

ಪುಸ್ತಕ ವಿಭಾಗ

ಪ್ರಾಣಿಜೀವನ

ರಹಸ್ಯ, ಸಾಹಸ, ಸೋಜಿಗ

ವಿಜ್ಞಾನ



KASTURI PRICE: 1-25 Regd. No. KRNG
Registered with the Registrar of Newspapers for India under No. 3633/57